ಶ್ರೀರಸ್ತು.

ಪಂಡಿತ ರಮಾಬಾಯಿಯವರಿಂದ

ಮಹಾರಾಷ್ಟ್ರ ಭಾಷೆಯಲ್ಲಿ ರಚಿಸಲ್ಪಟ್ಟ

ಸ್ತ್ರೀಧರ್ಮನೀತಿ

ಎಂಬ ಗ್ರಂಥವು

ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಉಪಯೋಗಾರ್ಥವಾಗಿ

ಮೈಸೂರು ರೆವಿನ್ಯೂ ಸರ್ವೆ ಅ॥ ಸೂ॥

ಎಂ. ಸೂರ್ಯನಾರಾಯಣರಾಯರವರಿಂದ ಕನ್ನಡಿಸಲ್ಪಟ್ಟು

ಗಾ॥ ಕನ್ನಡ ಸ್ಕೂಲು ಹೆಡ್ ಮಾಷ್ಟರು ಬಿ. ಮಲ್ಲಪ್ಪನವರಿಂದ

ಲೇಖಕರ ಪ್ರಮಾದದಿಂದುಂಟಾದ ತಪ್ಪುಗಳಿಲ್ಲದಂತೆ ಪರಿಷ್ಕೃತವಾಗಿ

ಮೈಸೂರು:

ಅರಮನೆ ಇಲಾಖೆಯ ಜಗನ್ಮೋಹನಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೮೮೬.

ಪೀಠಿಕೆ.

16. 8. 10.

ಸ್ತ್ರೀಜನರಿಗೆ ಧರ್ಮ, ನೀತಿ, ಗೃಹಕೃತ್ಯ, ಮಕ್ಕಳ ಪೋಷಣೆ ಮೊದಲಾದ ಅನೇಕ ವಿಷಯಗಳಲ್ಲಿ ಅತ್ಯಂತ ಉಪಯೋಗವಾಗಿರುವಂತೆ ಪಂಡಿತ ರಮಾಬಾಯಿಯವರಿಂದ ಮಹಾರಾಷ್ಟ್ರ ಭಾಷೆಯಲ್ಲಿ ರಚಿಸಲ್ಪಟ್ಟಿರುವ "ಸ್ತ್ರೀಧರ್ಮನೀತಿಯೆಂಬ" ಈ ಗ್ರಂಥವು, ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಉಪಯೋಗಾರ್ಥವಾಗಿ ಶ್ರೀಮನ್ಮಹಾರಾಜರವರ ದರ್ಬಾರು ಬಕ್ಷಿಯವರಾದ ಮಹಾರಾ॥ ಅಂಬಿಲ್ ನರಸಿಂಹಯ್ಯಂಗಾರ್ಯರವರ ಕೋರಿಕೆಯಮೇರೆಗೆ, ಮೈಸೂರು ರೆವಿನ್ಯೂಸರ್ವೆ ಅ॥ ಸೂ॥ ಮಂ. ಸೂರ್ಯನಾರಾಯಣರಾಯರವರಿಂದ ಭಾಷಾ ಶೈಲಿಗೆ ಅನುಕೂಲವಾಗಿರುವದಕ್ಕಾಗಿ ಮಾತಿಗೆ ಮಾತು ಟೀಕಿಸಲ್ಪಡದೆ, ಈದೇಶದ ಸ್ತ್ರೀಜನರಿಗೆ ಉಪಯೋಗವಾಗುವಂತೆಯೂ ಸುಲಭವಾಗಿ ತಿಳಿಯುವಂತೆಯೂ ಕನ್ನಡಿಸಲ್ಪಟ್ಟು, ಲೇಖಕರ ಪ್ರಮಾದದಿಂದುಂಟಾದ ತಪ್ಪುಗಳಿಲ್ಲದಂತೆ ಪರಿಶೋಧಿಸಲ್ಪಟ್ಟಿದೆ.

ಬಿ. ಮ.

ಪ್ರಸ್ತಾವನೆ.

ಈ ಕಾಲದಲ್ಲಿ ನಿರ್ಭಾಗ್ಯವಾದ ನಮ್ಮ ದೇಶದ ಸ್ತ್ರೀಜಾತಿಯ ಅವಸ್ಥೆಯು ಎಷ್ಟು ಶೋಚನೀಯವಾಗಿದೆಯೋ ಅದನ್ನು ಹೇಳುವದಕ್ಕಾಗುವದಿಲ್ಲ; ಇದನ್ನು ವಿಚಾರಪರರಾದವರು ಆಲೋಚಿಸಿದರೆ ಅವರ ಹೃದಯವು ದುಃಖದಿಂದ ಕರಗಿ ಹೋಗುವದರಲ್ಲಿ ಸಂಶಯವಿಲ್ಲ. ಈ ದೇಶದ ಸ್ತ್ರೀಯರು ಸಹಾಯ ಶೂನ್ಯರಾಗಿಯೂ ಜ್ಞಾನ ಶೂನ್ಯರಾಗಿಯೂ ಇದ್ದಾರೆ. ತಮ್ಮ ಹಿತವನ್ನು ತಾವು ಹ್ಯಾಗೆ ಮಾಡಿಕೊಳ್ಳಬೇಕೋ ಅದನ್ನು ಅವರು ತಿಳಿಯರು. ಆದಕಾರಣ ಬುದ್ಧಿವಂತರಾದವರು ಸ್ತ್ರೀಯರಿಗೆ ಹಿತ ಉಂಟಾಗುವ ರೀತಿಯನ್ನು ಬೋಧಿಸಿ ಅದರಂತೆ ಅವರು ಆಚರಿಸುವಂತೆ ಮಾಡಬೇಕು. ಈ ಕಾಲದಲ್ಲಿ ಸ್ತ್ರೀಯರಿಗೆ ಜ್ಞಾನ ಉಂಟಾಗದೆ ದೇಶಕ್ಕೆ ಉನ್ನತಿಯು ಉಂಟಾಗುವದಿಲ್ಲವೆಂಬುವದು ಬುದ್ಧಿವಂತರಾದವರಿಗೆ ತಿಳಿದು ಇರುವದಲ್ಲದೆ ಅವರ ಉನ್ನತಿಯ ವಿಷಯದಲ್ಲಿ ಪ್ರಯತ್ನ ಪಡುತ್ತಲೂ ಇದ್ದಾರೆ. ಇದು ಅತ್ಯಂತ ಸಂತೋಷಕರವಾದದ್ದು.

ಲೋಕದಲ್ಲಿ ಮನುಷ್ಯರಿಗೆ ನೀತಿಶಾಸ್ತ್ರದಲ್ಲಿ ತಿಳುವಳಿಕೆಯೂ ತದನುಸಾರವಾದ ಆಚರಣೆಯೂ ಇದ್ದರೆ ಅದು ಅವರ ಉನ್ನತಿಗೆ ಕಾರಣವಾಗಿ ಇರುವದು. ಈ ಕಾಲದಲ್ಲಿ ಸ್ತ್ರೀಜಾತಿಯವರಿಗೆ ಇವೆರಡೂ ಇಲ್ಲ. ಇದಕ್ಕೆ ಶಾಸ್ತ್ರಜ್ಞಾನವಿಲ್ಲದೆ ಇರುವದೇ ಮುಖ್ಯ ಕಾರಣವು. ಈ ಭರತಖಂಡದಲ್ಲಿ ಧರ್ಮಶಾಸ್ತ್ರ, ನೀತಿಶಾಸ್ತ್ರ, ಮತಶಾಸ್ತ್ರ ಮೊದಲಾದವುಗಳು ಅತಿ ಕಠಿಣವಾದ ಸಂಸ್ಕೃತ ಭಾಷೆಯಲ್ಲಿರುವದ್ದರಿಂದ ಅಕ್ಷರಜ್ಞರಲ್ಲದ ಈಗಿನ ಸ್ತ್ರೀಯರಿಗೆ ಆ ಶಾಸ್ತ್ರಜ್ಞಾನ ಉಂಟಾಗುವದು ಗಗನ ಕುಸುಮದಂತೆ ಅಸಂಭವವು. ಆದ್ದರಿಂದ ದೇಶದಲ್ಲಿ ವಾಡಿಕೆಯಾಗಿರುವ ಸುಲಭವಾದ ಭಾಷೆಯಲ್ಲಿ ಧರ್ಮಶಾಸ್ತ್ರ, ನೀತಿಶಾಸ್ತ್ರ, ಪುರಾಣ, ಇತಿಹಾಸ ಮೊದಲಾದವುಗಳನ್ನು ಬರೆದು ಈ ಮೂಲಕವಾಗಿ ಸ್ತ್ರೀಯರಿಗೆ ಜ್ಞಾನವನ್ನುಂಟುಮಾಡುವದು ವಿಚಾರಪರರಾದ ಪುರುಷರಿಗೆ ಕರ್ತವ್ಯವಾದದ್ದೆಂದು ತಿಳಿದು ಈಚೆಗೆ ದೇಶದಲ್ಲಿ ವಿಚಾರಪರರಾದ ದೊಡ್ಡದೊಡ್ಡ ವಿದ್ವಾಂಸರು ದೇಶಭಾಷೆಯಲ್ಲಿ ಉತ್ತಮ

ವಾದ ಗ್ರಂಥಗಳನ್ನು ರಚಿಸಿ ಸ್ತ್ರೀಯರಿಗೆ ಜ್ಞಾನಾಭಿವೃದ್ಧಿ ಉಂಟಾಗುವಂತೆ ಯತ್ನ ಮಾಡುತ್ತಾ ಇದ್ದಾರೆ. ಇದನ್ನು ನೋಡಿ ನಾನು ಬಹಳ ಸಂತೋಷ ಪಡುತ್ತೇನೆ. ಇಂಥಾ ಉಪಕಾರಕ್ಕಾಗಿ ಸ್ತ್ರೀಯರು ಅವರಿಗೆ ಕೃತಜ್ಞರಾಗಿರುವದರಲ್ಲಿ ಸಂಶಯವಿಲ್ಲ.

ದೊಡ್ಡದೊಡ್ಡ ಗ್ರಂಥಗಳಲ್ಲಿ ಸ್ತ್ರೀ ನೀತಿಯು ಹೇಳಲ್ಪಟ್ಟದೆ. ಅದು ಅತಿ ವಿಸ್ತಾರವಾಗಿಯೂ ದುರವಗಾಹವಾಗಿಯೂ ಇರುವದ್ದರಿಂದ ಸ್ತ್ರೀಯರು ತಿಳಿಯಲಶಕ್ಯವಾಗಿದೆ ಯೆಂದು ಮೇಲೆ ಹೇಳಿದ್ದೇನೆ. ಈಗ ದೊಡ್ಡದೊಡ್ಡ ವಿದ್ವಾಂಸರು ಸ್ತ್ರೀಯರಿಗೆ ನೀತಿಜ್ಞಾನ ಉಂಟಾಗುವದಕ್ಕಾಗಿ ಸುಲಭವಾದ ಭಾಷೆಯಲ್ಲಿ ಉತ್ತಮವಾದ ಗ್ರಂಥಗಳನ್ನು ಬರೆದು ಇದ್ದಾರೆ. ಆದರೆ ಆ ಗ್ರಂಥಗಳು ಅನ್ಯೋಕ್ತಿರೂಪವಾಗಿಯೂ ಆಖ್ಯಾನರೂಪವಾಗಿಯೂ ಇರುವದರಿಂದ ಕೆಲವು ಅಂಶಗಳು ತಿಳಿಯುವದಕ್ಕೆ ಅಶಕ್ಯವಾಗಿವೆ. ಅದರಲ್ಲಿರುವ ಸಾರವನ್ನು ವಿಚಾರಮಾಡಿ ಅದರಂತೆ ಆಚರಿಸುವ ಯೋಗ್ಯತೆ ಸ್ತ್ರೀಯರಿಗೆ ಅದ್ಯಾಪಿ ಉಂಟಾಗಲಿಲ್ಲ. ಆದಕಾರಣ ಅಂಥಾ ಗ್ರಂಥಗಳ ಸಾರವನ್ನು ತಿಳಿದು ವಿವರಿಸತಕ್ಕದ್ದು ಅವಶ್ಯಕವೆಂದು ಆ ಗ್ರಂಥ ಸಂಪಾದನೆಗಾಗಿ ನಾನು ಬಹಳವಾಗಿ ಪ್ರಯತ್ನಿಸಿದೆನು. ಇದುವರೆಗೂ ನಾನು ನೋಡಿದ್ದರಲ್ಲಿ ಅಂಥಾ ಗ್ರಂಥವ್ಯಾವದೂ ಕಾಣಿಸಲಿಲ್ಲ. ಇದಕ್ಕೆ ನನ್ನ ಅಲ್ಪಜ್ಞತೆಯೇ ಕಾರಣವಾಗಿರಬಹುದು. ಇಷ್ಟು ದೊಡ್ಡ ದೇಶದಲ್ಲಿ ಇಂಥಾ ಕೊರತೆಯನ್ನು ಕಲ್ಪಿಸುವದು ಉಚಿತವಲ್ಲ. ಅದು ಹ್ಯಾಗಾದರೂ ಇರಲಿ. ಅದರ ವಿಚಾರವನ್ನು ಮಾಡದೆ ನನ್ನ ಅಲ್ಪ ಬುದ್ಧಿಯ ಸಹಾಯದಿಂದ ಒಂದು ಚಿಕ್ಕ ಪುಸ್ತಕವನ್ನು ಬರೆಯಬೇಕೆಂದು ಇಚ್ಛೈಸಿ " ಸ್ತ್ರೀಧರ್ಮನೀತಿ " ಯೆಂಬ ಈ ಪುಸ್ತಕವನ್ನು ಬರೆದೆನು. ಈ ಗ್ರಂಥದಲ್ಲಿ ನನ್ನ ಅಲ್ಪಜ್ಞತೆಯಿಂದ ದ್ವಿರುಕ್ತಿಯೂ ಅಸಾಂಗತ್ಯವೂ ಅಪಶಬ್ದಗಳೂ ಬಹಳವಾಗಿರಬಹುದು. ಆದರೆ ಮಹಾರಾಷ್ಟ್ರ ಭಾಷೆಯಲ್ಲಿ ನಾನು ಪುಸ್ತಕವನ್ನು ರಚಿಸಿದ್ದು ಇದೇ ಮೊದಲಾದ್ದರಿಂದ ಅಭಿಜ್ಞರಾದವರು ದೋಷವನ್ನೆಣಿಸಲಾರರು. ಮುಖ್ಯವಾಗಿ ಪರೀಕ್ಷಕರಾದವರು ಪಕ್ಷಪಾತವಿಲ್ಲದೆ ಇದರಲ್ಲಿರುವ ಗುಣದೋಷಗಳನ್ನು ವಿವರಿಸಬೇಕೆಂಬು ನನ್ನ ಪ್ರಾರ್ಥನೆಯು. ಯಾತಕ್ಕೆಂದರೆ ಮುಂದೆ ನಾನು ಯಾವಾಗ

ಲಾದರೂ ಇಂಥಾ ಪುಸ್ತಕವನ್ನು ಬರೆಯಬೇಕಾದಲ್ಲಿ ನನ್ನ ಶಕ್ತ್ಯನುಸಾರವಾಗಿ ಶೋಧನೆಯಲ್ಲಿ ನನಗೆ ಲಕ್ಷ್ಯ ಉಂಟಾಗುತ್ತೆ.

ಸ್ವಾನುಭವದಿಂದಲೂ ವಿದ್ವತ್ಸಂಭಾಷಣೆಯಿಂದಲೂ ಅನೇಕ ನೀತಿ ಗ್ರಂಥಗಳನ್ನು ಓದಿದ್ದರಿಂದಲೂ ಒಳ್ಳೇದೆಂದು ತೋರಿದ ವಿಷಯವನ್ನು ಸಂಗ್ರಹಿಸಿ ಈ ಗ್ರಂಥದಲ್ಲಿ ಬರೆದಿದ್ದೇನೆ. ಈ ಪುಸ್ತಕವನ್ನು ಮುದ್ರಿಸುವಾಗ ಇಲ್ಲಿನ ಫೀಮೇಲ್ ಟ್ರೇನಿಂಗ್ ಕಾಲೇಜಿನ ಮರಾಟಿ ಭಾಷೆಯ ಶಿಕ್ಷಕರಾದ ಮಹಾರಾ॥ ರಾ॥ ಗಣೇಶದಾಜಿ ದಗ್ರೆಯವರು ಕೊನೆಯವರಿಗೂ ತಮ್ಮ ಅಮೌಲ್ಯವಾದ ಹೊತ್ತನ್ನು ವಿನಿಯೋಗಿಸಿ ಪ್ರೂಫನ್ನು ಶೋಧಿಸಿದರು. ಅವರ ಪರಾರ್ಥವಾದ ಉಪಕಾರಕ್ಕಾಗಿ ಯಾವಜ್ಜೀವವೂ ಕೃತಜ್ಞತೆಯಿಂದಿರುವೆನು. ಮುಖ್ಯವಾಗಿ ನನ್ನ ಪ್ರಯತ್ನವು ಸ್ತ್ರೀಯರಿಗೋಸ್ಕರವಾಗಿಯೇ ಇರುವದ್ದರಿಂದ ಅವರು ದಯವಿಟ್ಟು ಇದರಲ್ಲಿ ಲಕ್ಷ್ಯವಿಡಬೇಕು. ಕಾದಂಬರಿಯಲ್ಲಿ ವರ್ಣಿಸಿರುವಂತೆ ನಾಯಿಕಾ ನಾಯಕ ವರ್ಣನೆ ಮೊದಲಾದ ರಸಭರಿತವಾದ ಆಖ್ಯಾನವು ಈ ಗ್ರಂಥದಲ್ಲಿ ಇಲ್ಲದೆ ಇರುವ ಕಾರಣ ರಸಿಕ ಜನರು ಇದನ್ನು ತಿರಸ್ಕರಿಸದೆ ಕಾದಂಬರೀ ಕಾವ್ಯದ ಮಧುರ ರಸ ಸೇವನೆಯಿಂದ ಉಂಟಾದ ಬಿಗಡನ್ನು ಪರಿಹರಿಸಿಕೊಳ್ಳುವದಕ್ಕಾಗಿ ಈ ಗ್ರಂಥವನ್ನು ವ್ಯಂಜನದಂತೆ ಭಾವಿಸಬೇಕೆಂದು ವಿನಯ ಪೂರ್ವಕವಾಗಿ ವಿಜ್ಞಾಪಿಸುತ್ತೇನೆ.

ಗ್ರಂಥಕರ್ತ್ರೀ.

ಶ್ರೀರಸ್ತು.

ಸ್ತ್ರೀಧರ್ಮನೀತಿ.

೧ನೇ ಪರಿಚ್ಛೇದ.

ಪೀಠಿಕೆ.

ಚನ್ನಾಗಿ ಅಸ್ತಿಭಾರವನ್ನು ಹಾಕದೆ ಮನೆಯನ್ನು ಕಟ್ಟಿದರೆ ಅದು ಬಹುದಿವಸ ನಿಲ್ಲುವದಿಲ್ಲ; ಇದಲ್ಲದೆ ಆ ಪ್ರಕಾರ ಮನೆಯನ್ನು ಕಟ್ಟುವವನಿಗೆ ಎರಡರಷ್ಟು ವ್ಯಯವೂ ದೇಹಾಯಾಸವೂ ಉಂಟಾಗಿ ಇತರರ ಹಾಸ್ಯಕ್ಕೂ ಆಸ್ಪದನಾಗುತ್ತಾನೆ, ಆದ್ದರಿಂದ ಯಾವಕೆಲಸ ಮಾಡಬೇಕಾದಾಗ್ಯೂ ಚನ್ನಾಗಿ ವಿಚಾರಮಾಡಿ ಮೊದಲು ದೃಢವಾಗಿ ಆ ಕೆಲಸಕ್ಕೆ ತಕ್ಕ ಅಸ್ತಿಭಾರವನ್ನು ಹಾಕಬೇಕು; ಹಾಗೆ ಮಾಡದೆ ಹೋದರೆ ಆರಂಭಿಸಿದ ಕೆಲಸ ಚಿಕ್ಕದಾದರು ಸಿದ್ಧಿಸುವದಿಲ್ಲ.

ನಮ್ಮ ಸ್ತ್ರೀಜನರಿಗೆ ಪಶುಗಳಂತೆ ಅಜ್ಞಾನದಿಂದುಂಟಾಗಿರುವ ದುರ್ದಶೆ ಎಲ್ಲರಿಗೂ ತಿಳಿದೇಯಿದೆ. ಇದರ ನಿವಾರಣೆಗೆ ಉಪಾಯವೇನು? ಮತ್ತು ಆ ಉಪಾಯಕ್ಕೆ ಹ್ಯಾಗೆ ಅಸ್ತಿಭಾರವನ್ನು ಹಾಕಬೇಕೆಂಬುವದನ್ನು ವಿಚಾರ ಮಾಡೋಣ.

ಪ್ರಪಂಚದಲ್ಲಿ ಅಭ್ಯುದಯವನ್ನು ಪಡೆಯಬೇಕೆಂಬ ಅಪೇಕ್ಷೆಯು ಎಲ್ಲರ ಮನಸ್ಸಿನಲ್ಲಿಯೂ ಜಾಗರೂಕವಾಗಿರುತ್ತೆ. ಇದು ಸ್ವಾಭಾವಿಕವೇಸರಿ. ಇತರ ವಿಷಯಗಳಲ್ಲಿ ತಮ್ಮತಮ್ಮ ಪ್ರಕೃತಸ್ಥಿತಿಯನ್ನು ಅನುಸರಿಸಿ ಸಂತೋಷಪಟ್ಟುಕೊಂಡಿರುವದು ಮನುಷ್ಯರಲ್ಲಿ ಶ್ಲಾಘ್ಯವಾದದ್ದೇ; ಆದರೆ ವಿದ್ಯಾ, ಜ್ಞಾನ, ಅಭ್ಯುದಯ ಈ ಮೂರು ವಿಷಯದಲ್ಲಿ ತಮಗೆ ಇರುವಷ್ಟೇ

ಸಾಕೆಂದು ಸುಮ್ಮನೆ ಕೂತಿರುವದು ಯುಕ್ತವಲ್ಲ. ದೇವರು ಮನುಷ್ಯನಿಗೆ ಕೊಟ್ಟಿರತಕ್ಕ ವೃತ್ತಿಗಳಲ್ಲಿ ತನ್ನ ಅಭ್ಯುದಯವನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯು ದೊಡ್ಡದಾದ್ದು. ಆದ್ದರಿಂದಲೇ ಮನುಷ್ಯನು ಎಷ್ಟು ದೊಡ್ಡ ಪದವಿಯನ್ನು ಪಡೆದಿದ್ದಾಗ್ಯೂ ಅದಕ್ಕಿಂತಲೂ ಹೆಚ್ಚಾದ ಪದವಿಯನ್ನು ಪಡೆಯಬೇಕೆಂಬ ಅಪೇಕ್ಷೆ ಹುಟ್ಟುತ್ತಲೇ ಇರುವದು ; ಈ ಅಪೇಕ್ಷೆಯನ್ನು ದೇವರು ಮನುಷ್ಯರ ಹಿತಕ್ಕೋಸ್ಕರವೇ ಕೊಟ್ಟಿಇದ್ದಾನೆಂದು ತಿಳಿಯಬೇಕು. ಯಾತಕ್ಕೆಂದರೆ ಪ್ರತಿವೊಬ್ಬ ಮನುಷ್ಯನ ಹೃದಯದಲ್ಲಿಯೂ ಈ ಅಪೇಕ್ಷೆ ನೆಲೆಗೊಂಡಿದ್ದರೆ ತನ್ನತನ್ನ ಅಭಿವೃದ್ಧಿಗಾಗಿ ಪ್ರತಿವೊಬ್ಬನೂ ಪ್ರಯತ್ನ ಪಡುವನು ; ಹೀಗೆ ಎಲ್ಲರೂ ಮಾಡುವದರಿಂದ ದೇಶವೆಲ್ಲಾ ಅಭಿವೃದ್ಧಿಯನ್ನು ಹೊಂದಬಹುದು.

ಮೇಲೆ ಹೇಳಿದ ವೃತ್ತಿಯು ಯಾವಮನುಷ್ಯನಲ್ಲಿ ಹೆಚ್ಚಾಗಿವದೊ ಆ ಮನುಷ್ಯನು ಬಳ್ಳೇದಾರಿಯನ್ನು ಹಿಡಿದರೆ ಎಲ್ಲಾವಿಧವಾದ ಹಿತಕ್ಕೂ ಕೆಟ್ಟದಾರಿಯನ್ನು ಹಿಡಿದರೆ ನಾನಾವಿಧವಾದ ಅನರ್ಥಗಳಗೂ ಕಾರಣವಾಗುತ್ತದೆ. ಆದ್ದರಿಂದ ಈ ವೃತ್ತಿಯು ಬೆಳೆದಹಾಗೆಲ್ಲಾ ಸನ್ಮಾರ್ಗವನ್ನು ಹಿಡಿಯಬೇಕು. ಅದರಿಂದ ಎಲ್ಲರಿಗೂ ಬಳ್ಳೇದಾಗುತ್ತದೆ. ಈ ಅಭ್ಯುದಯವನ್ನು ಪಡೆಯಬೇಕೆಂಬ ಇಚ್ಛೆಯು ಸ್ತ್ರೀಯರಿಗೂ ಇರುತ್ತದೆ. ಪರಂತು ನಮ್ಮ ದೇಶದ ಸ್ತ್ರೀಯರನ್ನು ಉತ್ತಮಸ್ಥಿತಿಗೆ ತರುವಮಾರ್ಗವು ಸಂಪೂರ್ಣವಾಗಿ ಮುಚ್ಚಿಹೋಗಿರುವಂತೆ ಕಾಣಬರುವದ್ದರಿಂದ ಅದನ್ನು ತೆರೆಯುವ ಮಾರ್ಗ ಯಾವದು ಎಂಬುವದನ್ನು ಈಗ ಆಲೋಚನೇ ಮಾಡಬೇಕಾಗಿದೆ.

ಹೆಂಗಸರು ಮೊದಲೇ ಅಜ್ಞಾನಿಗಳಾಗಿಯೂ ಬಲವಿಲ್ಲದವರಾಗಿಯೂ ಇರುತ್ತಾರೆ, ಇದಲ್ಲದೆ ಪರಾಧೀನರು. ಜ್ಞಾನಿಗಳಾಗಿ ಉತ್ತಮಸ್ಥಿತಿಗೆ ಬರುವ ಮಾರ್ಗ ಅವರಿಗೆ ತಿಳಿಯುವದಿಲ್ಲ, ಹೀಗೆ ಯಿರುವಾಗ ಅವರು ಏನು ಮಾಡಬಲ್ಲರು ? ಎಂದು ಕೆಲವರು ಹೇಳುತ್ತಾರೆ. ಪರಂತು ವಿಚಾರ ಮಾಡಿದಲ್ಲಿ ಈ ರೀತಿಯಾಗಿ ನಿರುಪಾಯವಾಗಿ ಕೂಡುವದಕ್ಕೆ ಕಾರಣವಿಲ್ಲವೆಂದು

ಕಾಣುತ್ತದೆ. ಪರಮೇಶ್ವರನು ಪಶುಪಕ್ಷಿಗಳೇ ಮೊದಲಾದ ಅಜ್ಞಾನಜಂತುಗಳಿಗೂ ಸ್ವತಃ ತಮ್ಮತಮ್ಮ ಹಿತವನ್ನು ಮಾಡಿಕೊಳ್ಳತಕ್ಕ ಶಕ್ತಿಯನ್ನು ಕೊಟ್ಟು ಇದ್ದಾನೆ. ಆದ್ದರಿಂದ ಎಲ್ಲಕ್ಕಿಂತಲೂ ಶ್ರೇಷ್ಠವಾದ ಮನುಷ್ಯಜಾತಿಗೆ ಅಂಥಾ ಶಕ್ತಿಯನ್ನು ಆತ ಕೊಟ್ಟಿಲ್ಲವೆಂಬುವದು ಅಸಂಭಾವಿತವೆಂದು ಹೇಳಬೇಕಾಗಿದೆ. ಸಂಸಾರದಲ್ಲಿ ಮತ್ತೊಬ್ಬನ ಸಹಾಯವಿಲ್ಲದೆ ಯಾರಿಗೂ ನಡೆಯುವದಿಲ್ಲ. ಈ ಸ್ಥಿತಿಗೆ ಪರಾಪೇಕ್ಷೆಯೆಂದು ಹೆಸರು. ಇದು ಸರ್ವಪ್ರಾಣಿಗಳಿಗೂ ಇರುವಂತೆ ಸ್ತ್ರೀಯರಿಗೂ ಇದೆ. ಆದರೆ ಸ್ತ್ರೀಯರಿಗೆ ಎಲ್ಲಾ ಭಾಗದಲ್ಲಿಯೂ ಪರಾಧೀನತೆ ಉಂಟೆಂದು ಹೇಳುವದಕ್ಕಾಗುವದಿಲ್ಲ.

ನಾವು ಉನ್ನತ ಸ್ಥಿತಿಯನ್ನು ಪಡೆಯಬೇಕೆಂದು ನಮಗೆ ಅಪೇಕ್ಷೆಯುಂಟು ; ಆದರೆ ಆ ಪ್ರಕಾರ ಪಡೆಯುವಂತೆ ಯಾವ ಪ್ರಯತ್ನವನ್ನು ಮಾಡುವದಕ್ಕೂ ನಮಗೆ ಮಾರ್ಗವಿಲ್ಲವೆಂದು ಅನೇಕ ಹೆಂಗಸರು ಹೇಳುತ್ತಾರೆ. ಯಾಕೆಂದರೆ ಅವರು ಯಾವಾಗಲೂ ಇತರರನ್ನು ಅವಲಂಬಿಸಿಕೊಂಡಿರಬೇಕಾಗಿದೆ. ಇದರಲ್ಲಿ ಕೆಲವಂಶವು ನಿಜವಾಗಿದೆ, ಆದರೆ ತಮ್ಮ ತಮ್ಮ ಉನ್ನತ ಸ್ಥಿತಿಯು ತಮ್ಮ ಪ್ರಯತ್ನದಿಂದಲೇ ಸಾಧ್ಯವಾಗಿದೆ. ಈಶ್ವರನು ಮನುಷ್ಯರಿಗೆ ತಾವು ದೊಡ್ಡವರಾಗಬೇಕೆಂಬ ಕೋರಿಕೆಯನ್ನು ಕೊಟ್ಟಿರುವಂತೆ ಆ ಕೋರಿಕೆಯನ್ನು ಪೂರ್ಣಮಾಡಿಕೊಳ್ಳತಕ್ಕ ಶಕ್ತಿಯನ್ನೂ ಕೊಟ್ಟಿದ್ದಾನೆ. ತಮ್ಮ ಉನ್ನತಸ್ಥಿತಿಯನ್ನು ಅಭಿವೃದ್ಧಿಮಾಡಿಕೊಳ್ಳುವ ಉಪಾಯವು ಎಲ್ಲಾ ಮನುಷ್ಯರಿಗೂ ಪ್ರಯತ್ನಸಾಧ್ಯವಾಗಿದೆ. ಇದಕ್ಕಾಗಿ ಇತರರನ್ನು ಅವಲಂಬಿಸುವದು ಅನವಶ್ಯವು. ಮನುಷ್ಯರು ಏಕಾಗ್ರಚಿತ್ತರಾಗಿ ಆಲಸ್ಯವನ್ನು ಬಿಟ್ಟು ಪ್ರಯತ್ನಮಾಡಬೇಕು. ಹಾಗೆ ಪ್ರಯತ್ನಮಾಡಿದರೆ ಸ್ತ್ರೀಯರುಕೂಡಾ ಸ್ವಲ್ಪ ಕಾಲದಲ್ಲಿಯೇ ಉನ್ನತ ಸ್ಥಿತಿಗೆ ಬರುವ ವಿಷಯದಲ್ಲಿ ಸಂಶಯವಿಲ್ಲ.

ಲೋಕದಲ್ಲಿ ಜನರು ತಮಗೆ ಮಾರ್ಗತಿಳಿಯದೆ ಯಿದ್ದರೆ ಇತರರು ನಡೆಯುವ ಮಾರ್ಗವನ್ನು ಕೇಳಿ ತಿಳಿದು ತಾವುಕೂಡ ಆ ಮಾರ್ಗವನ್ನು ಹಿಡಿದು ಹೋಗುತ್ತಾರೆ. ಇದರಂತೆ ಉನ್ನತರಾಗುವ ಉಪಾಯವು ನಮಗೆ

ತಿಳಿಯದಿದ್ದರೆ ಆಗ ದೊಡ್ಡವರು ಯಾವ ಉಪಾಯದಿಂದ ಹ್ಯಾಗೆ ಉನ್ನತ ರಾದರೆಂಬುವದನ್ನು ನೋಡಿ, ಕೇಳಿ, ತಿಳಿದುಕೊಂಡು, ಅವರಂತೆ ನಡೆಯ ಬೇಕು. ಉನ್ನತ ಪದವಿಯನ್ನು ಪಡೆಯುವದಕ್ಕೆ ಇದೊಂದು ಮಾರ್ಗವು.

ಆತ್ಮಾವಲಂಬನವೆಂದರೆ ತನ್ನನ್ನು ತಾನು ಅವಲಂಬಿಸಿಕೊಂಡಿರೋ ಣವು; ಇದು ಉನ್ನತರಾಗುವದಕ್ಕೆ ಅನುಪಮವಾದ ಒಂದು ಉಪಾಯವಾ ಗಿದೆ. ಈ ಪ್ರಪಂಚದಲ್ಲಿ ಈಗ ಯಾರು ದೊಡ್ಡವರೆಂತಲೂ, ಯಶಸ್ವಿಗ ಳೆಂತಲೂ, ಪ್ರಸಿದ್ಧರಾಗಿದ್ದಾರೋ ಅವರೆಲ್ಲರೂ ಆತ್ಮಾವಲಂಬಿಗಳಾಗಿ ದೊಡ್ಡ ಪದವಿಯನ್ನು ಪಡೆದವರಾಗಿದ್ದಾರೆ. ಇದೊಂದು ಗುಣವು ಮನುಷ್ಯ ನಲ್ಲಿ ಇದ್ದರೆ ಪರಿಶ್ರಮ, ಉತ್ಸಾಹ, ನಿಶ್ಚಯ, ಸತ್ಯಪ್ರತಿಜ್ಞತೆ ಮುಂತಾ ದವುಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ಮನುಷ್ಯನನ್ನು ಅನುಸರಿಸಿ ಕೊಂಡು ಬರುತ್ತವೆ. ಮೇಘಗಳನ್ನಗಲಿ ಮಿಂಚುಗಳು ಹ್ಯಾಗೆ ಇರುವದಿ ಲ್ಲವೋ ಹಾಗೆಯೇ ಈ ಗುಣಗಳನ್ನು ಬಿಟ್ಟು ಉನ್ನತಿಯು ಇರುವದಿಲ್ಲ.

ತನ್ನನ್ನು ತಾನು ಅವಲಂಬಿಸದೆ ಎಲ್ಲಾ ವಿಷಯಕ್ಕೂ ಇತರರನ್ನೇ ಅಪೇಕ್ಷಿಸುವ ಮನುಷ್ಯನಲ್ಲಿ ಮೇಲೆ ಹೇಳಿದ ಗುಣಗಳು ಸರ್ವಥಾ ಇರು ವದಿಲ್ಲವಾದ್ದರಿಂದ ಅವನು ಎಂದಿಗೂ ಅಭಿವೃದ್ಧಿಗೆ ಬರುವದಿಲ್ಲ.

"ಯಾವನು ತನ್ನ ಸಹಾಯ ತಾನೇ ಮಾಡಿಕೊಳ್ಳುತ್ತಾನೋ ಅವನಿಗೆ ದೇವರು ಸಹಾಯ ಮಾಡುತ್ತಾನೆಂದು" ಒಂದು ಗಾದೆಯಿದೆ. ಈ ಗಾದೆಯ ನಿಜಸ್ಥಿತಿಯನ್ನು ಹೇಳುವ ಪ್ರಮಾಣಗಳು ಭೂಮಿಯಲ್ಲಿ ಪ್ರಾಯೇಣ ಎಲ್ಲಾ ಕಡೆಯಲ್ಲಿಯೂ ಉಂಟು. ದೇವರು ಮನುಷ್ಯನಿಗೆ ಬುದ್ಧಿಯನ್ನೂ ವಿಚಾರ ಶಕ್ತಿಯನ್ನೂ ಕೊಟ್ಟಿರುವದ್ದರಿಂದ ಇವುಗಳು ಕ್ರಮೇಣ ಪರಿಪಕ್ವ ವಾಗುವವು. ಇವುಗಳ ಸಹಾಯದಿಂದ ಮನುಷ್ಯನು ಆತ್ಮಾವಲಂಬಿ ಯಾಗಿ ತನ್ಮೂಲಕ ಕ್ರಮೇಣ ಉನ್ನತಿಯನ್ನು ಪಡೆಯುವದು ಸಹ ಸಹಜಧರ್ಮವೆಂದು ಎಣಿಸತಕ್ಕದ್ದು.

ಪಶು ಪಕ್ಷಿ ಮೊದಲಾದ ಪ್ರಾಣಿಗಳಲ್ಲಿರುವಂತೆಯೇ ಮನುಷ್ಯರ ಲ್ಲಿಯೂ ಪರಾಪೇಕ್ಷೆ ಇರುವದೆಂತಲೂ, ಇಷ್ಟುಮಾತ್ರಕ್ಕೆ ಮನುಷ್ಯರಿಗೆ

ಸರ್ವಾಂಶದಲ್ಲಿಯೂ ಪರಾಧೀನತೆಯಿದೆ ಯೆಂದು ಹೇಳ ಬಾರದೆಂತಲೂ ಹಿಂದೆ ಹೇಳಲ್ಪಟ್ಟೇ ಇದೆ. ಒಬ್ಬ ಮನುಷ್ಯನು ಶ್ರಮಪಟ್ಟು ಮತ್ತೊಬ್ಬನ ಕೆಲಸವನ್ನು ಮಾಡಿದರೆ ಅವನು ಇವನಿಗೆ ಆ ಕೆಲಸಕ್ಕೋಸ್ಕರ ಹಣವನ್ನು ಕೊಟ್ಟು ಅಥವಾ ಇತರ ವಿಧವಾಗಿ ಸಂತೋಷಪಡಿಸಿದಲ್ಲಿ ಇವರಲ್ಲಿ ಯಾರನ್ನು ಪರಾಧೀನರೆಂದೆನ್ನಬೇಕು? ಪ್ರಪಂಚದಲ್ಲಿ ಸಂಸಾರ ನಡಿಸಿಕೊಳ್ಳಬೇಕಾದರೆ ಎಲ್ಲರಿಗೂ ಎಲ್ಲರ ಸಹಾಯವು ಬೇಕಾಗುತ್ತದೆ. ಎಲ್ಲರೂ ಒಂದಲ್ಲದಿದ್ದರೆ ಇನ್ನೊಂದು ರೀತಿಯಲ್ಲಿ ಇತರರ ಅಧೀನದಲ್ಲಿ ಇರಬೇಕಾಗಿ ಇದೆ. ಹೀಗಲ್ಲದಿದ್ದರೆ ಜನ ಸಮುದಾಯವು ಹಗ್ಗವಿಲ್ಲದೆ ಉನ್ಮತ್ತವಾದ ಕುರುಚ ಕುದುರೆಯಂತೆ ವಿಚಾರ ಶೂನ್ಯವಾಗಿ ಮನಸ್ಸಿಗೆ ಬಂದ ರೀತಿಯಲ್ಲಿ ತಿರುಗಿ ಕೊನೆಗೆ ವಿಪತ್ತನ್ನು ಹೊಂದುವದು. ಈ ಸ್ಥಿತಿಯನ್ನು ಸ್ವಾಧೀನತೆಯೆನ್ನಬಾರದು. ಇದಕ್ಕೆ ಸ್ವೇಚ್ಛಾಚರಣೆಯೆನ್ನಬೇಕು.

ಒಬ್ಬ ಮನುಷ್ಯನು ಮತ್ತೊಬ್ಬನಿಗೆ ಉಪಕಾರವನ್ನು ಮಾಡಿ ಅವನಿಂದ ಪ್ರತ್ಯುಪಕಾರವನ್ನು ಮಾಡಿಸಿಕೊಳ್ಳೋಣದರಿಂದ ಆತನ ಸ್ವಾಧೀನತೆಗೆ ಎಷ್ಟುಮಾತ್ರವೂ ನ್ಯೂನತೆಯಿಲ್ಲ. ತಮ್ಮ ಮನಸ್ಸನ್ನೂ ಬುದ್ಧಿಯನ್ನೂ ತಮಗೆ ಒಳ್ಳೇದೆಂದು ಕಾಣಬರುವ ಕಡೆಗೆ ವಿನಿಯೋಗಿಸಿ ಹಿತವನ್ನು ಪಡೆಯಲಿಕ್ಕೆ ಎಲ್ಲರೂ ಸ್ವತಂತ್ರರಾಗಿದ್ದಾರೆ. ಆದ್ದರಿಂದ ಸ್ವಾತಂತ್ರ್ಯದಿಂದ ತಮ್ಮನ್ನು ತಾವೇ ಅವಲಂಬಿಸಿಕೊಂಡು ತಮ್ಮ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಶಕ್ತಿ ಎಲ್ಲಾ ಮನುಷ್ಯರಲ್ಲಿಯೂ ಇದೆ ಯೆಂಬುವದು ಇದರಿಂದ ಸಿದ್ಧವಾಗಿದೆ.

ಆತ್ಮಾವಲಂಬನವು ಉನ್ನತಿಯನ್ನು ಪಡೆಯಲಿಕ್ಕೆ ಉತ್ತಮವಾದ ಉಪಾಯವೆಂದು ಮೇಲೆ ಹೇಳಲ್ಪಟ್ಟದೆಯಷ್ಟೆ, ಆ ಪ್ರಕಾರ ಮನುಷ್ಯರು ಆತ್ಮಾವಲಂಬನದಿಂದ ಯಾವದಾದರೂ ಕೆಲಸವನ್ನು ಮಾಡಿದರೆ ಅದರ ಫಲವು ಸ್ವಲ್ಪವಾದಾಗ್ಯೂ ಅವರಿಗೆ ಸುಖದಾಯಕವಾಗುತ್ತದೆ. ಇತರರ ಅವಲಂಬನದಿಂದ ಮಾಡಿದ ಕೆಲಸದ ಫಲವು ಅದಕ್ಕಿಂತಲೂ ದೊಡ್ಡದಾದಾಗ್ಯೂ ಅಷ್ಟು ಸುಖಪ್ರದವಾಗುವದಿಲ್ಲ. ಆತ್ಮಾವಲಂಬಿಗಳಾಗಿರುವವರು ದಿನೇದಿನೇ

ಹ್ಯಾಗೆ ಉತ್ಸಾಹಿಗಳೂ ಸುಖಿಗಳೂ ಆಗುತ್ತಾ ಬರುವರೋ ಹಾಗೆಯೇ ಪರಾವಲಂಬಿಗಳು ನಿರುತ್ಸಾಹಿಗಳೂ ತೇಜೋವಿಹೀನರೂ ಸುಖವಿಲ್ಲದವರೂ ದೀನರೂ ಆಗುತ್ತಾ ಬರುತ್ತಾರೆ. ನಾವು ಎಷ್ಟೆಷ್ಟುಮಟ್ಟಿಗೆ ಜನರ ಸಹಾಯವನ್ನು ಅಪೇಕ್ಷಿಸುತ್ತಾ ಹೋಗುತ್ತೇವೋ ಅಷ್ಟಷ್ಟು ಮಟ್ಟಿಗೆ ದಿನಕ್ರಮದಲ್ಲಿ ನಮ್ಮ ಬಲ ಕಡಮೆಯಾಗುತ್ತಾ ಬುದ್ಧಿ ನಿಸ್ತೇಜಸ್ಕವಾಗುವದಲ್ಲದೆ ಕೊನೆಗೆ ನಾವು ಕೇವಲ ದೀನರಾಗಿ ಎಲ್ಲಾ ವಿಷಯಕ್ಕೂ ಇತರರ ಮುಖವನ್ನೇ ನೋಡ ಬೇಕಾಗುತ್ತದೆ. ಅನಂತರ ನಾವು ಕೇವಲ ನಿರಾಶ್ರಿತರಾಗಿ ಸುಖಪಡುವ ಆಶೆಯನ್ನೇ ಬಿಡಬೇಕಾಗುತ್ತದೆ. ನಮ್ಮಿಂದ ಏನೂ ಸಾಗದು, ಇತರರು ಯಾವ ಸಹಾಯವನ್ನೂ ಮಾಡರು ಹೀಗಾದಮೇಲೆ ನಮಗೆ ಸುಖದ ಆಶೆಯಾತಕ್ಕೆ ? ಯಾರಿಗೆ ಆತ್ಮಾವಲಂಬನವಿಲ್ಲವೋ ಅವರಿಗೆ ಸ್ವಾತಂತ್ರ್ಯವೂ ಇಲ್ಲ. ಮನುಷ್ಯನು ಬದುಕಿದ್ದಾಗ್ಯೂ ಅನ್ನದಂಡ, ಭೂಮಿಗೆ ಭಾರವೆಂಬುವ ಸ್ಥಿತಿಯಲ್ಲಿ ಇರುವದಕ್ಕಿಂತ ಜನ್ಮವೆತ್ತದೆ ಇರುವದಾದರೂ ಹುಟ್ಟುತ್ತಲೇ ಸಾಯುವದಾದರೂ ಒಳ್ಳೇದು.

ಸುಖಕ್ಕೆ ಮುಖ್ಯ ಕಾರಣವಾದ ಆತ್ಮಾವಲಂಬನವು ಈ ಕಾಲದ ಸ್ತ್ರೀಯರಲ್ಲಿ ಒಬ್ಬಿಬ್ಬರಲ್ಲಿ ಇದ್ದಾಗ್ಯೂ ಅವರಿಂದ ಸ್ತ್ರೀಸಮುದಾಯಕ್ಕೆ ವಿಶೇಷದ ಪ್ರಯೋಜನವಾಗುವ ಸಂಭವವಿಲ್ಲವು.

ದುಃಖದ ದಶೆಯಲ್ಲಿ ಬಿದ್ದು ಇರುವ ನಮ್ಮ ದೇಶದ ಸ್ತ್ರೀಜನರು ತಮ್ಮ ಉತ್ಕರ್ಷಕ್ಕಾಗಿ ಏನಾದರೂ ಉಪಾಯ ಮಾಡಬೇಕಾಗಿ ಇದ್ದರೆ ಅದರ ಅಸ್ತಿವಾರವೇ ಆತ್ಮಾವಲಂಬನವಾಗಿರಬೇಕು. ಎಲ್ಲರೂ ಇದನ್ನು ಕೇವಲ ತಮ್ಮ ಕರುಳಿನಂತೆ ಎಣಿಸಿ ಪ್ರತಿಕ್ಷಣದಲ್ಲಿಯೂ ಇದನ್ನು ವೃದ್ಧಿಗೊಳಿಸಬೇಕು. ಅನಂತರ ತಮ್ಮ ಉನ್ನತಿಗೆ ಯಾವ ವಿಷಯದಿಂದ ಅಡ್ಡಿಯಾಗಿದೆ ? ಅದರ ನಿವಾರಣೆ ಯಾತರಿಂದ ಆದೀತು ? ಎಂಬುವದನ್ನೆಲ್ಲಾ ವಿವೇಚನ ಮಾಡಿ ಪ್ರತಿ ದಿನವೂ ಸಾಹಸದಿಂದ ಎಲ್ಲಾ ಸ್ತ್ರೀಯರೂ ಈ ಕಾರ್ಯದಲ್ಲಿ ಪ್ರವೃತ್ತರಾದರೆ ಅವರಿಗೆ, ಸ್ವಲ್ಪ ದಿವಸದಲ್ಲಿಯೇ ಲೋಕ ವ್ಯವಹಾರದಲ್ಲಿ ಸತ್ಪುರುಷರಿಗೆ ಈಗ ಇರುವಷ್ಟು ಅಥವಾ ಅದಕ್ಕಿಂತಲೂ ಹೆಚ್ಚಾದ ಗೌರವ ಉಂಟಾಗುವದೆಂಬುವದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಉದ್ಯೋಗವೆಂಬ ಸುಂದರವಾದ ಹಿತಪ್ರದವಾದ ಗುಣವನ್ನು ಈಶ್ವರನು ಮನುಷ್ಯನಿಗೆ ಕೊಟ್ಟು ಇದ್ದಾನೆ. ಇದರ ಸಹಾಯದಿಂದ ಮನುಷ್ಯನು ಅಸಾಧ್ಯವಾದ ವಿಷಯವನ್ನಾದರೂ ಸಾಧಿಸಿಕೊಂಡು ಅಲಭ್ಯವಾದದ್ದನ್ನಾದರೂ ಪಡೆದುಕೊಂಡು ಅಮಿತವಾದ ಸುಖವನ್ನೂ ಸನ್ಮಾನವನ್ನೂ ಹೊಂದುತ್ತಾನೆ. ಭೂತಳದಲ್ಲಿ ಜನರು ಇದುವರಿಗೆ ಒಳ್ಳೇ ಕೆಲಸಗಳನ್ನೂ ಅಸಾಧ್ಯ ಸಾಧನೆಗಳನ್ನೂ ಮಾಡಿ ತಮ್ಮ ಸ್ಥಿರವಾದ ಕೀರ್ತಿಯನ್ನು ನೆಲೆಗೊಳಿಸಿ ಹೋಗಿರುವರು. ಅದೆಲ್ಲಾ ಕೇವಲ ಉದ್ಯೋಗ ಬಲದಿಂದಲೇ ಹೊರತು ಬೇರೆ ಇಲ್ಲವೆಂಬದಾಗಿ ನಂಬತಕ್ಕ ಹೊಸಹೊಸದಾದ ದೃಷ್ಟಾಂತವು ನಮ್ಮ ಎದುರಿಗೆ ಇರುವಾಗ ಸ್ತ್ರೀಜನರು ಉದ್ಯೋಗ ಮಾಡಿದರೆ ಅವರು ಉನ್ನತಿಯನ್ನು ಪಡಿಯುವದಿಲ್ಲವೆಂಬ ಊಹೆಗೂ ಕೂಡ ಮನಸ್ಸಿನಲ್ಲಿ ಅವಕಾಶವನ್ನು ಕೊಡುವದು ಮೂಢತನವಲ್ಲವೆ?

ನಮ್ಮ ಸ್ತ್ರೀ ಸಮುದಾಯವೇ ಈ ವಿಷಯದಲ್ಲಿ ದೃಷ್ಟಿ ಯಿಡುವದಿಲ್ಲವಾದ್ದರಿಂದ ನಾನು ಒಬ್ಬಳು ಇದರಲ್ಲಿ ಏನು ಮಾಡಬಲ್ಲೆ? ಮತ್ತು ನನ್ನ ಕೆಲಸದಿಂದ ಏನು ಫಲವಾಗಬಹುದು? ಎಂದು ಹೇಳುವದು ಯುಕ್ತವಲ್ಲ. ಈ ಕಾರಣ ಗಳೆಲ್ಲಾ ಸ್ತ್ರೀಯರ ಕಲ್ಪನೆಗಳೇ ಆಗಿರುವದ್ದರಿಂದ ಅವರೆಲ್ಲರೂ ಹೀಗೆಹೇಳುತ್ತಾ ಇದ್ದಾರೆ. ಎಲ್ಲರೂ ಇದೇರೀತಿ ಭಾವಿಸಿ ಇದೇರೀತಿ ಕೆಲಸ ಮಾಡದೆ ಇರುತ್ತಾರೆ. ಪರಂತು ಇದನ್ನು ಬಿಟ್ಟು ತಿಳುವಳಿಕೆಯುಲ್ಲಿ ಉತ್ತಮಳಾದ ಪ್ರತಿವೊಬ್ಬ ಸ್ತ್ರೀಯು ನಾನು ಹೇಳುವ ನಾಲ್ಕು ಮಾತುಗಳಮೇಲೆ ದೃಷ್ಟಿಯಿಟ್ಟು ಇತರರು ಏನಾದರೂ ಮಾಡಲಿ ಬಿಡಲಿ ನನ್ನ ಮತ್ತು ನನ್ನ ಪರಿವಾರದ ಸ್ತ್ರೀಯರ ಉನ್ನತಿಗೋಸ್ಕರ ನಾನು ಪ್ರಯತ್ನ ಮಾಡುವದೇ ಸರಿ; ಎಂದು ಹೇಳಿ ಆ ಕೆಲಸದಲ್ಲಿ ಉದ್ಯುಕ್ತಳಾದರೆ ಕೆಳಗೆ ಬಿದ್ದಿರುವ ನಮ್ಮ ಸ್ತ್ರೀಜಾತಿಗೂ, ದೇಶಕ್ಕೂ ಎಷ್ಟು ಔನ್ನತ್ಯವುಂಟಾದೀತು? ಹುಣಸೇ ಬೀಜಗಳು ಅಥವಾ ಅವಕ್ಕಿಂತಲೂ ಸಣ್ಣವುಗಳಾದ ಬೀಜಗಳನ್ನು ನೆಲದಲ್ಲಿ ನೆಟ್ಟರೆ ಕಾಲಕ್ರಮದಲ್ಲಿ ಅವು ದೊಡ್ಡ ವೃಕ್ಷಗಳಾಗಿ ದೇಶದ ಜನರಿಗೆ ಮಹೋಪಕಾರಿಗಳಾಗುವಂತೆ ಪ್ರತಿವೊಬ್ಬ ಸ್ತ್ರೀಯು ತನ್ನ ಉದ್ಯೋಗವೆಂಬ ಸಣ್ಣ ಬೀಜವನ್ನು ನೆಟ್ಟು

ವ್ಯವಸಾಯ ಮಾಡುತ್ತಾ ಬಂದರೆ ಕಾಲ ಕ್ರಮದಿಂದ ಇದರಿಂದಲೂ ನಮ್ಮ ಸ್ತ್ರೀಜಾತಿಗೆ ದೊಡ್ಡ ಉಪಕಾರವಾಗುವದು.

ಪ್ರತಿವೊಬ್ಬ ಮನುಷ್ಯನು ಸ್ವಲ್ಪ ಸ್ವಲ್ಪ ಉದ್ಯೋಗ ಮಾಡುತ್ತಾ ಬಂದರೆ ಎಲ್ಲರಿಗೂ ಉನ್ನತಿಯುಂಟಾಗುವ ವಿಷಯದಲ್ಲಿಯೂ ಹಾಗೆ ಮಾಡದೆ ಪ್ರತಿಯೊಬ್ಬನೂ ಪಾಲುಮಾರಿಕೆಯಿಂದ ನಾನೇನು ಮಾಡೇನು? ಎಂದು ಸರ್ವದಾ ಯೋಚನೆಯನ್ನೇ ಮಾಡುತ್ತಾ ಕೂತಿದ್ದರೆ ಎಲ್ಲರ ಸ್ಥಿತಿಗೂ ತೊಂದರೆ ಬರುವ ವಿಷಯದಲ್ಲಿಯೂ ದೃಷ್ಟಾಂತ ಬೇಕಾದರೆ ಬಹಳ ದೂರ ಹೋಗಬೇಕಾದ ಅವಶ್ಯಕವಿಲ್ಲ. ನಮ್ಮ ದೇಶದಲ್ಲಿಯೇ ಈ ದೃಷ್ಟಾಂತ ಸಿಕ್ಕುತ್ತದೆ. ಯೂರೋಪ್‌ಖಂಡದ ಜನರು ನಮ್ಮ ದೇಶದಮೇಲೆ ರಾಜತ್ವ ವನ್ನು ನಡೆಸುತ್ತಾ ನಮ್ಮ ದೇಶದ ೨೮ ಕೋಟಿ ಪ್ರಜೆಯ ಧನ ಪ್ರಾಣ ಮಾನಗಳನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡು ನಮ್ಮ ಭರತಖಂಡ ದಲ್ಲಿಯ ರಾಜರು ಮೊದಲುಗೊಂಡು ರೈತರವರಿಗಿನ ಸಮಸ್ತ ಜನಗಳನ್ನೂ ಕಟ್ಟಿಗೆಯ ಸೂತ್ರದ ಬೊಂಬೆಗಳಂತೆ ತಮ್ಮ ಅಂಗುಲ್ಯಗ್ರದಲ್ಲಿ ಕುಣಿ ಸುತ್ತಾ ಇದ್ದಾರೆ. ಈ ಜನರು ನಮ್ಮ ದೇಶದವರಲ್ಲಿ ನಾಲ್ಕರಲ್ಲಿ ಒಂದು ಭಾಗಕ್ಕೂ ಸಾಲದೆ ಯಿದ್ದಾಗ್ಯೂ ಈ ಜನ ಸಮುದಾಯಕ್ಕೆ ಇಷ್ಟು ಮಹತ್ವ ಯಾತರಿಂದ ಬಂತು? ಇವರ ಅಲೌಕಿಕಗಳಾದ ಅಸಾಧ್ಯ ಕಲ್ಪ ನೆಗಳನ್ನೂ, ಸಾಹಸದ ಕಾರ್ಯಗಳನ್ನೂ, ಪರಾಕ್ರಮವನ್ನೂ ನೋಡಿ ನಮ್ಮ ದೇಶದ ಆಬಾಲ ವೃದ್ಧರೂ ಆಶ್ಚರ್ಯದಿಂದ ಸ್ತಬ್ಧರಾಗಿ ತಮ್ಮ ಮನಸ್ಸಿನಲ್ಲಿ ಇವರ ವಿಷಯವಾಗಿ ನಾನಾವಿಧವಾದ ಊಹೆಗಳನ್ನು ಮಾಡುತ್ತಾರೆ. ಇವ ರಲ್ಲಿ ಕೇವಲ ಮೂಢರಾದವರು ಈ ಯೂರೋಪಿಯನ್ ಜನರನ್ನು ಈಶ್ವ ರಾಂಶದವರೆಂತಲೂ, ಇವರಲ್ಲಿ ಮಂತ್ರ ತಂತ್ರದ ಅದ್ಭುತಶಕ್ತಿ ಇರುವ ದಾಗಿಯೂ, ಬೇತಾಳ ಪಂಚವಿಂಶತಿಯಲ್ಲಿ ಹೇಳಲ್ಪಟ್ಟಂಥಾ ಬೇತಾಳದಂತೇ ಇವರ ಆಜ್ಞಾನುವರ್ತಿಯಾಗಿರುವದಾಗಿಯೂ, ಇರುವದ್ದರಿಂದ ಈ ಜನರು ಇಷ್ಟು ದುರ್ಘಟವಾದ ಕೆಲಸಗಳನ್ನು ಮಾಡುವರೆಂದು ಹೇಳಿಕೊಳ್ಳುತ್ತಾರೆ.

ವಿಚಾರಮಾಡಿ ನೋಡಿದರೆ ಇವರು ಒಂದು ದೊಡ್ಡ ಮಂತ್ರಸಾಧನ ಬಲದಿಂದ ದುರ್ಘಟವಾದ ಎಲ್ಲಾ ಕೆಲಸಗಳನ್ನೂ ಸ್ವಲ್ಪಶ್ರಮದಿಂದಲೇ ಸಾಧಿಸಿ

ಕೊಂಡು ತಮ್ಮ ಸಮುದಾಯವನ್ನು ಉನ್ನತಿಗೆ ತರುತ್ತಾರೆಂದು ಕಾಣುತ್ತದೆ, ಈ ಜನರಲ್ಲಿ ಪ್ರತಿಮಷ್ಯನೂ ಮಾಡುವ ಸಂಗತವಾದ ಉದ್ಯೋಗವೇ ಈ ಮಂತ್ರವಾಗಿದೆ, ಇವರು ಹಿಡಿಯುವ ಕೆಲಸವು ಸಣ್ಣದಾಗಲಿ ದೊಡ್ಡದಾಗಲಿ ಒಳ್ಳೇದಾಗಲಿ ಕೆಟ್ಟದ್ದಾಗಲಿ ಅದು ಕೊನೆಮುಟ್ಟುವವರಿಗೂ ಅದನ್ನು ಬಿಡದೇ ಇರುವದು ಇವರಿಗೆ ಸ್ವಾಭಾವಿಕವಾಗಿದೆ ; ಈ ಗುಣವು ಅವರಲ್ಲಿ ದೊಡ್ಡವ ರಿಂದ ಸಣ್ಣವರವರಿಗೆ ಸರ್ವರಲ್ಲಿಯೂ ಇರುವದ್ದರಿಂದ ಅವರ ಶಕ್ತಿ ಇಷ್ಟು ಬಲೀಯುವಾಗಿದೆ ; ಇವರು ಮಣ್ಣು ಹಿಡಿದರೆ ಹೊನ್ನಾಗುತ್ತದೆ, ಪಾಲುವಾ ರಿಕೆ ಎಂಬುವದು ಇವರಲ್ಲಿ ಪ್ರವೇಶ ಮಾಡುವದಕ್ಕೇ ಅಸ್ಪದವಿಲ್ಲವಾದ್ದರಿಂದ ಐಕಮತ್ಯದ ಸುಖವೂ ಅದರಿಂದ ದೊರಕುವ ಅಲಭ್ಯಲಾಭಗಳೂ ಇವ ರಿಗೆ ಸ್ವಾಧೀನವಾಗಿ ಇವೆ. ನಾನು ಇಂಗ್ಲೀಷಿನವರ ಉನ್ನತಿಯ ವಿಷಯ ದಲ್ಲಿ ಮೇಲೆ ಹೇಳಿರುವದು ಸಂಪೂರ್ಣ ವರ್ಣನೆ ಎಂದು ಭಾವಿಸಲಾಗದು. ಇವರ ಉನ್ನತಿಯ ಕಾರಣಗಳನ್ನೂ ಅದರಿಂದ ಉಂಟಾದ ಫಲಗಳನ್ನೂ ಕುರಿತು ಬರೆಯುತ್ತಾ ಬಂದರೆ ವೇದವ್ಯಾಸರ ಮಹಾಭಾರತದಂಥಾ ಮಹಾಭಾ ರತಗಳು ಅನೇಕವಾಗುತ್ತವೆ. ಇದರಿಂದ ನಾನು ಇಂಗ್ಲೀಷಿನವರ ಸ್ತೋತ್ರ ವನ್ನು ನಿರರ್ಥಕವಾಗಿ ಮಾಡಿದ್ದೇನೆಂದು ಎಣಿಸಬಾರದು. “ ಊರು ಇದ್ದಲ್ಲಿ ಹೊಲಗೇರಿ ” ಎಂಬ ಗಾದೆಯಂತೆ ಇಂಗ್ಲೀಷಿನವರಲ್ಲಿಯೂ ಕೆಲವು ದೊಡ್ಡ ದೊಡ್ಡ ದೋಷಗಳು ಇವೆ ಎಂಬುವದು ನನಗೆ ಚನ್ನಾಗಿಗೊತ್ತಿದೆ, ಪರಂತು ಚಂದ್ರನ ಶಾಂತವಾದ ಮತ್ತು ಕೋಮಲವಾದ ಕಿರಣಗಳ ಸಮುದಾಯದಲ್ಲಿ ಅತನ ಕಳಂಕವು ಮುಳುಗಿಹೋಗುತ್ತೆಂದು ಕಾಳಿದಾಸನು ಹೇಳಿದಪ್ರಕಾರ ಇವರ ಸ್ವದೇಶಪ್ರೀತಿ, ಐಕಮತ್ಯ, ಉದ್ಯೋಗಶೀಲತೆಯೆಂಬ ಗುಣಗಳ ಮುಂದೆ ಇವರ ದೋಷಗಳು ಮುಚ್ಚಿಕೊಂಡು ಹೋಗುತ್ತವೆ. ಆದ್ದರಿಂದ ಅವು ಪ್ರಕಾಶಕ್ಕೆ ಬರಲಿಕ್ಕೆ ಅವಕಾಶ ದೊರೆಯುವದಿಲ್ಲ.

ಈಗ ಹೀಗಿರುವ ಇವರ ಉನ್ನತಿಯು ಒಬ್ಬ ಮನುಷ್ಯನ ಉದ್ಯೋಗ ದಿಂದಲಾಗಲಿ ಅಥವಾ ಎಲ್ಲರೂ ದೊಡ್ಡದೊಡ್ಡ ಕೆಲಸಗಳನ್ನು ಮಾಡಿದ್ದರಿಂದ ಲಾಗಲಿ ಪ್ರಾಪ್ತವಾಗಲಿಲ್ಲ ; ಆ ಜಾತಿಯವರಲ್ಲಿ ಪ್ರತಿಮನುಷ್ಯನೂ ಸ್ವಲ್ಪ

ಸ್ವಲ್ಪ ಸಾಹಸಮಾಡಿದನು, ಕೆಲವರು ದೊಡ್ಡದೊಡ್ಡ ಕೆಲಸವನ್ನು ಮಾಡಿದರು, ಇವರೆಲ್ಲರ ಉದ್ಯೋಗವೂ ಸೇರಿ ಒಂದು ದೊಡ್ಡ ಸಮುದ್ರವಾಗಿದೆ.

ಈಗ ಪಶ್ಚಿಮದಿಂದ ಪೂರ್ವಕ್ಕೆ ನಮ್ಮ ದೃಷ್ಟಿಯನ್ನು ಬಿಟ್ಟು ನೋಡಿದರೆ ಭರತವರ್ಷದ ೨೯ ಕೋಟಿ ಪ್ರಜೆಗಳೂ ಅವರ ಅವಸ್ಥೆಯೂ ನಮ್ಮ ಕಣ್ಣಿಗೆ ಬೀಳುತ್ತವೆ, ಈ ದೇಶದಲ್ಲಿ ಉದ್ಯೋಗವನ್ನು ಹ್ಯಾಗೆ ಮಾಡಬೇಕು ? ಅದರಿಂದ ಸುಫಲವನ್ನು ಹ್ಯಾಗೆಪಡೆಯಬೇಕು ? ಎಂಬುವದು ಬಹಳ ಜನರಿಗೆ ಗೊತ್ತೇ ಇಲ್ಲ ಇದು ಅತಿಶಯೋಕ್ತಿಯಾಗುವದಿಲ್ಲ. ಇದಕ್ಕೆ ಇವರ ಈಗಿನ ಸ್ಥಿತಿಯೇ ನಿದರ್ಶನವಾಗಿದೆ.

ಈ ಜನರಲ್ಲಿ ಸಾಹಸವೂ ಸಾಮರ್ಥ್ಯವೂ ಉತ್ಸಾಹವೂ ಸ್ವಾಧೀನತೆಯೂ ಯಾವದೂ ಇಲ್ಲ, ಮುಖ್ಯವಾಗಿ ಇವರಲ್ಲಿರತಕ್ಕ ಒಳ್ಳೇಗುಣಗಳು ಸ್ವಲ್ಪವೇ; ಪರಂತು ಇವರಲ್ಲಿ ಸಂಗೀತನಾಟಕಗಳೂ ಹೊಟ್ಟೆತುಂಬಾ ತಿನ್ನದೆ ಕೂಡಿಹಾಕಿದ ಹಣವನ್ನು ನಾಟ್ಯ ಮೊದಲಾದ ವಿನೋದಕ್ಕಾಗಿ ಖರ್ಚುಮಾಡುವ ಗುಣವೂ ಇವೆ; ತಮ್ಮ ಗುಂಪಿನಲ್ಲಿ ಯಾವನಾದರೂ ಒಬ್ಬನು ದೇಶಹಿತಕ್ಕಾಗಿ ಒಳ್ಳೇಕೆಲಸವನ್ನು ಮಾಡಲಿಕ್ಕೆ ತೊಡಗಿದರೆ ಅವನನ್ನು ಯಾವದಾದರೂ ಒಂದು ಉಪಾಯದಿಂದ ನಿಂದನೆಗೆ ಗುರಿಮಾಡಿ ಅವನಿಗೆ ವಿರುದ್ಧರಾಗಿರುವ ಜನರನ್ನು ಎತ್ತಿಕಟ್ಟಿ ಅವನ ಉದ್ಯೋಗವು ಫಲಿಸದಂತೆ ಮಾಡುವ ಬುದ್ಧಿಯೂ ಚಾಂಚಲ್ಯವೂ ಇವೆ. ಈ ವಿಧವಾದ ಗುಣಗಳು ಇನ್ನೂ ಬೇಕಾದಷ್ಟು ಇವೆ, ಇದರಿಂದುಂಟಾಗಿರುವ ನಮ್ಮ ದೌರ್ಭಾಗ್ಯ ಸಮುದ್ರದ ಹೆಚ್ಚಿಗೆ ಯಾವಾಗ್ಯೆ ತಗ್ಗುವದಕ್ಕೆ ಪ್ರಾರಂಭಿಸುವದೋ ದೇವರೊಬ್ಬನೇ ಬಲ್ಲನು.

ನಮ್ಮ ಈ ದೌರ್ಭಾಗ್ಯಕ್ಕೆ ನಮ್ಮ ಜನರ ಪಾಲುಮಾರಿಕೆಯೂ ಉದ್ಯೋಗಹೀನತೆಯೂ ಮುಖ್ಯಕಾರಣಗಳಾಗಿವೆ. ಶುದ್ಧಾಂಗವಾಗಿ ಉದ್ಯೋಗವನ್ನೇ ಮಾಡದೆ ಇದ್ದರೆ ನಮ್ಮ ದೇಶದ ೨೯ ಕೋಟಿ ಪ್ರಜೆಗಳಲ್ಲಿ ನೆಲಗೊಂಡಿರುವ ಪಾಲುಮಾರಿಕೆ ಹ್ಯಾಗೆತಾನೇ ಹೋದೀತು ? ಒಂದುದಿನದಲ್ಲಿ ೬೦ ಘಳಿಗೆಯೂ ಆಲಸ್ಯದಿಂದ ಹೊರಳಾಡುತ್ತಿರುವ ಪ್ರತಿ ಮನುಷ್ಯನೂ

ಎರಡೆರಡು ಘಳಿಗೆ ತನ್ನತನ್ನ ಉನ್ನತಿಗಾಗಿ ತನ್ನ ಕೈಲಾದಷ್ಟು ಕೆಲಸಮಾಡುತ್ತಾ ಬಂದರೆ ಈ ದೇಶದ ಉನ್ನತಿಗಾಗಿ ಒಂದು ದಿವಸ ಕಡೆಗೆ ಇಪ್ಪತ್ತಾರು ಕೋಟಿ ಕಾಸಿನ ಕೆಲಸವಾದರೂ ನೆರವೇರಿದಂತೆ ಆಗುತ್ತದೆ. ದೇಶದ ಉನ್ನತಿಯೆಂದರೂ ದೇಶದಜನರ ಉನ್ನತಿಯೆಂದರೂ ಒಂದೇ ಆಗಿದೆ. ಈ ಪ್ರಕಾರ ಪ್ರತಿದಿವಸದಲ್ಲಿಯೂ ಕೆಲಸ ನಡೆಯುತ್ತಾ ಬಂದರೆ ಈಗ ಅಸ್ತವಾಗಿರುವ ಈ ದೇಶದ ಸೌಭಾಗ್ಯವು ಪುನಃ ಉದಯಿಸಲಾರದೆಂದು ಯಾರು ಹೇಳ್ಯಾರು ?

ಈ ದೇಶದ ಮನುಷ್ಯರಲ್ಲಿ ಪುರುಷರು ನಿತ್ಯವೂ ಯಾವದಾದರೂ ಒಂದು ಕೆಲಸಮಾಡುತ್ತಾ ಇರುತ್ತಾರೆ. ಹಾಗೆಮಾಡದಿದ್ದರೆ ಜನರು ಅವರನ್ನು ನಿಂದಿಸುವರು. (ಉಳಿದ ಸ್ತ್ರೀಜಾತಿಯವರ ಸ್ಥಿತಿಯು) ಕೊಡವೆಂದರೆ ನೀರುತರಲಿಕ್ಕೆ ಉಪಯೋಗಿಸುವ ತಕ್ಕಷ್ಟು ದೊಡ್ಡ ಪಾತ್ರೆಯೆಂದು ಝಡಿತಿಯಾಗಿ ಅರ್ಥವಾಗುವಂತೆ ಸ್ತ್ರೀಸಮುದಾಯವೆಂದರೆ ಹಠವಾದಿಗಳಾಗಿಯೂ ಮೂರ್ಖರಾಗಿಯೂ ಇರುವ ಮನುಷ್ಯರೆಂದು ಸಾಧಾರಣವಾಗಿ ಅರ್ಥ ಬೋಧೆಯಾಗುತ್ತದೆ. ಗಂಡಸರು ಹೆಂಗಸರನ್ನು ಕುರಿತು—" ನಿಮ್ಮ ಗಂಟು ಏನು ಹೋಗುತ್ತದೆ. ನೀವು ನಮ್ಮ ಗಂಟಲಗಾಣವಾಗಿ ಸ್ವಸ್ಥವಾಗಿ ಕೂತಿರುತ್ತೀರಿ, ಕೆಲಸಮಾಡುವ ಅಗತ್ಯ ನಿಮಗೆಲ್ಲಿನದು ? ಆದ ಅಡಿಗೆಯನ್ನು ದಿವಸಕ್ಕೆ ಮೂರು ನಾಲ್ಕುಸಾರಿ ಲೊಟ್ಟೆ ಹಾಕುತ್ತಾ ಭೋಜನಮಾಡುವದು ಹೊರತು ಮಿಕ್ಕ ಕೆಲಸದ ಯೋಚನೆ ನಿಮಗೆ ಎಲ್ಲಿ ಇರುತ್ತದೆ ?" ಹೀಗೆ ಸ್ಪಷ್ಟವಾಗಿ ಆಡುತ್ತಾರೆ. ಇಲ್ಲಿ ನಾನು ಕೆಲವು ಮಾತುಗಳನ್ನು ಮಾತ್ರ ಉದಾಹರಣೆಗಾಗಿ ಬರೆದಿರುತ್ತೇನೆ ; ಇಂಥಾ ಮಾತುಗಳನ್ನು ಕೇಳಿದ ಕೂಡಲೆ ನಾಚಿಕೆಯಿಂದ ಪ್ರಪಂಚದಲ್ಲಿ ಮುಖವನ್ನು ತೋರಿಸುವದಕ್ಕಿಂತ ಭೂಮಿಯಾದರೂ ಬಾಯಿ ತೆರದರೆ ಅದರಲ್ಲಿ ಹೊಕ್ಕೊಳ್ಳಬೇಕು ಎನ್ನಿಸುತ್ತದೆ. ಇಂಥಾ ಸಾವಿರಾರು ಮಾತುಗಳನ್ನಾದರೂ ಕೇಳಿ ಬಾಯಿಮುಚ್ಚಿಕೊಂಡು ಇರಬೇಕಾಗುತ್ತದೆ.

ಇಷ್ಟು ಹೀಯಾಳಿಸುವದಕ್ಕೆ ಸ್ತ್ರೀಯರು ಪಾಲುಮಾರಿಕೆಯವರೆಂಬುವದೇ ಕಾರಣವಲ್ಲವೇ ? ಸ್ತ್ರೀಯರು ಪುರುಷರಂತೆಯೇ ದೊಡ್ಡದೊಡ್ಡ ಕೆಲಸಗಳನ್ನು ಮಾಡಬೇಕೆಂಬುವದು ನನ್ನ ತಾತ್ಪರ್ಯವಲ್ಲ: ಪುರುಷರ

ಪ್ರಕೃತಿಯು ಕಠೋರವಾಗಿಯೂ ಬಲಿಷ್ಠವಾಗಿಯೂ, ಕಷ್ಟವನ್ನು ಸಹಿಸುವಂಥಾದ್ದಾಗಿಯೂ ಇದೆ. ಸ್ತ್ರೀಯರ ಪ್ರಕೃತಿಯು ಕೋಮಲವಾಗಿಯೂ, ಸ್ವಲ್ಪ ದುರ್ಬಲವಾಗಿಯೂ ಇದೆ. ಪುರುಷರು ತಮ್ಮ ಪ್ರಕೃತಿಗನುಸಾರವಾದ ಕೆಲಸಗಳನ್ನು ಮಾಡದಿದ್ದರೆ ನಿಂದೆಗೊಳಗಾಗುವಂತೆ ಸ್ತ್ರೀಯರು ತಮ್ಮ ಪ್ರಕೃತಿಗನುಸಾರವಾದ ಕೆಲಸವನ್ನು ಮಾಡದಿದ್ದರೆ ನಿಂದಾಸ್ಪದರಾಗುತ್ತಾರೆ, ನಮ್ಮ ಕೆಲಸವೆಂದರೆ—ಕಸ, ಮುಸರೆ, ಅಡಿಗೆ, ನೀರು ಮುಂತಾದದ್ದು. ಈ ಕೆಲಸಗಳನ್ನೆಲ್ಲಾ ನಾವು ಮಾಡುತ್ತೇವೆ. ನಮಗೆ ಯಾವ ಕೆಲಸ ಕಡಿಮೆಯಾಗಿದೆಎಂದು ಕೆಲವು ಸ್ತ್ರೀಯರು ಹೇಳುತ್ತಾರೆ. ಆದರೆ ಅಡಿಗೆ ಮುಂತಾದ ಕೆಲಸಗಳನ್ನು ಮಾತ್ರ ಮಾಡಲಿಕ್ಕೆ ಇವರನ್ನು ದೇವರು ಸೃಷ್ಟಿಸಲಿಲ್ಲ. ಈ ಪ್ರಪಂಚದಲ್ಲಿ ಲೆಕ್ಕ ಮಾಡುವದಕ್ಕೆ ಆಗದಷ್ಟು ಕೆಲಸಗಳು ಇವೆ. ವಿಚಾರಮಾಡಿದಲ್ಲಿ ವಿಶಾಲವಾದ ಸಂಸಾರವೆಂಬ ವಿರಾಟ್ಪುರುಷನ ಶರೀರಕ್ಕೆ ಎಡಗಡೆ ಬಲಗಡೆ ಎಂಬ ಎರಡು ಭಾಗಗಳುಂಟು. ಅವುಗಳಲ್ಲಿ ಎಡಭಾಗವೇ ಸ್ತ್ರೀಯೆಂತಲೂ ಬಲಭಾಗವೇ ಪುರುಷನೆಂತಲೂ ತಿಳಿಯಬಹುದು. ನಮ್ಮ ಶರೀರದ ಉಭಯ ಪಾರ್ಶ್ವವೂ ಸರಿಯಾಗಿ ನಡೆಯುತ್ತಿದ್ದರೆ ನಾವು ಸುಖಪಡುವಂತೆ ಸಂಸಾರದ ಉಭಯ ಭಾಗವಾದ ಸ್ತ್ರೀಪುರುಷರು ತಮ್ಮ ತಮ್ಮ ಕೆಲಸವನ್ನು ಚನ್ನಾಗಿ ಮಾಡುತ್ತಾ ಇದ್ದರೆ ಸಂಸಾರವು ಸುಖಪ್ರದವಾಗಿಯೂ ನೋಡುವವರಿಗೆ ಮನೋಹರವಾಗಿಯೂ ಇರುತ್ತದೆ. ನಮ್ಮ ಶರೀರದ ಬಲಭಾಗವು ಕೆಲವಂಶದಲ್ಲಿ ಬಲಿಷ್ಠವಾಗಿದೆ. ಸಾಧಾರಣವಾಗಿ ಎಡಗೈಗಿಂತ ಬಲಗೈಯಿಂದ ಹೆಚ್ಚು ಕೆಲಸವನ್ನು ಮಾಡುವದು ನಮ್ಮಿಂದಾಗುತ್ತದೆ. ಹೀಗೆಯೇ ಸಂಸಾರದಲ್ಲಿ ಹೆಂಗಸಿಗಿಂತ ಗಂಡಸು ಹೆಚ್ಚು ಬಲಿಷ್ಠನಾಗಿ ಹೆಚ್ಚು ಕೆಲಸವನ್ನು ಮಾಡುತ್ತಾನೆ, ಪಾರ್ಶ್ವವಾಯುವಿನಿಂದ ನಮ್ಮ ಎಡಭಾಗವು ಸ್ವಾಧೀನವಿಲ್ಲದಿರುವಾಗ ಬರೀ ಬಲಭಾಗದಿಂದ ಯಾವ ಕೆಲಸವನ್ನೂ ಹ್ಯಾಗೆ ಚನ್ನಾಗಿ ಮಾಡಲಾರೆವೋ ಹಾಗೆಯೇ ಹೆಂಗಸು ಸಂಸಾರದಲ್ಲಿ ಸುಮ್ಮನೆ ಕೂತಿದ್ದರೆ ಗಂಡಸೊಬ್ಬನಿಂದಲೇ ಯಾವಕೆಲಸವೂ ಚನ್ನಾಗಿ ನಡೆಯುವದಿಲ್ಲ. ಬರೆಯುವದು ವಸ್ತುಗತ್ಯಾ ಬಲಗೈ ಕೆಲಸವೇಸರಿ; ಆದರೆ ಕಾಗದವನ್ನು ಎಡಗೈಯಿಂದ ಸರಿಯಾಗಿ ಹಿಡಿಯದಿದ್ದರೆ ಚನ್ನಾಗಿ

ಬರೆಯುವದಕ್ಕಾಗುವದಿಲ್ಲ; ಎಡಗೈಯಿಂದ ಹಿಡಿಯದಿದ್ದಾಗ್ಯೂ ಮೇಜಿನ ಮೇಲಾಗಲಿ ಇನ್ಯಾತರಮೇಲಾಗಲಿ ಕಾಗದವನ್ನಿಟ್ಟು, ಅದರಮೇಲೆ ಯಾವದಾದರೂ ಭಾರವಸ್ತುವನ್ನು ಹೇರಿ, ಬರೆಯುತ್ತಾ ಹೋದರೆ ಕಾಗದ ಸರಿದಾಡುವದಿಲ್ಲವೆಂದು ಯಾರಾದರೂ ಹೇಳ್ಯಾರು. ಪರಂತು ಈ ಪ್ರಕಾರ ದ್ರಾವಿಡ ಪ್ರಾಣಾಯಾಮದಂತೆ ಮಾಡುವಕೆಲಸದಿಂದ ಕಳೆಯುವ ಹೊತ್ತಿನಲ್ಲಿ ಎಡಗೈ ಸಹಾಯವಿದ್ದರೆ ಇನ್ನೂ ಎರಡು ಪಙ್ಕ್ತಿ ಹೆಚ್ಚಾಗಿ ಬರೆಯಬಹುದು. ಅಥವಾ ಇನ್ಯಾವದಾದರೂ ಒಂದು ಕೆಲಸವಮಾಡಬಹುದು. ಇಲ್ಲವಾದರೆ ವ್ಯರ್ಥವಾಗಿ ಎರಡಷ್ಟು ಹೊತ್ತು ಕಳೆದುಹೋಗಿ ಇತರ ಯಾವಕೆಲಸವೂ ನಡೆಯುವದಿಲ್ಲ.

ಇದೇರೀತಿಯಾಗಿ ಸಂಸಾರದಲ್ಲಿ ಬೇರೆ ಕೆಲಸಗಳಲ್ಲಿಯೂ ಹೆಂಗಸಿನ ಸಹಾಯವು ಗಂಡಸಿಗೆ ಅವಶ್ಯಕವಾಗಿದೆ, ಹೆಂಗಸರು ಶಿಕ್ಷಿತರಾಗಿಯೂ ತಿಳುವಳಿಕೆಯುಳ್ಳವರಾಗಿಯೂ ಇದ್ದರೆ ಮಾಡಬಹುದಾದ ಅನೇಕ ಕೆಲಸಗಳುಂಟು. ಕಳೆದುಹೋಗುವ ಹೊತ್ತಿನಲ್ಲಿ ಪುರುಷರು ಮಾಡಬಹುದಾದ ದೊಡ್ಡ ಕೆಲಸಗಳು ಅನೇಕವಾಗಿರುತ್ತವೆ; ಪರಂತು ಆ ಕೆಲಸಗಳನ್ನು ಸ್ತ್ರೀಯರಿಗೆ ಕೊಡದೆ ಇರುವದ್ದರಿಂದ ಅವರು ಅವುಗಳನ್ನು ಮಾಡುವದಿಲ್ಲ. ಸ್ತ್ರೀಯರಿಗೆ ಇರುವ ಹೊತ್ತೆಲ್ಲಾ ಕುಕ್ಷಿದೇವತಾ ಪೂಜೆಗೆ ಸಿದ್ಧಪಡಿಸುವದರಲ್ಲಿ ಹೋಗುತ್ತದೆ. ಈ ರೀತಿಯಾಗಿ ದೊಡ್ಡ ಕೆಲಸವನ್ನು ದೇಶದಲ್ಲಿ ಯಾರೂ ಮಾಡಲಿಕ್ಕೆ ಅವಕಾಶವಿಲ್ಲದೆ ಹೋಗುವದ್ದರಿಂದ ದೇಶವು ಉನ್ನತಿಗೆ ಬರುವದಿಲ್ಲ.

ಈಗ ಅನೇಕ ಕೆಲಸಗಳನ್ನು ಪುರುಷರೇ ಮಾಡುತ್ತಾ ಇರುವದರಿಂದ ವ್ಯರ್ಥವಾಗಿ ಅವರ ಕಾಲವು ಕಳೆದುಹೋಗುತ್ತದೆ. ಪ್ರಪಂಚದಲ್ಲಿ ಎಲ್ಲಾ ಗುಣಗಳೂ ಅಥವಾ ಎಲ್ಲಾ ವಸ್ತುಗಳೂ ಒಂದು ಸ್ಥಲದಲ್ಲಿಯೇ ಇರುವದಿಲ್ಲ. ಆದ್ದರಿಂದಲೇ ಸರ್ವಾಂಶದಲ್ಲಿಯೂ ಉತ್ತಮವಾದದ್ದು ಯಾವದೂ ಕಾಣಬರುವದಿಲ್ಲ; ಒಂದು ವಸ್ತುವಿನಲ್ಲಿ ಏನಾದರೂ ಕಡಮೆಯಾಗಿದ್ದರೆ ಅದನ್ನು ಇನ್ನೊಂದರಿಂದ ಪೂರ್ಣಮಾಡಿಕೊಳ್ಳಲೇಬೇಕು. ಈ ಮೇರೆಗೆ ಮಾಡುವದಕ್ಕೆ ಅಪೂರ್ಣಪೂರಣವೆನ್ನುತ್ತಾರೆ, ಪ್ರಪಂಚದ ವಸ್ತುಗಳಲ್ಲಿ ಈ

ಅಪೂರ್ಣತೆಯು ಈಶ್ವರನ ಕೆಲಸಕ್ಕೆ ದೋಷವನ್ನುಂಟುಮಾಡುತ್ತೆಂದು
ಸರ್ವಥಾ ತಿಳಿಯಕೂಡದು, ಪರಮೇಶ್ವರನು ಜ್ಞಾನಸ್ವರೂಪನಾಗಿದ್ದು
ಬುದ್ಧಿ ಪೂರ್ವಕವಾಗಿಯೇ ಈ ಅಪೂರ್ಣತೆಯನ್ನು ಎಲ್ಲಾ ಕಡೆಯಲ್ಲಿ
ಇಟ್ಟಿದ್ದಾನೆ; ಕಾರಣವಿಲ್ಲದೆ ಈ ಪ್ರಕಾರ ಮಾಡಿಲ್ಲ. ಪರಮೇಶ್ವರನು
ಪರಮಾಣುವಿನಂಥಾ ಸಣ್ಣಪ್ರಾಣಿಗಳು ಮೊದಲ್ಗೊಂಡು ಸರ್ವೋತ್ತಮರಾದ
ಮನುಷ್ಯ ಪರ್ಯಂತವೂ ಸೃಷ್ಟಿಸಿರುತ್ತಾನೆ. ಹತ್ತು ಮಕ್ಕಳನ್ನು ಹಡೆದ
ತಂದೆಯು ತನ್ನಮಕ್ಕಳೆಲ್ಲರೂ ವಿರೋಧವಿಲ್ಲದೆ ಪರಸ್ಪರ ಅನುರಕ್ತಿಯಿಂದಿ
ರಬೇಕೆಂದು ಅಪೇಕ್ಷಿಸುತ್ತಲೂ ಆಪ್ರಕಾರವೇ ಅವರು ನಡೆಯುತ್ತಿದ್ದರೆ
ಅಪಾರ ಸಂತೋಷಪಡುತ್ತಲೂ, ಅವರು ಪರಸ್ಪರ ವಿರುದ್ಧ ಭಾವದಿಂದಿದ್ದರೆ
ಅಪರಿಮಿತ ವ್ಯಸನಪಡುತ್ತಲೂ ಇರುವಂತೆ ದೇವರು ಜಗತ್ತೆಂಬ ತನ್ನ
ಸಂಸಾರದಲ್ಲಿ ಎಲ್ಲರೂ ಪರಸ್ಪರ ವೈರಭಾವವಿಲ್ಲದೆ ನಡೆದುಕೊಳ್ಳಬೇಕೆಂದು
ಅಪೇಕ್ಷಿಸುತ್ತಾನೆ; ಆತನ ಇಚ್ಛೆಗೆ ವಿರುದ್ಧವಾಗಿ ನಡೆಯುವವನು ಈಸಂಸಾ
ರದಲ್ಲಿ ನಿರ್ವಹಿಸುವದಿಲ್ಲ. ತನಗೆ ಪ್ರಯೋಜನವಿಲ್ಲದ ಕಡೆಗೆ ಯಾವ
ಪ್ರಾಣಿಯೂ ತಲೆಯೆತ್ತಿ ನೋಡದಿರುವದು ಸ್ವಾಭಾವಿಕವಾಗಿದೆ. ಯಾರೇ
ಆಗಲಿ ತಮಗೆ ಪ್ರಯೋಜನಕಾರಿಯಾದ ಮನುಷ್ಯನಲ್ಲಿಯೇ ಸ್ನೇಹವನ್ನು
ಬೆಳಸುತ್ತಾರೆ. ಅಂಥಾ ಸ್ವಾರ್ಥಪರರಾದ ಪ್ರಾಣಿಗಳಲ್ಲಿ ದೇವರು ಕೊರತೆ
ಯನ್ನುಂಟುಮಾಡದೆ ಇದ್ದಲ್ಲಿ ಎಲ್ಲರಿಗೂ ತಾವುತಾವು ಕೂತಿದ್ದ ಸ್ಥಳ
ದಲ್ಲಿಯೇ ಆವಶ್ಯಕವಾದ ಯಾವದ್ವಸ್ತು ಪ್ರಾಪ್ತವಾಗಿ ಒಬ್ಬನು ಮತ್ತೊ
ಬ್ಬನ ಕಡೆಗೆ ತಿರಿಗಿ ನೋಡುತ್ತಲೂ ಇರಲಿಲ್ಲ. ಮತ್ತು ಎಲ್ಲರೂ ಒಬ್ಬರಿ
ಗೊಬ್ಬರು ಹೊಂದದೆ ಪ್ರತ್ಯೇಕಪ್ರತ್ಯೇಕವಾಗಿದ್ದುಕೊಂಡು ಇತರರ ಸುಖ
ದುಃಖಗಳಲ್ಲಿ ಭಾಗಿಗಳಾಗದೆ ಉದಾಸೀನರಾಗಿರುತ್ತಿದ್ದರು. ಆಗ್ಯೆ ಸ್ವರ್ಗ
ಸಮಸುಖಕ್ಕೆ ನೆಲೆಯಾದ ಭೂಮಂಡಲವು ಪ್ರಾಣಿಗಳಿಗೆ ನರಕಕ್ಕೆ ಸಮಾನ
ವಾಗಿರುತ್ತಿತ್ತು. ಇದಲ್ಲದೆ ಸಂಸಾರವು ಇಷ್ಟು ಸುಂದರವಾಗಿಯೂ ಕಾಣು
ತ್ತಿರಲಿಲ್ಲ. ಆದ್ದರಿಂದ ತಮ್ಮತಮ್ಮ ಕೊರತೆಯನ್ನು ಪೂರಣ ಮಾಡಿ
ಕೊಳ್ಳಲಿಕ್ಕೆ ಮನುಷ್ಯನಿಗೆ ಪಶುಗಳ ಸಹಾಯ; ಪಶುಗಳಿಗೆ ಮನುಷ್ಯ
ನದು; ಗಾಣಿಗನಿಗೆ ಕಂಚುಗಾರನದು; ಕಂಚುಗಾರನಿಗೆ ಪಸಾರೆಯವನದು;

ಬಲ್ಲಿದನಿಗೆ ಬಡವನದು; ಬಡವನಿಗೆ ಬಲ್ಲಿದನದು, ಹೀಗೆ ಎಲ್ಲರಿಗೂ ಎಲ್ಲರ ಆವಶ್ಯಕತೆ ಇದೆಯೆಂದು ಸಿದ್ಧವಾಗುತ್ತದೆ. ಪರಸ್ಪರ ಸಹಾಯವಿಲ್ಲದೆ ಪ್ರಪಂಚದಲ್ಲಿ ಸುಖವೆಂಬುವದು ಇಲ್ಲವಾದಮೇಲೆ ಹೆಂಗಸರ ಸಹಾಯವಿಲ್ಲದೆ ಗಂಡಸರಿಗೂ ಗಂಡಸರ ಸಹಾಯವಿಲ್ಲದೆ ಹೆಂಗಸರಿಗೂ ಸುಖವು ಹ್ಯಾಗೆ ಉಂಟಾದೀತು ?

ಸ್ತ್ರೀಯರು "ನಮಗೂ ಗಂಡಸರಿಗೂ ಸಹ ಈಗ ಸುಖವು ಇದ್ದೇಯಿದೆ. ಇದು ಹೊರತು ಇನ್ನಾವಸುಖವು ಬೇಕು?" ಎಂದು ಹೇಳಬಹುದು; ಪರಂತು ನಮ್ಮ ಪ್ರಿಯ ಸಹೋದರಿಗಳಿರಾ! ಸುಖವೆಂದರೆ ಕೇವಲ ಅನ್ನ ನೀರಿನ ಸುಖಮಾತ್ರವೇಅಲ್ಲ. ವಿಶುದ್ಧ ಸ್ವಾಧೀನತೆಯು ಸುಖದ ಮುಖ್ಯ ಸಾಧನವಾಗಿದೆ. ಈ ಸುಖವು ನಿಮಗೂ ನಿಮ್ಮ ಆಲಸ್ಯದಿಂದ ಬೇರೆ ಕೆಲಸ ಮಾಡುವದಕ್ಕೆ [illegible]ಲ್ಲದ ಗಂಡಸರಿಗೂ ಇಲ್ಲದಮೇಲೆ ಇನ್ನಾತರಿಂದ ನೀವು ಸುಖಿಗಳೆನ್ನ[illegible] ಒಬ್ಬ ಕವಿಯು "ಸರ್ವಂಪರವಶಂ ದುಃಖಂ ಸರ್ವಮಾತ್ಮ ವಶಂಸುಖ[illegible]ಂದು ಹೇಳಿ ಇದ್ದಾನೆ. ಅಂದರೆ: ಪರಾಧೀನತೆಯು ಸರ್ವಭಾವದಿಂದಲ[illegible]ಖಕರವೆಂತಲೂ ಸ್ವಾಧೀನತೆಯೇ ಸುಖಕರವೆಂತಲೂ ಅಭಿಪ್ರಾಯ. ನಮ್ಮ ಜನರಲ್ಲಿ ಸ್ವಾಧೀನತೆಯು ಎಲ್ಲಿಯಿದೆ? ಮೊದಲು ಸ್ತ್ರೀಯರಲ್ಲಿ ನೋಡಿರಿ; ಒಟ್ಟೆಹರಿದರೆ ಎರಡುತ್ಯಾಪೆ ಹ್ಯಾಗೆ ಹಾಕಬೇಕು; ನೂರು ಮಾವಿನಕಾಯಿಗಳನ್ನು ಉಪ್ಪಿನಕಾಯಿ ಹಾಕಬೇಕಾದರೆ ಎಷ್ಟು ಉಪ್ಪು ಹಾಕಬೇಕು; ಚಿಲ್ಲರೆ ಸಾಮಾನುಗಳನ್ನು ಮನೆಯ ಬಾಗಿಲಿಗೆ ತಂದು ಮಾರುವವರು ಯಾರಾದರೂ ಬಂದರೆ ಯಾವ ಯಾವ ಪದಾರ್ಥಕ್ಕೆ ಎಷ್ಟುಎಷ್ಟು ಖರೀದಿ ಕೊಡಬೇಕು; ಇವೇ ಮೊದಲಾದ ಸಣ್ಣ ವಿಷಯಗಳಲ್ಲಿ ಸಹ ನಮ್ಮ ಸ್ತ್ರೀಜನರು ಮನೆಮನೆಗೆ ಹೋಗಿ ಬಲ್ಲವರನ್ನು ಕೇಳಿ ತಿಳಿದುಕೊಳ್ಳಬೇಕು; ಇಲ್ಲವೆ ಕೆಲಸಗಳನ್ನೆಲ್ಲಾ ಕೆಡಿಸಿ ಸುಮ್ಮನೆ ಕೂತಿರಬೇಕು; ಇವೆರಡು ಹೊರತು ಬೇರೆ ಮಾರ್ಗವಿರುವದಿಲ್ಲ. ಮನೆಯ ಯಜಮಾನರು ಹೊರಗೆಹೋಗಿದ್ದಾಗ ಯಾವನಾದರೂ ಮನುಷ್ಯನು ಒಬ್ಬ ಗೃಹಸ್ಥನಕಡೆಯಿಂದ ಏನಾದರೂ ಒಂದು ವರ್ತಮಾನವನ್ನು ತಂದಿದ್ದು ಅದರ ಉತ್ತರವು ಕೂಡಲೆ

ದೊರೆಯದಿದ್ದರೆ ಕೆಲಸ ಕೆಡುವ ಸಂದರ್ಭ ಬೀಳುತ್ತದೆ. ಇಂಥಾ ಸಂಗತಿಯಲ್ಲಿ ನಮ್ಮ ಅಮ್ಮನವರ ಚಟವಟಿಗೆ ಎಷ್ಟು ಮಟ್ಟಿಗೆ ಇರುತ್ತದೆಯೆಂದರೆ, ಬಂದ ಮನುಷ್ಯನನ್ನು ಸಮಾಧಾನ ಮಾಡಿ ಕಳುಹಿಸುವದು ಹಾಗಿರಲಿ, ಯಜಮಾನರು ಮನೆಗೆ ಬಂದರೆ ಇಂಥಾವರು ಇಂಥಾವರ ಕಡೆಯಿಂದ ಬಂದು ಇದ್ದರೆಂಬುವದನ್ನು ಸುದಾ ಹೇಳುವದಕ್ಕೆ ಜ್ಞಾಪಕ ಶಕ್ತಿಯೂ ಬುದ್ಧಿಯೂ ಇರುವದಿಲ್ಲ. ನೆನಪಿಗಾಗಿ ಬರೆದು ಇಡಬೇಕೆಂದರೆ ಹಣೆಯಲ್ಲಿ ಬ್ರಹ್ಮ ಬರೆದಿರುವದು ಹೊರತು ಮಿಕ್ಕ ಅಕ್ಷರಗಳು ಕರೀವೋ ಬಿಳೀವೋ ಅವರಿಗೆ ಗೊತ್ತಿರುವದಿಲ್ಲ. ಹೀಗೆ ಸಮಯವರಿತು ಕೆಲಸ ನಡಿಸದೆ ಹೋಗುವದರಿಂದ ಕೆಲಸವೆಲ್ಲಾ ಕೆಟ್ಟು ಹೋಗುತ್ತದೆ. ಇದೇ ಪ್ರಕಾರ ಪ್ರತಿದಿವಸವೂ ಸಾವಿರಾರು ಸಂಗತಿಗಳು ಘಟಿಸುತ್ತಾ ಇರುತ್ತವೆ. ಈ ತೊಂದರೆಗಳನ್ನೆಲ್ಲಾ ನಿರ್ವಹಿಸಿ ಕೊಂಡು ದೊ ತ್ತಿನಲ್ಲಿ ಕೆಲಸ ಮಾಡಿ ಹೊಟ್ಟೆ ತುಂಬಿಕೊಳ್ಳುವ ನಮ್ಮ ದೇಶ ಗೆ ತಮ್ಮ ಮನೆಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನೂ ತಮ್ಮ ಕೆ ಲೇ ಮಾಡಿಕೊಳ್ಳಬಹುದಾದಾಗ್ಯೂ ಕೂಡದೆ ಇರುವದ್ದರಿಂದ ಅವ ವ ಎಲ್ಲಾ ಪದಾರ್ಥಗಳನ್ನೂ ಅವರು ಅನ್ಯ ದೇಶದವರ ಕಡೆಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಕೋಟ್ಯಂತರ ರೂಪಾಯಿಗಳು ನಮ್ಮ ದೇಶದಿಂದ ಹೊರಗೆ ಹೋಗಿ ನಮ್ಮ ದೇಶಕ್ಕೆ ದಾರಿದ್ರ್ಯವು ಬಂದು ಇದೆ. ಈ ದಾರಿದ್ರ್ಯವು ನಮ್ಮ ದೇಶದಲ್ಲಿ ನೆಲೆಗೊಂಡಿರುವದ್ದರಿಂದ ಪದೇಪದೇ ಕ್ಷಾಮ ಬಂದು ಜನರ ಸಾಮರ್ಥ್ಯವನ್ನು ಕಡಮೆಮಾಡಿ ಇದೆ. ಹೀಗೆ ಸಾಮರ್ಥ್ಯ ಹೀನರಾದವರು ಎಷ್ಟು ಕೆಲಸವನ್ನು ಮಾಡ್ಯಾರು? ಪ್ರತಿ ದಿವಸವೂ ಸವೆಯುತ್ತಾ ಕೊನೆಗೆ ಏಳಲಾರದವರಾಗಿ ತಮ್ಮ ಕೈಕಾಲು ಸ್ವಾಧೀನವಿಲ್ಲದೆ ಮತ್ತೊಬ್ಬರ ಆಶ್ರಯವಿಲ್ಲದಿದ್ದರೆ ತಲೆ ಯೆತ್ತಲಿಕ್ಕೆ ಕೂಡ ಆಗದೆ ಯಾರಿಂದ ತಮ್ಮ ಕಾಲಕ್ಷೇಪ ನಡೆಯುತ್ತದೋ ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಬಾಯಿಮುಚ್ಚಿಕೊಂಡು ಅವರ ಮನೋವೃತ್ತಿಯಂತೆ ಇರಬೇಕಾಗುತ್ತದೆ. ಇಷ್ಟಕ್ಕೇ ಇದರ ಪರ್ಯವಸಾನವಾಗುವದಿಲ್ಲ. ಆ ಜನರು ಇವರನ್ನು ಕೈಲಿ ಏನೂ ಸಾಗದವರು ಕ್ಷುಲ್ಲಕ ವಿಷಯಗಳಿಗೂ ಕೂಡ ಇನ್ನೊಬ್ಬರನ್ನು ದೈನ್ಯ

ವೃತ್ತಿಯಿಂದ ಕೇಳುತ್ತಾರೆಂದು ಹಾಸ್ಯ ಮಾಡುವದಲ್ಲದೆ ಸಮಯಬಂದಲ್ಲಿ ತಲೆಯಮೇಲೆ ಬಡೆಯುವದಕ್ಕೆ ಕೂಡ ಅನುಮಾನಿಸುವದಿಲ್ಲ.

ಈ ವಿಷಯವನ್ನು ಸಂಕ್ಷೇಪವಾಗಿ ಬರೆಯಬೇಕಾಗಿ ಇರುವದರಿಂದ ಇನ್ನು ವಿಸ್ತರಿಸುವದಿಲ್ಲ. ಮೇಲೆ ಹೇಳಿರುವದರಿಂದಲೆ ನಮ್ಮ ದೇಶದ ಸ್ತ್ರೀಪುರುಷರು ಎಷ್ಟುಮಟ್ಟಿಗೆ ಪರಾಧೀನರಾಗಿ ಇದ್ದಾರೆಂಬುವದು ಗೊತ್ತಾಗುತ್ತದೆ. ಈ ಪರಾಧೀನತೆಯು ಶಾಶ್ವತವಾಗಿ ನಮ್ಮವರಲ್ಲಿ ಇರುವದ್ದರಿಂದ ನಮ್ಮವರಿಗೆ ಸುಖವಿಲ್ಲವೆಂಬುವದು ಸ್ಪಷ್ಟವಾಗಿದೆ. ಸ್ತ್ರೀಯರಲ್ಲಿ ಪಾಲು ಮಾರಿಕೆ ಬಹಳವಾಗಿ ಇರೋಣದರಿಂದ ಪುರುಷರಿಗೆ ಇವರು ಮಾಡಬೇಕಾದಷ್ಟು ಸಹಾಯ ಮಾಡದೆ ಇರುವದೇ ಈ ದುಃಖಕ್ಕೆ ಮುಖ್ಯಕಾರಣವಾಗಿದೆ. ಹೀಗಿರುವದ್ದರಿಂದ ಹಿಂದೆಬರೆದಿರುವ ಪ್ರಕಾರ ತಮ್ಮ ಸ್ವಾರ್ಥಕ್ಕೆ ಯಾವ ವಿಧವಾಗಿಯೂ ಅನುಕೂಲರಾಗದ ಸ್ತ್ರೀಯರ ವಿಷಯದಲ್ಲಿ ಪುರುಷರು ಕಠೋರವಾದ ಮತ್ತು ನಾಚಿಕೆಯನ್ನುಂಟುಮಾಡುವ ಮಾತುಗಳನ್ನಾಡುವದರಲ್ಲಿ ಅಸಹಜವಾದದ್ದು ಯಾವದು? ನಮ್ಮ ಸ್ತ್ರೀಜಾತಿಯಲ್ಲಿ ಈ ದುರ್ಗುಣವಿರುವ ಪರ್ಯಂತ ಇದಕ್ಕಿಂತ ಹೆಚ್ಚಾಗಿ ಪುರುಷರು ನಮ್ಮನ್ನು ಆಡಿದಾಗ್ಯೂ ಅವರಲ್ಲಿ ನಾವು ದೋಷವೆಣಿಸಕೂಡದು. ಈ ಅವಮಾನಕ್ಕೆ ನಾವೇಕಾರಣರಾಗಿದ್ದೇವೆ. ನಮ್ಮಲ್ಲಿ ವಿವೇಕವೂ ಉದ್ಯೋಗವೂ ಮುಂತಾದ ದೊಡ್ಡ ಗುಣಗಳಿಲ್ಲ. ಆದ್ದರಿಂದ ಪುರುಷರಿಗೆ ನಮ್ಮ ವಿಷಯದಲ್ಲಿ ಗೌರವವಿಲ್ಲ. ಆದಕಾರಣ ಅವರು ನಮ್ಮನ್ನು ಲಕ್ಷಿಸದೆ ನಾವು ಕಾಣುವಹಾಗೆ ತಮ್ಮ ಮನಸ್ಸಿಗೆ ಬಂದಂತೆ ನಡೆಯುತ್ತಾರೆ. ಇದೆಲ್ಲಾ ನಿಜವೇಸರಿ. ಆದಾಗ್ಯೂ ಇಂಥಾ ಸಹಿಸಲಶಕ್ಯವಾದ ಅಪಮಾನವನ್ನು ಲಕ್ಷ್ಯೀಕರಿಸದೆ ಇರುವದು ಮನುಷ್ಯರಿಗೆ ಭೂಷಣವಲ್ಲ. ಈಶ್ವರ ಸೃಷ್ಟಿಯಲ್ಲಿ ನಾವು ಮನುಷ್ಯ ಜನ್ಮವನ್ನು ಎತ್ತಿರುವದರಿಂದ ಅದಕ್ಕನುಸಾರವಾಗಿ ಆಚರಿಸಬೇಕು.

ಆದ್ದರಿಂದ ನನ್ನ ಪ್ರಿಯ ಸಹೋದರಿಗಳಿರಾ! ನಾವೆಲ್ಲರೂ ಕೂಡಿ ನಮ್ಮ ಶರೀರದಲ್ಲಿ ಅಜ್ಞಾನದ ದೆಸೆಯಿಂದ ಹೊಕ್ಕಿರುವ ಪಶುತ್ವರೂಪವಾದ ಪಿಶಾಚವನ್ನು ಉದ್ಯೋಗವೆಂಬ ಮಹಾಮಂತ್ರದಿಂದ ಹೊರಡಿಸುವದಕ್ಕೆ ಪ್ರಯತ್ನ

ಮಾಡೋಣ, ಮತ್ತು ಜ್ಞಾನವನ್ನು ಸಂಪಾದಿಸುವದರಿಂದ ನಮಗೆ ಬರುವ ಉತ್ತಮ ಗುಣಗಳಿಗಾಗಿ ಸಾಹಸ ಮಾಡೋಣ. ಹೀಗೆ ಮಾಡಿದಲ್ಲಿ ಸ್ವಲ್ಪ ದಿವಸದಲ್ಲಿಯೇ ಈ ದುರ್ದಶೆ ಹೋಗಿ ಒಳ್ಳೇದಶೆ ಬಂದೀತು. ಈ ಹೀನ ಸ್ಥಿತಿಯಲ್ಲಿ ಇರುವದ್ದರಿಂದ ನಿಮಗೆ ನಾಚಿಕೆಯಾಗುವದಿಲ್ಲವೆ? ನಿಮ್ಮ ಸುಂದರವಾದ ಕೋಮಲ ಹೃದಯಕ್ಕೆ ಈ ಅತ್ಯಂತವಾದ ದುಃಖವು ಹ್ಯಾಗೆ ಸಹ್ಯವಾಗುತ್ತದೆ ? ಒಂದು ಪಶುವು ಭಾವಿಯಲ್ಲಿ ಬಿದ್ದರೆ ತನ್ನ ರಕ್ಷಣೆಗಾಗಿ ಕಾಲುಗಳನ್ನು ಅಲ್ಲಾಡಿಸುತ್ತದೆ. ನೀವು ಮನುಷ್ಯರಾಗಿ ಈ ಅಜ್ಞಾನವೆಂಬ ಕೂಪದಲ್ಲಿ ಬಿದ್ದುಕೊಂಡು ಮೇಲಕ್ಕೆ ಬರುವದಕ್ಕೆ ಯಾಕೆ ಪ್ರಯತ್ನ ಮಾಡುವದಿಲ್ಲ?

ನೀವೆಲ್ಲರೂ ಒಂದೇ ಮನಸ್ಸಿನಿಂದ ಇನ್ನೂ ಸಮಯವಿರುವಾಗಲೇ ಉದ್ಯೋಗ ಮಾಡಿರಿ. ಉದ್ಯೋಗ ಮಾಡುವವರಿಗೆ ಯಾವದೂ ಅಸಾಧ್ಯವಲ್ಲ. ಉದ್ಯೋಗ ಮಾಡಿರೆಂಬುವದೇ ನಾನು ಪದೇಪದೇ ನಿಮಗೆ ಹೇಳತಕ್ಕ ಮಾತಾಗಿದೆ. ನಿಮ್ಮ ಶರೀರದ ರಕ್ತವು ಉತ್ಸಾಹದಿಂದ ಬಿಸಿಯಾಗಿ ಪ್ರತಿನರದಲ್ಲಿಯೂ ವೇಗದಿಂದ ಚರಿಸಿ ನಿಮ್ಮ ಸಜೀವತ್ವವನ್ನು ಜನರಿಗೆ ಕಾಣಿಸಲಿ. ನಿಮ್ಮ ಉದ್ಯೋಗವು, ತಿಳುವಳಿಕೆಯು, ತೇಜಸ್ಸು, ಸತ್ಯವ್ರತವು, ಈಶ್ವರ ಪರಾಯಣತೆಯು, ಪಾತಿವ್ರತ್ಯ ಮುಂತಾದ ಧರ್ಮಗಳು ಜನರ ಕಣ್ಣಿಗೆ ಬಿದ್ದು ಅವರ ಮನಸ್ಸನ್ನು ಸ್ತಬ್ಧ ಮಾಡಲಿ. ನಮ್ಮ ಭರತವರ್ಷದ ಪೂರ್ವಕಾಲದ ಉತ್ತಮ ಸ್ತ್ರೀಯರ ಮಹಿಮೆಯನ್ನು ಜೀರ್ಣೋದ್ಧಾರ ಮಾಡಿರಿ. ನೀವು ಯುದ್ಧರಂಗಕ್ಕೆ ಹೋಗಿ ಯುದ್ಧ ಮಾಡಬೇಕಾದದ್ದಿಲ್ಲ. ನಿಮ್ಮ ಆಲಸ್ಯವೆಂಬ ಶತ್ರುವಿನ ಸಂಗಡ ಯುದ್ಧ ಮಾಡಿ ಅದನ್ನು ಗೆದ್ದರೆ ಮೂರು ಲೋಕಗಳನ್ನೇ ಗೆದ್ದಹಾಗಾಯಿತು. ಈ ನಿಮ್ಮ ಪರಾಕ್ರಮವನ್ನು ಜಗತ್ತೆಲ್ಲಾ ನೋಡಿ ನಿಮ್ಮನ್ನು ಕೊಂಡಾಡಲಿ.

ನಿಮ್ಮ ಸುಖವೆಂಬ ಮನೆಯ ಅಸ್ತಿವಾರವನ್ನು ಜ್ಞಾನವೆಂಬ ಎತ್ತರವಾದ ಪರ್ವತದಮೇಲೆ ಬಹಳ ಬಲವಾಗಿ ಹಾಕಿದರೆ ನಿಮ್ಮ ಸುಖವೆಂಬ ಮನೆಯು ಶಾಶ್ವತವಾಗಿ ನಿಲ್ಲುತ್ತದೆ. ಈ ಅಸ್ತಿವಾರದ ಹೆಸರು ಆತ್ಮಾವ

ಲಂಬನವು. ನಿಮ್ಮ ಉನ್ನತಿಗಾಗಿ ನೀವು ಇನ್ನೊಬ್ಬರನ್ನು ಆಶ್ರಯಿಸುವ ಅವಶ್ಯವಿಲ್ಲ. ಎಲ್ಲಾ ಸ್ತ್ರೀಯರೂ ತಮ್ಮ ಉನ್ನತಿಗಾಗಿ ತಮ್ಮಷ್ಟಕ್ಕೆ ತಾವೇ ಆದಷ್ಟು ಕೆಲಸವನ್ನು ಸ್ಥೈರ್ಯದಿಂದ ಮಾಡುತ್ತಿರಬೇಕು. ಈ ಕೆಲಸಕ್ಕೆ ಯಶಸ್ಸನ್ನು ಕೊಡುವದಕ್ಕೆ ಸಮರ್ಥನಾಗಿರುವ ದೇವರು ನಿಮಗೆ ಬೆನ್ನುಗಾವಲಾಗಿ ಇದ್ದಾನೆ.

೨ನೇ ಪರಿಚ್ಛೇದ.

ವಿದ್ಯಾ.

ಯಾವನಲ್ಲಿ ಧನ ವಿರುವದಿಲ್ಲವೋ ಅವನಿಗೆ ಸುಖವಿಲ್ಲ. ಧನವಿಲ್ಲದವನು ಒಂದು ದಿವಸಕೂಡ ನಿರ್ವಹಿಸುವದು ಶ್ರಮವಾಗುತ್ತದೆ. ಅದ್ದರಿಂದ ಪಂಡಿತರು ಧನಕ್ಕೆ (ಬಹಿಃಪ್ರಾಣ), ಹೊರಗಿನ ಪ್ರಾಣವೆಂದು ಹೆಸರಿಟ್ಟಿದ್ದಾರೆ. ಧನವಿಲ್ಲದವನು ಜೀವನ್ಮೃತನಂತೆ ಕಾಣುತ್ತಾನೆ. ದೊಡ್ಡವರಲ್ಲಿ ಹೋಗಿ ಅವರನ್ನು ಕಾಣುವದಕ್ಕೂ ಅವನಿಗೆ ನಾಚಿಗೆ ಯುಂಟಾಗುತ್ತದೆ. ಆತನ ಶರೀರವೂ ವಸ್ತ್ರವೂ ಕೊಳೆಯಿಂದಲೂ, ಮನಸ್ಸು ನಾನಾವಿಧಚಿಂತೆಯಿಂದಲೂ ಮಲಿನವಾಗಿ ಆತನ ಮುಖವು ತೇಜೋಹೀನವಾಗಿ ಇರುತ್ತದೆ. ಜನರು ಅವನನ್ನು ಪದೇಪದೇ ಹಾಸ್ಯಮಾಡುತ್ತಲೂ ತಿರಸ್ಕರಿಸುತ್ತಲೂ ಇರುತ್ತಾರೆ. ಆದ್ದರಿಂದ ತನ್ನ ಬಾಳ್ವೇ ತನಗೆ ಅಸಹ್ಯವಾಗಿರುತ್ತಗೆ. ಅವನು ಈ ಲೋಕದ ಬಾಳಿಕೆಯನ್ನು ನರಕ ಯಾತನೆಯಂತೆ ಎಣಿಸುತ್ತಾನೆ. ಮುಖ್ಯವಾಗಿ ಧನವಿಲ್ಲದವನಿಗೆ ಸಂಸಾರದಲ್ಲಿ ಸುಖವಿಲ್ಲ. ಆದ್ದರಿಂದ ಸಂಸಾರದಲ್ಲಿ ತಮ್ಮ ಯೋಗ್ಯತಾನುಸಾರವಾಗಿ ಸೌಖ್ಯದಿಂದಲೂ ಮರ್ಯಾದೆಯಿಂದಲೂ ಇರಬೇಕೆಂದು ಅಪೇಕ್ಷಿಸುವ ಪ್ರತಿಮನುಷ್ಯನೂ ತಕ್ಕಮಟ್ಟಿಗೆ ಧನವನ್ನು ಸಂಪಾದಿಸಿ ಕಾಪಾಡಿಕೊಂಡಿರಬೇಕು.

ಭೂಮಿ, ಧಾನ್ಯ, ದನಕರ, ಚಿನ್ನಬೆಳ್ಳಿ, ಮುತ್ತು ಮಾಣಿಕ ಮುಂತಾದ ಸ್ಥಾವರ ಜಂಗಮ ವಸ್ತುಗಳಿಗೆ ಧನವೆನ್ನುತ್ತಾರೆ. ಅದು ಅನೇಕ ವಿಧವಾಗಿದೆ. ಈ ಧನವುಳ್ಳ ಮನುಷ್ಯನಿಗೆ ನಾನಾಪ್ರಕಾರವಾದ ಲಾಭವೂ ಸುಖವೂ ದೊರಕುತ್ತದೆ. ಆದಾಗ್ಯೂ ಈ ಧನವು ಸ್ಥಿರವಾಗಿ ನಿಲ್ಲತಕ್ಕದ್ದಲ್ಲ. ಭೂಮಂಡಲದಲ್ಲಿರುವ ಸರ್ವ ವಸ್ತುಗಳೂ ನಶ್ವರವಾಗಿಯೂ ಅವುಗಳಿಂದ ಉಂಟಾಗುವ ಸುಖವು ಕ್ಷಣಿಕವಾಗಿಯೂ ಇರುತ್ತವೆ. ಆದ್ದರಿಂದ ಬುದ್ಧಿವಂತರಾಗಿ ವಿಚಾರ ಪರರಾದವರು ನಾಶವಾಗದೆ ಇರುವ ಮತ್ತು ಅಪಾರವಾದ ಸುಖವನ್ನು ಕೊಡುವ ಧನವನ್ನು ಸಂಪಾದಿಸುವ ಉದ್ಯೋಗವನ್ನು ಮಾಡಬೇಕು. ಇಂಥಾಧನವು ಪ್ರಪಂಚದಲ್ಲಿ ಯಾವದೆಂದರೆ ವಿದ್ಯೆಯೆ.

ವಿದ್ಯೆಯೆಂಬ ಧನವು ಲೋಕದಲ್ಲಿ ನಾಶರಹಿತವಾದದ್ದು. ಇದನ್ನು ಸಂಪಾದಿಸಿದವನು ಜಗತ್ತಿನಲ್ಲಿ ಎಲ್ಲರಿಗಿಂತಲೂ ಸುಖಿಯಾಗಿರುತ್ತಾನೆ. ಅಜ್ಞಾನವೆಂಬ ಘೋರವಾದ ಕತ್ತಲೆಯಲ್ಲಿ ಸಿಕ್ಕಿ ದುಃಖಪಡುತ್ತಿರುವವನಿಗೆ ವಿದ್ಯೆಯು ಸೂರ್ಯನಂತೆ ಪ್ರಕಾಶವನ್ನು ಕೊಡುತ್ತದೆ. “ನಮಗೆ ಕಣ್ಣುಗಳಿವೆ; ಹಗಲಲ್ಲಿ ಸೂರ್ಯನ ರಾತ್ರಿಯಲ್ಲಿ ಚಂದ್ರ ನಕ್ಷತ್ರ ದೀಪಗಳ ಬೆಳಕಿನಿಂದ ನಾವು ಪದಾರ್ಥಗಳನ್ನು ಕಾಣುತ್ತೇವೆಂದು” ಹೇಳುತ್ತೀರಿ. ನಿಮಗೆ ವಿದ್ಯೆಯಿಲ್ಲದಿದ್ದರೆ ಸಾವಿರ ಕಣ್ಣುಗಳಿದ್ದಾಗ್ಯೂ ನೀವು ಕುರುಡರೇ ಸರಿ. ಗೋಡೆಯಿಂದೀಚೆ ನಿಮ್ಮ ಕಣ್ಣೆದುರಿಗಿರುವ ವಸ್ತುಗಳನ್ನು ಸಾಧಾರಣವಾಗಿ ನೀವು ನೋಡಬಹುದು. ಪರಂತು ನಿಮಗೆ ಹೊರಗಿನ ಕಣ್ಣುಗಳು ಮಾತ್ರವಿದ್ದು ಒಳಗಿನ ಕಣ್ಣು ಇಲ್ಲದಿದ್ದರೆ ಗೋಡೆಯಿಂದಾಚೆ ಬಹಳ ದೂರದಲ್ಲಿರುವ ಪದಾರ್ಥವನ್ನು ನೋಡುವದಕ್ಕೆ ನಿಮ್ಮಿಂದಾಗದು. ವಿದ್ಯೆಯಿಂದ ಒಳಗಿನ ದೃಷ್ಟಿ ನಿರ್ಮಲವಾಗಿ ಅದರ ಪ್ರಕಾಶದಿಂದ ಯಾವ ವಸ್ತು ಎಷ್ಟು ದೂರದಲ್ಲಿದ್ದಾಗ್ಯೂ ಅದನ್ನು ನೋಡಬಹುದು. ವಿದ್ಯಾವಂತರು ಹುಟ್ಟುಕುರುಡರಾದಾಗ್ಯೂ ತಮ್ಮ ಒಳಗಿನ ಕಣ್ಣುಗಳಿಂದ ಪ್ರಪಂಚವನ್ನೆಲ್ಲಾ ನೋಡಿ ಆನಂದ ಪಡುತ್ತಾರೆ.

ಎಲ್ಲಾ ಇಂದ್ರಿಯಗಳಲ್ಲಿಯೂ ನೇತ್ರೇಂದ್ರಿಯವು ಶ್ರೇಷ್ಠವಾದದ್ದು. ಶರೀರವೆಲ್ಲಾ ಬಹಳ ಸುಂದರವಾಗಿದ್ದಾಗ್ಯೂ ಕಣ್ಣುಗಳಿಲ್ಲದವನು ಚನ್ನಾಗಿ ಕಾಣಿಸುವದಿಲ್ಲ.

ಸಾಧಾರಣವಾಗಿ ಹೊರಗಿನ ವಸ್ತುಗಳನ್ನು ನೋಡುವದಕ್ಕೆ ಉಪಯೋಗವಾಗಿರುವ ಹೊರಗಿನಕಣ್ಣು ಯಾರಿಗಾದರೂ ಹೋಗಿದ್ದು ಅದನ್ನು ಸಂಪಾದಿಸಿ ಕೊಳ್ಳುವದಕ್ಕೇನಾದರೂ ಉಪಾಯವಿದ್ದರೆ ಆ ಮನುಷ್ಯನು ತನ್ನ ಇತರ ಎಲ್ಲಾ ಹವ್ಯಾಸವನ್ನು ಬಿಟ್ಟು, ಆ ಕಣ್ಣನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಿದ್ದನು. ಪರಂತು ಮೊದಲಿನಿಂದಲೂ ಇಲ್ಲದೆ ಇರುವ ಕಣ್ಣುಗಳನ್ನು ಸಂಪಾದಿಸಿಕೊಳ್ಳುವ ಉಪಾಯವು ಪ್ರಪಂಚದಲ್ಲಿ ಇನ್ನೂ ಯಾರಿಗೂ ತಿಳಿದಿಲ್ಲ. ತಾನು ಕುಳಿತಿರುವ ಸ್ಥಳದಿಂದಲೇ ಬಹಳ ದೂರದವರಿಗೂ ಚರ್ಮಚಕ್ಷುಸ್ಸಿಗೆ ಅಗೋಚರವಾದ್ದನ್ನೆಲ್ಲಾ ನೋಡುವದಕ್ಕೆ ಸಾಧನವಾಗಿರುವ ಒಳಗಿನ ಕಣ್ಣು ವಿದ್ಯಾಭ್ಯಾಸವನ್ನು ಮಾಡಿದರೆ ಶಿಕ್ಕುತ್ತವೆ. ಇಂಥಾ ಬೆಲೆಯಿಲ್ಲದ ಲಾಭಕ್ಕೋಸ್ಕರ ನೀವು ಯಾತಕ್ಕೆ ಪ್ರಯತ್ನ ಮಾಡಬಾರದು ?

ಒಳಗಿನ ಕಣ್ಣೆಂದರೆ ಜ್ಞಾನವು. ಜ್ಞಾನಕ್ಕೆ ವಿದ್ಯೆಯು ತಾಯಿಯಾಗಿದೆ. ತಾಯಿಯಿಲ್ಲದೆ ಕೂಸು ಹ್ಯಾಗೆ ಹುಟ್ಟುವದಿಲ್ಲವೋ ಹಾಗೇ ವಿದ್ಯೆಯಿಲ್ಲದೆ ಜ್ಞಾನವು ಹುಟ್ಟುವದಿಲ್ಲ. ಆದ್ದರಿಂದ ನಿಮಗೆ ಜ್ಞಾನವು ಬೇಕಾಗಿದ್ದರೆ ವಿದ್ಯಾಭ್ಯಾಸವನ್ನು ಮಾಡಿರಿ. ಅದಕ್ಕಾಗಿ ಕೆಲವು ನಿಬಂಧನೆಗಳನ್ನು ಹೇಳುತ್ತೇನೆ.

ಸಣ್ಣಕೂಸಿಗೆ ದೊಡ್ಡವರು ಹ್ಯಾಗೆ ಮಾತನಾಡುವದಕ್ಕೆ ಕಲಿಸುತ್ತಾರೋ ಅದು ಹಾಗೆ ಮಾತನಾಡುತ್ತದೆ. ಅದಕ್ಕೆ ಮಾತನಾಡುವದಕ್ಕಾಗಲಿ ಇನ್ನೂ ಯಾವಕೆಲಸವನ್ನು ಮಾಡುವದಕ್ಕಾಗಲಿ ಹೇಳಿಕೊಡದೆ ಬರುವದೇ ಯಿಲ್ಲ. ಹಾಗೆಯೇ ಹೇಳಿ ಕೊಡುವವರು ಇಲ್ಲದಿದ್ದರೆ ಪ್ರಾಯೇಣ ವಿದ್ಯೆಯೂ ಬರುವದಿಲ್ಲ. ಒಬ್ಬ ಹೊಸಬನಾದ ಪರಸ್ಥಳದವನು ತಾನು ಕಾಣದೆ ಇದ್ದ ಪಟ್ಟಣಕ್ಕೆಹೋಗಿ ಅಲ್ಲಿ ಒಬ್ಬರನ್ನೂಕೇಳದೆ ತನ್ನ ಮನ

ಸ್ವಬುಂದಕಡೆ ತಿರುಗುತ್ತಾ ಇದ್ದರೆ ಅವನು ಅನೇಕ ತೊಂದರೆಗಳನ್ನು ಅನುಭವಿಸ ಬೇಕಾಗುತ್ತದೆ. ಆದ್ದರಿಂದ ಅವನು ತಾನು ಹೋಗಬೇಕಾದ ದಾರಿಯು ಯಾವದೆಂಬುವದನ್ನು ಬಲ್ಲವರಿಂದಕೇಳಿ ತಿಳಿದು ಕೊಳ್ಳಬೇಕು. ಹಾಗೆಯೇ ವಿದ್ಯಾಭ್ಯಾಸ ಮಾಡುವವರು ಅದರ ಮಾರ್ಗವನ್ನು ಕೇಳಿ ತಿಳಿದು ಕೊಳ್ಳಬೇಕು. ವಿದ್ಯೆಯನ್ನು ಕಲಿಸಿ ಅದರ ದಾರಿಯನ್ನು ತೋರಿಸುವವನನ್ನು ಉಪಾಧ್ಯಾಯನೆಂತಲೂ ಗುರುವೆಂತಲೂ ಅನ್ನುತ್ತಾರೆ.

ಸಣ್ಣಹುಡಗರಿಗೂ ಮುಖ್ಯವಾಗಿ ಹುಡಿಗಿಯರಿಗೂ ಪ್ರೌಢಸ್ತ್ರೀಯರಿಗೂ ವಿದ್ಯಾಭ್ಯಾಸ ಮಾಡಿಸಬೇಕೆಂಬ ಅವರ ಸಂರಕ್ಷಕರು ವಿದ್ಯೆಯನ್ನು ಕಲಿಸತಕ್ಕ ಗುರುವನ್ನು ಚನ್ನಾಗಿ ಪರೀಕ್ಷಿಸಿ ನೇಮಿಸಬೇಕು. ಯಾತಕ್ಕೆಂದರೆ ಮನುಷ್ಯನಿಗೆ ಸಹವಾಸಕ್ಕೆ ತಕ್ಕ ಗುಣಗಳು ಬರುತ್ತವೆ.

ನೀರನ್ನು ಹಾಲಿನಲ್ಲಿ ಬೆರಿಸಿದರೆ ನೀರಿಗೆ ಹಾಲಿನ ಗುಣಗಳು ಭರುತ್ತವೆ. ಮತ್ತು ನೀರಿಗೆ ಕೆಸರನ್ನು ಬೆರಸಿದರೆ ಕೆಸರಿನ ಗುಣ ಬರುತ್ತದೆ. ಹಾಗೆಯೇ ಮನುಷ್ಯನಿಗೆ ಸಹವಾಸಕ್ಕೆ ಅನುಸಾರವಾಗಿ ಒಳ್ಳೇ ಗುಣವಾಗಲಿ ಕೆಟ್ಟಗುಣವಾಗಲಿ ಬರುತ್ತದೆ. ವಿಶೇಷವಾಗಿ ಹುಡುಗರ ಮತ್ತು ಹೆಂಗಸರ ಮನಸ್ಸು ಶುಭ್ರವಸ್ತ್ರದಂತೆ ಸ್ವಚ್ಛವಾಗಿಯೂ ಎಳೆ ಬಿದಿರಿನಂತೆ ಮೃದುವಾಗಿಯೂ ಇರುತ್ತದೆ. ಶುಭ್ರವಸ್ತ್ರದಮೇಲೆ ಯಾವ ಬಣ್ಣವನ್ನು ಹಾಕಿದರೂ ಚನ್ನಾಗಿ ಅಂಟುತ್ತದೆ. ಎಳೆ ಬಿದರನ್ನು ಹ್ಯಾಗೆ ಬೇಕಾದರೂ ಬಗ್ಗಿಸಬಹುದು. ಬಹಳ ದಿವಸವಾದಮೇಲೆ ಆ ವಸ್ತ್ರದ ಮೇಲೆ ಬೇರೆ ಬಣ್ಣ ಹಾಕುವದಕ್ಕೂ ಆ ಬಿದರನ್ನು ಬೇರೆ ರೀತಿಯಾಗಿ ಬಗ್ಗಿಸುವದಕ್ಕೂ ಪ್ರಯಾಸವಾಗುತ್ತದೆ. ಇದರಂತೆಯೇ ಆರಂಭದಲ್ಲಿ ಹತ್ತಿದ ಅಭ್ಯಾಸವು ಒಳ್ಳೇದಾಗಲಿ ಕೆಟ್ಟದ್ದಾಗಲೀ ಜನ್ಮವಿರುವ ವರೆಗೂ ಅವರನ್ನು ಬಿಡುವದಿಲ್ಲ.

ವಿದ್ಯಾಭ್ಯಾಸ ಮಾಡುವವರು ತಮ್ಮ ಗುರುಗಳಲ್ಲಿ ಬಹಳ ಮರ್ಯಾದೆಯಿಂದಿರಬೇಕು. ಅವರ ಮುಂದೆ ನಿಷ್ಕಾರಣವಾಗಿ ಯಾಗಲಿ ಹೆಚ್ಚಾಗಿಯಾಗಲಿ ನಗಕೂಡದು. ಅವರ ವಿಷಯದಲ್ಲಿ ಅವರ ಮುಂದಾಗಲಿ

ಹಿಂದಾಗಲಿ ಹಾಸ್ಯಮಾಡಬಾರದು. ಅವರ ಎದುರಿಗೆ ಅಮರ್ಯಾದೆಯಾಗಿಯೂ ಬಹಳ ಗಟ್ಟಿಯಾಗಿಯೂ ಮಾತನಾಡಬಾರದು. ಕಾಲು ಚಾಚಿಕೊಂಡು ಕೂತುಕೊಳ್ಳಬಾರದು, ಉಗಳಬಾರದು, ಅಣಕಿಸಬಾರದು, ಬಾಯಿಗೆಬಂದಂತೆ ಅವರಿಗೆ ಉತ್ತರ ಕೊಡಬಾರದು. ಅವರನ್ನು ಕುರಿತು ನೀನು ತಾನು ಎಂತ ಏಕವಚನದಲ್ಲಿ ಮಾತನಾಡಬಾರದು. ಅವರ ಸಂಗಡ ಮಾತನಾಡುವಾಗ ಬಹಳ ನಮ್ರತೆಯಿಂದ ಪ್ರಸನ್ನಮುಖರಾಗಿ ಮಧುರಸ್ವರದಿಂದ ಮಾತನಾಡಬೇಕು. ಕರ್ಕಶವಾಗಿಯೂ ಸುಳ್ಳಾಗಿಯೂ ಕಪಟವಾಗಿಯೂ ಇರುವ ಮಾತುಗಳನ್ನು ಆಡಬಾರದು. ಅವರು ಪ್ರಶ್ನೆ ಮಾಡದಿದ್ದರೆ ಯಾವವಿಷಯವನ್ನೂ ಅವರ ಸಂಗಡ ಹೇಳಬಾರದು. ಪರಂತು ಕುಶಲಪ್ರಶ್ನೆಮುಂತಾದ ಉಪಚಾರದ ಮಾತುಗಳನ್ನು ತಾವಾಗಿಯೇ ಆಡಬಹುದು. ಸಂಶಯಬಂದದ್ದನ್ನು ಕೇಳಬೇಕಾದರೂ ಯಾವದಾದರೂ ಕೆಲಸ ನಿಂತು ಹೋಗಿದ್ದರೂ ಅವರ ಸಮಯ ನೋಡಿ ಕೇಳಬೇಕು, ಗುರುಗಳ ಎದುರಿಗೆ ಒರಟುತನವನ್ನು ಮಾಡಬಾರದು. ಏನಾದರೂ ಅಪರಾಧಮಾಡಿದ್ದಕ್ಕಾಗಿ ಉಪಾಧ್ಯಾಯನು ಹೊಡೆದರೆ ಅಥವಾ ಸಿಟ್ಟುಮಾಡಿದರೆ ಅದಕ್ಕೆ ತಿರಿಗಿ ಸಿಟ್ಟುಮಾಡಬಾರದು. ತಮ್ಮ ದೋಷಗಳನ್ನು ತಿದ್ದುವ ಗುರುವು ಮಾಡಿದ ಸಿಟ್ಟಿಗೆ ತಿರಿಗಿ ಸಿಟ್ಟು ಮಾಡದೆ ತಮ್ಮ ದೋಷವನ್ನು ಬಿಡುವದಕ್ಕೆ ಪ್ರಯತ್ನಪಡುವವರು ಎಲ್ಲರಲ್ಲಿಯೂ ದೊಡ್ಡವರೆನ್ನಿಸಿಕೊಳ್ಳುತ್ತಾರೆ. ಹಾಗೆ ಮಾಡದೆ ಇರುವವರಿಗೆ ಪ್ರತಿಷ್ಠೆ ಬರುವದಿಲ್ಲ.

ಯಾರಮೇಲೆಯಾಗಲಿ ನಿಂದೆಯನ್ನು ಅಥವಾ ಚಾಡಿಮಾತುಗಳನ್ನು ಹೇಳಬಾರದು. ತನ್ನಲ್ಲಿ ತಪ್ಪಿಲ್ಲದೆ ಗುರುವು ಸಿಟ್ಟುಮಾಡಿದರೆ ನಮ್ರತೆಯಿಂದ ತಾನು ನಿರಪರಾಧಿಯೆಂದು ತಿಳಿಸಬೇಕು. ಉದ್ಧತತನವನ್ನಾಗಲಿ ಕೋಪವನ್ನಾಗಲಿ ಮಾಡಬಾರದು. ಸುಳ್ಳು ಕಲ್ಪಿಸಿಕೊಂಡು ತಾನು ನಿರಪರಾಧಿಯೆಂದು ತೋರಿಸಿಕೊಳ್ಳಬಾರದು. ತನ್ನ ತಪ್ಪನ್ನು ಇನ್ನೊಬ್ಬರಮೇಲೆ ಹಾಕಬಾರದು. ಗುರುವು ಹೇಳಿದ್ದನ್ನು ಮನಸ್ಸಿಟ್ಟು ಕೇಳಬೇಕು. ಮಧ್ಯದಲ್ಲಿ ಗದ್ದಲವನ್ನು ಮಾಡಬಾರದು. ಒಂದುಸಲ ಹೇಳಿದ್ದು ತಿಳಿಯದೆ ಇದ್ದರೆ ಇನ್ನೊಂದುಸಲ ಕೇಳಿ ತಿಳಿದುಕೊಳ್ಳಬೇಕು.

ವಿದ್ಯಾಭ್ಯಾಸವನ್ನು ಮಾಡುವಾಗ ಮನಸ್ಸನ್ನು ಬೇರೆಕಡೆಗೆ ಹೋಗಗೊಡಿಸಬಾರದು. ಚನ್ನಾಗಿ ಮನಸ್ಸಿಟ್ಟು ಪಾಠಗಳನ್ನು ಕಲಿತರೆ ಬೇಗನೆ ದೃಢವಾಗುತ್ತೆ. ಕಲಿಯುವದರಲ್ಲಿ ಪಾಲುಮಾರಿಕೆ ಇರಬಾರದು. ಅಭ್ಯಾಸವಿಲ್ಲದವನಿಗೆ ಮೊದಲು ಕೆಲವು ದಿವಸ ಆಲಸ್ಯಮಾಡದೆ ಏಕಾಗ್ರಚಿತ್ತದಿಂದ ವ್ಯಾಸಂಗ ಮಾಡುವದು ಶ್ರಮವಾಗುತ್ತೆ. ಪರಂತು ಅಭ್ಯಾಸಬಿದ್ದಮೇಲೆ ನಿತ್ಯವೂ ಮಾಡಬೇಕಾದ ಕೆಲಸ ಮಾಡದಿದ್ದರೆ ಮನಸ್ಸಿಗೆ ಸಮಾಧಾನವೇ ಆಗುವದಿಲ್ಲ. ಈ ದಿವಸದ ಪಾಠವನ್ನು ನಾಳೆದಿವಸ ಅಥವಾ ಹಿಂದಣಿಂದ ಕಲಿಯಬಹುದು ಎಂದು ಪಾಲುಮಾರಿಕೆಯನ್ನು ಮಾಡಬಾರದು. ಕಳೆದು ಹೋದ ಹೊತ್ತು ತಿರಿಗಿ ಸರ್ವಥಾ ಬರುವದಿಲ್ಲ. ಪಾಲುಮಾರಿಕೆಯಿಂದ ಬಂದುಗಳಿಗೆ ಹೊರಳಾಡುವದಕ್ಕೆ ತೊಡಗಿದರೆ ತಿರಿಗಿ ಏಳುವದಕ್ಕೆ ಮನಸ್ಸಾಗದೆ ಹಿಡಿದ ಕೆಲಸವೂ ನೆರವೇರುವದಿಲ್ಲ. ಬಾಲ್ಯದಲ್ಲಿ ಜನರಿಗೆ ಸಂಸಾರ ಮುಂತಾದ ಯಾವ ತಾಪತ್ರಯವೂ ಇರುವದಿಲ್ಲ. ಆಗ ಅವರ ಮನಸ್ಸು ಶಾಂತವಾಗಿ ಏಕಾಗ್ರವಾಗಿರುತ್ತದೆ. ಯಾವವಿಷಯದಲ್ಲಿಟ್ಟರೂ ಅದರಲ್ಲಿ ಸೇರಿ ಹೋಗುತ್ತದೆ. ಇಂಥಾ ಅಮೂಲ್ಯವಾದ ಅವಸ್ಥೆಯಲ್ಲಿ ಪುನಹ ಸಿಕ್ಕದೆ ಇರುವಂಥಾ ಹೊತ್ತನ್ನು ಹುಡುಗರು ವ್ಯರ್ಥವಾಗಿ ಕಳೆಯಬಾರದು. ಸಾಧ್ಯವಾದಷ್ಟು ಬೇಗ ಜ್ಞಾನವನ್ನು ಸಂಪಾದಿಸಬೇಕು. ಹೀಗೆ ಮಾಡಿದರೆ ಜನ್ಮವಿರುವವರಿಗೂ ಯಾವ ದುಃಖವನ್ನೂ ಅನುಭವಿಸಬೇಕಾಗುವದಿಲ್ಲ. ಹೀಗೆ ಮಾಡದೆ ಹೊತ್ತನ್ನು ವ್ಯರ್ಥವಾಗಿ ಕಳೆದುಬಿಟ್ಟರೆ ಅದು ತಿರಿಗಿ ದೊರೆಯುವದಿಲ್ಲ. ನಾನಾ ವಿಧವಾದ ಸಂಸಾರದ ತೊಂದರೆ ಪ್ರಾಪ್ತವಾದ ಬಳಿಕ ವಿದ್ಯೆ ಯೆಲ್ಲಿಯದು? ಜ್ಞಾನವೆಲ್ಲಿಯದು? ಮೊದಲು ವ್ಯರ್ಥವಾಗಿ ಕಾಲವನ್ನು ಕಳೆದೆವೆಂದು ಪಶ್ಚಾತ್ತಾಪಮಾತ್ರ ಉಂಟಾಗುತ್ತೆ.

ಸಾವಿರಾರು ಜನರು ಬಾಲ್ಯದಲ್ಲಿ ಈಮೇರೆ ಪಾಲುಮಾರಿಕೆಯಿಂದ ನಷ್ಟವನ್ನು ಹೊಂದಿ ಆ ಮೇಲೆ ಅತಿಶಯವಾದ ದುಃಖ ಸಂಕಟಗಳನ್ನು ಅನುಭವಿಸುತ್ತಾರೆ. ಕೆಲವರು ಜ್ಞಾನವಿದ್ದವರಿಗೂ ಕೂಡ ದುಃಖಗಳು ಬಿಟ್ಟದ್ದಿಲ್ಲವಾದ್ದರಿಂದ ಸುಮ್ಮನೆ ಸುಖಪಡುವ ಕಾಲದಲ್ಲಿ ವಿದ್ಯಾಭ್ಯಾಸದಲ್ಲಿ

ವ್ಯರ್ಥವಾಗಿ ಕಾಲಹರಣ ಮಾಡುವದರಲ್ಲಿ ಫಲವೇನೆಂದು ಹೇಳುತ್ತಾರೆ. ವಿದ್ಯಾವಂತರಿಗೆ ಸಂಕಟಗಳು ತಪ್ಪಿದ್ದಲ್ಲವೆಂಬುವದು ನಿಜವಾದಾಗ್ಯೂ ಅವರು ಸಂಕಟ ಬಂದವೇಳೆಯಲ್ಲಿ ಮೂಢರಂತೆ ಕಳವಳಪಟ್ಟು ನಿರಾಶೆಯಿಂದ ನಿರಾಧಾರವಾಗಿ ಸುಮ್ಮನೆ ಕೂತಿರುವದಿಲ್ಲ. ಅವರಲ್ಲಿ ಬಹಳ ಧೈರ್ಯವಿರುವದು. ಸಂಕಟದಿಂದ ತಪ್ಪಿಸಿಕೊಳ್ಳುವ ಉಪಾಯವು ಅವರಿಗೆ ಆ ಸಮಯದಲ್ಲಿ ತೋರುತ್ತೆ.

ವಿದ್ಯಾವಂತರ ಮನಸ್ಸು ಯಾವಾಗಲೂ ಶಾಂತವಾಗಿರುವದ್ದರಿಂದ ಅವರು ಸರ್ವದಾ ಸುಖಿಗಳಾಗಿದ್ದು ಎಂಥಾ ಸಂಕಟಗಳು ಬಂದಾಗ್ಯೂ ಅದರಿಂದ ಅವರ ಮನಸ್ಸಿಗೆ ವಿಶೇಷ ಸಂತಾಪವಾಗುವದಿಲ್ಲ. ಯಾರು ತಮ್ಮ ಮನಸ್ಸನ್ನು ಸ್ವಸ್ಥವಾಗಿ ಇಟ್ಟುಕೊಂಡಿರುತ್ತಾರೋ ಅವರೇ ಪ್ರಪಂಚದಲ್ಲಿ ಸುಖಿಗಳು. ಹೊರಗಿನ ಸುಖಗಳು ಸಾವಿರವಿದ್ದಾಗ್ಯೂ ಮನಸ್ಸು ಸ್ವಸ್ಥವಾಗಿರದಿದ್ದರೆ ಸುಖವೆಲ್ಲಿಂದ ಬರುತ್ತದೆ. ಕಾಲಿನಲ್ಲಿ ಜೋಡುಹಾಕಿಕೊಂಡು ಮುಳ್ಳಿನಮೇಲೆ ನಡೆದಾಗ್ಯೂ ತೊಂದರೆಯಾಗುವದಿಲ್ಲ. ಪರಂತು ಕಾಲಿನಲ್ಲಿ ಮುಳ್ಳುನೆಟ್ಟಿದ್ದಾಗ ಮಖಮಲ್ಲಿನ ಹಾಸಿಗೆ ಮೇಲೆ ನಡೆದಾಗ್ಯೂ ಕಾಲು ನೋಯುತ್ತದೆ. ಮನಸ್ಸು ಸುಖದಿಂದಿರುವದಕ್ಕೆ ಜ್ಞಾನಕ್ಕೆ ಸಮಾನವಾದ ಇತರ ಸಾಧನವಿಲ್ಲ. ವಿದ್ಯೆಯೆಂಬ ಅಕ್ಷಯವಾದ ಧನವನ್ನು ಚನ್ನಾಗಿ ಉಪಯೋಗಿಸಿದರೆ ಅದು ನಾಶವಾಗುವದಿಲ್ಲ. ಮತ್ತು ಇದರಿಂದ ಸಾಧಿಸಿ ಕೊಳ್ಳಬಹುದಾದ ಲಾಭಗಳು ಇತರ ವಿಧವಾದ ಧನದಿಂದ ಸಾಧ್ಯವಾಗುವದಿಲ್ಲ. ವಿದ್ಯಾಭ್ಯಾಸವನ್ನು ಚನ್ನಾಗಿ ಮಾಡಿದರೆ ಜ್ಞಾನವುಂಟಾಗಿ ಆ ಜ್ಞಾನದಿಂದ ಜಗತ್ಪಿತನಾದ ದೀನಬಂಧುವಾದ ಪರಮೇಶ್ವರನ ದಾರಿ ಗೊತ್ತಾಗುತ್ತದೆ. ಈಶ್ವರ ಭಕ್ತಿಯಿಂದ ಉಂಟಾಗುವ ಆನಂದದ ಮುಂದೆ ಇತರ ಎಲ್ಲಾ ಸುಖಗಳು ತುಚ್ಛಗಳಾಗಿವೆ. ದೊಡ್ಡದೊಡ್ಡ ಸಾಧುಗಳು ಎಲ್ಲಾ ವಿಧವಾದ ಈ ಲೋಕದ ಸುಖಗಳನ್ನು ಕಾಲಿನಿಂದ ಒದ್ದು, ಈಶ್ವರ ಭಕ್ತಿಯ ಆನಂದದಲ್ಲಿ ಮುಳುಗಿ, ಉದಾಸೀನಕ್ಕೆ ಯೋಗ್ಯವಾದ, ಭಯಂಕರವಾದ ಸ್ಮಶಾನವೇ ಮುಂತಾದ ಸ್ಥಳಗಳಲ್ಲಿ ಸುಖವಾಗಿ ಕಾಲಕ್ಷೇಪವನ್ನು ಮಾಡಿದ್ದಾರೆ. ಇದಕ್ಕೆ ನಿದರ್ಶನಗಳು ಅನೇಕವಾಗಿವೆ. ಈಶ್ವರನ

ಭಕ್ತಿಯಲ್ಲಿ ಇಷ್ಟುಸುಖವಿಲ್ಲದಿದ್ದರೆ ಮೇಲೆ ಹೇಳಿದಂತೆ ಎಲ್ಲಾ ಸುಖಗಳನ್ನು ಬಿಟ್ಟು ದುರ್ದಶೆಯಲ್ಲಿರುವದಕ್ಕೆ ಅವರಿಗೆ ಹುಚ್ಚುಹಿಡಿದಿತ್ತೆ ? ಇಲ್ಲಾ ! ಇವರು ಎಲ್ಲರಿಗಿಂತ ಹೆಚ್ಚು ತಿಳುವಳಿಕೆಯುಳ್ಳವರಾದ್ದರಿಂದಲೇ ಅಲ್ಪಸುಖದ ದಾರಿಯನ್ನು ಬಿಟ್ಟು ದೊಡ್ಡಸುಖದ ದಾರಿಯನ್ನು ಹಿಡಿದರು.

ನಮ್ಮ ಎದುರಿಗೆ ಒಂದು ಬುಟ್ಟಿಯಲ್ಲಿ ಬೋರೇಹಣ್ಣುಗಳನ್ನೂ ಒಂದು ಬುಟ್ಟಿಯಲ್ಲಿ ಮುತ್ತುಗಳನ್ನೂ ಇಟ್ಟು ನಿಮಗೆ ಬೇಕಾದ್ದನ್ನು ತೆಗದುಕೊಳ್ಳಿರಿ ಎಂದು ಹೇಳಿದರೆ ಬೋರೆ ಹಣ್ಣನ್ನು ತಿನ್ನಬೇಕೆಂಬ ಅಪೇಕ್ಷೆ ಯಿದ್ದಾಗ್ಯೂ ಅದನ್ನು ಬಿಟ್ಟು ಮುತ್ತುಗಳನ್ನೇ ತೆಗದುಕೊಳ್ಳುವದರಲ್ಲಿ ಸಂದೇಹವಿಲ್ಲ. ಬೋರೆ ಹಣ್ಣಿಗಿಂತ ಮುತ್ತಿನಬೆಲೆ ಬಹಳ ದೊಡ್ಡದೆಂದು ನಿಮಗೆ ಚನ್ನಾಗಿ ತಿಳಿದಿದೆ. ಹೀಗೆಯೇ ನೀವು ಜ್ಞಾನವಂತರಾದರೆ ಈಗಿನ ಕ್ಷಣಿಕ ಸುಖಕ್ಕಿಂತಲೂ ಈಶ್ವರ ಭಕ್ತಿಜನ್ಯವಾದ ಸುಖವು ಬಹಳ ದೊಡ್ಡ ದೆಂದು ನಿಮಗೆ ಗೊತ್ತಾಗುತ್ತೆ. ಆ ಮೇಲೆ ಇಲ್ಲಿನ ಯಾವಸುಖದ ಮೇಲೂ ನೀವು ದೃಷ್ಟಿಯಿಡಲಾರಿರಿ.

ನಿಮ್ಮ ಮನಸ್ಸು ಅಂಥಾ ಅನಂತವಾದ ಅನಿರ್ವಚನೀಯ ಸುಖದ ಕಡೆಗೆ ತಿರಿಗಿದರೆ ಪ್ರಪಂಚದಲ್ಲಿ ಎಂಥಾ ದುಃಖವು ನಿಮಗೆ ಸಂಘಟಿಸಿದಾಗ್ಯೂ ಅದು ನಿಮಗೆ ಗೊತ್ತು ಕೂಡಾ ಆಗಲಾರದು.

ಜ್ಞಾನ ಹೀನರಾದವರಿಗೆ ಈ ಸುಖ ಸ್ವರೂಪವೇ ತಿಳಿದಿರುವದಿಲ್ಲವಾದ್ದ ರಿಂದ ಈ ಲೋಕದ ಕ್ಷಣಿಕ ಸುಖದ ಆಶೆಯಿಂದ ರಾತ್ರಿ ಹಗಲೂ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಎಡೆಯಾಡುತ್ತಿರುತ್ತಾರೆ ; ಆ ಸುಖವು ದೊರಕುವ ಆಶೆ ತಪ್ಪಿದ ಕೂಡಲೆ ಮೃತಪ್ರಾಯರಾಗುತ್ತಾರೆ. ಸಣ್ಣಸಣ್ಣ ದುಃಖಗಳಿಂ ದಲೂ ಕೂಡ ಅವರಿಗೆ ಬಹಳ ಸಂಕಟವಾಗುತ್ತದೆ. ಹೀಗಾದಮೇಲೆ ಅವ ರಿಗೆ ಸಂಸಾರದಲ್ಲಿ ದುಃಖಕ್ಕೆ ಪಾರ ಉಂಟೆ ? ಆದ್ದರಿಂದ ಜ್ಞಾನಿಯಾಗು ವದಕ್ಕೆ ಸರ್ವಕಾಲದಲ್ಲಿಯೂ ಪ್ರಯತ್ನಮಾಡುತ್ತಿರಬೇಕು.

ನಿಮ್ಮಲ್ಲಿ ವಿದ್ಯಾಧನವಿದ್ದರೆ ಇತರ ಧನದ ಆವಶ್ಯಕತೆ ಉಂಟಾಗುವ ದಿಲ್ಲ. ಮನುಷ್ಯನಿಗೆ ಕಾಲವೆಲ್ಲಾ ಒಂದೇ ಸಮನಾಗಿರುತ್ತೆಂದು ಹೇಳುವ

ದಕ್ಕಾಗುವದಿಲ್ಲ; ನೀವು ಬಡವರಾಗಿದ್ದಲ್ಲಿ ಸುಖಕ್ಕೆ ಸಾಧನವಾದ ಧನವನ್ನು ಸಂಪಾದಿಸಿ ಸುಖಿಗಳಾಗುವದಕ್ಕೆ ವಿದ್ಯವನ್ನು ಕಲಿಯಬೇಕು.

ಈಶ್ವರ ಕೃಪೆಯಿಂದ ನೀವು ಒಳ್ಳೇಸ್ಥಿತಿಯಲ್ಲಿದ್ದರೆ ಈ ಸ್ಥಿತಿ ಶಾಶ್ವತವೆಲ್ಲ. ಮುಂದೆ ಯಾವದಾದರೂ ಸಂಕಟ ಪ್ರಸಂಗ ಬಂದಲ್ಲಿ ಅದನ್ನು ಶಮನ ಮಾಡುವ ಆಶೆಯೂ ಕೂಡ ಇರತಕ್ಕದ್ದಲ್ಲ. ಈ ಕಾರಣದಿಂದ ಈಗಿನಿಂದ ಎಚ್ಚತ್ತು ವಿದ್ಯೆಯನ್ನು ಸಂಪಾದಿಸುವ ಯತ್ನವನ್ನು ಚನ್ನಾಗಿ ಮಾಡಬೇಕು.

ಗುರುಗಳು ಹೇಳಿಕೊಡುವ ಪಾಠವನ್ನು ನೀವು ಚನ್ನಾಗಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಮಾಡಬೇಕು ; ಗಿಣಿಯಂತೆ ಬರೀ ಬಾಯಿಪಾಠ ಮಾಡಿ ಸುಮ್ಮನೆ ಕೂತುಕೊಳ್ಳಬೇಡಿರಿ. ನಿಮ್ಮ ಪಾಠದ ಭಾವಾರ್ಥವನ್ನು ತಿಳಿಯುವವರಿಗೆ ನಿಮ್ಮ ಮನಸ್ಸನ್ನು ಮತ್ತೊಂದುಕಡೆಗೆ ಬಿಡಬೇಡರಿ. ನೀವು ಓದಿರುವದರ ಭಾವಾರ್ಥವನ್ನು ತಿಳಿಯದಿದ್ದರೆ ಅದರಿಂದುಪಯೋಗವೇನು ? ಬರೀ ಬಾಯಿಪಾಠ ಮಾಡುವ ಶ್ರಮಮಾತ್ರ ಉಂಟಾಗುತ್ತೆ. ಈ ಪ್ರಕಾರ ಒಂದು ಚಿಕ್ಕಮನೆಯ ತುಂಬಾ ಪುಸ್ತಕಗಳನ್ನು ನೀವು ಬಾಯಿಪಾಠ ಮಾಡಿದಾಗ್ಯೂ ಅದರಿಂದ ನಿಮಗೆ ಏನೂ ಉಪಯೋಗವಾಗಲಾರದು ; ಎತ್ತಿನ ಬೆನ್ನಿನಮೇಲೆ ಒಂದು ಸಕ್ಕರೇಹೇರನ್ನು ಹೇರಿದಾಗ್ಯೂ ಅದಕ್ಕೆ ಅದರ ರುಚಿ ತಿಳಿದೀತೇ? ಅದಕ್ಕೆ ಆ ಭಾರವನ್ನು ಹೊತ್ತು ದೊತ್ತು ಶ್ರಮಮಾತ್ರ ಆಗುತ್ತೆ. ಅದೇಪ್ರಕಾರ ಅರ್ಥವನ್ನು ತಿಳಿಯದೆ ಕಲಿಯುವ ವಿದ್ಯೆಯು ದೆಸೆಯಿಂದ ನಿಮಗೆ ಬೇಸರ ಉಂಟಾಗದೆ ಇರುವದಕ್ಕಾಗಿ ನೀವು ಕಲಿಯುವ ಪಾಠದಲ್ಲಿ ಏನಿದೆ ಯೆಂದು ವಿಚಾರಮಾಡಿರಿ. ನೀವು ವಿಚಾರ ಮಾಡಿದಹಾಗೆಲ್ಲಾ ನಿಮಗೆ ಅಧಿಕ ಪ್ರಯೋಜನವುಂಟಾಗುತ್ತೆ. ಸಮುದ್ರದ ದಡದಲ್ಲಿ ಕೂತುಕೊಂಡು ನೀರಿನ ಮೇಲ್ಭಾಗವನ್ನು ಮಾತ್ರ ನೋಡುತ್ತಿದ್ದರೆ ಮುತ್ತುಗಳು ನೀರಿನ ಮೇಲೆ ತೇಲಿಬರುವದಿಲ್ಲ ; ಬರೀಕಸ, ಹುಲ್ಲಿನಕಡ್ಡಿ, ನೊರೆ, ಇವು ಮಾತ್ರ ಕಾಣುತ್ತವೆ. ಇಷ್ಟುಮಾತ್ರದಿಂದ ಮುತ್ತುಗಳು ಸಮುದ್ರದಲ್ಲಿ ಯಿಲ್ಲವೇ ಇಲ್ಲವೆಂದು ಎಣಿಸದೆ ಮುತ್ತು ತೆಗೆಯುವವರು ನೀರಿನಲ್ಲಿ ಬಹಳ ಹೊತ್ತು ಮುಳುಗಿ ನೋಡುತ್ತಾರಾದ್ದರಿಂದ ಅವರಿಗೆ ಮುತ್ತುಗಳು ಸಿಕ್ಕುತ್ತವೆ.

ಹಾಗೆಯೇ ವಜ್ರವೇ ಮೊದಲಾದ ರತ್ನಗಳು ಸುಮ್ಮನೆ ನೆಲದಲ್ಲಿ ಬಿದ್ದು ಇರುವದಿಲ್ಲ. ಗಣಿಗಳಲ್ಲಿ ನೋಡಿದರೆ ಮೊದಲು ಮಣ್ಣು, ಇದ್ದಲು, ಕಲ್ಲು, ಇವೇ ಕಣ್ಣಿಗೆ ಬೀಳುತ್ತವೆ. ಬಹಳ ಆಳವಾಗಿ ಅಗೆದು ಚನ್ನಾಗಿ ನೋಡಿದರೆ ರತ್ನಗಳು ದೊರಕುತ್ತವೆ.

ಹಾಗೆಯೇ ವಿದ್ಯಾಭ್ಯಾಸದಲ್ಲಿಯೂ ಕೂಡ ನೀವು ಮೇಲಮೇಲೆ ಹೋದರೆ ನಿಮಗೆ ಜ್ಞಾನವೆಂಬ ರತ್ನವು ಸಿಕ್ಕುವದಿಲ್ಲ. ಅದಕ್ಕೆ ಪ್ರತಿಯಾಗಿ ನಿಮಗೆ ಕಸ ಕಡ್ಡಿ ದೊರಕಿ ಅದರಿಂದ ನಿಮಗೆ ನಷ್ಟವುಂಟಾಗುವದೇ ಹೊರತು ಅನ್ನೇನು ಇಲ್ಲ. ಇಂಥಾ ಅನಿಷ್ಟ ದಾಯಕವಾದ ಕಸ ಕಡ್ಡಿ ನಿಮಗೆ ದೊರಕುವದಕ್ಕಿಂತ ಏನೂ ಸಿಕ್ಕದೆ ಇರುವದು ಉತ್ತಮ. ಏನೂ ತಿಳಿಯದವರಿಗಿಂತಲೂ ಸ್ವಲ್ಪ ತಿಳಿದವರು ಬಹಳ ಸಂಕಟಗಳನ್ನು ಅನುಭವಿಸುತ್ತಾರೆ. ಸ್ವಲ್ಪ ತಿಳಿದವರು ವಿಚಾರಹೀನರಾಗಿ ತಮಗೆ ಎಲ್ಲಾ ತಿಳಿಯುತ್ತೆಂದು ಭಾವಿಸಿಕೊಳ್ಳುತ್ತಾರೆ. ಈ ಅಹಂಕಾರದ ದೆಸೆಯಿಂದ ಅವರು ಪ್ರವರ್ತಿಸುವ ಎಲ್ಲಾ ಕೆಲಸದಲ್ಲಿಯೂ ತಿಳುವಳಿಕೆಯುಳ್ಳವರ ಆಲೋಚನೆಯನ್ನು ಕೇಳುವದಿಲ್ಲ. ಒಳ್ಳೇದು, ಕೆಟ್ಟದ್ದೆಂಬ ಆಲೋಚನೆಯೊಂದೂ ಇಲ್ಲದೆ ತಮ್ಮ ಮನಸ್ಸಿಗೆ ಬಂದದ್ದನ್ನೆಲ್ಲಾ ಮಾಡುವದಕ್ಕೆ ಆರಂಭಿಸುತ್ತಾರೆ. ಹೀಗೆ ಮಾಡುತ್ತಾ ಒಂದಾನೊಂದುವೇಳೆ ಹೂವಿನ ಹಾರವೆಂದು ಹಾವನ್ನು ಕೊರಳಿಗೆ ಸುತ್ತಿಕೊಂಡಂತೆ ಒಳ್ಳೇದೆಂದು ತಿಳಿದು ಕೆಟ್ಟ ಕೆಲಸವನ್ನು ಆರಂಭಿಸುತ್ತಾರೆ. ಆದ್ದರಿಂದ ಅವರ ಸುಖವೂ ಆಶೆಯೂ, ನಷ್ಟವಾಗಿ ಸಾಯುವವರಿಗೂ ದುಃಖದಿಂದ ತಪ್ತರಾಗಿರಬೇಕಾಗುತ್ತೆ. ತಿಳಿದವನು ಸ್ವತಃ ವಿಚಾರವನ್ನು ಮಾಡುತ್ತಾನೆ, ಮತ್ತೊಬ್ಬರ ಆಲೋಚನೆಯನ್ನು ಅಲಕ್ಷ್ಯ ಮಾಡುವದಿಲ್ಲ. ಆತನಿಗೆ ಅಹಂಕಾರವಿಲ್ಲದಕಾರಣ ಅವನು ಎಲ್ಲರಿಗೂ ಬೇಕಾಗಿರುತ್ತಾನೆ. ಆದ್ದರಿಂದ ಅವನಿಗೆ ವಿಪತ್ತು ಬರುವ ಸಂದರ್ಭವು ವಿಶೇಷವಾಗಿ ಇರುವದಿಲ್ಲ. ಆದ್ದರಿಂದ ನೀವು ಪಶುಗಳಂತೆ ಅಜ್ಞಾನಿಗಳಾಗಿಯೂ ಇರಬಾರದು. ಚನ್ನಾಗಿ ವಿದ್ಯಾವಂತರಾಗುವದಕ್ಕೆ ಪ್ರಯತ್ನ ಮಾಡಬೇಕು. ಇಲ್ಲವಾದರೆ ನಿಮ್ಮ ದುರವಸ್ಥೆಗೆ ಪಾರವಿರುವದಿಲ್ಲ.

ಬಹಳ ಪುಸ್ತಕಗಳನ್ನು ಓದಿದರೆ ಜ್ಞಾನವಾಗುತ್ತೆಂದು ಕೆಲವರು ತಿಳಿಯುತ್ತಾರೆ. ಇದು ನಿಜವಾದರೆ ಈ ಉಪಾಯು ಬಹಳ ಸುಲಭವಾಗಿದೆ. ಮತ್ತು ಪುಸ್ತಕಗಳನ್ನು ತುಂಬಿರುವ ಪೆಟ್ಟಿಗೆಗಳು ಮನೆಗಳು ಚೀಲಗಳು ಇವೆಲ್ಲಾ ಜ್ಞಾನಿಗಳಾಗಿರಬೇಕಾಗುತ್ತೆ. ಸುಮ್ಮನೆ ಓದಿದ ಮಾತ್ರದಿಂದ ಜ್ಞಾನವಾಗುವದಿಲ್ಲ. ಏಕಾಗ್ರಚಿತ್ತದಿಂದ ಸಲ್ಪ ಅಭ್ಯಾಸ ಮಾಡಿದಾಗ್ಯೂ ಬಹಳ ತಿಳುವಳಿಕೆ ಉಂಟಾಗುವದು. ಆಹಾರದ ವಿಷಯದಲ್ಲಿ ನಿಯಮ ವಿಲ್ಲದೆ ಇದ್ದರೆ ಅದರಿಂದ ಪುಷ್ಟಿ ಹ್ಯಾಗೆ ಉಂಟಾಗುವದಿಲ್ಲವೋ ಹಾಗೆಯೇ ಏಕಾಗ್ರಚಿತ್ತವಿಲ್ಲದಿದ್ದರೆ ಬರೀ ಓದಿನಿಂದ ಜ್ಞಾನವುಂಟಾಗುವದಿಲ್ಲ. ಚಿತ್ತವು ಏಕಾಗ್ರವಾಗುವದಕ್ಕೆ ಕೆಲವು ಉಪಾಯಗಳು ಇವೆ. ಅವು ಯಾವ ವೆಂದರೆ:—

ಗುರುಗಳು ನೇಮಿಸಿ ಕೊಟ್ಟಿರುವ ಪಾಠದಲ್ಲಿ ತಿಳಿಯದೇ ಇರುವ ಶಬ್ದಗಳ ಅರ್ಥವನ್ನು ಮಾತ್ರ ಕೇಳಿ ತಿಳಿದುಕೊಂಡು ಅದನ್ನು ನೀವೇ ಘಟ್ಟಿಮಾಡಬೇಕು. ಮತ್ತೊಬ್ಬರ ಕಯ್ಯಿಂದ ನೀವು ಬಾಯಿಪಾಠ ಮಾಡಿಸಿ ಕೊಳ್ಳಬಾರದು. ಆ ಪಾಠದಲ್ಲಿಯ ತಾತ್ಪರ್ಯವನ್ನು ತಿಳಿದುಕೊಳ್ಳುವ ದಕ್ಕೆ ನೀವೇ ಪದೇಪದೇ ವಿಚಾರ ಮಾಡಬೇಕು; ಈ ಪ್ರಕಾರ ಕೆಲವು ದಿವಸ ಪರಿಶ್ರಮ ಮಾಡಿದರೆ ಎಲ್ಲಾ ಅರ್ಥವೂ ತನ್ನಷ್ಟಕ್ಕೆ ತಾನೇ ತಿಳಿಯು ವದಲ್ಲದೆ ಬಾಯಿಪಾಠವಾಗುವದು ಸುಲಭವಾಗುತ್ತೆ. ಲೆಕ್ಕ ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವದು ಶ್ರಮವಾದಾಗ್ಯೂ ನೀವೇ ಕಂಡು ಹಿಡಿಯುವದಕ್ಕೆ ಪ್ರಯತ್ನ ಮಾಡಬೇಕು. ಮತ್ತೊಬ್ಬರನ್ನು ಕೇಳುವ ವಿಷಯದಲ್ಲಿ ಬಹಳ ಸಂಕೋಚ ವುಂಟಾಗಬೇಕು. ಯಾವ ಪಾಠವೇ ಆಗಲಿ ಕಠಿನವಾಗಿದ್ದರೆ ಅದನ್ನು ನಾವೇ ಓದಿಕೊಂಡರೆ ಬರುವದಿಲ್ಲ ವೆಂಬ ಆಲೋಚನೆಯನ್ನು ಸ್ವಪ್ನದಲ್ಲಿ ಕೂಡಾ ಮಾಡಬಾರದು. ಇತರರಿಂದ ಸಾಧ್ಯವಾದದ್ದು ನಿಮ್ಮಿಂದಲೇ ಯಾಕೆ ಸಾಧ್ಯವಾಗಬಾರದು? ಪ್ರಯತ್ನ ಮಾಡಿದರೆ ಅವಶ್ಯಕವಾಗಿ ಸಾಧ್ಯವಾಗುತ್ತೆಂದು ನೀವು ನಿಶ್ಚಯಿಸಿಕೊಂಡಿರ ಬೇಕು. ಅನೇಕರು ಪಾಲುಮಾರಿಕೆಯಿಂದ ಸ್ವಲ್ಪ ಶ್ರಮಸಾಧ್ಯವಾದ ಕೆಲ ಸವನ್ನೂ ತಾವು ಮಾಡದೆ ಇತರರು ಬಹು ಶ್ರಮಸಾಧ್ಯವಾದ ಕೆಲಸಗಳನ್ನು

ಮಾಡಿದ್ದನ್ನು ನೋಡಿ ಅಸೂಯೆ ಪಡುತ್ತಾರೆ. ಅಥವಾ ಅವನು ಈಶ್ವರನಲ್ಲಿ ವರವನ್ನು ಪಡೆದಿದ್ದಾನೆ ; ಇಲ್ಲವೆ, ಅವನು ಅವತಾರಪುರುಷ ; ಆದ್ದರಿಂದ ಈ ರೀತಿ ಕೆಲಸ ಅವನಿಂದ ಆಗುತ್ತೆ ನಮ್ಮ ಹಣೆಯಲ್ಲಿ ಅದು ಬರದಿಲ್ಲವೆಂದು ತಲೇಮೇಲೆ ಕೈಯಿಟ್ಟುಕೊಂಡು ಅಳುತ್ತಾ ಕೂತುಕೊಳ್ಳುತ್ತಾರೆ. ಹಣೇಬರಹವೆಂಬುವದು ದೇವರಲ್ಲ ; ನಾವು ಹ್ಯಾಗೆ ಮಾಡಬೇಕೆಂದರೆ ನಮ್ಮ ಅವಸ್ಥೆ ಹಾಗೆ ಆಗುತ್ತೆ ; ನಾವು ಮನುಷ್ಯನ ಚಿತ್ರವನ್ನು ಬರೆಯಲುದ್ಯೋಗಿಸಿ, ಕೋತಿಯನ್ನು ಬರೆದರೆ ಆ ವ್ಯತ್ಯಾಸದ ದೋಷಕ್ಕೆ ನಾವು ಭಾಗಿಗಳೋ ? ಆ ಚಿತ್ರವೇ ಭಾಗಿಯೋ ? ಈ ಲೋಕದಲ್ಲಿ ಸಾವಿರಾರು ವರ್ಷಗಳಿಂದಲೂ ಯಾರಯಶಸ್ಸು ಮೆರೆಯುತ್ತದೆಯೋ ಯಾರು ದೊಡ್ಡದೊಡ್ಡ ಜ್ಞಾನಿಗಳಾಗಿದ್ದರೋ ಅವರಿಗೆ ಪ್ರಾಪ್ತವಾದ ಅಮೂಲ್ಯವಾದ ಜ್ಞಾನವು ಅವರಚಿತ್ತದ ಏಕಾಗ್ರತೆಯಿಂದಲ್ಲದೆ ಅನ್ಯಾತರಿಂದಲೂ ಅಲ್ಲ. * * *

* * * *

ಯಾರಮೇಲೆ ನಮಗೆ ಪ್ರೀತಿ ಯಿರುತ್ತೋ ಅವರಿಗೆ ನಮ್ಮ ಮೇಲೆ ಪ್ರೀತಿ ಯಿರುತ್ತೆ. ಅವರ ಮೇಲೆಯೇ ಯಾವಾಗಲೂ ನಮ್ಮ ಮನಸ್ಸಿರುವದು ಪ್ರಪಂಚದಲ್ಲಿ ವಾಡಿಕೆಯಾಗಿದೆ. ಆದ್ದರಿಂದ ನಿಮಗೆ ಜ್ಞಾನವು ಬೇಕಾಗಿದ್ದರೆ ವಿದ್ಯೆಯ ಮೇಲೆ ಎಲ್ಲಕ್ಕಿಂತಲೂ ಹೆಚ್ಚಾಗಿ ನೀವು ಪ್ರೀತಿಯನ್ನಿಡಬೇಕು. ಹಾಗೆ ಮಾಡಿದಲ್ಲಿ ನಿಮ್ಮ ಮನಸ್ಸು ಯಾವಾಗಲೂ ಅದರಲ್ಲಿ ನಿಂತು ಅದು ನಿಮಗೆ ದೊರೆಯುವದು. ಇಲ್ಲದೆ ಇದ್ದರೆ ದೊರೆಯುವದಿಲ್ಲ. ನಿಮ್ಮ ಮನಸ್ಸು ವಿದ್ಯೆಯನ್ನು ಬಿಟ್ಟು, ಬೇರೆ ಕಡೆಗೆ ಹೋದೀತು. ಅಂಥಾ ಸಂದರ್ಭವು ಎಂದಿಗೂ ಬಾರದಂತೆ ನೀವು ಬಹಳ ಜಾಗರೂಕರಾಗಿರಬೇಕು. ಊಟ ಉಪಚಾರಗಳಲ್ಲಿ ಕ್ಲಪ್ತವಾಗಿರಬೇಕು. ಹರಟೆಯಲ್ಲಿಯೂ ಆಟದಲ್ಲಿಯೂ ಮನಸ್ಸಿಡಬಾರದು. ನಿಮ್ಮ ಉಡಿಗೆ ಯೋಗ್ಯತಾನುಸಾರ ಸಾಧಾರಣವಾಗಿರಬೇಕು. ಊಟ ಉಪಚಾರದಲ್ಲಿ ಕ್ಲಪ್ತವಿಲ್ಲದೆ ಉಡಿಗೆ ತೊಡಿಗೆಗಳಲ್ಲಿ ಸೊಗಸಿಗೆ ಬಿದ್ದಕೂಡಲೇ ವಿದ್ಯೆಯು ಆ ಸ್ಥಳವನ್ನೇ ಬಿಟ್ಟು ಹೋಗುತ್ತೆ. ಅನಂತರ ನೀವು ಯಾವಕೆಲಸಕ್ಕೂ ಬರುವದಿಲ್ಲ. ಇತರರು

ಬಳ್ಳೇ ಬಟ್ಟೆಗಳನ್ನುಡುತ್ತಾರೆ. ದೊಡ್ಡದೊಡ್ಡ ಒಡವೆಗಳನ್ನು ಇಟ್ಟು ಕೊಳ್ಳುತ್ತಾರೆ. ಮನಸ್ಸಿಗೆ ಬಂದಂತೆ ನಡೆಯುತ್ತಾರೆ. ನಾವೂ ಹಾಗೆ ಯಾಕೆ ಮಾಡಬಾರದೆಂದು ನೀವು ಆಲೋಚಿಸಿ ಆ ಪ್ರಕಾರ ಮಾಡಲಾರಂಭಿಸಬಾರದು. ವಿದ್ಯಾಭ್ಯಾಸ ಮಾಡತಕ್ಕ ವಯಸ್ಸಿನಲ್ಲಿ ವಿದ್ಯಾವ್ಯಾಸಂಗವನ್ನು ಬಿಟ್ಟು ಬಳ್ಳೇ ಬಟ್ಟೆಗಳನ್ನುಡುವದು ಒಡವೆಗಳನ್ನು ತೊಡುವದು ಇವೇ ಮೊದಲಾದ ನಿರರ್ಥಕ ಕಾರ್ಯಗಳಲ್ಲಿ ಮನಸ್ಸಿಟ್ಟವರ ಪರಿಣಾಮವು ಯಾವಾಗಲೂ ಒಳ್ಳೇದಾಗುವದಿಲ್ಲ. ಅವರ ಬಟ್ಟೆಗಳೂ ಒಡವೆಗಳೂ ಮತ್ತು ಅವರ ಸೌಂದರ್ಯವೂ ಕೂಡ ಶಾಶ್ವತವಾಗಿ ನಿಲ್ಲುವದಿಲ್ಲ. ನೀವು ಒಡವೆಗಳನ್ನಿಟ್ಟುಕೊಂಡು ಊರಲ್ಲೆಲ್ಲಾ ಮೆರೆದಾಗ್ಯೂ ನಿಮ್ಮಲ್ಲಿ ಗುಣವಿಲ್ಲದಿದ್ದರೆ ಯಾರೂ ನಿಮ್ಮನ್ನು ತಲೆಯೆತ್ತಿ ನೋಡುವದಿಲ್ಲ. ನಿಮ್ಮಲ್ಲಿ ಗುಣವಿದ್ದರೆ, ನೀವು ಮೂಲೆಯಲ್ಲಿ ಕುಳಿತಿದ್ದರೂ ನಿಮ್ಮಲ್ಲಿ ಎಲ್ಲರಿಗೂ ಪ್ರೀತಿ ಹುಟ್ಟುತ್ತದೆ. ಮುತ್ತುಗದಹುವ್ವು ನೋಡುವದಕ್ಕೆ ಬಹಳ ಅಂದವಾಗಿರುತ್ತದೆ. ಅದನ್ನು ಸುವಾಸನೆಯುಳ್ಳ ಹುವ್ವಿನ ತುರಾಯಿಯಲ್ಲಿ ಸೇರಿಸಿದ್ದನ್ನು ಯಾರಾದರೂ ಯಾವಾಗಲಾದರೂ ನೋಡಿದ್ದಾರೆಯೇ? ಇಲ್ಲ; ಹಾಗಾದರೆ ಅದು ಕಣ್ಣಿಗೆ ಇಷ್ಟು ಅಂದವಾಗಿದ್ದಾಗ್ಯೂ ಅದಕ್ಕೆ ಯಾತಕ್ಕೆ ಪುರಸ್ಕಾರವಿಲ್ಲ? ಅದರಲ್ಲಿ ಸುಗಂಧವಿಲ್ಲವೆಂತಲ್ಲವೆ? ನಂಜದಹೂವು (ಅಂದರೆ ಬಕುಳದ ಹುವ್ವು) ಬಹಳ ಸಣ್ಣದಾಗಿಯೂ ನೋಡುವದಕ್ಕೆ ಅಂದವಿಲ್ಲದ್ದಾಗಿಯೂ ಇರುತ್ತದೆ. ಪರಂತು ಅದರಲ್ಲಿ ಸುವಾಸನೆಯಿರುವದ್ದರಿಂದ ಅದು ಒಣಗಿದ್ದಾಗ್ಯೂ ಅದರಲ್ಲಿ ಜನರಿಗೆ ಪ್ರೀತಿಯಿರುತ್ತೆ. ಒಡವೆಗಳನ್ನಿಟ್ಟುಕೊಂಡು ಒಳ್ಳೊಳ್ಳೇ ಬಟ್ಟೆಗಳನ್ನುಟ್ಟುಕೊಂಡು ಮೆರೆದರೆ ನಿಮಗೆ ಬಹಳ ಕಾಂತಿ ಉಂಟಾಗುತ್ತೆಂದು ನೀವು ತಿಳಿದಿದ್ದರೆ ಅದು ಭ್ರಾಂತಿಯೇಸರಿ. ನಿಮ್ಮ ಸ್ವರೂಪವೂ ಗುಣಗಳೂ ಚನ್ನಾಗಿದ್ದರೆ ಒಡವೆಗಳಿಂದ ನಿಮಗೆ ಕಾಂತಿ ಬರುತ್ತೆ. ಹಾಗಿಲ್ಲದಿದ್ದರೆ ನಿಮ್ಮ ಸಹವಾಸದಿಂದ ಆ ಒಡವೆಗಳಿಗೆ ಇದ್ದ ಕಾಂತಿಯೂ ಹೋಗುತ್ತೆ. ಈ ಪ್ರಕಾರ ವೇಷಧಾರಿಗಳಂತೆ ನೀವು ಮಾಡ ಲುದ್ಯೋಗಿಸಿದರೆ ಲೋಕದಲ್ಲಿ ಅಪಹಾಸಕ್ಕೆ ಕಾರಣವಲ್ಲದೆ ಇನ್ನೇನೂ ಫಲವಾಗುವದಿಲ್ಲ. ಕೋತಿಗೆ ಒಳ್ಳೇ ಬಟ್ಟೆಗಳನ್ನು ಹಾಕಿ ಅಲಂಕಾರ

ಮಾಡುವದರಿಂದ ಅದರ ಸ್ವಭಾವ ಸಿದ್ಧವಾದ ಕುರೂಪವು ಹೋದದ್ದನ್ನ ಯಾರಾದರೂ ನೋಡಿಯಾಗಲೀ ಕೇಳಿಯಾಗಲೀ ಇದ್ದಾರೆಯೋ ?

ಮನುಷ್ಯನಿಗೆ ಒಡವೆಗಳನ್ನಿಟ್ಟು ಕೊಂಡದ್ದರಿಂದ ಸ್ವಲ್ಪವಟ್ಟಿ ಕಾಂತಿಬರುವದು ನಿಜ, ಆದರೆ ಯೌವನ ವಿರುವ ಪರಿಯಂತರವೇ ಸ ಮುಪ್ಪಿನಲ್ಲಿ ಶರೀರದ ಸೌಂದರ್ಯವು ಹೋದನಂತರ ಚಿನ್ನದ ಮುತ್ತಿನ ಒಡ ಗಳಿಂದ ಯಾವಕಾಂತಿಯೂ ಬರುವದಿಲ್ಲ. ಮತ್ತು ಯೌವನವೂ, ಒಡ ಗಳನ್ನು ಮಾಡಿಸುವದಕ್ಕೆ ಅನುಕೂಲವಾದ ಹಣವೂ ಕೂಡ ಸ್ಥಿರವಾಗಿ ನಿ ವದಿಲ್ಲ. ಆದ್ದರಿಂದ ನೀವು ಬಹಳಕಾಲ ನಿಲ್ಲುವ ಅಕ್ಷಯವಾದ ವಿದ್ಯಾಧ ವನ್ನು ಸಂಪಾದಿಸಿ ಸದ್ಗುಣವೆಂಬ ಒಡವೆಗಳನ್ನು ಇಟ್ಟುಕೊಳ್ಳಿರಿ. ಇದರಿ ಉಂಟಾಗುವ ಕಾಂತಿಯು ನೀವು ಕುರೂಪಿಗಳಾಗಿಯೂ ಬಡವರಾಗಿಯ ಮುದುಕಿಯರಾಗಿಯೂ ಇದ್ದಾಗ್ಯೂ ಕಡಮೆಯಾಗುವದಿಲ್ಲ.

ವಿದ್ಯಾಭ್ಯಾಸಕ್ಕೆ ವಿಘ್ನವನ್ನುಂಟುಮಾಡುವ ವಿಷಯಗಳು ಅನೇ ವಾಗಿವೆ. ಅವುಗಳಲ್ಲಿ ಪೋಲುಮಾರಿಕೆಯು ಮುಖ್ಯವಾದದ್ದು ಆದ್ದರಿ ಅದನ್ನು ಶುದ್ಧಾಂಗವಾಗಿ ಬಿಟ್ಟುಬಿಡಬೇಕು. ಪೋಲುಮಾರಿಕೆಯನ್ನು ಹೋ ಲಾಡಿಸುವದಕ್ಕೆ ಒಂದು ಉಪಾಯವುಂಟು. ನಾವು ಮಾಡತಕ್ಕ ಎಲ್ಲಾ ಕ ಸಗಳಿಗೂ ಒಂದೊಂದು ಹೊತ್ತನ್ನು ಗೊತ್ತುಮಾಡಿಕೊಂಡು ಆಯಾ ಹ ತ್ತಿನಲ್ಲಿ ಆಯಾಕೆಲಸವನ್ನು ತಪ್ಪದೆ ಮಾಡಬೇಕು. ಮೊದಲು ಮಾಡತ ಕೆಲಸವನ್ನು ಆ ಮೇಲೆ ಮಾಡಬಾರದು. ಗೊತ್ತು ಮಾಡಿರುವ ಹೊತ್ತನ ವ್ಯರ್ಥವಾಗಿ ಹೋಗುವಂತೆಯೂ ಮಾಡಬಾರದು. ಪ್ರತಿನಿತ್ಯವೂ ರಾ ೯ ಘಂಟೆಗೆ ಮಲಗಿಕೊಂಡು ಬೆಳಗ್ಗೆ ೪ ಘಂಟೆಗೆ ಏಳಬೇಕು. ಏಳುತಾಸಿಗಿಂ ಹೆಚ್ಚಾಗಿ ನಿದ್ರೆ ಮಾಡಬಾರದು. ಇದಕ್ಕಿಂತ ಕಡಿಮೆಹೊತ್ತು ಮಲಗಿದ ಶರೀರಕ್ಕೆ ಆರೋಗ್ಯವಿರುವದಿಲ್ಲ. ಏಳುತಾಸು ನಿದ್ರೆ ಮಾಡುವ ಕ್ರಮವನ್ನಿ ಟ್ಟುಕೊಂಡರೆ, ಶರೀರ ಸ್ಥಿತಿಯು ಚನ್ನಾಗಿರುವದಲ್ಲದೆ ರೋಗಗಳಿಗೆ ಆಸ್ಪ ವಾಗುವದಿಲ್ಲ. ಕೆಲವರು ರಾತ್ರಿ ಬಹಳಹೊತ್ತು ಜಾಗರಣ ಮಾಡುತ ಕೆಲಸಗಳನ್ನು ಮಾಡುತ್ತಾರೆ. ಅದು ಯುಕ್ತವಲ್ಲ. ಶರೀರ ಸ್ಥಿತಿಯನ

ಚನ್ನಾಗಿ ಇಟ್ಟುಕೊಂಡು ಅನಂತರ ಯಾವವಿಧವಾದ ಸುಖವನ್ನಾಗಲಿ ಜ್ಞಾನವನ್ನಾಗಲಿ ಸಂಪಾದಿಸಿಕೊಂಡರೆ ಒಳ್ಳೇದು. ಶರೀರಸ್ಥಿತಿ ಚನ್ನಾಗಿಲ್ಲದ ಮೇಲೆ ಇವುಗಳಿಂದೇನೂ ಉಪಯೋಗವಿಲ್ಲ. ಗೊತ್ತುಮಾಡಿದ ಹೊತ್ತಿನಲ್ಲಿ ಏಳುವದಕ್ಕೆ ಎಚ್ಚರಿಕೆಯಾಗುವದು ನಮ್ಮ ಸ್ವಾಧೀನದಲ್ಲಿ ಇರುವದಿಲ್ಲ; ಆದರೆ ಮೊದಲು ಕೆಲವು ದಿವಸ ಗೊತ್ತುಮಾಡಿದ ಹೊತ್ತಿನಲ್ಲಿ ಮಲಗಿ ಏಳುವದಕ್ಕೆ ಪ್ರಯತ್ನಮಾಡಿದರೆ ಅನಂತರ ಅಭ್ಯಾಸಬಿದ್ದು ಹೋಗುತ್ತೆ. ಇದರ ಅನುಭವವು ನನಗೆ ಇದೆ. ಪ್ರಪಂಚದಲ್ಲಿ ಯಾವಕೆಲಸವೂ ಮನುಷ್ಯನಿಗೆ ಅಸಾಧ್ಯವಲ್ಲ. ಮನುಷ್ಯನು ಕೆಲವುದಿವಸ ಪ್ರಯತ್ನಮಾಡಿ ಸಾಧಿಸುತ್ತಾ ಮಾತ್ರ ಬಂದರೆ, ಎಷ್ಟು ಶ್ರಮದ ಕೆಲಸವಾದಾಗ್ಯೂ ಮಾಡುತ್ತಾ ಮಾಡುತ್ತಾ ಅಭ್ಯಾಸವಾಗಿ, ಅದರ ಕಷ್ಟ ತೋರುವದಿಲ್ಲ. ಈ ಅಂಶ ನಿಮಗೆ ಎಲ್ಲಾ ವಿಷಯದಲ್ಲಿಯೂ ಉಪಯೋಗಕರವಾದ್ದರಿಂದ ಇದನ್ನು ನೀವು ಚನ್ನಾಗಿ ನೆನಪಿನಲ್ಲಿ ಇಟ್ಟುಕೊಂಡಿರಬೇಕು.

ಹಾಸಿಗೆಯ ಮೇಲೆ ನಿಮಗೆ ಎಚ್ಚರವಾದ ಕೂಡಲೆ ಥಟ್ಟನೆ ಏಳಬೇಕು. ಎಚ್ಚರಿಕೆಯಾದಾಗ ಏಳದೆ ಈಗ ಏಳೋಣ ಇನ್ನೂ ಅರ್ಧ ಘಳಿಗೆಯನ್ನು ಬಿಟ್ಟು ಏಳೋಣವೆಂದು ಆಲೋಚನೆ ಮಾಡುತ್ತಿರುವಷ್ಟರಲ್ಲಿಯೇ ನಿಮಗೆ ತಿಳಿಯದಂತೆ ತಿರಿಗಿ ನಿದ್ರೆಹತ್ತಿ ಸೂರ್ಯೋದಯದವರಿಗೂ ಮಲಗುವದರಿಂದ ಶರೀರವು ಭಾರವಾಗುತ್ತೆ. ನೀವೆಲ್ಲರೂ ಘಡಿಯಾರವನ್ನು ನೋಡಿರಬಹುದು. ಅದರಲ್ಲಿ ಘಂಟೆಯನ್ನು ತೋರಿಸುವ ಸಣ್ಣಮುಳ್ಳು ನಿಮಿಷವನ್ನು ತೋರಿಸುವ ದೊಡ್ಡಮುಳ್ಳು ಹೀಗೆ ಎರಡು ಮುಳ್ಳುಗಳಿವೆ. ಒಳಭಾಗದಲ್ಲಿ ಕೆಲವು ಚಕ್ರಗಳಿವೆ. ಒಂದಕ್ಕೆ ಒಂದು ಉಕ್ಕಿನಪಟ್ಟಿ ಸುತ್ತಿರುತ್ತೆ ಇದಕ್ಕೆ ಕಮಾನ್ ಅನ್ನುತ್ತಾರೆ, ಗಡಿಯಾರವನ್ನು ಹೊತ್ತಿಗೆ ಸರಿಯಾಗಿ ಬೀಗದಕೈಯಿಂದ ತಿರಿಗಿಸುವದರಿಂದ ಈ ಕಮಾನಿಗೆ ತಕ್ಕಮಟ್ಟಿಗೆ ಬಲಬಂದು ಅದರಿಂದ ಗಡಿಯಾರವು ಚನ್ನಾಗಿ ನಡೆಯುತ್ತದೆ. ಹೊತ್ತಿಗೆ ಸರಿಯಾಗಿ ತಿರುಗಿಸದಿದ್ದರೆ ನಿಂತು ಹೋಗುತ್ತದೆ. ಮತ್ತು ನಿಬಂಧನೆಗಿಂತ ಹೆಚ್ಚಾಗಿ ತಿರಿಗಿಸಿದರೆ ಕಮಾನು ಕಿತ್ತುಹೋಗಿ ಗಡಿಯಾರ ಕೆಲಸಕ್ಕೆ ಬರುವದಿಲ್ಲ.

5

ನಮ್ಮ ಶರೀರವೂ ಗಡಿಯಾರದಂತೆಯೇ ಇದೆ. ಬುದ್ಧಿ, ಕೋಪ ಲೋಭ, ವಿವೇಕ, ದಯೆ, ದಾಕ್ಷಿಣ್ಯ ಮುಂತಾದ ಮನೋವೃತ್ತಿಗಳು ಗಡಿಯಾರದೊಳಗಿನ ಚಕ್ರಗಳಂತಿವೆ. ಅವುಗಳನ್ನೆಲ್ಲಾ ಉದ್ಯೋಗವೆಂಬ ಕಮಾನು ತಿರಿಗಿಸುತ್ತದೆ. ಈ ಕಮಾನಿಗೆ ಕಾಲಕಾಲಕ್ಕೆ ನಿಬಂಧನೆಯಾಗಿ ಗತಿಯನ್ನು ಕೊಟ್ಟರೆ ಈ ವೃತ್ತಿಗಳೆಂಬ ಚಕ್ರಗಳು ಯಥಾಕ್ರಮವಾಗಿ ನಡೆದು ಶರೀರವೆಂಬ ಗಡಿಯಾರವನ್ನು ನಡೆಸುತ್ತವೆ. ಸಾಧಾರಣ ಗಡಿಯಾರದಲ್ಲಿ ಯಾವದಾದರೂ ಒಂದು ಚಕ್ರ ಮುರಿದು ಹೋದರೆ ಅದನ್ನು ನೆಟ್ಟಗೆ ಮಾಡಿ ಆ ಸ್ಥಳದಲ್ಲಿ ತಿರಿಗಿ ಸೇರಿಸಬಹುದು. ಪರಂತು ಶರೀರವೆಂಬ ಗಡಿಯಾರದಲ್ಲಿ ಮುರಿದ ಚಕ್ರವನ್ನು ನೆಟ್ಟಗೆ ಮಾಡಿ ತಿರಿಗಿ ಯಥಾಸ್ಥಾನದಲ್ಲಿ ಸೇರಿಸುವ ಕೆಲಸದವನು ಇದುವರಿಗೂ ದೊರೆತಿಲ್ಲ. ಆದ್ದರಿಂದ ಶರೀರಸ್ಥಿತಿಯ ವಿಷಯದಲ್ಲಿ ಬಹಳ ಜಾಗರೂಕರಾಗಿ ಅದರಲ್ಲಿ ಎಲ್ಲಾ ವೃತ್ತಿಗಳೂ ಸರಿಯಾಗಿರುವಂತೆ ನಿಯಮದಿಂದಿರಬೇಕು.

ಯಾವಯಾವ ಕೆಲಸಗಳನ್ನು ಯಾವಯಾವ ಹೊತ್ತಿನಲ್ಲಿ ಮಾಡಬೇಕೆಂದು ನಿಬಂಧನೆಯನ್ನು ಇಟ್ಟು ಇರುತ್ತೀರೋ ಆಯಾಕಾಲಗಳಲ್ಲಿಯೆ ಆಯಾ ಕೆಲಸಗಳನ್ನು ಮಾಡುತ್ತಾ ಬರಬೇಕು. ಪ್ರತಿದಿನವೂ ಸ್ವಲ್ಪಮಾಡಿದಾಗ್ಯೂ ಬಹಳ ಕೆಲಸ ನಡೆಯುವದಲ್ಲದೆ ಅವಸರವಿಲ್ಲದೆ ನಿಧಾನವಾಗಿ ಮಾಡುವದರಿಂದ ಕೆಲಸವೂ ಚೆನ್ನಾಗಿ ಆಗುತ್ತೆ. ಸಾಧಾರಣವಾಗಿ ನಮ್ಮಲ್ಲಿ "ಈ ಕೆಲಸವನ್ನು ಆಮೇಲೆ ಮಾಡೋಣ." ಎಂದು ಹಿಂದಕ್ಕೆ ಹಾಕುತ್ತಾ ಹಾಕುತ್ತಾ ಕೊನೆಗೆ ಎಲ್ಲಾ ಕೆಲಸವೂ ಒಟ್ಟಿಗೆಸೇರಿ ಆ ಸಮಯದಲ್ಲಿ ಅದು ಬಹಳ ಅವಶ್ಯಕವಾದ ಕೆಲಸವಾದಾಗ್ಯೂ ಅದನ್ನು ಮಾಡುವದಕ್ಕೆ ಅವಕಾಶ ದೊರೆಯುವದಿಲ್ಲ, ಅಥವಾ ಅವಸರದಿಂದ ಮಾಡಿದಾಗ್ಯೂ ಚೆನ್ನಾಗಿ ಆಗುವದಿಲ್ಲ. ಮಾಡದಿದ್ದರೆ ನಿರ್ವಾಹವಿಲ್ಲದ ಪಕ್ಷದಲ್ಲಿ ಶರೀರವು ತಡೆಯಲಾರದಷ್ಟು ಹೆಚ್ಚು ಶ್ರಮವನ್ನಾದರೂ ಪಟ್ಟುಕೆಲಸವನ್ನು ಮಾಡಬೇಕಾಗುತ್ತೆ. ಇದರಿಂದ ಶರೀರಸ್ಥಿತಿಯು ಕೆಟ್ಟು ಅನೇಕ ಸಂಗತಿಗಳಲ್ಲಿ ದೊಡ್ಡ ಅನರ್ಥಗಳು ಉಂಟಾಗುತ್ತವೆ.

ನಾವು ನಮ್ಮ ಗುರುಗಳಲ್ಲಿ ಚನ್ನಾಗಿ ಭಕ್ತಿಯನ್ನಿಟ್ಟಿದ್ದರೆ ಅವರು ನಮ್ಮಮೇಲೆ ಪ್ರೇಮದಿಂದ ನಾವು ತಿಳಿಯಬೇಕಾದ ಮರ್ಮಗಳನ್ನು ತಿಳಿಸಿ ಕೊಡುತ್ತಾರೆ. ಅದ್ದರಿಂದ ಆ ವಿಷಯಗಳು ನಮಗೆ ಬೇಗ ತಿಳಿಯು ತ್ತವೆ. ನಾವು ಅವರಲ್ಲಿ ಉದ್ಧತರಾಗಿ ನಡೆದುಕೊಂಡರೆ ನಮಗೆ ಬೋಧಿ ಸುವ ಕೆಲಸವನ್ನು ಅವರು ಅಸಡ್ಡೆಯಿಂದ ಮಾಡುತ್ತಾರೆ. ನೀವು ವಿದ್ಯೆ ವನ್ನು ಕಲಿತು ಎಷ್ಟು ಬುದ್ಧಿವಂತರಾಗಿದ್ದಾಗ್ಯೂ ಗುರುಗಳಗಿಂತ ನಮಗೆ ಹೆಚ್ಚು ತಿಳಿದಿದೆಯೆಂದು ಎಣಿಸಬಾರದು. ಮತ್ತು ಇತರರಿಗೂ ಹೀಗೆ ತಿಳಿಯಗೊಡಬಾರದು. ಯಾವದಾದರೂ ಒಂದು ವಿಷಯವು ನಿಮಗೆ ಚನ್ನಾಗಿ ತಿಳಿದಿದ್ದು, ಇತರರಿಗಾಗಲಿ ನಿಮ್ಮ ಸಹಾಧ್ಯಾಯಿಗಳಿಗಾಗಲಿ ತಿಳಿ ಯದೆ ಯಿದ್ದಲ್ಲಿ ಬಹಿರಂಗವಾಗಿಯಾಗಲಿ ಅಂತರಂಗವಾಗಿಯಾಗಲಿ ಇದನ್ನು ಅನ್ಯರ ಸಂಗಡ ಹೇಳಿಕೊಂಡು ಅವರಿಗೆ ಅವಮಾನವನ್ನು ಮಾಡಬಾರದು. ಪ್ರಪಂಚದಲ್ಲಿ ಎಲ್ಲವನ್ನೂ ತಿಳಿದವರು ಯಾರೂಯಿಲ್ಲ. ಬೃಹಸ್ಪತಿಯಂಥಾ ವಿದ್ವಾಂಸರಿಗೂ ಕೂಡ ತಿಳಿಯದೇ ಇರುವ ವಿಷಯಗಳು ಅನೇಕವಾಗಿರು ತ್ತವೆ. ಯಾವದಾದರೂ ಒಂದು ವಿಷಯವು ಒಬ್ಬ ದನಾಕಾಯುವ ವನಿಗೆ ತಿಳಿದಿದ್ದ ಮಾತ್ರಕ್ಕೇ ಅವನು ವಿದ್ವಾಂಸನಿಗಿಂತ ಬುದ್ಧಿವಂತನೆಂದು ಸಿದ್ಧವಾಗುವದಿಲ್ಲ. ನಮ್ಮ ವಿದ್ಯೆಗಳ ದೆಸೆಯಿಂದ ನಾವು ಗರ್ವಿತರಾಗ ಬಾರದು. ಪ್ರಪಂಚದಲ್ಲಿ ಒಬ್ಬನಿಗಿಂತ ಇನೊಬ್ಬನು ದೊಡ್ಡವನು. ಹೀಗೆ ತಾರತಮ್ಯ ಭೇದವಿರುವದರಿಂದ ನಾನು ದೊಡ್ಡವನೆಂದು ಯಾರೂ ಅಭಿ ಮಾನವನ್ನು ಹಚ್ಚಿಕೊಳ್ಳಬಾರದು.

ಪ್ರಪಂಚದಲ್ಲಿ ಧನವನ್ನು ಸಾಧಾರಣವಾಗಿ ಸಂಪಾದನೆ ಮಾಡಬ ಹುದು. ಪರಂತು ಅದರ ವಿನಿಯೋಗವನ್ನು ಚನ್ನಾಗಿ ಮಾಡಿ ಕಾಪಾಡಿ ಕೊಳ್ಳುವದು ಶ್ರಮವಾಗುತ್ತೆ. ಸಂಪಾದಿಸಿದ ಹಣದ ವಿನಿಯೋಗವನ್ನು ಸರಿಯಾಗಿ ಮಾಡದಿದ್ದರೆ ಅದನ್ನು ಸಂಪಾದಿಸಿದವನಿಗೆ ಸುಖವಾಗುವದಂತು ಯಿಲ್ಲವೇಯಿಲ್ಲ. ಅದನ್ನು ದುರ್ವ್ಯಯ ಮಾಡಿದರೆ ಸಂಪಾದಿಸಿದವನ ಕಷ್ಟವೂ ವ್ಯರ್ಥವಾಗಿ ಅವನು ಲೋಕದಲ್ಲಿ ನಿಂದೆಗೂ ಒಳಗಾಗುತ್ತಾನೆ. ದ್ರವ್ಯಸಂಪಾದನೆಯೇ ಅವನ ಸಂಕಟಕ್ಕೆ ಕಾರಣವಾಗುತ್ತೆ. ಧನಕ್ಕೆ ಕಳ್ಳರು,

ಮೋಸಗಾರರು ಮುಂತಾದವರ ಭಯವಿರುತ್ತೆ. ಧನದಿಂದ ಮನುಷ್ಯನು ಉನ್ಮತ್ತನಾದರೆ ನಾನಾ ವಿಧವಾದ ಕೆಟ್ಟ ಕೆಲಸಗಳಲ್ಲಿ ಅದನ್ನು ವೆಚ್ಚ ಮಾಡಬೇಕೆಂಬ ಬುದ್ಧಿಯು ಅವನಿಗೆ ಉಂಟಾಗುತ್ತೆ. ಹಾಗೆ ವೆಚ್ಚ ಮಾಡುವದಕ್ಕೆ ಆರಂಭಮಾಡಿದರೆ ಅದು ಉಳಿಯುವದಿಲ್ಲ. ಧನವು ವಿಚಾರ ಹೀನನ ಕೈಲಿ ಸಿಕ್ಕದೆ ವಿಚಾರಪರನ ಕೈಲಿ ಸಿಕ್ಕಿದರೆ ಅವನು ಅದನ್ನು ಚನ್ನಾಗಿ ಕಾಪಾಡುತ್ತಾನೆ. ಒಳ್ಳೇಕೆಲಸದಲ್ಲಿ ವೆಚ್ಚ ಮಾಡುತ್ತಾನೆ. ಸತ್ಪಾತ್ರದಲ್ಲಿ ದಾನವನ್ನು ಮಾಡುತ್ತಾನೆ. ವ್ಯಾಪಾರ ಉದ್ಯೋಗ ಮುಂತಾದ್ದನ್ನು ಮಾಡಿ ಅಭಿವೃದ್ಧಿ ಪಡಿಸುತ್ತಾನೆ. ಕಳ್ಳರು ತೆಗದುಕೊಂಡು ಹೋಗದಂತೆ ಚನ್ನಾಗಿ ನೋಡಿಕೊಳ್ಳುತ್ತಾನೆ. ಮತ್ತು ಕೈಲಾದಷ್ಟು ಪರೋಪಕಾರವನ್ನು ಮಾಡಿ ಜಗತ್ತಿನಲ್ಲಿ ಕೀರ್ತಿಯನ್ನೂ ಈಶ್ವರನ ಕೃಪೆಯನ್ನೂ ಪಡೆದುಕೊಳ್ಳುತ್ತಾನೆ.

ಈ ಪ್ರಕಾರ ಪಾತ್ರಭೇದದಿಂದ ಧನಕ್ಕೆ ಭಿನ್ನವಾದ ಪರಿಣಾಮಗಳು ಉಂಟಾಗುವ ಹಾಗೆಯೇ ಪಾತ್ರಭೇದದಿಂದ ವಿದ್ಯಾಧನಕ್ಕೂ ಪರಿಣಾಮ ಭೇದಗಳುಂಟಾಗುತ್ತವೆ. ಕೆಟ್ಟವನಲ್ಲಿ ವಿದ್ಯೆಯಿದ್ದರೆ ಅದು ಅವನ ಪಾಲು ಮಾರಿಕೆ, ವ್ಯಸನ ಮುಂತಾದ್ದರಿಂದ ಅವನಲ್ಲಿ ನಿಲ್ಲುವದೇ ಪ್ರಯಾಸ. ಒಂದು ವೇಳೆ ನಿಂತರೆ ಅವನು ಆ ವಿದ್ಯೆಯನ್ನು ಮತ್ತೊಬ್ಬನಿಗೆ ಕೇಡುಂಟುಮಾಡುವದರಲ್ಲಿ ವಿನಿಯೋಗಿಸುತ್ತಾನೆ. ವಿದ್ಯೆ ಯೆಂಬುವದು ಒಂದು ವಿಧವಾದ ಶಕ್ತಿಯಾಗಿದೆ. ಮನುಷ್ಯನಲ್ಲಿ ವಿದ್ಯೆಯು ಎಷ್ಟುಮಟ್ಟಿಗೆ ಇದೆಯೋ ಅಷ್ಟು ಮಟ್ಟಿಗೆ ಅವನಲ್ಲಿ ಆ ವಿಧವಾದ ಶಕ್ತಿಯೂ ಇದೆಯೆಂದು ತಿಳಿಯಬೇಕು. ದುಷ್ಟರಲ್ಲಿರುವ ಶಕ್ತಿಯು ದೆಸೆಯಿಂದ ಮತ್ತೊಬ್ಬನಿಗೆ ತೊಂದರೆಯಾಗುವದಲ್ಲದೆ ಅದರಿಂದ ಅವರಿಗೂ ಅಹಿತವಾಗುತ್ತದೆ. ದುಷ್ಟರು ಮತ್ತೊಬ್ಬರಿಗೆ ತೊಂದರೆಯನ್ನು ಮಾಡುವಾಗ "ನಾವು ಅವರಿಗೆ ಕೇಡು ಮಾಡುತ್ತೇವೆ ಅದರಿಂದ ನಮಗೆ ಒಳ್ಳೇದಾಗುತ್ತೆ" ಎಂದು ತಿಳಿದುಕೊಂಡು ಯಿರುತ್ತಾರೆ; ಇದು ಭ್ರಾಂತಿಯೇಸರಿ. ಯಾತಕ್ಕೆಂದರೆ ಯಾವನು ಪ್ರಪಂಚದಲ್ಲಿ ಇನ್ನೊಬ್ಬನನ್ನು ಕೆಡಸಲಿಕ್ಕೆ ಯತ್ನ ಮಾಡುತ್ತಾನೋ ಅವನು ಅಭಿವೃದ್ಧಿಗೆ ಬರುವದಿಲ್ಲ; ಹಾಗೆ ಅಭಿವೃದ್ಧಿಗೆ ಬಂದದ್ದು ನಿಜವಾಗಿದ್ದರೆ ಎಲ್ಲರೂ ಇತರರನ್ನು ಕೆಡಿಸಿ ತಾವು ಬದುಕುವ ಕೆಲಸವನ್ನೇ ಮಾಡುತ್ತಿದ್ದರು. ತಮ್ಮ ಅಭಿವೃದ್ಧಿ

ಯನ್ನು ತಾವು ಮಾಡಿಕೊಳ್ಳಬೇಕೆಂಬ ಇಚ್ಛೆಯು ಎಲ್ಲರಿಗೂ ಯಿರುವದ್ದರಿಂದ ಎಲ್ಲರೂ ಈ ರೀತಿಯಲ್ಲಿ ಇತರರಿಗೆ ಕೇಡನ್ನು ಮಾಡಲು ಉದ್ಯೋಗಿಸಿ ಇದುವರಿಗೆ ಭೂಮಿಯಲ್ಲಿ ಮನುಷ್ಯರ ಹೆಸರೇ ಇಲ್ಲದಂತಾಗುತ್ತಿತ್ತು. ಆದ್ದರಿಂದ ನೀವು ವಿದ್ಯೆಯನ್ನು ಸಂಪಾದಿಸಲಿಕ್ಕೆ ಪ್ರಯತ್ನ ಮಾಡಿದರೆ ಅದರ ಜೊತೆಯಲ್ಲಿ ನಿಮ್ಮ ಸ್ವಭಾವವನ್ನೂ ಒಳ್ಳೇದನ್ನಾಗಿ ಮಾಡಿಕೊಳ್ಳುವದಕ್ಕೆ ಯತ್ನ ಮಾಡಬೇಕು. ನಿಮ್ಮ ಸಾಮರ್ಥ್ಯವೆಲ್ಲವನ್ನೂ ಇತರರಿಗೆ ಹಿತವನ್ನು ಮಾಡುವದರಲ್ಲಿ ವಿನಿಯೋಗಿಸಬೇಕು. ಮೂರ್ಖರಿಂದಲೂ, ದುಷ್ಟರಿಂದಲೂ, ಇತರರಿಗೆ ಒಳ್ಳೇದಾಗುವ ಆಶೆಯೇ ಇರುವದಿಲ್ಲ. ಸುಶಿಕ್ಷಿತರಾದ ಒಳ್ಳೆಯವರಿಂದ ಜನರು ತಮಗೆ ಅಲಭ್ಯವಾದದ್ದನ್ನೆಲ್ಲಾ ಸಂಪಾದಿಸಿಕೊಳ್ಳಬಹುದು. ಅಂಥಾ ಶಿಕ್ಷಿತ ಜನರು ಕೂಡಾ ದುರಾಚರಣೆಗೆ ಬಿದ್ದರೆ, ಜನರ ದುಃಖಕ್ಕೆ ಪಾರವುಂಟೇ? ಜ್ಞಾನವೆಂಬ ದ್ರವ್ಯವನ್ನು ನೀವು ಸಂಪಾದಿಸಿದ ಮಾತ್ರಕ್ಕೇ ಅದನ್ನು ಮನಸ್ಸಿಗೆ ಬಂದಂತೆ ವೆಚ್ಚ ಮಾಡಬಾರದು. ಈ ದ್ರವ್ಯವು ದೇವರ ಅನುಗ್ರಹದಿಂದ ನಿಮಗೆ ಪ್ರಾಪ್ತವಾಗಿರುವದ್ದರಿಂದ, ಆತನು ಮೆಚ್ಚುವಂತೆ ಅದನ್ನು ಉಪಯೋಗಿಸಬೇಕು. ಆದ್ದರಿಂದ ಈಗಿನಿಂದ ನೀವು ಈ ದ್ರವ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಿರಿ. ನಿಮ್ಮ ಶರೀರದಲ್ಲಿ ಕಾಮ, ಕ್ರೋಧ, ಲೋಭ ಮೊದಲಾದ ಕಳ್ಳರು ಇರುತ್ತಾರೆ. ಅವರು ನಿಮ್ಮನ್ನು ವಂಚಿಸಿ ಈ ಧನವನ್ನು ಕದ್ದು ತೆಗದುಕೊಂಡು ಹೋಗುವದಕ್ಕೆ ಯತ್ನ ಮಾಡುತ್ತಾರೆ. ಆದ್ದರಿಂದ ನೀವು ಬುದ್ಧಿಯೆಂಬ ಪೆಟ್ಟಿಗೆ ಬೊಕ್ಕಸದಲ್ಲಿ ಯಾವ ಉಪಹತಿಯೂ ಬಾರದಂತೆ ಭದ್ರವಾಗಿ ಇಟ್ಟಿರಬೇಕು. ಈ ಜ್ಞಾನ ಧನವನ್ನು ಗಂಟುಕಟ್ಟಿ ನಿಮ್ಮ ಹೊಟ್ಟೆಯಲ್ಲಿಯೇ ಇಟ್ಟುಕೊಂಡರೆ ಅದು ಅಭಿವೃದ್ಧಿಯಾಗುವದಿಲ್ಲ. ಬರುತ್ತಾ ಬರುತ್ತಾ ವೆಚ್ಚವಾಗಿ ಹೋಗುತ್ತೆ. ಆದ್ದರಿಂದ ನಂಬಿಕೆಯುಳ್ಳವನಲ್ಲಿ ಬಡ್ಡಿಗೆ ಹಾಕಬೇಕು.

ನಿಮ್ಮ ಗುರುವು ನಿಮಗೆ ಕೊಟ್ಟ ಜ್ಞಾನಧನವನ್ನು ಅವರು ನಿಮ್ಮಲ್ಲಿ ಬಡ್ಡಿಗೆ ಹಾಕಿದ್ದಾರೆಂದು ತಿಳಿಯಬೇಕು. ಈ ಧನದ ಬಡ್ಡಿಯು ನೀವು ಬೆಳಸಿದಷ್ಟೂ ಬೆಳದು ಅದರಿಂದ ಜನರಿಗೆ ಮಹತ್ತಾದ ಉಪಕಾರವೂ ನಿಮಗೆ

ಹಿತವೂ ಆಗುತ್ತದೆ. ನೀವು ಪ್ರತಿದಿವಸವೂ ಜ್ಞಾನವನ್ನು ಸಂಪಾದಿಸಿ ಅದನ್ನು ವೃದ್ಧಿ ಮಾಡುವದಕ್ಕೆ ಸಾಹಸ ಮಾಡಿರಿ. ನೀವು ಎಷ್ಟು ಸಂಪಾದಿಸಿರುತ್ತೀರೋ ಅಷ್ಟೇಹೊರತು ಅದಕ್ಕಿಂತ ಹೆಚ್ಚಾದ ಜ್ಞಾನವಿಲ್ಲವೆಂದು ನೀವು ತಿಳಿಯಬಾರದು. ಜ್ಞಾನವೆಂಬುವದು ಒಂದು ದೊಡ್ಡ ಸಮುದ್ರದಂತೆಯಿದೆ. ಇದರ ಪಾರವು ದೊಡ್ಡದೊಡ್ಡವರಿಗೂ ತಿಳಿದಿಲ್ಲ. ನಿಮ್ಮ ಪಾಡೇನು ?

ನೀವು ವಿದ್ಯಾಭ್ಯಾಸವನ್ನು ಮಾಡಿದನಂತರ ಇತರ ಕಾರ್ಯಗಳಲ್ಲಿ ಪ್ರವೇಶಿಸಿದಾಗ ದೊಡ್ಡದೊಡ್ಡ ಸಂಗತಿಗಳು ಸಂಭವಿಸ್ಯಾವು ? ಅಂಥಾಕಾಲದಲ್ಲಿ ಅಭ್ಯಾಸವನ್ನು ಅಲಕ್ಷ್ಯಮಾಡಿ, ಎಲ್ಲವನ್ನೂ ಮರತು ಬಿಡಬಾರದು. ಸ್ವಲ್ಪಶ್ರಮದಿಂದ ಸಂಪಾದಿಸಿದಂಥಾ ಯಾವದಾದರೂ ಒಂದು ಪದಾರ್ಥವನ್ನು ನೀವು ಎಷ್ಟೋ ಚನ್ನಾಗಿ ಕಾಪಾಡಿಕೊಳ್ಳುತ್ತೀರಿ. ಹೀಗಿದ್ದಮೇಲೆ ಬಹಳ ಶ್ರಮದಿಂದ ಸಂಪಾದಿಸಿದ ವಿದ್ಯೆಯನ್ನು ನೀವು ಕಳೆದು ಕೊಳ್ಳುವದು ದುಃಖ ಪಡುವ ಮತ್ತು ನಾಚಿಕೆಪಡುವ ಸಂಗತಿಯಲ್ಲವೆ ?

ನೀವು ಎಷ್ಟು ದೊಡ್ಡ ಪದವಿಯನ್ನು ಪಡೆದಾಗ್ಯೂ ನಿಮ್ಮ ಗುರು ಎಷ್ಟು ಸಣ್ಣಪದವಿಯಲ್ಲಿ ಇದ್ದಾಗ್ಯೂ ಅವರನ್ನು ನೀವು ಅನಾದರಣೆ ಮಾಡಬಾರದು. ಯಾತಕ್ಕೆಂದರೆ ನೀವು ಸಂಪಾದಿಸಿರುವ ಯೋಗ್ಯತೆಯೂ ಮತ್ತು ಯಶಸ್ಸೂ ನಿಮ್ಮ ಗುರುಗಳ ಅನುಗ್ರಹದಿಂದಲೇ ಬಂದದ್ದೆಂತ ತಿಳಿಯಬೇಕು. ನಿಮಗೆ ಉಪಕಾರವನ್ನು ಮಾಡಿದವರ ವಿಷಯದಲ್ಲಿ ಕೃತಘ್ನರಾಗಿರುವದು ಬಹಳ ನಾಚಿಕೆಯ ಮಾತು. ಪ್ರಪಂಚದಲ್ಲಿ ಪರೋಪಕಾರ ಮಾಡತಕ್ಕಂಥಾವರು ಬಹು ಜನರಿದ್ದಾರೆ. ಪರಂತು ಅದರಲ್ಲಿ ವಿದ್ಯೆಯನ್ನು ಹೇಳುವವನಿಗೆ ಯಾರೂ ಸರಿಯಿಲ್ಲ. ನೀವು ಅಜ್ಞಾನಿಗಳಾಗಿದ್ದರೆ ನಿಮ್ಮ ಮೇಲೆ ದೊಡ್ಡದೊಡ್ಡ ವಿಪತ್ತುಗಳು ಬಂದೊದಗುತ್ತಾಯಿದ್ದವು. ನೀವು ಗುರುಗಳ ಸಮೀಪದಲ್ಲಿ ವಿದ್ಯೆಯನ್ನು ಕಲಿತು ಜ್ಞಾನವನ್ನು ಸಂಪಾದಿಸಿಕೊಂಡದ್ದರಿಂದ ಅಂಥಾ ವಿಪತ್ತುಗಳು ಬಹಳವಾಗಿ ತಪ್ಪಿ ಹೋಗಿವೆ. ಇಂಥಾ ಅನರ್ಥಗಳ ದೆಸೆಯಿಂದ ನಿಮ್ಮನ್ನು ಸಂರಕ್ಷಿಸಿದವರು ದೊಡ್ಡವರಲ್ಲವೆ ?

ವಿದ್ಯಾಭ್ಯಾಸದ ವಿಷಯವನ್ನು ಹಿಂದೆ ಹೇಳುವಾಗ ಮರೆತಿದ್ದ ಒಂದು ಸಂಗತಿಯನ್ನು ಈಗ ಹೇಳುತ್ತೇನೆ. ನೀವು ಪ್ರತಿ ದಿವಸದಲ್ಲಿಯೂ ಮಾಡಿದ ಅಭ್ಯಾಸ, ಮತ್ತು ಮಾಡಿದ ಕೆಲಸ, ಇವುಗಳನ್ನು ನೆನಪಿನಿಂದ ಒಂದು ಬುಕ್ಕಿನಲ್ಲಿ ಬರೆದು ಇಡುತ್ತಾ ನಿಮಗೆ ಕೂಡಿದ ಹೊತ್ತಿನಲ್ಲಿ ಅದನ್ನು ತಿರಿಗಿ ನೋಡುತ್ತಾ ಬನ್ನಿ. ಇದರಿಂದ ಬರೆಯುವ ಅಭ್ಯಾಸವೂ ಆಗುವದಲ್ಲದೆ ಇನ್ನೂ ಎರಡು ದೊಡ್ಡ ಅನುಕೂಲಗಳು ಉಂಟಾಗುತ್ತವೆ. ನೀವು ಬರದು ಇಡುವ ವಿಷಯವು ಬಾಯಿಪಾಠ ಮಾಡಿದಂತೆಯೇ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತೆ. ಮತ್ತು ಆಯಾ ದಿವಸ ನಡೆದದ್ದನ್ನೆಲ್ಲಾ ಬರೆದು ಯಿಡುವದರಿಂದ ನೀವು ಯಾವ ಸಮಯದಲ್ಲಿ ಏನು ಮಾಡಿದಿರಿ? ಅದರ ಪರಿಣಾಮವೇನಾಯಿತು? ಎಂಬುವದು ನಮಗೆ ಚನ್ನಾಗಿ ಪದೇಪದೇ ನೆನಪಿಗೆ ಬರುತ್ತೆ. ಹೀಗಾಗುವದರಿಂದ ನೀವು ಒಳ್ಳೇ ಕೆಲಸ ಮಾಡಿದರೆ ಒಳ್ಳೇದಾಗುತ್ತೆ, ಕೆಟ್ಟಕೆಲಸ ಮಾಡಿದರೆ ಕೇಡಾಗುತ್ತೆಂಬುವದು ಇನ್ನ್ಯಾರ ಉಪದೇಶವೂ ಇಲ್ಲದೆ ನಿಮಗೇ ತಿಳಿಯುತ್ತೆ. ರಾತ್ರಿ ಹಗಲೂ ಶ್ರಮಪಟ್ಟು ವಿದ್ಯಾಭ್ಯಾಸ ಮಾಡುವದು, ಒಳ್ಳೇದು ಕೆಟ್ಟದ್ದು ಎಂಬುವ ವಿಚಾರವು ಮನಸ್ಸಿನಲ್ಲಿ ನೆಟ್ಟು, ಕೆಟ್ಟದ್ದನ್ನು ಬಿಟ್ಟು ಒಳ್ಳೇದಾರಿಯನ್ನು ಹಿಡಿದು ತನ್ನ ಹಿತವನ್ನು ಮಾಡಿಕೊಳ್ಳಬೇಕೆಂದಲ್ಲವೇ? ವಿದ್ಯೆಯನ್ನು ಕಲಿಯಬೇಕಾದರೆ ದೂರದರ್ಶಿಯಾದ ಬುದ್ಧಿವಂತನಲ್ಲಿ ಕಲಿಯಬೇಕು. ತಾನೇ ತಿಳಿಯದಿದ್ದವನು ಇತರರಿಗೆ ಏನು ಹೇಳ ಬಲ್ಲನು?

(೧) ನೀವು ಕಲಿಯಬೇಕಾದ ಭಾಷೆಯಲ್ಲಿ ತಪ್ಪುಗಳಿಲ್ಲದೆ ಬರೆಯುವದಕ್ಕೂ ಓದುವದಕ್ಕೂ, ಆ ಭಾಷೆಯ ವ್ಯಾಕರಣವನ್ನು ಕಲಿಯಬೇಕು. ವ್ಯಾಕರಣ ಹೊರತು ಭಾಷೆಯನ್ನು ಶುದ್ಧವಾಗಿ ಬರೆಯುವದೂ ಸ್ಪಷ್ಟವಾಗಿ ಓದುವದೂ ಆಗುವದಿಲ್ಲ.

(೨) ಲೋಕದಲ್ಲಿಯ ಹಿಂದಣಕಾಲದ ರೀತಿ, ಈಗಿನ ಕಾಲದರೀತಿ, ನೀತಿ, ಎಲ್ಲಾ ದೇಶಗಳ ಸ್ಥಿತಿ, ಇವುಗಳನ್ನೂ ಯಾವದೇಶದ ಜನರು ಯಾವಯಾವ ಕಾಲದಲ್ಲಿ ಹ್ಯಾಗಿದ್ದರು? ಯಾವಯಾವ ಕೆಲಸಗಳನ್ನು ಮಾಡಿ

ದರು? ಅದರಿಂದ ಫಲವೇನಾಯಿತು? ಎಂಬ ಸಂಗತಿಗಳನ್ನೂ ತಿಳಿಯಲಿಕ್ಕೆ ಇತಿಹಾಸಗಳನ್ನು ನೋಡಬೇಕು. ನೋಡದಿದ್ದರೆ, ಮನುಷ್ಯನಲ್ಲಿ ಜ್ಞಾನವೂ, ಸನ್ಮಾರ್ಗಪ್ರವೃತ್ತಿಯೂ, ಪಾಪಭೀತಿಯೂ ಹುಟ್ಟುವದಿಲ್ಲ.

(೩) ಪಾಪವನ್ನೂ, ಪುಣ್ಯವನ್ನೂ, ದೇವರನ್ನೂ, ಜಗತ್ತಿನ ಪರಿಣಾಮವನ್ನೂ ನಿಜವಾದ ಸುಖವನ್ನೂ ತಿಳಿಯಲಿಕ್ಕೆ ಧರ್ಮಶಾಸ್ತ್ರವನ್ನು ನೋಡಬೇಕು. ಇಲ್ಲದಿದ್ದರೆ ಸಾರಾಸಾರ ವಿಚಾರವೂ ವಿನಯವೂ ದಯೆಯೂ ದಾಕ್ಷಿಣ್ಯವೂ ದೈವಭಕ್ತಿಯೂ ಇವುಗಳಿಂದ ಉಂಟಾಗುವ ಅನಿರ್ವಚನೀಯವಾದ ಸುಖವೂ ಮನುಷ್ಯನಿಗೆ ದುರ್ಲಭವಾಗುತ್ತೆ.

(೪) ಅನಂತರ ಈಶ್ವರ ಸೃಷ್ಟಿಯಲ್ಲಿ ಸೂರ್ಯ, ನಕ್ಷತ್ರ, ಭೂಮಿ, ಇವುಗಳ ಸ್ಥಿತಿ ಎಂಥಾದ್ದು? ಎಲ್ಲಿ ಎಂಥಾ ಚಮತ್ಕಾರದ ಪದಾರ್ಥಗಳು ಸಿಕ್ಕುತ್ತವೆ? ಯಾವಯಾವ ಪದಾರ್ಥಗಳು ಯಾವಯಾವ ಕಾರಣದಿಂದ ಯಾವಯಾವ ರೀತಿಯಿಂದ ಹುಟ್ಟುತ್ತವೆ? ಯಾವಯಾವದೇಶ ಯಾವಯಾವಕಡೆ ಯಾವಯಾವ ಸ್ಥಿತಿಯಲ್ಲಿದೆ? ಎಲ್ಲಿಯ ಜನರ ಧರ್ಮ, ಕಾರ್‍ಯ, ವಿದ್ಯೆ, ಉನ್ನತಿ, ಇವು ಹ್ಯಾಗಿವೆ? ಇವೇಮೊದಲಾದ ಸಂಗತಿಗಳನ್ನು ತಿಳಿದು ಕೊಳ್ಳಲಿಕ್ಕೆ ಖಗೋಳವನ್ನೂ ಪದಾರ್ಥಜ್ಞಾನ ಭೂಗೋಳವನ್ನೂ ಕಲಿಯಬೇಕು. ಕಲಿಯದಿದ್ದರೆ ಕೂಪಕೂರ್ಮದಂತೆ ಮನೆಯಲ್ಲಿ ಕೂತಿರುವವರಿಗೆ ಈಶ್ವರ ಸೃಷ್ಟಿಯು ಎಷ್ಟು ದೊಡ್ಡದೆಂಬುವದೂ, ಅದು ಯಾವ ನಿಯಮಗಳಿಂದ ನಡೆಯುತ್ತದೆಂಬುವದೂ, ಅವನ ಮಹಿಮೆಯು ಎಷ್ಟು ದೊಡ್ಡದೆಂಬುವದೂ ತಿಳಿಯುವದಿಲ್ಲ.

(೫) ಯಾವಯಾವ ಕಾಲದಲ್ಲಿ ಹ್ಯಾಗೆ ನಡೆಯಬೇಕು? ಸ್ವಲ್ಪದಲ್ಲಿಯೇ ಮಿತವಾಗಿಯೂ ಸುಖವಾಗಿಯೂ ಇರುವದು ಹ್ಯಾಗೆ? ಎಂಬುವದನ್ನು ತಿಳಿಯುವದಕ್ಕೋಸ್ಕರ ಅರ್ಥ ಶಾಸ್ತ್ರವನ್ನೂ ನೀತಿಶಾಸ್ತ್ರವನ್ನೂ ಕಲಿಯಬೇಕು. ಇಲ್ಲದಿದ್ದರೆ ಮರ್ಯಾದೆಯಿಂದ ಸಂಸಾರ ಮಾಡುವದು ಕಷ್ಟವಾಗುತ್ತದೆ.

(೬) ತಮ್ಮ ಶರೀರದ ಮತ್ತು ತಮ್ಮ ಮಕ್ಕಳೇ ಮೊದಲಾದವರ ಶರೀರದ ಆರೋಗ್ಯ ಕೆಡದಂತೆ ಇಟ್ಟುಕೊಳ್ಳುವದಕ್ಕಾಗಿ ಸ್ವಲ್ಪ ವೈದ್ಯಶಾಸ್ತ್ರವನ್ನು ತಿಳಿದಿರಬೇಕು. ಹುಡುಗರನ್ನೂ ವ್ಯಾಧಿಗ್ರಸ್ತರನ್ನೂ ಪರಿಪಾಲನಮಾಡುವ ಕ್ರಮವನ್ನು ಕಲಿತಿರಬೇಕು. ಇಲ್ಲದಿದ್ದರೆ ಬಹಳ ಅಪಾಯಗಳು ಸಂಭವಿಸುತ್ತವೆ.

(೭) ನಮ್ಮ ಮನೆಯ ನೆರೆಹೊರೆಯಲ್ಲಿ ಸುಶೀಲರಾಗಿಯೂ ಬುದ್ಧಿಶಾಲಿಗಳಾಗಿಯೂ ಇರುವ ಹೆಂಗಸರಲ್ಲಿ ಅಡಿಗೆ ಮಾಡುವದನ್ನೂ ಅವಕಾಶವಿದ್ದ ಕಾಲದಲ್ಲಿ ಹೊಲಿಯುವದನ್ನೂ ಕಸೂತಿ ಹಾಕುವದನ್ನೂ ಹಾಡುವದನ್ನೂ ಹೇಳಿಸಿ ಕೊಳ್ಳಬೇಕು. ಇವು ಬಾರದೆಯಿದ್ದರೆ ಸಮಯದಲ್ಲಿ ಇತರರ ಕೈಕಾಲು ಕಟ್ಟಿಕೊಳ್ಳಬೇಕಾಗುತ್ತದೆ. ಇವು ನಮಗೆ ಬಾರದೆ ಇರುವದು ಬಹಳ ನಾಚಿಕೆಯ ಮಾತಲ್ಲವೆ ?

(೮) ಮನೆಯ ಆದಾಯವೆಷ್ಟು ವೆಚ್ಚವೆಷ್ಟು ಆಯಾಜಿನಸುಗಳಲ್ಲಿ ಎಷ್ಟಕ್ಕೆ ಯಾವಧಾರಣೆಪ್ರಕಾರ ಎಷ್ಟಾಗುತ್ತೆ ಎಂಬುವದನ್ನು ತಿಳಿಯಲಿಕ್ಕೆ ಗಣಿತಶಾಸ್ತ್ರವನ್ನು ಸ್ವಲ್ಪ ಕಲಿಯಬೇಕು. ಇಲ್ಲದಿದ್ದರೆ ಯಾವದಕ್ಕೆ ಎಷ್ಟುಬೆಲೆಯೋ ತಿಳಿಯುವದಿಲ್ಲ.

ಮುಖ್ಯವಾಗಿ ನಿಮಗೆ ಯಾವದೂ ಬರುವದಿಲ್ಲವೆನ್ನಿಸಬಾರದು. ಸ್ವಲ್ಪದರಲ್ಲಿ ಬಹಳ ತಿಳಿದುಕೊಳ್ಳುವ ಯತ್ನವನ್ನು ಮಾಡಿರಿ. ದೊಡ್ಡದೊಡ್ಡವರು ಆಚರಿಸುವ ರೀತಿಯನ್ನೂ ನಿಮ್ಮ ದೇಶಾಚಾರ ಕುಲಾಚಾರಗಳನ್ನೂ ಮತ್ತು ಇತರರ ಆಚಾರ ಯಾವಪ್ರಕಾರವಿದೆ ಎಂಬುವದನ್ನೂ ಚನ್ನಾಗಿ ತಿಳಿದುಕೊಳ್ಳಿರಿ. ಒಬ್ಬ ಸಣ್ಣ ಮನುಷ್ಯನಲ್ಲಿ ದೊಡ್ಡ ಗುಣವಿದ್ದರೆ ಸಣ್ಣವನಲ್ಲಿದೆ ಎಂದು ಅಸಡ್ಡೆ ಮಾಡದೆ ಅದನ್ನು ಗ್ರಹಿಸಬೇಕು. ಕಲಿಯಬೇಕೆಂಬ ಇಚ್ಛೆ ನಿಮಗಿದ್ದರೆ, ಜೇನು ಹುಳ ಇರುವೆ ಮುಂತಾದ ಸಣ್ಣ ಪ್ರಾಣಿಗಳಿಂದಲೂ ಸುಗುಣವನ್ನು ಕಲಿಯ ಬಹುದು.

೩ನೇ ಪರಿಚ್ಛೇದ.

ಮರ್ಯಾದೆ.

ಜನರು ಸಮುದ್ರವನ್ನು ಬಹಳ ಕೊಂಡಾಡುವದು ನಿಮಗೆಲ್ಲಾ ತಿಳಿದಿರಬಹುದು. ಯಾರಿಗಾದರೂ ಉತ್ತಮವಾದ ಉಪಮಾನವನ್ನು ಕೊಡಬೇಕಾದರೆ ಸಮುದ್ರದ ಉಪಮಾನವನ್ನು ಕೊಡುತ್ತಾರೆ. ಇದು ಯಾಕೆ? ಸಾಧಾರಣವಾಗಿ ನೋಡಿದರೆ ಸಮುದ್ರದಲ್ಲಿ ಅಂಥಾ ಗುಣಗಳು ಯಾವದೂ ಕಾಣಿಸುವದಿಲ್ಲ, ಸಮುದ್ರದ ಸ್ವರೂಪವು ಭಯಂಕರವಾಗಿದೆ, ಅದರ ಗರ್ಭದಲ್ಲಿ ಜನರಿಗೆ ಉಪದ್ರವಕರಗಳಾದ ಮೊಸಳೆಗಳೂ ದೊಡ್ಡದೊಡ್ಡ ಮೀನುಗಳೂ ಆಮೆಗಳೂ ನೀರುಹಾವುಗಳೂ ಮುಂತಾದ ಪ್ರಾಣಿಗಳಿವೆ. ಬಾಯಾರಿದವರು ಸಮುದ್ರದ ನೀರನ್ನು ಕುಡಿದರೆ ಅದರಿಂದ ತೃಪ್ತಿಯಾಗುತ್ತದೆಯೇ? ಸಮುದ್ರವು ಎಷ್ಟು ದೊಡ್ಡದಾದರೂ ಜನರ ಬಾಯಾರಿಕೆಯನ್ನು ನಿವಾರಣಮಾಡುವ ಸೀನೀರಿನ ಸಣ್ಣಹಳ್ಳಕ್ಕಿರುವಷ್ಟು ಮಹಿಮೆಯು ಅದರಲ್ಲಿ ಕಾಣಿಸುವದಿಲ್ಲ. ಹೀಗೆ ಯಿದ್ದಾಗ್ಯೂ ಸಮುದ್ರವು ದೊಡ್ಡದೆಂದು ಕೊಂಡಾಡುವ ಜನರಿಗೆ ಹುಚ್ಚು ಹಿಡಿದಿದೆಯೆಂದು ನೀವು ತಿಳಿಯಬಹುದು. ಅದು ಸರಿಯಲ್ಲ.

ಸಮುದ್ರದಲ್ಲಿ ಮನೋಹರವಾದ ಎರಡು ದೊಡ್ಡ ಗುಣಗಳಿವೆ. ಅವುಗಳಲ್ಲಿ ಒಂದು ಗಾಂಭೀರ್ಯ, ಇನ್ನೊಂದು ಮರ್ಯಾದಾಪಾಲನೆ. ಅದರಲ್ಲಿ ಆ ಎರಡು ಗುಣಗಳಿರುವದರಿಂದ ಜಗತ್ತಿನಲ್ಲಿ ಎಲ್ಲಕ್ಕಿಂತಲೂ, ದೊಡ್ಡದೆನಿಸಿಕೊಂಡು ಪ್ರಶಂಸೆಗೆ ಯೋಗ್ಯವಾಗಿದೆ. ಸಮುದ್ರದ ಗರ್ಭದಲ್ಲಿ ಏನಿದೆ, ಎಷ್ಟಿದೆ, ಅದು ಯಾವಕಡೆ ಇದೆ, ಎಂಬುವದನ್ನು ಹೇಳುವದಕ್ಕೆ ಯಾರಿಂದಲೂ ಆಗುವದಿಲ್ಲ, ಅದರ ಆಳವು ಬಹಳವಾಗಿದೆ. ಅದರ ಗರ್ಭದಲ್ಲಿ ಅಮೂಲ್ಯವಾದ ಮತ್ತು ಅಸಂಖ್ಯವಾದ ರತ್ನಗಳಿವೆ. ಹೀಗಿದ್ದಾಗ್ಯೂ ನನ್ನಲ್ಲಿ ಇಂಥಿಂಥಾ ವಸ್ತುಗಳಿವೆಯೆಂದು ಮನುಷ್ಯನಹಾಗೆ ಕೂಗಿ ಹೇಳಿ ತೋರಿಸಿಕೊಳ್ಳುವದಿಲ್ಲ. ಇದೊಂದು ಸಮುದ್ರದ ದೊಡ್ಡ ಗುಣವಾಗಿದೆ.

ಜಲಪ್ರಳಯವಾಗುವಂತೆ ಮಳೆಕರೆದಾಗ್ಯೂ ಸಮುದ್ರವು ಮೇರೆದಪ್ಪುವ ದಿಲ್ಲ. ಮತ್ತು ಹನ್ನೆರಡು ವರ್ಷ ಅನಾವೃಷ್ಟಿ ಬಂದಾಗ್ಯೂ ಅದರಲ್ಲಿರುವ ನೀರು ಕಡಿಮೆಯಾಗುವದಿಲ್ಲ. ಜನರ ಬಾಯಾರಿಕೆಯನ್ನು ನಿವಾರಣೆ ಮಾಡುವ ಸಣ್ಣಹಳ್ಳದ ಸ್ಥಿತಿ ಈಪ್ರಕಾರವಿರುವದಿಲ್ಲ. ಅದರ ಗರ್ಭದಲ್ಲಿ ಕಲ್ಲು ಮಣ್ಣು ಮುಂತಾದ್ದು ಎಷ್ಟಿದೆ ಎಂಬುವದು ಎಲ್ಲರಿಗೂ ತಿಳಿ ಯುತ್ತದೆ, ಸ್ವಲ್ಪ ಮಳೆಬರುತ್ತಲೇ ಮನಸ್ಸು ಬಂದಂತೆ ಉಬ್ಬಿ ಹೆಚ್ಚಾಗಿ ಗರ್ಜಿಸುತ್ತಾ ದಾರಿ ಸಿಕ್ಕಿದ ಕಡೆಗೆಲ್ಲಾ ಸೊಟ್ಟುಸೊಟ್ಟಾಗಿ ಬರಟುತನ ದಿಂದ ನುಗ್ಗಿ ತನ್ನ ಉದ್ಧತತನವನ್ನು ತೋರಿಸಿಕೊಳ್ಳುತ್ತೆ, ಆ ಕಾಲದಲ್ಲಿ ಅದಕ್ಕೆ ಯಾರ ಲಕ್ಷ್ಯವೂ ಇರುವದಿಲ್ಲ, ಎರಡು ದಿವಸ ಮಳೆ ಬಾರದೆ ಇದ್ದರೆ ಕೂಡಲೆ ಅದು ಹೇಳಲಿಕ್ಕಾಗದಷ್ಟು ಹೀನಸ್ಥಿತಿಗೆ ಬಂದು ಕ್ಷೀಣಿಸಿ ಬತ್ತಿಹೋಗುತ್ತೆ. ಇದನ್ನು ಆಲೋಚಿಸಿದರೆ ಪ್ರಶಂಸೆಮಾಡುವದಕ್ಕೆ ಯೋಗ್ಯವಾದ ಗುಣಗಳು ಸಮುದ್ರದಲ್ಲಿವೆಯೋ ಹಳ್ಳದಲ್ಲಿವೆಯೋ ಹೇಳಿರಿ.

ಮೇಲೆ ಹೇಳಿದ ದೃಷ್ಟಾಂತಗಳ ಅಭಿಪ್ರಾಯವೇನೆಂಬುವದು ನಿಮಗೆ ತಿಳಿದಿರ ಬಹುದು. ಮನುಷ್ಯನಲ್ಲಿ ಸಾವಿರಾರು ಗುಣಗಳಿದ್ದಾಗ್ಯೂ ಅವನಲ್ಲಿ ಗಾಂಭೀರ್ಯವೂ ಮರ್ಯಾದೆಯೂ ಇಲ್ಲದಿದ್ದರೆ ಅವನಿಗೆ ಎಲ್ಲಿಯೂ ಪುರ ಸ್ಕಾರವಾಗುವದಿಲ್ಲ. ಇಂಥವನಲ್ಲಿರುವ ಇತರ ಸುಗುಣಗಳು ಕೂಡಾ ಅವ ನಿಗೆ ಭೂಷಣಗಳಾಗಿರದೆ ನಿಂದಾಸ್ಪದಗಳಾಗುತ್ತವೆ. ಲೋಕದಲ್ಲಿ ಹುಟ್ಟಿದ ಮನುಷ್ಯನು ನಾಲ್ವರಲ್ಲಿ ಪ್ರತಿಷ್ಠೆಯನ್ನು ಪಡೆಯದಿದ್ದರೆ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಎತ್ತಿ ಏನು ಮಾಡಿದಹಾಗಾಯಿತು ? ಈಶ್ವರನು ಎಲ್ಲಾ ಪ್ರಾಣಿಗಳಿಗಿಂತಲೂ ಮನುಷ್ಯರಿಗೆ ಶ್ರೇಷ್ಠತ್ವವನ್ನು ಕೊಟ್ಟಿರುವದು ನೀಚತ್ವವನ್ನು ಪಡೆದು ಕೊಳ್ಳುವದಕ್ಕೋಸ್ಕರವಲ್ಲ. ಒಬ್ಬ ಯಜಮಾ ನನ ಹತ್ತರ ಸೇವಕನು ಚನ್ನಾಗಿ ಕೆಲಸವನ್ನು ಮಾಡಿದರೆ ಆ ಯಜ ಮಾನನು ತಿರಿಗಿ ಅವನ ಅಧಿಕಾರವನ್ನು ಹೆಚ್ಚಿಸುತ್ತಾನೆ. ಹೀಗೆ ಹೆಚ್ಚಿ ಸುವದು ಮೊದಲು ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ನೀಚವಾದ ಮತ್ತು ಕೆಟ್ಟದಾದ ಕೆಲಸವನ್ನು ಮಾಡಲಿ ಎಂದಲ್ಲ ; ಮೊದಲಿಗಿಂತಲೂ

ದೊಡ್ಡದಾದ ಒಳ್ಳೇಕೆಲಸವನ್ನು ಮಾಡಿ ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲಿ ಯೆಂಬುವದೇ ಅವನ ಆಶಯವು. ಆದ್ದರಿಂದ ಪ್ರತಿಮನುಷ್ಯನೂ ತನ್ನ ಸ್ಥಿತಿಗೆ ತಕ್ಕ ಅಥವಾ ಅದಕ್ಕೆ ಮೀರಿದ ಒಳ್ಳೇತನವನ್ನು ಸಂಪಾದಿಸಿಕೊಂಡು ತನ್ನ ಯೋಗ್ಯತೆಯನ್ನು ಹೆಚ್ಚಿಸಿ ಕೊಳ್ಳುವದರಲ್ಲಿ ಆಸಕ್ತನಾಗಿರಬೇಕೆಂಬುವದು ದೈವನಿಬಂಧನೆಯೆಂದು ಸಿದ್ಧವಾಯಿತು. ಆದಕಾರಣ ಈ ನಿಂಬಂಧನೆಗೆ ಅನುಸಾರವಾಗಿ ನಡೆದವನಿಗೆ ಶ್ರೇಯಸ್ಸುಂಟಾಗುತ್ತದೆ, ಇದಕ್ಕೆ ವಿರೋಧವಾಗಿ ನಡೆಯುವವರಿಂದ ಈಶ್ವರಾಜ್ಞೆಯನ್ನು ಉಲ್ಲಂಘಿಸಿದಂತೆ ಆಗಿ ಸಂಸಾರದಲ್ಲಿ ಪಾಪದ ಫಲರೂಪವಾದ ನಾನಾವಿಧವಾದ ಸಂಕಟಗಳು ಪ್ರಾಪ್ತವಾಗುತ್ತವೆ.

ಈ ನಿಬಂಧನೆಯನ್ನು ಅನುಸರಿಸಿ ನಡೆಯುವದಕ್ಕೋಸ್ಕರ ಮನುಷ್ಯನು ತನ್ನ ಮರ್ಯಾದೆಯನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಪ್ರಪಂಚದಲ್ಲಿ ವಿದ್ಯೆಯನ್ನೂ ಧನವನ್ನೂ ಮಾನವನ್ನೂ ಸಂಪಾದಿಸಬಹುದು. ಆದರೆ ಮರ್ಯಾದೆಯನ್ನು ಕಾಪಾಡಿಕೊಳ್ಳದಿದ್ದರೆ ಅವುಗಳು ನಿಲ್ಲುವದಿಲ್ಲ. ಮಾನವೆಂಬ ಎತ್ತರವಾದ ಶಿಖರಕ್ಕೆ ಜನರು ಹತ್ತುತ್ತಾರೆ. ಪರಂತು ಅವರು ಘನತೆಯುಳ್ಳವರಾಗಿಯೂ ಮರ್ಯಾದೆಯನ್ನು ಕಾಪಾಡಿಕೊಳ್ಳುವವರಾಗಿಯೂ ಗಂಭೀರರಾಗಿಯೂ, ಇಲ್ಲದಿದ್ದರೆ ಆ ಶಿಖರದಲ್ಲಿ ನಿಲ್ಲುವದಕ್ಕಾಗುವದಿಲ್ಲ. ಅಲ್ಲಿ ನಿಲ್ಲದವರು ದುರ್ವ್ಯಸನವೆಂಬ ಗಾಳಿಯ ವೇಗದಿಂದ ತಳ್ಳಲ್ಪಟ್ಟವರಾಗಿ, ದುರವಸ್ಥೆಯೆಂಬ ಅಗಾಧವಾದ ಸಮುದ್ರದಲ್ಲಿ ಬಿದ್ದು ಕೊನೆಗೆ ಅನಾಮಧೇಯರಾಗುವರು. ಮನುಷ್ಯನು ತನ್ನ ಸ್ಥಿತಿಯನ್ನು ಅಭಿವೃದ್ಧಿ ಪಡಿಸಿಕೊಂಡು ಉತ್ತಮನಾಗುವದೂ, ಮತ್ತು ನೀಚನಿಗಿಂತಲೂ ನಿಕೃಷ್ಟನಾಗುವದೂ, ಈ ಎರಡೂ ಅವನವನ ಕೃತ್ಯದಿಂದಲೇ. ಪ್ರಪಂಚದಲ್ಲಿ ಮನುಷ್ಯರಿಗೆ ಪ್ರತಿಷ್ಠೆಯನ್ನು ಸಂಪಾದಿಸಬೇಕೆಂಬ ಆಸೆ ಮನಸ್ಸಿನಲ್ಲಿ ಹುಟ್ಟಿದ ಮಾತ್ರಕ್ಕೇ ಅದು ಬರುವದಿಲ್ಲ. ಅದಕ್ಕಾಗಿ ಸದಾಚಾರ ಪರರಾಗಿ ಗಂಭೀರರಾಗಿ ಮರ್ಯಾದೆಯನ್ನು ಅತಿಕ್ರಮಿಸದವರಾಗಿ ನಡೆದು, ಪ್ರತಿಷ್ಠೆಯನ್ನು ಸಂಪಾದಿಸಬೇಕು. ಈ ಪ್ರಕಾರ ನಡೆಯುವದರಲ್ಲಿ ನಿಶ್ಚಯವೂ ಶಕ್ತಿಯೂ ನಿಮ್ಮಲ್ಲಿದ್ದರೆ ನೀವು

ದೊಡ್ಡವರಾಗುವ ಆಶೆಯನ್ನು ಇಡತಕ್ಕದ್ದು. ಇಲ್ಲದಿದ್ದರೆ "ನವಿಲು ಕುಣಿಯುತ್ತದೆಂದು ಕಾಗೆ ಕುಣಿಯುವದಕ್ಕೆ ಆರಂಭಿಸಿತು" ಎಂಬ ಗಾದೆಗೆ ಸರಿಯಾಗಿ ಕಾಗೆಯ ಸ್ಥಿತಿಗಿಂತಲೂ ನಿಮ್ಮ ಸ್ಥಿತಿ ನಿಕೃಷ್ಟವಾಗುವದು.

ಮನುಷ್ಯನು ಒಂದುವೇಳೆ ಉನ್ನತಸ್ಥಿತಿಗೆ ಬಾರದೆ ಇದ್ದರೂ ಚಿಂತೆಯಿಲ್ಲ, ತಾನಿರುವ ಸ್ಥಿತಿಯಲ್ಲಾದರೂ ಮಾನದಿಂದಿರಬೇಕು. ಮರ್ಯಾದಾ ಪಾಲನೆಯಿಲ್ಲದೆ ಮಾನ ಬರುವದಿಲ್ಲ. ಮನುಷ್ಯನು ಎನಿಸಿಕೊಳ್ಳಬೇಕಾದರೆ ಮಾನ ಮರ್ಯಾದೆಗಳು ಅವಶ್ಯಕವಾಗಿ ಇರಬೇಕು. ಪ್ರಪಂಚದಲ್ಲಿ ದೇಹವಿರುವ ಪರ್ಯಂತ ಸುಖವಾಗಿರುವದಕ್ಕೆ ಉಪಾಯವು ಯಾವದೆಂಬುದನ್ನು ವಿಚಾರಿಸೋಣ.

ಸಂಸಾರದಲ್ಲಿ ಯಾವಕಡೆಗೆ ಹೋದಾಗ್ಯೂ ಯಾವಸ್ಥಿತಿಯಲ್ಲಿ ಇದ್ದಾಗ್ಯೂ ಮನುಷ್ಯನಿಗೆ ಹೆಜ್ಜೆಹೆಜ್ಜೆಗೂ ದುಃಖಗಳು ಸಂಘಟಿಸುತ್ತಲೇ ಇರುತ್ತವೆ. ಆದ್ದರಿಂದ ಎಲ್ಲಿ ಸ್ವಲ್ಪ ಸುಖವಾಗುವ ಸಂದರ್ಭವು ಕಾಣುತ್ತದೋ ಅತ್ತಕಡೆಗೆ ಹೋಗುವದಕ್ಕೆ ಜನರು ಹಿಂದೆ ಮುಂದೆ ನೋಡದೆ ತ್ವರೆಪಡುತ್ತಾರೆ. ಮನುಷ್ಯರಿಗೆ ದುಃಖವನ್ನು ಕಳೆದುಕೊಂಡು ಸುಖಪಡಬೇಕೆಂಬ ಅಪೇಕ್ಷೆಯಿರುವದು ಸ್ವಾಭಾವಿಕವಾಗಿದೆ. ದುಃಖವನ್ನು ಕಡಿಮೆ ಮಾಡುವದಾಗಿಯೂ ಮತ್ತು ಸಂತೋಷವನ್ನು ಉಂಟುಮಾಡುವದಾಗಿಯೂ ಕಾಣಬರುವ ಕೆಲಸವನ್ನು ಮಾಡುವದಕ್ಕೆ ಮನಸ್ಸು ಯಾವಾಗಲೂ ಸಿದ್ಧವಾಗಿರುತ್ತೆಂಬುವದು ನಮ್ಮ ಎಲ್ಲಾ ಕೆಲಸಗಳಲ್ಲಿಯೂ ದೃಷ್ಟಾಂತಕ್ಕೆ ಬರುತ್ತದೆ. ಮನುಷ್ಯರು ಸರ್ವಕಾಲದಲ್ಲಿಯೂ ಸುಖಿಗಳಾಗುವ ಉಪಾಯಗಳನ್ನು ಹುಡುಕುವದರಲ್ಲಿ ತತ್ಪರರಾಗಿರುತ್ತಾರೆ. ಇದು ಯುಕ್ತವೇಸರಿ. ಪರಂತು ಈ ಕೆಲಸವನ್ನು ಮಾಡಿದರೆ ಮುಂದೆ ಫಲವೇನಾಗುವದೆಂಬ ಆಲೋಚನೆ ಯಿಲ್ಲದೆ ಮನಸ್ಸಿಗೆ ತೋರಿದ ಕೆಲಸವನ್ನೆಲ್ಲಾ ಮಾಡುವದು ಮಾತ್ರ ದೋಷವೆಂದೆಣಿಸಬೇಕು.

ಆಲೋಚನೆ ಯಿಲ್ಲದೆ ಕೆಲಸವನ್ನು ಮಾಡಲಾರಂಭಿಸಿದರೆ ಪ್ರಯತ್ನವೆಲ್ಲಾ ನಿಷ್ಫಲವಾಗುವದಲ್ಲದೆ ಒಂದೊಂದುಸಾರಿ ಆ ಕೆಲಸದಿಂದ ಉಂಟಾಗುವ

ದುಃಖವನ್ನು ದೇಹವಿರುವ ಪರ್ಯಂತ ಅನುಭವಿಸಬೇಕಾಗುತ್ತೆ. ಜಗತ್ತಿನಲ್ಲಿ ದುರ್ಮಾರ್ಗವು ನೋಡುವದಕ್ಕೆ ಸುಂದರವಾಗಿ ಕಾಣುತ್ತೆ. ಆದರೆ, ಅದರಲ್ಲಿ ಕಾಲಿಟ್ಟಕೂಡಲೆ ಹಿಂತೆಗೆಯುವದಕ್ಕೆ ಸ್ವಾಧೀನವಿಲ್ಲದೆ ಮುಂದೆ ಹೆಜ್ಜೆ ಹೆಜ್ಜೆಗೂ ದುಃಖಗಳು ಬಂದೊದಗುತ್ತವೆ. ವಿಚಾರವಿಲ್ಲದವನು ಕೆಲಸಕ್ಕೆ ಆರಂಭಿಸುವಾಗ ಅದರಿಂದ ಸುಖವಾಗುವದೆಂತಲೇ ತಿಳಿದು ಆರಂಭಿಸುತ್ತಾನೆ. ಆ ಕೆಲಸವು ಪರಿಣಾಮದಲ್ಲಿ ದುಃಖದ ಭಂಡಾರವಾಗುವದು. ಆದ್ದರಿಂದ ಮೇಲೆಮೇಲೆ ನೋಡಿ ಇದು ಸುಖದ ದಾರಿಯೆಂದು ನಿಶ್ಚಯವಾಗಿ ಎಣಿಸಬಾರದು. ಎಳೇ ಹುಲ್ಲಿನಿಂದ ಮುಚ್ಚಲ್ಪಟ್ಟ ಮನೋಹರವಾಗಿ ಕಾಣುವ ಭೂಮಿಯ ಮೇಲೆ ಕೂತುಕೊಳ್ಳುವದಕ್ಕೆ ಹೋದಾಗ ಕೆಲವು ವೇಳೆಯಲ್ಲಿ ಮುಳ್ಳು, ಹಾವು, ಚೇಳುಗಳಿಂದ ತುಂಬಿರುವ ದೊಡ್ಡ ಗುಂಡಿಯಲ್ಲಿ ಬೀಳಬೇಕಾಗುತ್ತದೆ. ಪ್ರಪಂಚದಲ್ಲಿ ನೋಡುವದಕ್ಕೆ ಮೇಲೆಮೇಲೆ ಬಹಳ ಚನ್ನಾಗಿ ಕಾಣುವಂಥಾದ್ದು; ಅನುಭವದಲ್ಲಿ ಕೇವಲ ದುಃಖಕರವಾಗುವದು. ಮತ್ತು ನೋಡುವದರಲ್ಲಿ ಕೆಟ್ಟದ್ದಾಗಿಯೂ ಪರಿಣಾಮದಲ್ಲಿ ಹಿತಕಾರಿಯಾಗಿಯೂ ಇರುವ ಸಂಗತಿಗಳು ಅನೇಕವಾಗಿವೆ.

ಧರ್ಮವೂ ನೀತಿಯೂ ಸುಖಕ್ಕೆ ವಿಘ್ನಕಾರಿಗಳೆಂದು ಕೆಲವರು ಮನಸ್ಸಿನಲ್ಲಿ ತಿಳಿದುಕೊಂಡಿರುವಕಾರಣ ಧರ್ಮಶಾಸ್ತ್ರ, ನೀತಿಶಾಸ್ತ್ರ ಪ್ರಕಾರ ನಡೆಯುವದಿಲ್ಲ. ಇದಲ್ಲದೆ ನೀತಿಶಾಸ್ತ್ರ ಧರ್ಮಶಾಸ್ತ್ರಗಳನ್ನು ಅನುಸರಿಸಿ ನಡೆಯುವವರು, ತಾವೂ ಸುಖಿಗಳಾಗುವದಿಲ್ಲ ಇತರರನ್ನೂ ಸುಖಿಗಳಾಗಗೊಡಿಸುವದಿಲ್ಲ, ಪ್ರತಿಯೊಂದು ವಿಷಯದಲ್ಲಿಯೂ ನಮ್ಮ ಕೆಲಸಕ್ಕೆ ಅಡ್ಡವಾಗಿ ನಿಲ್ಲುತ್ತಾರೆಂದು ತಿಳಿದುಕೊಳ್ಳುತ್ತಾರೆ. ಚನ್ನಾಗಿ ಆಲೋಚಿಸಿದರೆ ಹಾಗೆ ಎಣಿಸುವದು ಸರಿಯಲ್ಲವೆಂಬುವದು ಗೊತ್ತಾಗುತ್ತೆ. ನೀತಿಶಾಸ್ತ್ರ ಧರ್ಮಶಾಸ್ತ್ರಗಳನ್ನು ಅನುಸರಿಸುವ ಜನರು ಸಂಸಾರದ ಸುಖವನ್ನು ತಕ್ಕ ಮಟ್ಟಿನಲ್ಲಿ ಇಡಬೇಕೆಂಬದಾಗಿ ಯತ್ನ ಮಾಡುತ್ತಾರೆ. ಯಾವ ವಿಷಯವೇ ಆಗಲಿ ಅದರ ಮಟ್ಟನ್ನು ಮೀರದೆಯಿದ್ದರೆ ಸುಖಪ್ರದವಾಗುತ್ತದೆ; ಮಟ್ಟುಮೀರಿದ ಕೂಡಲೇ ಪರಿಹರಿಸುವದಕ್ಕೆ ಅಸಾಧ್ಯವಾದ ದುಃಖವನ್ನುಂಟು ಮಾಡುತ್ತದೆ. ಯಾರು ನೀತಿಶಾಸ್ತ್ರಾನುಸಾರವಾಗಿ ಎಲ್ಲಾ

ಲ್ಲ

ವಿಷಯದಲ್ಲಿಯೂ ಮಿತಾಚರಣೆಯಲ್ಲಿ ಇರುತ್ತಾರೋ ಅವರೇ ಆನೀತಿಯ
ಮರ್ಮವನ್ನು ಬಲ್ಲವರು. ಇತರರಿಗೆ ಅದು ತಿಳಿಯುವದಿಲ್ಲ. ಮಿತಾಚರಣೆ
ಯಿದ್ದರೆ ಭೂಮಿಯಲ್ಲಿ ಸುಖಕ್ಕೆ ಸಾಧನವಾದ ವಿಷಯಗಳೆಲ್ಲಾ ಸಾದವು
ಳ್ಳವುಗಳಾಗುತ್ತವೆ ; ಮತ್ತು ಇದರಿಂದ ಮನುಷ್ಯನ ಉಪಭೋಗಶಕ್ತಿಯು
ಹೆಚ್ಚಿ ಸುಖಪಡಲಿಕ್ಕೆ ಅನುಕೂಲವಾಗುತ್ತೆ. ಆದ್ದರಿಂದ ಅಮಿತಾಚರ
ಣಕ್ಕೂ ಯಥೇಚ್ಛ ವ್ಯವಹಾರಕ್ಕೂ ಪ್ರತಿಬಂಧಕಗಳಾದ ಶಾಸ್ತ್ರಗಳನ್ನು
ಸುಖಕ್ಕೆ ವಿಘ್ನಕಾರಿಗಳೆಂದು ಹೇಳಕೂಡದು. ಶಾಸ್ತ್ರಾನುಸಾರವಾಗಿ
ನಡೆಯುವವರಿಗೆ ಸುಖದ ಸಾಧನಗಳು ಸ್ವಲ್ಪವಿದ್ದಾಗ್ಯೂ ಅವರು ಸುಖದ
ಸಂಪೂರ್ಣಫಲವನ್ನು ಅನುಭವಿಸಲಿಕ್ಕೆ ಶಕ್ತರಾಗಿರುತ್ತಾರೆ. ಮಿತಾಚರಣವು
ಸುಖಕ್ಕೆ ವಿಘ್ನವೆಂತಲೂ ಮಿತಿಮೀರಿ ಮನಸ್ಸಿಗೆ ಬಂದಂತೆ ಸುಖಾನುಭವ
ಮಾಡುವದೇ ಜನ್ಮದ ಉದ್ದೇಶವೆಂತಲೂ ಯಾರು ತಿಳಿಯುತ್ತಾರೋ
ಅಂಥಾ ಸ್ವಭಾವವುಳ್ಳ ಜನರ ಸ್ವೇಚ್ಛಾಚರಣೆಯನ್ನು ಮಾತ್ರ ಶಾಸ್ತ್ರಗಳು
ನಿಷೇಧ ಮಾಡುತ್ತವೆ.

ಸಂಸಾರದಲ್ಲಿ ಸುಖವು ಕ್ಷಣಭಂಗುರವಾಗಿಯೂ ದುಃಖವು ಪದೇಪದೇ
ಬರುವದಾಗಿಯೂ ಇರುತ್ತವೆ. ಮಿತಾಚರಣೆಯೂ, ಆತ್ಮ ಸಂಯಮ
ನವೂ (ಅಂದರೆ ಮನಸನ್ನು ನಿಗ್ರಹಿಸುವದು) ಜಾಗರೂಕತೆಯೂ ಇದ್ದ
ಪಕ್ಷದಲ್ಲಿ ಮನುಷ್ಯನ ಆಯುಸ್ಸು ಅತಿಶಯವಾದ ಸುಖದ ಭಂಡಾರವಾಗು
ತ್ತದೆ. ಆದ್ದರಿಂದ ಸಂಸಾರ ಕೃತ್ಯದಲ್ಲಿ ಹೊಸದಾಗಿ ಪ್ರವೇಶಮಾಡಿ ಅದರಲ್ಲಿ
ಒಳ್ಳೇದು ಕೆಟ್ಟದೆಂಬುವದರ ತಿಳುವಳಿಕೆ ಯಿಲ್ಲದವರಿಗೆ ಮೇಲೆ ಹೇಳಿದ
ಮಿತಾಚರಣೆ ಮೊದಲಾದ ಗುಣಗಳು ಅವಶ್ಯಕವಾಗಿರಬೇಕು. ಹೀಗಿ
ದ್ದಾಗ್ಯೂ ಸಂಸಾರದಲ್ಲಿ ಹೊಸದಾಗಿ ಪ್ರವೃತ್ತರಾಗುವವರು ಈ ಗುಣಗಳನ್ನು
ವಿಶೇಷವಾಗಿ ಲಕ್ಷ್ಯಕ್ಕೆ ತರುವದಿಲ್ಲ, ಇದನ್ನು ನೋಡಿದರೆ ಬಹಳ ವ್ಯಸನ
ವಾಗುತ್ತೆ. ಸಂಸಾರವೆಂಬ ಪೇಟೆಯಲ್ಲಿ ಹೊಸದಾಗಿ ತಿರುಗುವದಕ್ಕೆ ಹೊರಟ
ಯೌವನಸ್ಥರ ಕಣ್ಣುಗಳಿಗೆ ನೋಡಿದ್ದೆಲ್ಲಾ ಮನೋಹರವಾಗಿ ಕಾಣುತ್ತೆ.
ಕೇವಲ ಕೆಟ್ಟವಿಷಯಗಳು ಸಹ ಅವರ ಭ್ರಾಂತ ದೃಷ್ಟಿಗೆ ಉತ್ತಮ
ಗಳಾಗಿ ಕಾಣುತ್ತವೆ. ಸುಖಾಶೆಯು ಅವರನ್ನು ಮೋಹಪಡಿಸಿ ಕುರುಡ

ರನ್ನಾಗಿ ಮಾಡುತ್ತದೆ. ಭೋಗ ವಾಸನೆಯು ಅವರಿಗೆ ಹೆಚ್ಚಾಗಿರುವದ್ದರಿಂದ ಅವರ ಮನಸ್ಸು ಯಾವಾಗಲೂ, ತವಕದಿಂದಲೂ, ಉತ್ಕಂಠತೆಯಿಂದಲೂ ಕೂಡಿರುತ್ತೆ.

ಯೌವನ ಮದದಿಂದ ಕುರುಡರಾಗಿ ಇರುವವರಿಗೆ ಹಿಂದೆ ಮುಂದೆ ಯಾವದೂ ಕಾಣುವದಿಲ್ಲ. ಅವರಿಗೆ ಹಗಲು ಹೊತ್ತು ಕಣ್ಣು ಚನ್ನಾಗಿ ಕಾಣಿಸುತ್ತಾಯಿದ್ದಾಗ್ಯೂ ಮೋಹವೆಂಬ ಹಾಳುಭಾವಿಯಲ್ಲಿ ಹಾರಿಬೀಳುತ್ತಾರೆ. ಈ ಭಯಂಕರವಾದ ಯೌವನ ಮದದಿಂದ ಅವರ ಬುದ್ಧಿಯು ಕೇವಲ ಅವಿಚಾರಿಯಾಗಿಯೂ ಉದ್ಧತವಾಗಿಯೂ ಇರುವದ್ದರಿಂದ ಅವರಿಗೆ ಯಾತರ ಭಯವೂ ತೋರುವದಿಲ್ಲ. ಜನರ ಯೋಗ್ಯತೆಯನ್ನು ಹಿಂದೆ ಮುಂದೆ ಆಲೋಚಿಸದೆ ಎಂಥಾವರಲ್ಲಾದರೂ ನಂಬಿಕೆಯನ್ನಿಡುತ್ತಾರೆ. ನಿಜವಾದ ಯೋಗ್ಯತೆಯನ್ನು ತಿಳಿದು ಯಾವ ಕೆಲಸವನ್ನಾದರೂ ಮಾಡುವ ತಾಳ್ಮೆ ಅವರಿಗಿಲ್ಲ. ಅವರಲ್ಲಿ ದೂರದೃಷ್ಟಿ ಇಲ್ಲದ್ದರಿಂದಲೇ ಸಿಕ್ಕಿದವರನ್ನೆಲ್ಲಾ ನಂಬುತ್ತಾರೆ. ಮತ್ತು ಕೇವಲ ಉದ್ಧತರಾಗುವದ್ದರಿಂದ ಅವರಿಗೆ ವಿಪತ್ತಿನ ಅನುಭವವಿಲ್ಲ. ಇಂಥಾ ಭಯಂಕರವಾದ ತಾರುಣ್ಯಾವಸ್ಥೆಯಲ್ಲಿ ಮಿತಾಚರಣೆಯಿಲ್ಲದಾಗ ಆಲಸ್ಯವೂ ಅಜಾಗರೂಕತೆಯೂ ಇಂದ್ರಿಯಾಧೀನತೆಯೂ ಅವರಲ್ಲಿ ಪ್ರವೇಶ ಮಾಡಿದರೆ ಅವರು ಕೆಳಗೆ ಬೀಳುವದಕ್ಕೆ ಇನ್ನೇನು ಬೇಕು? ತರುಣ ಸ್ತ್ರೀಯರುಗಳಿರಾ ಸಂಸಾರವೆಂಬ ಪೇಟೆಯಲ್ಲಿ ನೀವು ಈಗತಾನೇ ಪ್ರವೇಶಿಸಿದ್ದೀರಿ; ಇಲ್ಲಿ ಗಂಟುಕಳ್ಳರೂ ಮೋಸಗಾರರೂ ಬಹಳ ಜನರಿದ್ದಾರೆ; ಅವರು ನಿಮ್ಮನ್ನು ಸುಲಕೊಂಡು ಹೋಗುತ್ತಾರೆ; ಆದ್ದರಿಂದ ಬಹಳ ಎಚ್ಚರಿಕೆಯಿಂದಿರಬೇಕು. ಈ ಪೇಟೆಯಲ್ಲಿ ಎರಡು ದಾರಿಗಳಿವೆ. ಒಂದು ಒಳ್ಳೇ ದಾರಿ ಇನ್ನೊಂದು ಕೆಟ್ಟದಾರಿ. ಒಳ್ಳೇದಾರಿಯಲ್ಲಿ ನೀವು ಹೋದರೆ ಮುಂದೆ ನಿಮಗೆ ಶ್ರೇಯಸ್ಸಾಗುತ್ತೆ. ಕೆಟ್ಟದಾರಿಯಲ್ಲಿ ಹೋದರೆ ಏನಾಗುತ್ತೆಂಬುವದನ್ನು ನಾನು ಹೇಳತಕ್ಕ ಅವಶ್ಯಕವಿಲ್ಲ. ಒಳ್ಳೇದಾರಿಯು ಸರಳವಾಗಿಯೂ ಪ್ರಶಸ್ತವಾಗಿಯೂ ಸುಖದಾಯಕವಾಗಿಯೂ ಇದೆ. ನೀವು ಯಾವದಾರಿಯನ್ನು ಹಿಡಿಯಬೇಕೋ ಅದನ್ನು ಕುರಿತು ಮೊದಲು ವಿಚಾರಮಾಡಬೇಕು. ಒಳ್ಳೇದಾರಿಯನ್ನು ಹಿಡಿಯುವ

ಜನರು ಧನವನ್ನೂ ಮಾನವನ್ನೂ ಸುಖವನ್ನೂ ಸಂಪಾದಿಸಿಕೊಂಡು ಪ್ರಪಂಚದಲ್ಲಿ ತೃಪ್ತರಾಗಿ ತಮ್ಮ ಕೀರ್ತಿಯನ್ನು ಮೆರೆಸುತ್ತಾ ಇದ್ದಾರೆ. ಇದಕ್ಕೆ ವಿರೋಧವಾಗಿ ನಡೆದವರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಜೀವನ್ಮೃತರಂತೆ ಇದ್ದಾರೆ. ಈ ಪ್ರೊಳ್ಳೇದಾರಿಯನ್ನು ನೀವೂ ಹಿಡಿದು ಹೋಗಬೇಕಾಗಿ ಇರುವದ್ದರಿಂದ ಹಿಂದೆಮುಂದೆ ಚನ್ನಾಗಿ ಆಲೋಚನೆ ಮಾಡಿ ನಡೆಯಬೇಕು. ಈಗಿನ ನಿಮ್ಮ ನಡತೆಗೆ ಅನುಸಾರವಾಗಿ ಮುಂದೆ ಸುಖದುಃಖಗಳಾಗಲಿ ಮಾನಾಪಮಾನಗಳಾಗಲಿ ಕೀರ್ತಿ ಅಪಕೀರ್ತಿಗಳಾಗಲಿ ಸಂಭವಿಸುವವೆಂದು ನೀವು ಖಂಡಿತವಾಗಿ ತಿಳಿಯಬೇಕು. ಈಗ ಎಂಥಾ ಬೀಜವನ್ನು ಬಿತ್ತುತ್ತೀರೋ ಮುಂದೆ ಅದಕ್ಕೆ ತಕ್ಕ ಫಲವು ನಿಮಗೆ ದೊರಕುವದು. ನೀವು ಬೇವಿನ ಬೀಜವನ್ನು ಬಿತ್ತಿ, ಮಾವಿನ ಹಣ್ಣು ಬೇಕೆಂದರೆ ಸರ್ವಥಾ ದೊರೆಯಲಿಕ್ಕಿಲ್ಲ. ಅದ್ದರಿಂದ ನೀವು ಬುದ್ಧಿಯಿಂದ ಪರಿಣಾಮವನ್ನು ತಿಳಿಯುವ ವ್ಯವಸಾಯ ಮಾಡಬೇಕು. ವೃದ್ಧರಸೇವೆಯನ್ನು ನೀವು ಮಾಡಿದರೆ ಅವರಲ್ಲಿ ನಿಮಗೆ ಅನೇಕ ಸದುಪದೇಶಗಳು ದೊರೆಯುತ್ತವೆ. ವೃದ್ಧರೆಂದರೆ ಕೇವಲ ತಲೆನರತವರೆಂದು ತಿಳಿಯಬಾರದು. ಬಿಳೀಕೂದಲು ಬಂದು ಜ್ಞಾನಪಾತ್ರ ವಿಲ್ಲದವನಿಗೆ ವೃದ್ಧನೆಂದು ಹೇಳಿದರೆ ವೃದ್ಧ ಎಂಬ ಶಬ್ದಕ್ಕೆ ಅವಮಾನ ಮಾಡಿದಂತೆ ಆಗುತ್ತೆ. ಅವರನ್ನು ವಯೋವೃದ್ಧರೆನ್ನಬೇಕು. ಪರಿಣಾಮದರ್ಶಿಗಳಾಗಿಯೂ ದೂರದರ್ಶಿಗಳಾಗಿಯೂ ಸಚ್ಚರಿತ್ರರಾಗಿಯೂ ಶಾಸ್ತ್ರವನ್ನು ತಿಳಿದವರಾಗಿಯೂ ಇರುವ ವೃದ್ಧರ ಸೇವೆಯನ್ನು ಮಾಡದೆ ಇರುವವನು ಬಹುವಿದ್ಯೆಯನ್ನು ಕಲಿತಾಗ್ಯೂ ಜ್ಞಾನಿ ಎನಿಸಿಕೊಳ್ಳುವದಿಲ್ಲ. ಇಂಥಾ ಜ್ಞಾನವೃದ್ಧರಾದವರ ಶುಶ್ರೂಷೆ ಮಾಡುವ ಸಂಘಟನೆ ನಿಮಗೆ ಬೀಳದೆ ಇದ್ದ ಪಕ್ಷದಲ್ಲಿ ಅವರು ಬರೆದು ಇಟ್ಟಿರುವ ಗ್ರಂಥಗಳನ್ನಾದರೂ ನೋಡಿ ಅದರಲ್ಲಿ ಉಪದೇಶಮಾಡಿರುವಂತೆ ಆಚರಿಸಬೇಕು. ನೀವು ಓದಿದ ಪುಸ್ತಕಗಳಲ್ಲಿರುವ ಒಳ್ಳೇ ಉಪದೇಶಗಳು ನಿಮ್ಮ ಮನಸ್ಸಿಗೆ ಹತ್ತಿ ಅದರಂತೆ ನಿಮ್ಮ ಆಚರಣೆ ಇರದೆಯಿದ್ದ ಪಕ್ಷದಲ್ಲಿ ಹಾಗೆ ಲಕ್ಷಾವಧಿ ಪುಸ್ತಕಗಳನ್ನು ಓದಿಯೂ ಫಲವಿಲ್ಲ.

ಯೌವನಸ್ಥರ ಮನಸ್ಸಿನಲ್ಲಿ ಲೋಭವೆಂಬ ಭಯಂಕರವಾದ ಶತ್ರು ವಿರುತ್ತಾನೆ. ಸ್ವಲ್ಪವಿಷಯದಲ್ಲಿ ಲೋಭಮಾಡಿ ತಮ್ಮ ಯಾವತ್ಸುಜೀವನ್ನೂ ಕಳೆದುಕೊಂಡು ಪ್ರಾಣವನ್ನು ಸಹ ಬಿಟ್ಟವರ ದೃಷ್ಟಾಂತಗಳು ಸಾವಿರಾರು ದೊರೆಯಬಹುದು. ಆದ್ದರಿಂದ ನೋಡುವದಕ್ಕೆ ಮಧುರವಾಗಿಯೂ ಪರಿಣಾಮದಲ್ಲಿ ಭಯಂಕರವಾಗಿಯೂ ಇರುವ ಲೋಭವನ್ನು ಮಾಡಬಾರದು. ನಿಮ್ಮ ನಡತೆಯನ್ನು ಅತ್ಯಂತ ಪವಿತ್ರವಾಗಿ ಮಾಡಿಕೊಳ್ಳುವದರಲ್ಲಿ ನೀವು ಆಸಕ್ತರಾಗಿರಬೇಕು. ನಿರ್ಮಲವಾದ ನಡತೆಗೆ ಸರಿಯಾದ ಧನವು ಪ್ರಪಂಚದಲ್ಲಿ ಇನ್ನೊಂದಿಲ್ಲ. ಆದ್ದರಿಂದ ಅದನ್ನು ಎಲ್ಲರೂ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ಹುವ್ವಿಗೆ ಗಿಡದ ಮೇಲೆ ಇರುವ ವರಿಗೂ ಕಾಂತಿ ಇರುತ್ತೆ. ಅದು ಕೆಳಗೆ ಬಿದ್ದಕೂಡಲೆ ಬಾಡಿ ಹೋಗುತ್ತೆ. ಅನಂತರ ಅದು ಎಷ್ಟು ಸುಗಂಧ ಉಳ್ಳದ್ದಾದರೂ ಅದನ್ನು ತುಳಿದು ಹಾಕುತ್ತಾರೆ. ಆ ಮೇಲೆ ಅದನ್ನು ಕಣ್ಣೆತ್ತಿ ನೋಡುವದು ಸಹ ಇಲ್ಲ. ಹಾಗೆಯೇ ಮನುಷ್ಯನಲ್ಲಿ ಎಷ್ಟು ಗುಣಗಳಿದ್ದಾಗ್ಯೂ ಅವನ ನಡತೆ ಪವಿತ್ರವಾಗಿ ಇರುವ ವರಿಗೆ ಅವನಿಗೆ ಮರ್ಯಾದೆ ನಡೆಯುತ್ತೆ. ಅವನ ನಡತೆಗೆ ಕಳಂಕ ಹತ್ತಿದಕೂಡಲೇ ಅವನನ್ನು ಯಾರೂ ಮಾತನಾಡಿಸುವದಿಲ್ಲ. ನಾಚಿಕೆಯ ಭಾರದಿಂದ ಅವನು ತಲೆಯನ್ನು ಎತ್ತಲಿಕ್ಕೆ ಆಗುವದಿಲ್ಲ. ಮನುಷ್ಯನ ಮಾನವು ಯಾವ ಕಾರಣದಿಂದಲಾಗಲಿ ಒಂದುಸಾರಿ ಹೋದಮೇಲೆ ತಿರುಗಿ ಬರುವದಿಲ್ಲ. ಅದರಲ್ಲಿಯೂ ಭ್ರಷ್ಟವಾದ ನಡತೆಯುಳ್ಳ ಮನುಷ್ಯನಾದರೆ ಇನ್ನೂ ವಿಶೇಷ. ಅಂಥವನನ್ನು ಜನರು ಸೇರಿ ಒಂದುವೇಳೆ ದೊಡ್ಡ ಪದವಿಗೆ ಏರಿಸಿದಾಗ್ಯೂ ಅವನು ಬರುತ್ತಾ ಬರುತ್ತಾ ತೇಜೋವಿಹೀನನಾಗುತ್ತಾನೆ. ಅವನು ಮಾಡಿದ ದುಷ್ಕರ್ಮದ ಪಶ್ಚಾತ್ತಾಪವು ಹಗಲೂ ರಾತ್ರೆ ಅವನನ್ನು ತಿನ್ನುತ್ತಿರುತ್ತೆ. ಅವನಿಗೆ ಮೇಲೆ ರಾಜಭೋಗಗಳಿದ್ದಾಗ್ಯೂ ಮನಸ್ಸಿನಲ್ಲಿ ವ್ಯಾಕುಲತೆ ತಪ್ಪುವದಿಲ್ಲ. ಒಂದುಸಲ ಹಿಡಿದ ದುರಭ್ಯಾಸವನ್ನು ಬಿಡಲಿಕ್ಕೆ ಆಗುವದಿಲ್ಲ. ತಮ್ಮ ಕೆಟ್ಟ ನಡತೆಯಿಂದ ಕಳೆದುಕೊಂಡ ಪದವಿಯನ್ನು ತಿರುಗಿ ಸಂಪಾದಿಸುವದಕ್ಕೆ ಪ್ರಯತ್ನಮಾಡಿದಾಗ್ಯೂ ಸಿಕ್ಕುವದಿಲ್ಲ. ಗಿಡದಿಂದ ಬಿದ್ದ ಹುವ್ವನ್ನು ತಿರುಗಿ

ಅದರ ಸ್ಥಾನದಲ್ಲಿ ಇಡಲಿಕ್ಕೆ ಹೋದರೆ ನಿಲ್ಲುವದಿಲ್ಲ. ನೀಚ ಕುಲದಲ್ಲಿ ಹುಟ್ಟಿದ್ದಾಗ್ಯೂ ನಡತೆ ಒಳ್ಳೇದಾಗಿದ್ದರೆ ಅವನನ್ನು ಜನರು ಪುರಸ್ಕರಿಸುತ್ತಾರೆ. ಆದ್ದರಿಂದ ನಿರ್ಮಲವಾದ ನಡತೆಯ ಯೋಗ್ಯತೆ ಪ್ರಪಂಚದಲ್ಲಿ ಇತರ ಯಾವಗುಣಕ್ಕೂ ಇಲ್ಲವೆಂದು ಅರ್ಥಾತ್ ಸಿದ್ಧವಾಗುತ್ತೆ. ಇಂಥಾ ಒಳ್ಳೇ ನಡತೆಯನ್ನು ಸಂಪಾದಿಸಬೇಕಾದರೆ ಬಹು ಶ್ರಮಪಡಬೇಕಾದದ್ದೂ ಅಥವಾ ಹಣವನ್ನು ವೆಚ್ಚ ಮಾಡಬೇಕಾದದ್ದೂ ಪ್ರಕೃತವಿಲ್ಲ. ಧರ್ಮಕ್ಕೆ ಅನುಸಾರವಾಗಿ ಮರ್ಯಾದೆಯಿಂದ ನಡೆದರೆ ಸಾಕು. ಧರ್ಮ ವಿರುದ್ಧವಾಗಿ ನಡೆದವರು ಭೂಮಿಯಲ್ಲಿರುವ ಸರ್ವದ್ರವ್ಯವನ್ನು ಕೊಟ್ಟಾಗ್ಯೂ ಅವರಿಗೆ ನಿರ್ಮಲವಾದ ನಡತೆ ಯೆಂಬುವದು ಬರುವದಿಲ್ಲ. ಇಂಥಾ ದುರ್ಲಭವಾದ ಧನವನ್ನಿಟ್ಟುಕೊಳ್ಳುವದು ನಿಮ್ಮ ಸ್ವಾಧೀನದಲ್ಲಿರುವಾಗ ನೀವು ಅದರ ವಿಷಯದಲ್ಲಿ ಅಶ್ರದ್ಧೆಯನ್ನು ಮಾಡಬಾರದು. ನೀವು ಹುಚ್ಚರಾಗಿ ಒಂದುವೇಳೆ ಅಶ್ರದ್ಧೆಯನ್ನು ಮಾಡಿದರೆ ಮುಂದೆ ಬಹಳ ಶ್ರಮಪಡಬೇಕಾಗುವದು.

ನೀವು ಈಗ ಯೌವನಮದದಿಂದ ನಿಮ್ಮ ರೂಪವೂ ಯೌವನವೂ ಮನಸ್ಸಿನ ಉಲ್ಲಾಸವೂ ಶಾಶ್ವತವಾಗಿ ಹೀಗೆಯೇ ಇರುತ್ತವೆಂದು ತಿಳಿಯುತ್ತೀರಿ. ಇದು ತಪ್ಪು. ಯಾರಿಗೂ ಯಾವದೂ ಶಾಶ್ವತವಲ್ಲವೆಂಬುವದನ್ನು ನೀವೇ ಕಣ್ಣಿನಿಂದ ನೋಡುತ್ತೀರಿ. ಬಾಲ್ಯವೇ ಮೊದಲಾದ ಅವಸ್ಥೆಗಳೂ ಹಾಗೆಯೇ ನಶ್ವರವಾಗಿವೆ. ಯಾವ ಮದದಿಂದ ನೀವು ಇದು ಒಳ್ಳೇದು ಇದು ಕೆಟ್ಟದ್ದು ಎಂದು ವಿಚಾರ ಮಾಡದೆ ಮದಿಸಿದ ಆನೆಯ ಹಾಗೆ ಮನಸ್ಸಿಗೆ ತೋರಿದ ಕಡೆಗೆ ತಿರುಗುತ್ತಾ ಇದ್ದೀರೋ ? ಆ ಯೌವನವು ಎಷ್ಟು ಬೇಗ ಕಳೆದು ಹೋಗುತ್ತೆಂಬುವದು ನಿಮಗೆ ತಿಳಿದು ಇದೆಯೆ ? ಮಳೆಗಾಲದಲ್ಲಿ ಹೆಚ್ಚಾಗಿ ಮಳೆ ಬಿದ್ದು ಒಂದು ಸಣ್ಣ ಹಳ್ಳ ತುಂಬಿ ಹರಿಯುವಾಗ ಅದು ನೋಡುವದಕ್ಕೆ ಚನ್ನಾಗಿ ಕಾಣುತ್ತೆ. ಅದರಲ್ಲಿ ಆನೆಯಂಥಾ ದೊಡ್ಡಪ್ರಾಣಿಯನ್ನಾದರೂ ತೇಲಿಸಿಕೊಂಡು ಹೋಗುವಂಥಾ ಬಲವಿರುತ್ತೆ. ಒಂದೊಂದು ಸಲ ದೊಡ್ಡದೊಡ್ಡ ಸೇತುವೆಗಳೂ ಕಿತ್ತು ಹೋಗುತ್ತವೆ ; ಪರಂತು ಅದರಲ್ಲಿ ಹರಿದು ಹೋಗುವ ನೀರು ತಿರುಗಿ ಬರುವದಿಲ್ಲ. ಇದಲ್ಲದೆ ಅದರ ಅಂದವೂ ಆನೆಯನ್ನು ತೇಲಿಸಿಕೊಂಡು ಹೋಗುವ ಮತ್ತು ಸೇತುವೆಗಳನ್ನು ಕೀಳುವ

ಬಲವೂ, ಅದರ ಘೋರ ಶಬ್ದವೂ ಇವುಗಳಲ್ಲಿ ಯಾವದೂ ನಿಲ್ಲುವದಿಲ್ಲ ; ದುರ್ವಾಸನೆಯ ಕೆಸರು ಮಾತ್ರ ಅಲ್ಲಲ್ಲಿ ನಿಲ್ಲುತ್ತೆ. ನಿಮ್ಮ ಯೌವನಾವಸ್ಥೆಯ ಸ್ಥಿತಿಯೂ ಹೀಗೆಯೇ ಇದೆ. ನಿಮ್ಮ ಶರೀರವೆಂಬ ಹಳ್ಳದ ಯೌವನವೆಂಬ ನೀರು ಧರ್ಮವೆಂಬ ಸೇತುವೆಯನ್ನು ಕೀಳದಂತೆ ನಿರ್ಮಾಣ ಮಾಡಬೇಕು. ನಿಮ್ಮ ಆಯುಷ್ಯವೆಂಬ ಸರೋವರದಲ್ಲಿ ಸಚ್ಚಾರಿತ್ರವೆಂಬ ನೀರನ್ನು ಅಕ್ಷಯವಾಗಿ ನಿಲ್ಲಿಸಿಕೊಳ್ಳುವದಕ್ಕೋಸ್ಕರ ಅದರ ಸುತ್ತಲೂ ಮಿತಾಚರಣೆಯೆಂಬ ಏರಿಯನ್ನು ಹಾಕಬೇಕು. ಆದರಲ್ಲಿ ಸದ್ಗುಣವೆಂಬ ಕಮಲಗಳು ಹುಟ್ಟಿ ಆ ಸರೋವರಕ್ಕೆ ಅನಿರ್ವಚನೀಯವಾದ ಕಾಂತಿ ಉಂಟಾಗುತ್ತದೆ. ಪರಂತು ಈ ಮೇರೆಗೆ ಏರಿ ಹಾಕಿ ಕಟ್ಟದೆ ಇದ್ದರೆ ಅದರಲ್ಲಿರುವ ನೀರೆಲ್ಲಾ ಬತ್ತಿ ದುರ್ಗುಣವೆಂಬ ಕೆಸರು ಮಾತ್ರ ನಿಲ್ಲುವದು. ಅದಕ್ಕೆ ದುರ್ವಾಸನೆ ಹುಟ್ಟಿ ನಿಮ್ಮ ಬಳಿಯಲ್ಲಿ ಯಾರೂ ಸೇರದಂತೆ ಆಗುತ್ತೆ. ನೀವು ಮಿತಾಚರಣೆಯಿಂದ ನಿಮ್ಮ ನಡತೆಯನ್ನು ಒಳ್ಳೇದನ್ನಾಗಿ ಮಾಡಿಕೊಂಡು ತನ್ಮೂಲಕವಾಗಿ ಸಮುದ್ರದಂತೆ ಗಂಭೀರವಾಗಿ ಇರಬೇಕು. ಹೀಗಿರಬೇಕಾದರೆ ಏನು ಮಾಡಬೇಕೆಂಬುವದನ್ನು ಇನ್ನು ಮುಂದೆ ವಿವರಿಸುತ್ತೇನೆ.

(೧) ನೀವು ನಿರುದ್ಯೋಗರಾಗಿ ಯಾವಾಗಲೂ ಕೂತಿರಬಾರದು. ಯಾವದಾದರೂ ಒಳ್ಳೇ ಕೆಲಸವನ್ನು ಮಾಡುತ್ತಾ ಯಿರಬೇಕು. ಇದರಿಂದ ನಿಮ್ಮ ಮನಸ್ಸು ಇತರ ವಿಷಯಗಳ ಕಡೆಗೆ ಹೋಗುವದಕ್ಕೆ ಅವಕಾಶವಿರುವದಿಲ್ಲ. ಪ್ರಾಯೇಣ ಕೆಲಸವಿಲ್ಲದೆ ಪೋಲುಮಾತಿಕೆಯಿಂದ ಹೊತ್ತು ಕಳೆಯುವವರು ಕೆಟ್ಟ ನಡತೆಯುವರಾಗುತ್ತಾರೆ. ಯಾವದಾದರೂ ಒಂದು ವಿಷಯದಲ್ಲಿ ಇರಬೇಕಾದದ್ದು ಮನಸ್ಸಿನ ಧರ್ಮವಾದ್ದರಿಂದ ಅದು ಸುಮ್ಮನಿರಲಾರದು. ಆದ್ದರಿಂದ ಅದನ್ನು ಒಳ್ಳೇ ಕೆಲಸದಲ್ಲಿ ಅಂಟಿಸದೆ ಬಿಟ್ಟುಬಿಟ್ಟರೆ ಅದಕ್ಕೆ ಒಳ್ಳೇದು ಕೆಟ್ಟದ್ದೆಂಬುವದು ತಿಳಿಯದೆ ಕುರುಡನಂತೆ ಸಿಕ್ಕಿದ ಕಡೆಗೆ ಹೋಗಿ ನೀಚಕಾರ್ಯದಲ್ಲಿ ಬೀಳುವದು. ನೀರು ಹ್ಯಾಗೆ ದಾರಿಸಿಕ್ಕಿದಕಡೆಗೆ ಹೋಗುತ್ತೋ ಹಾಗೇ ಮನಸ್ಸೂ ಸಿಕ್ಕಿದಕಡೆಗೆ ಹೋಗುವದರಿಂದ ಜನರು ಜಾಗರೂಕರಾಗಿ ತಮ್ಮ ಮನಸ್ಸನ್ನು ಒಳ್ಳೇ ಕಾರ್ಯದಲ್ಲಿ ಅಂಟಿಸಬೇಕು. ಅದನ್ನು ಸುಮ್ಮನಿರಲಿಕ್ಕೆ ಬಿಡಬಾರದು.

(೨) ನೀವು ಆತ್ಮಸಂಯಮನವನ್ನು ಮಾಡುವ ಅಭ್ಯಾಸ ಮಾಡಬೇಕು. ಇದರಿಂದ ನಿಮ್ಮ ಯಾವ ಕೆಲಸವೂ ಮಿತಿಮೀರಿ ಹೋಗುವದಿಲ್ಲ. ನಿಮ್ಮ ಮನಸ್ಸಿನಲ್ಲಿ ಯಾವದಾದರೂ ಒಂದು ಕೆಲಸ ಮಾಡಬೇಕೆಂದು ಅಪೇಕ್ಷೆಯುಂಟಾಗಿ ಅದನ್ನು ಮಾಡುವದಕ್ಕೆ ನೀವು ಯತ್ನಿಸಿದಾಗ ನಿಮ್ಮ ಹಿರಿಯರು ಗುರುಗಳು ಅಥವಾ ನಿಮ್ಮ ಸಂರಕ್ಷಕರು ಅದನ್ನು ಮಾಡುವದರಿಂದ ನಿಮಗೆ ಅಹಿತವಾಗುತ್ತೆಂದು ಹೇಳಿದರೆ ಅದುನಿಮಗೆ ಎಷ್ಟು ಪ್ರೀತಿಯ ಕೆಲಸವಾಗಿದ್ದಾಗ್ಯೂ ಅದನ್ನು ಬಿಟ್ಟುಬಿಡಬೇಕು. ನೀವು ಯಾವಕೆಲಸ ಮಾಡಬೇಕಾದರೂ ಹಿರಿಯರ ಅಪ್ಪಣೆಯನ್ನೂ ಜ್ಞಾನಿಗಳ ಆಲೋಚನೆಯನ್ನೂ ಕೇಳಿ ಮಾಡಬೇಕು. ನಿಮ್ಮ ಸ್ವಬುದ್ಧಿಯಿಂದಲೇ ಮಾಡಬಾರದು. ನಮಗೆ ತಿಳಿದ್ದಕ್ಕಿಂತಲೂ ಇತರರು ಏನು ಹೆಚ್ಚಾಗಿ ಹೇಳುತ್ತಾರೆ? ಅವರನ್ನು ಯಾಕೆ ಕೇಳಬೇಕೆಂದು ನಿಮ್ಮ ಮನಸ್ಸಿಗೆ ತೋಚಬಹುದು; ಅದು ತಪ್ಪು. ಒಳ್ಳೇದು ಕೆಟ್ಟದ್ದೆಂದು ನಿಶ್ಚಯಮಾಡುವಷ್ಟು ನಿಮ್ಮ ಬುದ್ಧಿ ಪಕ್ವವಾಗಿರುವದಿಲ್ಲ. ನಿಮ್ಮ ಹಿರಿಯರು ಮತ್ತು ಜ್ಞಾನಿಗಳು ಸಹ ಬಹಳ ಪೆಟ್ಟು ತಿಂದವರಾಗಿ ಇರುವದ್ದರಿಂದ ನಿಮ್ಮನ್ನು .ಬುದ್ಧಿವಂತರನ್ನಾಗಿ ಮಾಡುವದಕ್ಕೋಸ್ಕರ ಧರ್ಮವಿರುದ್ಧವಾಗಿ ನಡೆಯಬಾರದೆಂದು ನಿಮಗೆ ಹೇಳುತ್ತಾರೆ; ನೀವು ಅವರು ಹೇಳಿದ್ದನ್ನು ಕೇಳಿ ಅದರಂತೆ ನಡೆಯದೆ .ಇದ್ದರೆ ನಿಮಗೆ ಕೇಡು ತಪ್ಪುವದಿಲ್ಲ.

(೩) ನೀವು ವಿನಯವನ್ನು ಕಲಿಯಬೇಕು. ಲೋಕದಲ್ಲಿ ವಿನಯಕ್ಕೆ ಸರಿಯಾದ ಸ್ನೇಹಿತನು ಯಾರೂ ಇಲ್ಲ. ಮನುಷ್ಯನಿಗೆ ದೇವರು ಕೊಟ್ಟಿರುವ ಗುಣಗಳಲ್ಲಿ ವಿನಯವೆಂಬುವದು ಬಹಳ ಶ್ರೇಷ್ಠವಾದದ್ದೆಂದು ಕಾಣುತ್ತೆ. ಆದ್ದರಿಂದ ವಿನಯವೆಂಬ ರತ್ನದಿಂದ ಭೂಷಿತನಾದವನು ದೊಡ್ಡವನೆನಿಸಿಕೊಳ್ಳುತ್ತಾನೆ. ನೀವುಸಹ ದೊಡ್ಡವರೆನ್ನಿಸಿಕೊಳ್ಳ ಬೇಕಾದರೆ ವಿನಯವನ್ನು ಕಲಿಯಬೇಕು. ವಿನಯವಿಲ್ಲದೆ ಇತರ ದೊಡ್ಡ ಗುಣಗಳಿದ್ದಾಗ್ಯೂ ಅವುಗಳಿಂದ ಉಪಯೋಗವೇನೂ ಯಿಲ್ಲ. ಅಹಂಕಾರವು ಮನುಷ್ಯನಿಗೆ ದೊಡ್ಡ ಶತ್ರುವೆಂದು ತಿಳಿಯಬೇಕು. ಮನುಷ್ಯನು ತಗ್ಗಿ ನಡಿಯುವ ವರಿಗೂ ಅಭಿವೃದ್ಧಿಗೆ ಬರುತ್ತಾನೆ. ಪರಂತು ಅವನ ಮನಸ್ಸಿನಲ್ಲಿ

ಅಹಂಕಾರವು ಪ್ರವೇಶಮಾಡಿದಕೂಡಲೇ ಅವನು ಕೆಳಗೆ ಬೀಳುವ ಲಕ್ಷಣಗಳು ಕಾಣಿಸುತ್ತಾ ಕಾಲಕ್ರಮೇಣ ಅವನು ನಾಶವನ್ನು ಹೊಂದುತ್ತಾನೆ. ಇತಿಹಾಸವನ್ನೂ ಇತರ ಗ್ರಂಥಗಳನ್ನೂ ಓದುವದರಿಂದಲೂ, ಪ್ರತ್ಯಕ್ಷವಾಗಿ ಕಾಣುವ ಲೋಕದ ಮತ್ತು ನಿಮ್ಮ ಅವಸ್ಥೆಗಳನ್ನು ವಿಚಾರ ಮಾಡುವದರಿಂದಲೂ, ಇಂಥಾ ದೃಷ್ಟಾಂತಗಳು ಸಾವಿರಾರು ಕಾಣಬರುತ್ತವೆ; ಆದ್ದರಿಂದ ಅಹಂಕಾರದಿಂದ ಉದ್ಧತರಾಗುವದು ಮೂರ್ಖತನವೇ ಸರಿ. ಅನಂತವಾಗಿಯೂ ಅಚಿಂತ್ಯವಾಗಿಯೂ ಇರುವ ಈಶ್ವರ ಸೃಷ್ಟಿಯಲ್ಲಿ ಎಂಥೆಂಥಾ ದೊಡ್ಡ ಪದಾರ್ಥಗಳಿವೆ, ಎಂಥೆಂಥಾ ಪ್ರಾಣಿಗಳಿವೆ ಎಂಬುವದನ್ನೂ, ಇದು ಒಳ್ಳೇದು, ಇದು ಕೆಟ್ಟದ್ದು, ಎಂಬ ನಿರ್ಣಯವನ್ನೂ ತಿಳಿದು ಕೊಳ್ಳುವದಕ್ಕೆ ಎಂಥವನಿಗೂ ಅಸಾಧ್ಯವಾಗಿದೆ; ಹೀಗಿರುವಲ್ಲಿ ನಾಸು ತಿಳಿದಿದ್ದೇನೆ; ನಾನು ದೊಡ್ಡವನು; ಎಂದು ಯಾರೂ ಅಹಂಕಾರ ಪಡಬಾರದು. ಎಲ್ಲರಿಗೂ ಯಾವದಾದರೂ ಒಂದು ವಿಷಯದಲ್ಲಿ ಕಳಂಕವು ಅಥವಾ ಭಯವು ಇದ್ದೇ ಯಿರುತ್ತೆ. ಆದ್ದರಿಂದ ಅಹಂಕಾರಕ್ಕೆ ಆಸ್ಪದವೆಲ್ಲಿ? ನಮ್ಮ ನಿಮ್ಮಂಥಾ ಬಡಪಾಯಿಗಳ ಗತಿ ಹಾಗಿರಲಿ, ದೊಡ್ಡದೊಡ್ಡ ಸಾರ್ವಭೌಮರು ಕುಬೇರನಂಥಾ ಧನವಂತರು ಬೃಹಸ್ಪತಿಯಂಥಾ ವಿದ್ವಾಂಸರು ಇವರ ಅಹಂಕಾರವೇ ಮುರಿದು ಹೋಗಿಯಿದೆ. ಪ್ರಪಂಚದಲ್ಲಿ ಎಲ್ಲಿ ನೋಡಿದಾಗ್ಯೂ ವಿನಯಕ್ಕೆ ಜಯವೂ ಅಹಂಕಾರಕ್ಕೆ ಪರಾಜಯವೂ ನಿಮಗೆ ಕಾಣ ಬರುತ್ತವೆ.

ಮನುಷ್ಯನಲ್ಲಿ ವಿನಯವಿದ್ದರೆ ಅದರಿಂದ ಇತರ ಗುಣಗಳೂ ಸುಖವೂ ಯಶಸ್ಸೂ ವೃದ್ಧಿಯಾಗುತ್ತವೆ. ವಿನಯಶಾಲಿಯಾದವನು ಉದ್ಧತತನದಿಂದ ಯಾರಲ್ಲಿಯೂ ಕೆಟ್ಟಮಾತನ್ನಾಡುವದಿಲ್ಲ; ಎಲ್ಲರಲ್ಲಿಯೂ ನಮ್ರನಾಗಿ ಪ್ರೇಮದಿಂದ ನಡೆಯುತ್ತಾನೆ; ಆದ್ದರಿಂದ ಅವನನ್ನು ಜನರು ಪ್ರೀತಿಸುತ್ತಾರೆ; ಅವನ ಶತ್ರುವು ಸಹ ಅವನಿಗೆ ಮಿತ್ರನಾಗುತ್ತಾನೆ; ಅವನನ್ನು ಎಲ್ಲರೂ ಕೊಂಡಾಡುತ್ತಾರೆ. ಲೋಕದಲ್ಲಿ ಬಹಳ ಒಳ್ಳೆಯವನೆನ್ನಿಸಿಕೊಂಡು ಪ್ರತಿಷ್ಠೆಯನ್ನು ಪಡೆದುಕೊಳ್ಳಬೇಕಾದರೆ ಎಲ್ಲರಲ್ಲಿಯೂ ನಮ್ರನಾಗಿರಬೇಕು. ನಮ್ರತೆಯಿಂದಲೇ ದೊಡ್ಡಪದವಿ ದೊರೆಯುವದಲ್ಲದೆ

ಅದರಿಂದ ಸ್ವತಏವ ಇತರ ಎಲ್ಲಾ ವಿಷಯಗಳೂ ಸ್ವಾಧೀನವಾಗುತ್ತವೆ. ಯಾರಾದರೂ ನಿಮ್ಮನ್ನು ನಿಂದಿಸಿದರೆ ನೀವು ಸಿಟ್ಟುಮಾಡಿಕೊಳ್ಳಬಾರದು. ನಿಮ್ಮಲ್ಲಿ ನಿಂದಾಸ್ಪದವಾದ ದೋಷಗಳೇನಾದರೂ ಇದ್ದರೆ ಮೊದಲು ಯೋಚಿಸಿ ತಿಳಿದು ಕೊಂಡು ಅವುಗಳನ್ನು ಕಳೆದುಕೊಳ್ಳುವದಕ್ಕಾಗಿ ಪ್ರಯತ್ನ ಮಾಡಬೇಕು. ನಿಮ್ಮನ್ನು ನಿಂದಿಸುವವನು ನಿಮ್ಮ ದೋಷಗಳನ್ನು ತೋರಿಸಿ ಕೊಟ್ಟದ್ದಕ್ಕಾಗಿ ಅವನು ನಿಮಗೆ ಉಪಕಾರವನ್ನು ಮಾಡಿದನೆಂದೆಣಿಸಬೇಕು. ನಿಮ್ಮಲ್ಲಿ ದೋಷವಿಲ್ಲದಿದ್ದರೂ ನಿಂದಿಸಿದವನಲ್ಲಿ ನೀವು ಕೋಪವನ್ನು ಮಾಡದೆ ಪ್ರಸನ್ನರಾಗಿ ಮಾತನಾಡಬೇಕು. ನಿಮಗೆ ಅಪಕಾರವನ್ನು ಮಾಡಿದವನಿಗೆ ಅಪಕಾರವನ್ನು ಮಾಡಲೆಣಿಸದೆ ಉಪಕಾರವನ್ನೇ ಮಾಡಬೇಕು. ಇದರಿಂದ ಅವರಿಗೆ ನಾಚಿಕೆಯುಂಟಾಗಿ ತಾವು ಮಾಡಿದ ಕೆಲಸಕ್ಕಾಗಿ ಪಶ್ಚಾತ್ತಾಪಪಟ್ಟು ನಿಮ್ಮಲ್ಲಿ ಒಳ್ಳೇತನದಿಂದ ನಡೆಯುತ್ತಾರೆ. ಬುದ್ಧಿವಂತರಾದ ಜ್ಞಾನಿಗಳು ಉದ್ಧತರಾಗಿಯೂ ಉಗ್ರರಾಗಿಯೂ ಅಹಂಕಾರಿಗಳಾಗಿಯೂ ಎಂದಿಗೂ ಇರುವದಿಲ್ಲ; ಯಾವಾಗಲೂ ವಿನೀತರಾಗಿಯೂ ನಮ್ರರಾಗಿಯೂ ಇರುತ್ತಾರೆ. ಮಾವಿನಗಿಡ ಮುಂತಾದ ಫಲವೃಕ್ಷಗಳು ಕೂಡಾ ದೊಡ್ಡವುಗಳಾದಾಗ್ಯೂ ಫಲಭರಿತವಾದಾಗ ಬಗ್ಗುತ್ತವೆ. ಹಾಗೆಯೇ ಮೇಘಗಳು ನೀರಿನಿಂದ ತುಂಬಿದರೆ ನಮ್ರವಾಗುತ್ತವೆ. ಅಹಂಕಾರದಿಂದ ಮತ್ತೊಬ್ಬರನ್ನು ಲಕ್ಷಿಸದೆ ಇರುವ ಮನುಷ್ಯನು ಎಷ್ಟು ಗುಣಾಢ್ಯನಾಗಿದ್ದಾಗ್ಯೂ ಅವನನ್ನು ನೋಡಬೇಕೆಂಬ ಇಚ್ಛೆಯೂ ಕೂಡ ಯಾರಿಗೂ ಯಿರುವದಿಲ್ಲ. ನಮ್ರತೆಯೆಂಬ ಗುಣವು, ನಮ್ರತೆಯುಳ್ಳವನನ್ನೂ ಅವನಿಗೆ ಸೇರಿದವನನ್ನೂ ಸಂತೋಷಪಡಿಸುತ್ತೆ. ನಮ್ಮಿಂದಲೇನಾದರೂ ತಪ್ಪು ಕೆಲಸ ನಡೆದು ಅದಕ್ಕಾಗಿ ಇತರರು ಆಕ್ಷೇಪಿಸಿದಲ್ಲಿ ನಾವು ಅದನ್ನು ಸಿಟ್ಟುಮಾಡಿಕೊಳ್ಳದೆ ಸ್ವೀಕರಿಸಿದರೆ ಮುಂದೆ ಆಗುವ ಕಲಹವೇ ಮುಂತಾದ ಅನರ್ಥಗಳು ನಿವಾರಣೆಯಾಗುವದಲ್ಲದೆ ನಮ್ಮ ತಪ್ಪಿಗೆ ತಕ್ಕಂಥಾ ದಂಡವೂ ತಪ್ಪಿಹೋಗುತ್ತೆ; ಮತ್ತು ನಾವು ಯಾರಿಗೆ ನಮ್ರರಾಗಿರುವೆವೋ ಅವರ ಪ್ರೇಮವೂ ವಿಶ್ವಾಸವೂ ನಮ್ಮಮೇಲೆ ಇರುತ್ತೆ.

(೪) ನಿಮ್ಮ ಹಿರಿಯರಿಗೂ ಗುರುಗಳಿಗೂ ಅವರಿಗೆ ಸಮಾನರಾದ ಇತರ ಜನರಿಗೂ ಯೋಗ್ಯವಾದ ಸನ್ಮಾನವನ್ನು ಮಾಡಬೇಕು. ಪೂಜ್ಯತೆಯಲ್ಲಿ ತಾಯಿತಂದೆಗಳು ದೇವರಿಗೆ ಎರಡನೆಯವರಾಗಿದ್ದಾರೆ. ನೀವು ಗಣ್ಯರಾಗಿ ನಾಲ್ವರಲ್ಲಿ ಪ್ರತಿಷ್ಠೆಯನ್ನು ಪಡೆದು ಸುಖವಾಗಿರುವದು ನಿಮ್ಮ ತಾಯಿತಂದೆಗಳ ಮತ್ತು ನಿಮಗೆ ನೀತಿಮಾರ್ಗವನ್ನು ಉಪದೇಶಮಾಡಿದ ಗುರುಗಳ ಪ್ರಸಾದವಲ್ಲವೆ? ಹಾಗಿಲ್ಲದಿದ್ದರೆ ಈ ಜಗತ್ತಿನಲ್ಲಿ ಯಾರೂ ಗಣನೆಗೆ ತಾರದ ನಿಮ್ಮಂಥಾ ಪರಮಾಣುಗಳು ಎಷ್ಟಿಲ್ಲ. ನಿಮ್ಮ ತಂದೆತಾಯಿಗಳೂ ಗುರುಗಳೂ ನಿಮಗೆ ಮಾಡಿದ ಉಪಕಾರವನ್ನು ಸಂಪೂರ್ಣವಾಗಿ ತೀರಿಸುವದಕ್ಕೆ ನಿಮ್ಮಿಂದ ಆಗುವದಿಲ್ಲ; ಯಥಾಶಕ್ತಿ ಧರ್ಮಾನುಸಾರವಾಗಿ ಅವರ ಆಜ್ಞೆಯನ್ನನುಸರಿಸಿ ನಡೆದರೆ ಅವರಿಗೆ ಸ್ವಲ್ಪವಾದರೂ ಪ್ರತ್ಯುಪಕಾರ ಮಾಡಿದಂತಾಗುತ್ತೆ; ನೀವು ಹಾಗೆ ಮಾಡದಿದ್ದರೆ ಲೋಕದಲ್ಲಿ ಜನ್ಮವೆತ್ತಿ ನಿಮ್ಮ ತಾಯಿಯನ್ನು ವ್ಯರ್ಥವಾಗಿ ದಣಿಸಿದಂತೆ ಆಗುತ್ತೆ. ಹಿರಿಯರ ಎದುರಿಗೆ ಉದ್ಧತರಾಗಿ ಕೋಪದಿಂದ ಅವಾಚ್ಯವಾದ ಮಾತುಗಳನ್ನೂ ಸುಳ್ಳುಮಾತುಗಳನ್ನೂ ಆಡಬಾರದು. ಅವರಲ್ಲಿ ನಿಮ್ಮ ಕೋಪವನ್ನೂ ಅಹಂಕಾರವನ್ನೂ ತೋರಿಸಬಾರದು. ಅವರು ಹೇಳಿದ್ದನ್ನು ಕೇಳಿ ಮನಸ್ಸಿನಲ್ಲಿ ಇಟ್ಟುಕೊಂಡು ಅದರಂತೆ ನಡೆದರೆ ನಿಮಗೆ ಶ್ರೇಯಸ್ಸುಂಟಾಗುತ್ತೆ. ನಿಮ್ಮ ಶಕ್ತಿಯಿರುವ ಮಟ್ಟಿಗೂ ಅವರ ಸೇವೆಯನ್ನು ಮಾಡುವದರಲ್ಲಿ ಪಾಲುಮಾರಿಕೆಯನ್ನು ಮಾಡಬಾರದು. ನೀವು ಇರುವ ಸ್ಥಳಕ್ಕೆ ಹಿರಿಯರಾಗಲಿ ನಿಮ್ಮ ಪರಿಚಯವಿಲ್ಲದ ವಿದ್ವಾಂಸರಾಗಲಿ ಬಂದರೆ ಎದ್ದುನಿಂತು ಸನ್ಮಾನವನ್ನು ಮಾಡಬೇಕು. ಅವರು ಬರುವಾಗ ಎದುರಾಗಿ ಹೋಗಿ ಕರಕೊಂಡು ಬಂದು ಹೋಗುವಾಗ ನಾಲ್ಕು ಹೆಜ್ಜೆ ಅವರ ಸಂಗಡ ಹೋಗಿ ಕಳುಹಿಸಬೇಕು. ಅವರಿಗೆ ನಮಸ್ಕಾರ ಮುಂತಾದ ಸನ್ಮಾನ ಸೂಚಕವಾದ ಉಪಚಾರಗಳನ್ನು ನಮ್ರತೆಯಿಂದ ಮಾಡಬೇಕು. ನಿಮಗೆ ಸಮಾನರಾದವರಿಗೂ ಯೋಗ್ಯವಾದ ಮರ್ಯಾದೆಗಳನ್ನು ಮಾಡಬೇಕು. ಯಾರಾದರೂ ನಿಮಗೆ ನಮಸ್ಕಾರ ಮಾಡಿದರೆ ನೀವು ಉದ್ಧತರಾಗಿ ತಲೆಯೆತ್ತಿ ನಿಲ್ಲದೆ ನೀವು ಮಸ್ತಕವನ್ನು ತಗ್ಗಿಸಿ ನಮಸ್ಕಾರಮಾಡಬೇಕು.

ನಮ್ಮ ದೇಶದಲ್ಲಿ ಜಾತಿಯನ್ನು ಮಾತ್ರ ನೋಡಿ ಸನ್ಮಾನ ಮಾಡುವ ಸಂಪ್ರದಾಯವಿದೆ. ಈಶ್ವರ ಸೃಷ್ಟಿಯಲ್ಲಿ ಸನ್ಮಾನಕ್ಕೆ ಜಾತಿ ಮುಖ್ಯವಲ್ಲ, ಗುಣವೇ ಮುಖ್ಯವಾದದ್ದು. ಒಂದು ವೇಳೆ ನಿಮಗಿಂತ ದೊಡ್ಡ ಜಾತಿಯವನಲ್ಲಿ ಇಲ್ಲದೆ ಇರುವ ಸುಗುಣಗಳು ನಿಮಗಿಂತ ಸಣ್ಣ ಜಾತಿಯವನಲ್ಲಿ ಇರುತ್ತವೆ. ಅದ್ದರಿಂದ ನೀವು ಗುಣಾಢ್ಯರಿಗೆ ತಕ್ಕ ಸನ್ಮಾನವಮಾಡುವದು ಯುಕ್ತ. ನಿಮಗಿಂತ ವಯಸ್ಸಿನಲ್ಲಿ ಸಣ್ಣವರಾದಾಗ್ಯೂ ತಿಳುವಳಿಕೆಯಲ್ಲಿ ಹೆಚ್ಚಾಗಿದ್ದರೆ ಅವರನ್ನು ನಿಮಗಿಂತ ದೊಡ್ಡವರೆಂದೆಣಿಸಿ ಮರ್ಯಾದೆಯನ್ನು ಮಾಡಬೇಕು. ತಲೆ ನರತ ಮಾತ್ರದಿಂದಲೂ, ಧನದಿಂದಲೂ, ಮನುಷ್ಯನು ದೊಡ್ಡವನೆನಿಸಿ ಕೊಳ್ಳುವದಿಲ್ಲ. ಜ್ಞಾನದಲ್ಲಿ ಹೆಚ್ಚಿದವನೇ ದೊಡ್ಡವನು. ಕೆಲವರು ನಿಮಗೆ ನಮಸ್ಕಾರ ಮಾಡತಕ್ಕದ್ದು ನೀವು ಅವರಿಗೆ ಆಶೀರ್ವಾದವನ್ನು ಮಾಡತಕ್ಕದ್ದು ಸಹ ಸಂಪ್ರದಾಯವಾಗಿದೆ. ಅಂಥಾ ಸಂದರ್ಭದಲ್ಲಿ ನೀವು ಆಶೀರ್ವಾದ ಮಾಡಿದ ಮಾತ್ರದಿಂದ ಅವನಿಗೆ ಶ್ರೇಯಸ್ಸುಂಟಾಗುತ್ತೆಂದು ತಿಳಿದುಕೊಂಡು "ಧನಧಾನ್ಯ ಸಮೃದ್ಧಿರಸ್ತು" ಮುಂತಾದ ವಾಕ್ಯಗಳಿಂದ ಆಶೀರ್ವಾದವನ್ನು ಮಾಡಬಾರದು. ಬಹಳ ನಮ್ರರಾಗಿ ದೇವರು ತನ್ನ ಇಚ್ಛಾನುರೂಪವಾಗಿ ಈತನಿಗೆ ಒಳ್ಳೇದನ್ನು ಮಾಡಲಿ ಎಂದು ಪ್ರಾರ್ಥನೆ ಮಾಡಬೇಕು. ಒಳ್ಳೇದನ್ನು ಅಥವಾ ಕೆಟ್ಟದ್ದನ್ನು ಮಾಡುವ ಸಾಮರ್ಥ್ಯವು ನಿಮಗೆಲ್ಲಿನದು ?! ಅಪ್ರಕಾರ ಶಕ್ತಿ ಯಿದ್ದರೆ ನಿಮಗೆ ಯಾರ ಲಕ್ಷ್ಯವೂ ಇರುತ್ತಿರಲಿಲ್ಲ. ಇತರರಿಗೆ ಸುಖ ದುಃಖಗಳನ್ನು ಉಂಟುಮಾಡುವ ಸಾಮರ್ಥ್ಯವು ಮನುಷ್ಯನ ಕೈಲಿ ಇಲ್ಲದಿರುವದೇ ಉತ್ತಮವಾಗಿದೆ. ಹಾಗೆ ಶಾಪಾನುಗ್ರಹ ಶಕ್ತಿ ಇದ್ದರೆ ಪ್ರಪಂಚವು ಈಗಿರುವಂತೆ ಇರುತ್ತಿತ್ತೋ ಇಲ್ಲವೋ ? ಇದನ್ನು ಆಲೋಚಿಸುವದಕ್ಕೆ ಆಗುವದಿಲ್ಲ.

ಯಾರ ಸಂಗಡಲಾದರೂ ಮಾತನಾಡಬೇಕಾದರೆ ತ್ವರೆಪಡದೆ ಮಿತವಾಗಿಯೂ ಸಮಯೋಚಿತವಾಗಿಯೂ ಪ್ರಸನ್ನ ಮುಖರಾಗಿಯೂ ಮಾತನಾಡಬೇಕು. ಪೂರ್ವಾಪರವನ್ನು ಚನ್ನಾಗಿ ವಿಚಾರಮಾಡಿ ಸತ್ಯವಾದದ್ದನ್ನೇ ಆಡಬೇಕು. ಚಾಡಿ ಹೇಳಿದಂತೆ ಆಗುವ ಅಥವಾ ಇತರರಿಗೆ ಹಾನಿಯನ್ನು ಉಂಟುಮಾಡುವ ಮಾತುಗಳನ್ನು ಎಂದಿಗೂ ಆಡಬಾರದು.

ತನ್ನ ಮಾನಕ್ಕೂ ಇತರರ ಮಾನಕ್ಕೂ ಸತ್ಯಕ್ಕೂ ಕೊರತೆ ಬಾರದ ಮಾತುಗಳನ್ನೇ ಆಡಬೇಕು. ನಿಮ್ಮನ್ನು ಯಾರಾದರೂ ನೋಡುವದಕ್ಕೆ ಬಂದರೆ ತಕ್ಕ ಮರ್ಯಾದೆಯಿಂದ ಅವರನ್ನು ಕಂಡು ಕೂರಿಸಬೇಕು ನೀವು ಎತ್ತರವಾದ ಸ್ಥಳದಲ್ಲಿ ಕುಳಿತು ಅವರನ್ನು ಕೆಳಗೆ ಕೂರಿಸಬಾರದು. ಬಂದವರು ಕೂತುಕೊಂಡನಂತರ ಅವರ ಯೋಗಕ್ಷೇಮವನ್ನು ಕೇಳಬೇಕು. ಅವರು ನಿಮ್ಮ ಯೋಗಕ್ಷೇಮವನ್ನು ಕೇಳಿದರೆ ದೇವರ ದಯೆಯಿಂದ ಚನ್ನಾಗಿದ್ದೇನೆಂದು ಹೇಳಿ ಅನಂತರ ಇನ್ನೇನಾದರೂ ಮಾತನಾಡತಕ್ಕದ್ದು ಇದ್ದರೆ ಆಡಬೇಕು. ದೊಡ್ಡವರು ಬಂದರೆ ಅವರು ಕೂತುಕೊಳ್ಳುವ ಪರ್ಯಂತರವೂ ನಿಂತಿದ್ದು ಅನಂತರ ಒಂದು ಕಡೆಗೆ ಸರಿದು ಬೇರೆ ಪೀಠದಲ್ಲಿ ಅಥವಾ ನೆಲದಲ್ಲಿ ಕೂತುಕೊಳ್ಳಬೇಕು. ಅವರಿಗೆ ಕೇವಲ ಎದುರಾಗಿ ನಿಲ್ಲಬಾರದು, ಕೂತುಕೊಳ್ಳಲೂಬಾರದು, ಅವರನ್ನು ದೃಷ್ಟಿಸಿ ನೋಡಬಾರದು.

ಮಾತನಾಡುವದರಲ್ಲಿಯೂ ನಡೆಯುವದರಲ್ಲಿಯೂ ಕೂತುಕೊಳ್ಳುವದರಲ್ಲಿಯೂ ಗಾಂಭೀರ್ಯವಿರಬೇಕು. ಎರಡನೆಯವರು ಮಾತನಾಡಿಸದೆಯಿದ್ದರೆ ನೀವಾಗಿ ಮಾತನಾಡಬಾರದು. ಅವರು ಮಾತನಾಡಿಸಿದನಂತರ ಮಿತವಾಗಿಯೂ ಸಮಯೋಚಿತವಾಗಿಯೂ ಉತ್ತರವನ್ನು ಕೊಡಬೇಕು. ಯಾರಾದರೂ ಯಿರುವಾಗ ಅವರ ಎದುರಿಗೆ ಕ್ಯಾಕರಿಸಿ ಮನಸ್ಸು ಬಂದ ಕಡೆಗೆ ಉಗುಳಬಾರದು. ಉಗುಳ ಬೇಕಾದರೆ ಮರೆಯಾದ ಸ್ಥಳಕ್ಕೆ ಹೋಗಿ ಉಗುಳಬೇಕು. ಅವರ ಎದುರಿಗೆ ಬೆರಳ ಮುರಿದುಕೊಳ್ಳಬಾರದು. ಕೈಕಾಲುಗಳನ್ನು ಚಾಚಿಕೊಂಡು ಅಮರ್ಯಾದೆಯಿಂದ ಕೂಡಬಾರದು. ಹಿರಿಯರ ಅಥವಾ ಇತರರ ಮುಖದ ಸಮೀಪದಲ್ಲಿ ಮಾತನಾಡಬೇಕಾದಲ್ಲಿ ಅವರ ಮುಖದ ಮೇಲೆ ಉಗುಳಿನ ಬಿಂದು ಬೀಳದಂತೆ ಎಚ್ಚರದಿಂದ ಮಾತನಾಡಬೇಕು. ಹಿರಿಯರು ಅಪರಿಚಿತರಾದ ವಿದ್ವಾಂಸರು ಮುಂತಾದ ದೊಡ್ಡವರ ಸಂಗಡ ಮಾತನಾಡುವಲ್ಲಿ ತಾವು, ತಮ್ಮ, ಎಂದು ಬಹುವಚನ ಪ್ರಯೋಗವನ್ನು ಮಾಡಬೇಕು. ಅವರಿಗೆ ಆಜ್ಞಾಪಿಸುವಂತೆ ಮಾತನಾಡಬಾರದು. ನಿಮಗೆ ಯಾರಾದರೂ ಉಪಕಾರ ಮಾಡಿದರೆ ಅಥವಾ ಏನಾದರೂ ಸಹಾಯ ಮಾಡಿದರೆ ಅದಕ್ಕೋಸ್ಕರ ಕೃತಜ್ಞರಾಗಿರಬೇಕು.

ಯಾರ ಸಂಗಡಲೂ ವಕ್ರವಾದ ಮಾತುಗಳನ್ನಾಡಬಾರದು. ದಾರಿಯಲ್ಲಿ ಪುರುಷರ ಸಂಗಡಲೇ ಆಗಲಿ ಇತರರ ಸಂಗಡಲೇ ಆಗಲಿ ನಿಂತು ಮಾತನಾಡ ಬಾರದು. ಕಿಟಕಿಯಲ್ಲಿ ಅಥವಾ ಮನೆಯ ಬಾಗಿಲಲ್ಲಿ ನಿಂತು ಬೀದಿಯಲ್ಲಿ ನಡೆಯುವ ವಿನೋದವನ್ನು ನೋಡಬಾರದು. ಯಾರಾದರೂ ಇಬ್ಬರು ರಹಸ್ಯವಾಗಿ ಮಾತನಾಡುತ್ತಾ ಇದ್ದರೆ ಅವರು ಕರೆಯದೆ ಅವರ ಸಮೀಪಕ್ಕೆ ಹೋಗಬಾರದು ; ಮತ್ತು ಮರೆಯಾಗಿ ನಿಂತು ಅವರು ಆಡುವದನ್ನು ಕೇಳಲೂ ಬಾರದು. ದಾರಿಯಲ್ಲಿ ನಡೆಯುವಾಗ ಅತ್ತಿತ್ತ ನೋಡದೆ ಕೈಗ ಳನ್ನಲ್ಲಾಡಿಸದೆ ಓಡದೆ ಕಾಲಿನಲ್ಲಿ ಸದ್ದು ಮಾಡದೆ ನೆಟ್ಟಗೆ ದಾರಿಯನ್ನು ಹಿಡಿದು ನೆಲವನ್ನು ನೋಡುತ್ತಾ ಹೋಗಬೇಕು. ದಾರಿಯಲ್ಲಿ ನಡೆಯು ವಾಗಲೂ ಅಪರಿಚಿತರ ಮುಂದೆಯೂ ಸರ್ವಾಂಗವೂ ಮುಚ್ಚುವಂತೆ ವಸ್ತ್ರವನ್ನು ಧರಿಸಿಕೊಂಡಿರಬೇಕು.

ಪೂರ್ವದಲ್ಲಿ ಈ ದೇಶದಲ್ಲಿ ಕುಲೀನರಾದ ಸ್ತ್ರೀಯರು ಮೇಲೆ ಮತ್ತೊಂದು ವಸ್ತ್ರವನ್ನು ಹೊದ್ದುಕೊಳ್ಳುವ ಸಂಪ್ರದಾಯವಿತ್ತು. ಆದರೆ ಈಗ ಜನ ಸಮೂಹದಲ್ಲಿಯೂ ನೀರು ತರುವದಕ್ಕೆ ಹೋಗುವಾಗಲೂ ಅಡ್ಡ ಸೆರಗು ಕಟ್ಟಿಕೊಂಡು ನೆರಿಗೆಯನ್ನು ಮೇಲಕ್ಕೆ ಸಿಕ್ಕಿಸಿಕೊಂಡು ನಡೆಯು ತ್ತಾರೆ; ಮತ್ತು ಬಟ್ಟೆಯನ್ನು ಒಗೆಯುವದಕ್ಕೆ ತೊಡಗಿದಾಗ ಅವರಿಗೆ ಶರೀರದಮೇಲೆ ಪ್ರಜ್ಞೆ ಸಹ ಇರುವದಿಲ್ಲ. ಇದು ಕೇವಲಕೆಟ್ಟ ಸಂಪ್ರದಾಯ ವಾದ್ದರಿಂದ ಇದನ್ನು ಬಿಡಬೇಕು. ಕೊಳ, ಹೊಳೆ, ಕೆರೆ ಇವುಗಳಲ್ಲಿ ಸ್ನಾನ ಮಾಡುವಾಗ ಪುರುಷರು ಸಮೀಪದಲ್ಲಿದ್ದರೆ, ಮೈಯನ್ನು ತೆರದು ಸ್ನಾನ ಮಾಡಬಾರದು ; ಅಂಥಾ ಸ್ಥಲಗಳಲ್ಲಿ ಸೂರ್ಯೋದಯಕ್ಕಿಂತ ಮುಂಚೆ ಮಬ್ಬಿನಲ್ಲಿ ಮಾಡಬೇಕು ; ಇಲ್ಲವೆ ಮನೆಯಲ್ಲೇ ಮರೆಯಾದ ಸ್ಥಲದಲ್ಲಿ ಮಾಡುವದು ಉತ್ತಮ. ಗೊತ್ತಿಲ್ಲದ ಸ್ಥಲಕ್ಕೆ ಅಥವಾ ಪೇಟೆಗೆ ಹೋಗುವಾಗ ಒಬ್ಬರೇ ಹೋಗದೆ ತಮ್ಮ ಸಂಬಂಧಿಗಳನ್ನಾಗಲಿ ನಂಬಿಗೆಯುಳ್ಳ ಇತರ ರನ್ನಾಗಲಿ ಸಂಗಡ ಕರೆದುಕೊಂಡು ಹೋಗಬೇಕು. ಗೊತ್ತಿಲ್ಲದ ಸ್ಥಳಕ್ಕೆ ಅಥವಾ ಪರರ ಮನೆಗೆ ರಾತ್ರಿ ಕಾಲದಲ್ಲಿ ಹೋಗ ಬಾರದು. ಒಂದುವೇಳೆ ನಿರ್ವಾಹವಿಲ್ಲದೆ ಹೋಗಬೇಕಾಗಿ ಬಂದಲ್ಲಿ ಬಹಳ ಜಾಗರೂಕತೆಯಿಂದ

ಸಂಗಡ ಯಾರನ್ನಾದರೂ ಕರೆದುಕೊಂಡು ಹೋಗಬೇಕು. ಕುಲೀನರಾದ ಸ್ತ್ರೀಯರು ಅಸಭ್ಯವಾದ ನಾಟಕಗಳನ್ನು ಅಥವಾ ಇತರ ವಿನೋದಗಳನ್ನು ನೋಡುವದಕ್ಕೆ ಹೋಗ ಬಾರದು. ಅಂಥಾ ಸ್ಥಲದಲ್ಲಿ ಸೇರುವವರೆಲ್ಲರೂ ದೊಡ್ಡಮನುಷ್ಯರೇ ಆಗಿರುವದಿಲ್ಲ. ಆದ್ದರಿಂದ ಮರ್ಯಾದೆ ಉಳಿಯುವದಿಲ್ಲ. ಅಲ್ಲಿ ವಾಚ್ಯಾವಾಚ್ಯ ವಿಚಾರವಿಲ್ಲದಕಾರಣ ಅಂಥಾ ಸ್ಥಲಕ್ಕೆ ಹೋದ ಹೆಂಗಸರ ಪವಿತ್ರವಾದ ಮರ್ಯಾದೆಗೆ ಕಳಂಕ ಹತ್ತುವದೇನೂ ಆಶ್ಚರ್ಯವಲ್ಲ. ಅಶಿಕ್ಷಿತರಾದ ಕೆಲವು ಸ್ತ್ರೀಯರು ತಮ್ಮ ಮರ್ಯಾದೆ ಹೋಗುವದನ್ನು ಲಕ್ಷಿಸದೆ ಇಂಥಾ ವಿನೋದಗಳನ್ನು ನೋಡಬೇಕೆಂದು ಕ್ಷಣಿಕಸುಖದ ಆಸೆಯಿಂದ ಹೋಗಿ ತಮ್ಮ ಸ್ತ್ರೀಕುಲಕ್ಕೇ ಅಪಯಶಸ್ಸನ್ನು ತರುತ್ತಾರೆ. ಇದು ಬಹಳ ಲಜ್ಜಾಕರವಾದ ಕಾರ್ಯವಾಗಿದೆ. ಪುರಾಣಗಳನ್ನೂ ಹರಿ ಕಥೆಗಳನ್ನೂ ಕೇಳುವದಕ್ಕೆ ಹೆಂಗಸರು ಹಗಲೂ ರಾತ್ರಿ ಹೋಗುವ ವಾಡಿಕೆಯಿದೆ. ಅಲ್ಲಿ ಒಂದೊಂದು ವೇಳೆ ವೇಶ್ಯಾ ಸ್ತ್ರೀಯರ ಸಮೀಪದಲ್ಲಿ ಸಹ ಕೂತುಕೊಳ್ಳಬೇಕಾಗುತ್ತೆ. ಆ ಸ್ಥಲವು ಪತಿತಪಾವನವೆನ್ನಿಸಿ ಕೊಳ್ಳುವದ್ದರಿಂದ ಅಲ್ಲಿ ಒಳ್ಳೆಯವರು ಕೆಟ್ಟವರು ಗರತಿಯರು ಸೂಳೆಯರು ವಿಟರು ನಟರು ಮುಂತಾದ ಸರ್ವರ ಸಮಾವೇಶವಾಗುತ್ತೆ. ಅಲ್ಲಿಗೆ ಹೋಗಿ ಅವರಲ್ಲಿ ಬೆರೆಯದಿದ್ದರೆ ಆಗುವದಿಲ್ಲ. ಇಂಥಾ ಸ್ಥಲದಲ್ಲಿ ಅವಮಾನವೂಕೂಡ ಆಗುತ್ತೆ. ಅಲ್ಲಿಗೆ ಹೆಂಗಸರು ಬರುತ್ತಾರೆಂದು ತಿಳಿದು ಅನೇಕ ದುರ್ಜನರು ತಮ್ಮ ದುರ್ವೃತ್ತಿಯನ್ನು ನಡೆಸಲಿಕ್ಕೆ ಬರುತ್ತಾರೆ. ಇದೂ ಅಲ್ಲದೆ ಪುರಾಣ ಹೇಳುವವರಲ್ಲಿ ಹರಿಕಥೆ ಮಾಡುವವರಲ್ಲಿ ಸಹ ಕೆಲವರು ದುರಾಚಾರ ಉಳ್ಳವರಾಗಿರುತ್ತಾರೆ. ಅವರಲ್ಲಿ ಶಿಕ್ಷಿತರಾಗಿ ಜ್ಞಾನಿಗಳಾಗಿ ಇರುವವರು ಕೆಲವರು ಮಾತ್ರ. ಶಬ್ದ, ಸಮಾಸಚಕ್ರ, ನಾಲ್ಕು ಸರ್ಗ ರಘುವಂಶ, ಸ್ವಲ್ಪ ನೈಷಧ ಇಷ್ಟು ಓದಿಕೊಂಡು ಪುರಾಣಗಳನ್ನೂ ಹರಿಕಥೆಗಳನ್ನೂ ಹೇಳತಕ್ಕವರೇ ವಿಶೇಷ. ಇಂಥವರು, ಬದನೇಕಾಯಿ ತಿಂದರೆ ಸೂಜೀಮುಖ ನರಕ ಪ್ರಾಪ್ತಿಯೆಂದು ಹೇಳಿ ಮನಸ್ಸಿಗೆ ಬಂದಂತೆ ನಡೆಯುವವರಾಗಿರುತ್ತಾರೆ. ಪೌರಾಣಿಕರಲ್ಲಿ ಕೆಲವು ಮಹಾಪುರುಷರಿಗೆ ಸ್ತ್ರೀಯರನ್ನು ನೋಡಿದಕೂಡಲೇ ಆವೇಶ ಬಂದು ಸಪಂಚಾಧ್ಯಾಯಿ ಮುಂತಾದ

ಉಪಾಖ್ಯಾನಗಳಿಗೆ ಶಬ್ದಶಃ ಅರ್ಥ ಹೇಳುವದಕ್ಕೆ ಉಪಕ್ರಮಿಸುತ್ತಾರೆ. ಶಿವ ಸ್ತುತಿ, ಬ್ರಹ್ಮ ಸ್ತುತಿ, ವೇದಾಂತ ಪ್ರಕರಣ ಉದ್ಧವ ಭಗವತ್ಸಂವಾದ ಭಗವದ್ಗೀತೆ ಮುಂತಾದ ಪ್ರಮೇಯಗಳಲ್ಲಿ ಮಾತ್ರ ಅರ್ಥ ಹೇಳುವದಕ್ಕೆ ತಿಳಿಯದೆ ಕಣ್ಣುಮುಚ್ಚಿಕೊಳ್ಳುರಿ ಬ್ರಹ್ಮ ದೇವರು ವಿಷ್ಣುವಿನ ಸ್ತೋತ್ರ ಮಾಡುತ್ತಾರೆ ಎಂದು ಹೇಳಿ ಮುಗಿಸಿ ಬಿಡುತ್ತಾರೆ. ಇಂಥಾ ಸ್ವಭಾವವುಳ್ಳ ವರಿಂದ ಒಳ್ಳೇ ಉಪದೇಶ ದೊರಕುವದು ಹಾಗಿರಲಿ. ಜನರಲ್ಲಿ ಮೊದಲಿದ್ದ ಒಳ್ಳೇನಡತೆ ಸಹ ಕೆಟ್ಟು ಹೋಗುತ್ತೆ. ಎಲ್ಲಾ ಪೌರಾಣಿಕರೂ ಹರಿದಾಸ ರೆಲ್ಲರೂ ಹೀಗೆಯೇ ಇರುತ್ತಾರೆಂದು ನಾನು ಹೇಳುವದಿಲ್ಲ. ಸ್ತ್ರೀಯರು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಲೆಂದು ನಾನು ಈ ವಿಷಯ ವನ್ನು ಹೇಳಿದ್ದೇನೆ. ಸ್ತ್ರೀಯರು ಇಂಥಾ ಸ್ಥಲಗಳಿಗೆ ಹೋಗದೆ ತಾವು ಇದ್ದ ಕಡೆಯಲ್ಲಿಯೇ ಪುರಾಣಗಳನ್ನೂ ಇತಿಹಾಸಗಳನ್ನೂ ತಿಳಿದುಕೊಳ್ಳು ವದಕ್ಕೆ ಸ್ವಲ್ಪ ಶ್ರಮಪಟ್ಟು ಸಂಸ್ಕೃತವನ್ನು ಕಲಿತರೆ ಸಾಕು. ಭಾರತ ವರ್ಷದ ಸಮಸ್ತ ಧರ್ಮಗ್ರಂಥಗಳೂ ಸಂಸ್ಕೃತದಲ್ಲಿ ಇರುವದ್ದರಿಂದ ಈ ಭಾ ಷೆಯನ್ನು ಕಲಿಯಬೇಕಾದ್ದು ಆವಶ್ಯಕವಾಗಿದೆ. ಆ ಗ್ರಂಥಗಳನ್ನು ತಾವೇ ನೋಡಿಕೊಳ್ಳದೆ ಇತರರ ಮುಖದಿಂದ ಅವುಗಳ ಅಭಿಪ್ರಾಯವನ್ನು ಕೇಳಿದರೆ ತಮ್ಮ ಧರ್ಮಗಳು ತಮಗೆ ಚನ್ನಾಗಿ ತಿಳಿಯುವದಿಲ್ಲ. ಸ್ತ್ರೀಯರಿಗೆ ಧರ್ಮಗಳು ತಿಳಿಯದೆ ಇರುವದ್ದರಿಂದ ದೊಡ್ಡದೊಡ್ಡ ಅನರ್ಥಗಳು ನಡೆ ಯುತ್ತವೆ. ಧರ್ಮಶಾಸ್ತ್ರದ ಭಾಷೆ ಸರಳವಾಗಿಯೂ ಮಧುರವಾಗಿಯೂ ಸ್ವಲ್ಪ ಅಭ್ಯಾಸದಿಂದ ತಿಳಿಯಲಿಕ್ಕೆ ಅನುಕೂಲವಾಗಿಯೂ ಇದೆ.

ಒಂದುವೇಳೆ ಎಲ್ಲರೂ ಸಂಸ್ಕೃತವನ್ನು ಕಲಿಯದೆ ಇದ್ದಾಗ್ಯೂ ಕೆಲವರಾದರೂ ಕಲಿತರೆ ಸಾಕು. ಗಂಡಸರಿಂದ ಪುರಾಣವನ್ನು ಕೇಳುವದಕ್ಕಿಂತ ಹೆಂಗಸರಿಂದ ಕೇಳುವದರಲ್ಲಿ ಅನುಕೂಲ ಹೆಚ್ಚಾಗಿದೆ. ಆದ್ದರಿಂದ ನಮ್ಮ ಪುರಾತನ ಭಾಷೆಯನ್ನು ಕಲಿತು ನಮ್ಮ ಧರ್ಮಶಾಸ್ತ್ರವನ್ನು ತಿಳಿದು ಕೊಳ್ಳಬೇಕೆಂಬ ಆಶೆಯನ್ನು ಪೂರ್ಣಮಾಡಿಕೊಳ್ಳುವದು ಉತ್ತಮಪಕ್ಷ. ಇದು ಅಸಾಧ್ಯವಾದರೆ ಜ್ಞಾನಿಗಳಾಗಿಯೂ ಸುಶೀಲರಾಗಿಯೂ ವೃದ್ಧರಾ ಗಿಯೂ ಇರುವವರ ಕಡೆಯಿಂದ ತಮ್ಮಮನೆಯಲ್ಲಾಗಲಿ ಅದಕ್ಕೆಸರಿಯಾದ

ಇತರ ಸ್ಥಳಗಳಲ್ಲಾಗಲಿ ಪುರಾಣವನ್ನು ಕೇಳಬೇಕು. ಇದಕ್ಕೋಸ್ಕರ ಪೇಟೆಗೂ ಅಥವಾ ವೇಶ್ಯಾಸ್ತ್ರೀಯರು ಮುಂತಾದವರು ಸಹ ಬರುವದಕ್ಕೆ ಅಡ್ಡಿಯಿಲ್ಲದ ದೇವಾಲಯಗಳಿಗೂ ಹೋಗಬಾರದು. * *

ಇಂಥಾ ಅಮರ್ಯಾದೆಯ ಸ್ಥಳಗಳಿಗೆ ಕುಲಸ್ತ್ರೀಯರು ಹೋಗದೆ ಜ್ಞಾನಿಗಳಾಗಿಯೂ ಸಚ್ಚರಿತ್ರರಾಗಿಯೂ ಇರುವ ಜನರಲ್ಲಿ ಹೋಗಿ ತಮಗೆ ಹಿತಕರವಾದ ಉಪದೇಶವನ್ನು ಹೊಂದಬೇಕು. ಕೆಲವರು ಯಾರಿಂದಲಾದರು ಮಂತ್ರೋಪದೇಶವನ್ನು ತೆಗೆದುಕೊಳ್ಳುವದುಂಟು. ಇಂಥಾ ಸಂಗತಿಗಳಲ್ಲಿ ಆ ಉಪದೇಶವನ್ನು ಕೊಡುವ ಗುರುಗಳ ಶೀಲಗಳನ್ನು ಚನ್ನಾಗಿತಿಳಿದಿರುವದಿಲ್ಲ. ಒಂದುವೇಳೆ ಅವರು ಮನಸ್ಸು ಬಂದಂತೆ ನಡೆದಾಗ್ಯೂ ಗುರುಗಳ ದೋಷವನ್ನು ಹೊರಗೆ ಹಾಕಿದರೆ ನರಕಪ್ರಾಪ್ತಿ ಆಗುತ್ತೆಂದು ಮುಗ್ಧರಾದ ಸ್ತ್ರೀಯರು ಎಣಿಸಿರುತ್ತಾರೆ. ಇದರಿಂದಲೂ ಅನರ್ಥಗಳಾಗುತ್ತವೆ. * *

ಇದಲ್ಲದೆ ಗೊತ್ತು ಗುರಿಯಿಲ್ಲದ ಯಾರನ್ನಾದರೂ ಗುರುವನ್ನಾಗಿ ಮಾಡಿಕೊಳ್ಳಬೇಕೆಂದು ಹಿಂದೂ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಹೇಳಿಲ್ಲ. ಅದರಲ್ಲಿ ಹೆಂಗಸರಿಗೆ ತಂದೆ, ತಾಯಿ, ಅಣ್ಣ, ಮಾವ ಇವರೇ ಗುರುಗಳೆಂದು ಹೇಳಿದೆ. ವಿಚಾರಮಾಡಿದರೆ ಇವರನ್ನು ಮಾತ್ರವಲ್ಲ, ಜ್ಞಾನೋಪದೇಶ ಮಾಡುವವರನ್ನೂ ವಿದ್ಯಾಗುರುಗಳನ್ನೂ ಗುರುವೆಂದೆಣಿಸಬೇಕು. * *

ನೀವು ಒಳ್ಳೆಯವರ ಸಹವಾಸವನ್ನೂ ಅವರ ಸಂಗಡ ಸ್ನೇಹವನ್ನೂ ಮಾಡಿರಿ. ಹಗಲೆಲ್ಲಾ ನೆರೆಹೊರೆ ಹೆಂಗಸರಲ್ಲಿ ಹೋಗಿ ಪಾಲುವಾರಿಕೆಯಿಂದ ಕಾಲುಮೇಲೆ ಕಾಲುಹಾಕಿಕೊಂಡು, ರುದ್ರಬತ್ತಿ, ವಿಷ್ಣುಬತ್ತಿ ಮುಂತಾದ್ದನ್ನು ಮಾಡುತ್ತಾ, ಈಕೆಯ ಗಂಡ ಹೀಗೆ, ಆಕೆಯ ಕಾಲುಸೊಟ್ಟು, ಈಕೆಯ ಮೂಗು ಡೊಂಕು, ತನ್ನ ಅತ್ತೆ ಬಹಳ ಜಗಳಗಂಟಿ, ಮುಂತಾದ ದೂಷಣೆಗಳಿಂದ ಹೊತ್ತುಕಳೆಯಬಾರದು. ಪರಸ್ಪರಸ್ನೇಹ ಬೆಳೆಸುವದೂ ಮತ್ತು ಸಮಯ ಬಂದಾಗ ಒಬ್ಬರಿಗೊಬ್ಬರು ಸಹಾಯ ಮಾಡುವದೂ ಯುಕ್ತ. ನಿಮ್ಮ ನಿತ್ಯಗಟ್ಲೆಯ ಕೆಲಸವಾದನಂತರ ಅವಕಾಶ ಸಿಕ್ಕಿದ ವೇಳೆಯಲ್ಲಿ ನಿಮ್ಮ ಮನಸ್ಸನ್ನು ಒಳ್ಳೇ ಕಡೆಗೆ ವಿನಿಯೋಗಮಾಡದೆ ಗೊಡ್ಡು

ಹರಟೆ ಹೊಡೆಯುವದು ಬಹಳಕೆಟ್ಟದ್ದು. ಇವರ ಸ್ವಭಾವ ಇಂಥಾದ್ದೆಂದು ತಿಳಿಯದೆ, ಯಾರ ಸಂಗಡಲಾದರೂ ಕೇವಲ ಕೂಡಿನಡೆದರೆ ಅವರ ದುರ್ಗುಣ ನಿಮಗೆ ಬರುತ್ತೆ. ಇತರರ ಒಳ್ಳೇಗುಣ ಮಾತ್ರ ಬರುವದು ಶ್ರಮ. ಪರಂತು ಅವರ ದುರ್ಗುಣಗಳುಮಾತ್ರ ವಿಷೂಚಿಕಾದಿ ಸಾಂಕ್ರಾಮಿಕರೋಗಗಳಂತೆ ಬಹುಬೇಗ ಬಂದು ನಿವಾರಿಸಲಸಾಧ್ಯವಾಗಿ ಅದರ ದೆಸೆಯಿಂದ ಉಂಟಾಗುವ ಯಾತನೆಯನ್ನು ಜನ್ಮವಿರುವ ಪರ್ಯಂತವೂ ಅನುಭವಿಸ ಬೇಕಾಗಿಬರುತ್ತೆ. ಆದ್ದರಿಂದ ಇಂಥಾ ದುಸ್ಸಹವಾಸವನ್ನು ಎಂದಿಗೂ ಮಾಡಬಾರದು. ಒಳ್ಳೇ ಮನುಷ್ಯನು ದುಸ್ಸಹವಾಸದಲ್ಲಿ ಬಿದ್ದ ಕೂಡಲೇ ಅವನನ್ನು ಜನರು ನಿಂದಿಸಿ ಅವನ ಸಂಗಡ ಮಾತನಾಡುವದಕ್ಕೆ ಸಹಾ ನಾಚಿಕೆಪಟ್ಟುಕೊಳ್ಳುತ್ತಾರೆ. ದುಸ್ಸಹವಾಸದಿಂದ ತಮ್ಮ ಸ್ವಭಾವ ಕೆಡುವದಿಲ್ಲವೆಂಬ ನಿಶ್ಚಯವು ಒಂದು ವೇಳೆ ತಮಗಿದ್ದಾಗ್ಯೂ ಅಂಥಾ ಸಂಗತಿಯ ನೆರಳಿನ ಸಮೀಪಕ್ಕೂ ಹೋಗಬಾರದು. ಜಾಲೀಗಿಡದ ಅಡವಿಯಲ್ಲಿ ಬಂದುಗಂಧದ ಮರವಿದ್ದರೆ, ಅಲ್ಲಿಕಾಡು ಕಿಚ್ಚು ಬಿದ್ದಾಗ ಅದು ಒಳ್ಳೇ ಮರವೆಂದು ಅದನ್ನು ಸುಡದೇ ಇರುವದಿಲ್ಲ. ಮುಳ್ಳುಗಿಡದ ಸಂಗಡ ಇದೂ ಸುಟ್ಟೇ ಹೋಗುತ್ತದೆ. ದುಸ್ಸಹವಾಸದಿಂದ ಒಳ್ಳೆಯವರೂ ಕೆಟ್ಟುಹೋಗುತ್ತಾರೆ. ಕೆಟ್ಟಮೇಲೆ ಒಳ್ಳೆಯವರಾಗುವದಿಲ್ಲ. ಹಾಗೆಯೇ ನಿಮ್ಮ ಸ್ವಭಾವವು ಕೆಟ್ಟ ಸಹವಾಸದಿಂದ ಒಂದುಸಲ ಕೆಟ್ಟು ಹೋದರೆ ತಿರುಗಿ ತಿದ್ದಲಿಕ್ಕೆ ಬಹುಪ್ರಯಾಸವಾಗುತ್ತೆ. ನಿರ್ಮಲವಾದ ನೀರಿನಲ್ಲಿ ಕೆಸರು ಬೆರಸಿ ಹೊಲಸು ಮಾಡುವದು ಸುಲಭ. ಪರಂತು ಬಗ್ಗಡವಾಗಿರುವ ನೀರನ್ನು ತಿಳಿಮಾಡಲಿಕ್ಕೆ ಬಹಳ ಶ್ರಮಪಡಬೇಕಾಗುತ್ತೆ. ಯಾರ ಸಂಗಡಲೂ ಅತಿ ಸ್ನೇಹವನ್ನು ಮಾಡಬಾರದು. ಮಿತವಾಗಿ ಇದ್ದರೆ ಜಗಳ ಮುಂತಾದ್ದು ಬಾರದೆ ಮರ್ಯಾದೆ ಉಳಿಯುತ್ತೆ. ಆದರೆ ಒಬ್ಬರಿಗೊಬ್ಬರು ಪ್ರೀತಿಯಿಲ್ಲದೆ ಇರಬೇಕೆಂದಲ್ಲ, ಪರಸ್ಪರ ಪ್ರೀತಿಯಿಂದಿದ್ದು ಮತ್ತೊಬ್ಬರ ಸುಖದುಃಖಕ್ಕೆ ಭಾಗಿಗಳಾಗಿರುವದು ಮನುಷ್ಯರಿಗೆ ಅವಶ್ಯಕರ್ತವ್ಯವಾಗಿದೆ.

ಮುಖ್ಯವಾಗಿ ತಮ್ಮ ಮತ್ತು ಇತರರ ಮರ್ಯಾದೆಗೆ ಭಂಗಬಾರದೆ, ಪರಸ್ಪರ ಪ್ರೀತಿಬೆಳೆದು, ಪಶ್ಚಾತ್ತಾಪವೂ, ದುಃಖವೂ, ನಿಂದೆಯೂ ಇಲ್ಲದೆ ಬಾಳುವದಕ್ಕೆ ಎಲ್ಲರೂ ಸದಾಚರಣೆಯಿಂದಿರುವದಕ್ಕೆ ಯತ್ನ ಮಾಡಬೇಕು.

೪ನೇ ಪರಿಚ್ಛೇದ.

ಧರ್ಮವು.

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ ॥

ಜಗತ್ತಿನಲ್ಲಿ ಮನುಷ್ಯನು ಆಚರಿಸಬೇಕಾದ ಆಚಾರಗಳಲ್ಲಿ ಧರ್ಮವು ಮುಖ್ಯವಾದದ್ದು. ಇದೇ ಸಮಸ್ತ ವಿಷಯಗಳಿಗೂ ಮೂಲಾಧಾರವಾಗಿರುತ್ತೆ. ಭೂಮಿಯನ್ನು ಬಿಟ್ಟು ಆಕಾಶದಲ್ಲಿ ಮನೆಯನ್ನು ಕಟ್ಟುವದಕ್ಕೆ ಪ್ರಯತ್ನಪಟ್ಟರೆ ಯಾರಿಂದಲಾದರೂ ಆದೀತೆ ? ಬೇರಿನ ಆಧಾರ ಬಲವಾಗಿ ಇಲ್ಲದಿದ್ದರೆ ಯಾವಗಿಡವೂ ನಿಲ್ಲುವದಿಲ್ಲ. ಇದರಂತೆಯೇ ಸಂಸಾರದಲ್ಲಿ ಧರ್ಮವನ್ನು ಬಿಟ್ಟು ನಡೆಯುವವನು ಬಾಳುವದಿಲ್ಲ; ಅವನು ಹಿಡಿದ ಕೆಲಸವೂ ನಡೆಯುವದಿಲ್ಲ. ಒಂದುವೇಳೆ ಸ್ವಲ್ಪ ನಡೆದಾಗ್ಯೂ ಆಕಾಶಕ್ಕೆ ಎಸೆದ ಮಣ್ಣಿನಹೆಂಟೆ ನೆಲಕ್ಕೆಬಿದ್ದು ನಿರ್ನಾಮನಾಗುವಂತೆ ಅದರ ಹೆಸರು ಕೂಡಾ ಇಲ್ಲದಂತಾಗುವದು. ಪ್ರಪಂಚದಲ್ಲಿ ನಾಗರಿಕರಿಗೂ ನಾಗರಿಕರಲ್ಲದೆ ಇರುವವರಿಗೂ ಯಾವದಾದರೂ ಒಂದು ಧರ್ಮ ಇದ್ದೇ ಇರುತ್ತದೆ. ಆ ಧರ್ಮದ ಸಹಾಯದಿಂದ ಸುಖಪಡುತ್ತಾರೆ. ಮನುಷ್ಯನ ಉಚ್ಛೃಂಖಲವಾದ ಮನಸ್ಸನ್ನು ಸನ್ಮಾರ್ಗಕ್ಕೆ ಹತ್ತಿಸುವದಕ್ಕೆ ಧರ್ಮದ ಭಯಕ್ಕೆ ಸಮಾನವಾದ ಇತರ ಭಯ ಯಾವದೂಯಿಲ್ಲ. ನೆರೆಹೊರೆಯವರಿಂದಾಗಲಿ ರಾಜನಿಂದಾಗಲಿ ಇಷ್ಟು ಭಯಃವಿರುವದಿಲ್ಲ. ಮನುಷ್ಯನಿಗೆ ಈ ಧರ್ಮದ ಭಯವಿಲ್ಲದೆ ಇದ್ದರೆ ಅವನಿಂದ ಜಗತ್ತಿನಲ್ಲಿ ಶಾಂತಿಯು ನಿಲ್ಲದೆ ಸ್ವರ್ಗಸಮಾನ ವಾಗಿಯೂ ಸುಖಪ್ರದ ವಾಗಿಯೂ ಇರುವ ಭೂಮಂಡಲವು ಶ್ಮಶಾನದಂತೆ ಭಯಂಕರವಾಗಿ ಇರುತ್ತಿತ್ತು. ಜನರಿಗೆ ಧರ್ಮದ ಭಯವಿಲ್ಲದೆ ಹೋದರೆ ಒಬ್ಬರನ್ನೊಬ್ಬರು ಹೊಡೆದು ಸುಲಿದು ಬಿಡುತ್ತಿದ್ದರು. ಲೋಕದಲ್ಲಿ ಈ ರೀತಿ ಆಗಬಾರದೆಂದು ಧರ್ಮದ ಭಯವನ್ನು ಎಲ್ಲರ ಮನಸ್ಸಿನಲ್ಲಿಯೂ ಬಲವಾಗಿರುವಂತೆ ದೇವರೇ ಮಾಡಿದ್ದಾನೆ. ಆದ್ದರಿಂದ ಎಂಥಾ ದುರ್ಬುದ್ಧಿಯುಳ್ಳವನಾದಾಗ್ಯೂ ಧರ್ಮದ ಹೆಸರನ್ನು ಎತ್ತಿದ ಕೂಡಲೇ

ಸಲ್ಪ ಹೆದರುತ್ತಾನೆ. ಇದರಿಂದ ಅವನು ಹಿಂದೆಮಾಡಿದ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಮುಂದೆ ಪಾಪಮಾಡುವದನ್ನು ಬಿಡುತ್ತಾನೆ. ಹೀಗೆ ಜಗತ್ತಿನಲ್ಲಿ ಉಪದ್ರವಗಳು ಕಡಮೆಯಾಗಿ ಎಲ್ಲರೂ ಸುರಕ್ಷಿತರಾಗಿರುತ್ತಾರೆ. ಜಗತ್ತನ್ನು ಸಂರಕ್ಷಣೆ ಮಾಡುವ ದೊಡ್ಡಗುಣವು ಧರ್ಮದಲ್ಲಿ ಇರುವದ್ದ ರಿಂದಲೇ ಧರ್ಮಕ್ಕೆ ಧರಿಸುವಂಥಾದ್ದು ಅಥವಾ ಹಿಡಿಯುವಂಥಾದ್ದು ಎಂದು ಹೆಸರುಬಂದಿದೆ. ಈ ಧರ್ಮವನ್ನು ಸರ್ವರೂ ತಿಳಿದುಕೊಂಡು ಅದಕ್ಕ ನುಸಾರವಾಗಿ ನಡೆಯತಕ್ಕದ್ದು ಅವಶ್ಯಕವಾಗಿದೆ. ಧರ್ಮಕ್ಕೆ ಬಹಳ ಪೂಜ್ಯತೆ ಇರುವದ್ದರಿಂದ ಮೇಲೆ ಧರ್ಮದ ವೇಷವನ್ನು ಹಾಕಿಕೊಂಡವ ರಿಗೂ ಲೋಕದಲ್ಲಿ ಮಾನ ಮರ್ಯಾದೆಗಳು ಆಗುತ್ತವೆ. ಧರ್ಮವು ಸರ್ವರಿಗೂ ಹಿತವನ್ನು ಮಾಡುವದ್ದರಿಂದ ಇದಕ್ಕೆ ಇಷ್ಟು ಪೂಜ್ಯತೆ ಇರು ವದು ನ್ಯಾಯವೇಸರಿ.

ಏಕಏವ ಸುಹೃದ್ಧರ್ಮೋ ನಿಧನೇಪ್ಯನುಯಾತಿಯಃ ।
ಶರೀರೇಣ ಸಮಂ ನಾಶಂ ಸರ್ವ ಮನ್ಯತ್ತು ಗಚ್ಛತಿ ॥

ಮರಣದಲ್ಲಿಯೂ ಮನುಷ್ಯನ ಸಂಗಡ ಹೋಗುವ ಧರ್ಮವೊಂದೆ ನಿಜವಾದ ಮಿತ್ರನೆಂದೆಣಿಸಬೇಕು. ಉಳಿದವುಗಳೆಲ್ಲಾ ಶರೀರದ ಜೊತೆಯಲ್ಲಿ ನಾಶವನ್ನು ಹಡೆಯುತ್ತವೆ.

ಒಳ್ಳೇದಾಗಲಿ ಕೆಟ್ಟದ್ದಾಗಲಿ ತಾನು ಮಾಡಿದ್ದು ಮಾತ್ರ ಸಂಗಡ ಹೋಗುತ್ತದೆ. ಮಿಕ್ಕ ಹಣ, ಸ್ವಜನ ಮುಂತಾದವರು ಅವನ ಸಂಗಡ ಹೋಗುವದಿಲ್ಲ. ಮನುಷ್ಯನು ಯಾವ ಶರೀರದಲ್ಲಿ "ನಾನು" ಎಂಬ ಅಭಿಮಾನವನ್ನು ಇಟ್ಟುಕೊಂಡು ಅದರ ಪೋಷಣೆಗಾಗಿ ರಾಕ್ಷಸನಂತೆ ಕ್ರೂರ ವಾದ ಕೆಲಸಗಳನ್ನು ಮಾಡುವದಕ್ಕೆ ಹಿಂತೆಗೆಯುವದಿಲ್ಲವೋ ಆ ಶರೀರವು ಕೂಡಾ ಅವನ ಸಂಗಡ ಹೋಗುವದಿಲ್ಲ. ಆದ್ದರಿಂದ ಮರಣಕಾಲದಲ್ಲಿ ಶಾಂತಿಯನ್ನು ಉಂಟುಮಾಡುವ ಧರ್ಮವನ್ನು ತನಗೆ ಸ್ನೇಹಿತನನ್ನಾಗಿ ಮಾಡಿ ಕೊಳ್ಳಬೇಕು. ಸಾಧಾರಣವಾಗಿ ಮನುಷ್ಯರಿಗೆ ಮರಣದಂಥಾ ಭಯಂಕರ ವಾದ ವಿಷಯ ಇನ್ನೊಂದಿಲ್ಲ. ಮರಣದ ನೆನಪು ಬಂದ ಕೂಡಲೇ ಮೈಮೇಲೆ

ರೋಮಾಂಚ ಉಂಟಾಗುತ್ತೆ. ಇಂಥಾ ಕಷ್ಟದ ಸಮಯದಲ್ಲಿ ಧಾರ್ಮಿಕ ನಾದ ಮನುಷ್ಯನಿಗೆ ಸಹಾಯ ಮಾಡಲಿಕ್ಕೆ ಧರ್ಮವು ಸಿದ್ಧವಾಗಿರುತ್ತದೆ. ಆದ್ದರಿಂದ ಧಾರ್ಮಿಕನಾದವನಿಗೆ ಮರಣದ ಭಯವೂ ಯಿರುವದಿಲ್ಲ. ಅವ ನಿಗೆ ಮರಣದ ನೆನಪು ಬಂದರೆ ಒಂದು ವಿಧವಾದ ಉಲ್ಲಾಸವಾಗುತ್ತೆ.

ಸದಸದ್ವಿವೇಕವೂ ತದನುಸಾರವಾದ ಆಚರಣೆಯೂ ಧರ್ಮವೆನಿಸಿ ಕೊಳ್ಳುತ್ತೆ. ಧರ್ಮಸ್ವರೂಪ ನಿರೂಪಣವು ಎಲ್ಲಾ ಮತಗಳಲ್ಲಿಯೂ ಒಂದೇ ವಿಧವಾಗಿದೆ. ಆಯಾಯಾಮತಗಳ ವಿಚಾರವು ನನಗೆ ಇಲ್ಲಿ ಬೇಕಿಲ್ಲ. ಪ್ರಪಂಚದ ಸಮಸ್ತ ಮತಗಳಿಗೂ ಮೂಲಾಧಾರವಾದ ಸದಸದ್ವಿಚಾರವೇ ನನಗೆ ಈಗ್ಗೆ ಅವಶ್ಯಕವಾಗಿದೆ. ಅದನ್ನು ಈಗ ನಾನು ವಿವರಿಸುತ್ತೇನೆ.

ಧರ್ಮಕ್ಕೆ ೧೦ ಲಕ್ಷಣಗಳು ಉಂಟೆಂದು ಹೇಳಿ ಇದ್ದಾರೆ. ಅವು ಯಾವವೆಂದರೆ:—೧ ಧೃತಿ (ಅಂದರೆ ಧೈರ್ಯ). ೨ ಕ್ಷಮಾ. ೩ ದಮ (ಅಂದರೆ ಮನೋನಿಗ್ರಹ). ೪ ಅಸ್ತೇಯ (ಕಳವು ಮಾಡದೆಯಿರುವದು). ೫ ಶೌಚ (ಶುಚಿಯಾಗಿರುವದು). ೬ ಇಂದ್ರಿಯ ನಿಗ್ರಹವು. ೭ ಧೀ (ಅಂದರೆ ಧರ್ಮವಿಷಯಕವಾದ ಬುದ್ಧಿಯು). ೮ ವಿದ್ಯಾ (ಅಂದರೆ ಪರಮೇಶ್ವರನ ವಿಷಯಕವಾದ ಜ್ಞಾನ). ೯ ಸತ್ಯ. ೧೦ ಅಕ್ರೋಧ (ಅಂದರೆ ಸಿಟ್ಟು, ಈರ್ಷೆ, ಪರರನ್ನು ಪೀಡಿಸಬೇಕೆಂಬ ಅಪೇಕ್ಷೆ, ದ್ವೇಷ ಮುಂತಾದವುಗಳಿಲ್ಲದೆ ಇರುವದು).

೧. ಧೃತಿ.—ಧೈರ್ಯವು ಮನುಷ್ಯನ ಹೃದಯದಲ್ಲಿ ಸರ್ವಕಾಲದಲ್ಲಿಯೂ ಇರಬೇಕು. ಸಿಂಹ, ಹುಲಿ ಮೊದಲಾದವುಗಳ ಸಮಾಗಮವಾದಾಗಲೂ ಶತ್ರುಗಳ ಸಂಗಡ ರಣದಲ್ಲಿ ಯುದ್ಧ ಮಾಡಬೇಕಾದಾಗಲೂ ಅವಶ್ಯಕವಾಗಿ ಇರಬೇಕಾದ ಗುಣಕ್ಕೂ ಧೈರ್ಯವೆಂದು ಹೆಸರುಂಟು. ಆದರೆ ಅದು ಧೈರ್ಯವೆಂಬ ಶಬ್ದದ ಗೌಣವಾದ ಅರ್ಥವು. ಧರ್ಮಸಂಬಂಧವಾದ ಧೈರ್ಯವೇ ಧೈರ್ಯದ ಮುಖ್ಯಾರ್ಥವಾಗಿದೆ. ಹೊರಗಿನ ಶತ್ರುಗಳ ಸಂಗಡ ನಿರ್ಭಯವಾಗಿ ಪರಾಕ್ರಮದಿಂದ ಯುದ್ಧವನ್ನು ಮಾಡುವವರು ಬಹು ಜನರಿದ್ದಾರೆ. ಪರಂತು ಮನಸ್ಸಿನಲ್ಲಿ ಸರ್ವಕಾಲದಲ್ಲಿ

ಯೂ ನಿಂತಿರುವ ಕಾಮ ಕ್ರೋಧ ಮೊದಲಾದ ಶತ್ರುಗಳ ಸಂಗಡ "ನಾನು ಧರ್ಮಕ್ಕೆ ವಿರುದ್ಧವಾದ ಕೆಲಸ ಮಾಡುವದಿಲ್ಲವೆಂದು" ನಿಶ್ಚಯಿಸಿ ಯುದ್ಧ ಮಾಡುವ ಧೈರ್ಯಶಾಲಿಗಳು ಬಹಳ ಅಪುರೂಪ. ಮನುಷ್ಯರ ಮನಸ್ಸಿನ ಮೇಲೆ ಅಧಿಕಾರವನ್ನು ನಡೆಸುವ ಕಾಮ ಕ್ರೋಧಾದಿಗಳು ಬಹು ಬಲಿಷ್ಠವಾದವುಗಳು. ಅವುಗಳ ಮೇಲೆ ದೊಡ್ಡದೊಡ್ಡವರ ಸಾಹಸವು ಕೂಡಾ ನಡೆಯುವದಿಲ್ಲ. ಎಂಥಾ ಧಾರ್ಮಿಕನಾಗಲಿ ಜ್ಞಾನಿಯಾಗಲಿ ಲೋಭ ಮುಂತಾದವುಗಳ ಬಲೆಗೆ ಸಿಕ್ಕದೆ ಇದ್ದರೆ ಪರಿಣಾಮವಾಗುತ್ತೆ. ಬಂದುಸಾರಿ ಆ ಬಲೆಗೆ ಸಿಕ್ಕಿದನಂತರ ಹೊರಗೆ ಹೊರಡುವದು ಪ್ರಯಾಸವಾಗುತ್ತೆ. ಅದ್ದರಿಂದ ಧರ್ಮವಿರುದ್ಧವಾಗಿ ನಡೆಯದಂತೆ ನಿಶ್ಚಯಿಸುವ ಧೈರ್ಯವೇ ನಿಜವಾದ ಧೈರ್ಯವೆಂದು ತಿಳಿಯಬೇಕು. ಹೀಗೆ ದೊಡ್ಡದಾದ ಮತ್ತು ಸರ್ವಕಾರ್ಯಸಿದ್ಧಿಗೂ ಅನುಕೂಲವಾದ ಧೈರ್ಯವನ್ನು ನೀವು ಸಂಪಾದಿಸಬೇಕು. ನಿಮ್ಮ ಧರ್ಮವನ್ನು ನಾಶಮಾಡುವದಕ್ಕೆ ಸಾವಿರಾರು ವ್ಯಾಮೋಹದ ವಿಷಯಗಳು ನಿಮ್ಮ ಸಮೀಪಕ್ಕೆ ಬರುತ್ತವೆ. ಇವುಗಳನ್ನು ಕಣ್ಣೆತ್ತಿನೋಡದೆ ನಿಮ್ಮ ಧರ್ಮ ಮಾರ್ಗದಲ್ಲಿ ನೀವು ನಡೆಯಬೇಕು. ನಿಮ್ಮ ಧರ್ಮ ಮಾರ್ಗಕ್ಕೆ ವಿಘ್ನವಾಗಿ ಬರುವ ಕಾಮ ಕ್ರೋಧ ಮುಂತಾದವುಗಳ ಸಂಗಡ ನೀವು ಯುದ್ಧಮಾಡಿ ಗೆದ್ದರೆ ನೀವು ಎಲ್ಲವನ್ನೂ ಗೆದ್ದಂತೆ ಆಗುವದು. ಜಗತ್ತಿನಲ್ಲಿ ಈ ಶತ್ರುಗಳನ್ನು ಗೆದ್ದವನೇ ಶೂರನು; ಇಂಥಾ ಶೂರನಿಗೇ ಪೂಜ್ಯತೆಯುಂಟು.

೨. ಕ್ಷಮಾ.—ಕ್ಷಮೆ ಎಂಬ ಗುಣಕ್ಕೆ ಬೆಲೆಯೇ ಯಿಲ್ಲ. ಕ್ಷಮಾ ಬಲವುಳ್ಳವರಿಗೆ ಪ್ರಾಯೇಣ ಶತ್ರುಗಳೇ ಇರುವದಿಲ್ಲ. ಕ್ಷಮೆ ಯಿಲ್ಲದಿದ್ದರೆ ಜನರಲ್ಲಿ ಪರಸ್ಪರ ವೈರ ಹುಟ್ಟುತ್ತದೆ. ನಮಗೆ ಯಾರಾದರೂ ಅಪಕಾರ ಮಾಡಿದರೆ ನಾವು ಅದನ್ನು ಎಣಿಸದೆ ಕ್ಷಮಿಸಿದರೆ ನಮ್ಮ ಮನಸ್ಸಿಗೆ ಉಂಟಾಗುವ ಸುಖವಿಂಥಾದ್ದೆಂದು ಹೇಳಲಿಕ್ಕೆ ಆಗುವದಿಲ್ಲ; ಕ್ಷಮಾ ಬಲ ವುಳ್ಳವರನ್ನು ದುರ್ಜನರು ಏನು ಮಾಡಬಲ್ಲರು? ಅವರ ವಿಷಯದಲ್ಲಿ, ತಮ್ಮಷ್ಟಕ್ಕೆ ತಾವೇ ನಾಚಿಕೊಂಡು ಸುಮ್ಮನಿರುತ್ತಾರೆ. ಕ್ಷಮೆ ಮಾಡು ವವನು ಮನಸ್ಸಿನ ಶಾಂತಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರನಾಗು

ತ್ತಾನೆ. ಕ್ಷಮಿಸಲ್ಪಟ್ಟವನು ಕ್ಷಮಿಸಿದವನ ಒಳ್ಳೇತನವನ್ನು ನೋಡಿ ಒಂದಲ್ಲದಿದ್ದರೆ ಮತ್ತೊಂದು ವೇಳೆಯಲ್ಲಿ ತನ್ನ ಕೆಟ್ಟಕೆಲಸಕ್ಕಾಗಿ ಪಶ್ಚಾತ್ತಾಪಪಟ್ಟು ಅದನ್ನು ಬಿಟ್ಟುಬಿಡುತ್ತಾನೆ. ಈ ಪ್ರಕಾರ ಲೋಕದಲ್ಲಿ ಬಹಳ ಅನರ್ಥಗಳು ನಡೆಯುವದು ನಿಂತು ಹೋಗುತ್ತೆ. ಆದಕಾರಣ ತಮಗೂ ಪರರಿಗೂ ಹಿತಕಾರಿಯಾದ ಕ್ಷಮಾ ಗುಣವು ನಿಮ್ಮಲ್ಲಿ ಸರ್ವಕಾಲದಲ್ಲಿಯೂ ಇರಬೇಕು. ಯಾರಾದರೂ ನಿಮಗೆ ಅಪಕಾರವನ್ನು ಮಾಡಿದರೆ ಅವರ ಮೇಲೆ ನಿಮ್ಮ ಹಗೆಯನ್ನು ತೀರಿಸಿಕೊಳ್ಳಬೇಕೆಂಬ ಅಪೇಕ್ಷೆ ಸರ್ವಥಾ ಇರಬಾರದು. ಒಬ್ಬನಿಗೆ ಮತ್ತೊಬ್ಬನು ಕೆಟ್ಟದ್ದನ್ನಾಗಲಿ ಒಳ್ಳೇದನ್ನಾಗಲಿ ಮಾಡಲಾರನು, ಆದರೇ ನಿಮಿತ್ತಮಾತ್ರನಾಗುತ್ತಾನೆ. ಈಶ್ವರ ನಿಬಂಧನೆ ಪ್ರಕಾರ ಆಗತಕ್ಕದ್ದು ಆಗೇ ಆಗುವದು. ತಮ್ಮ ಇಷ್ಟಾನುಸಾರವಾಗಿ ತಮಗಾಗಲಿ ಮತ್ತೊಬ್ಬರಿಗಾಗಲಿ ಶುಭಾಶುಭಗಳನ್ನು ಹಿಂದೆ ಯಾರೂ ಪಡೆದಿಲ್ಲ. ಈಗಲೂ ಪಡೆಯಲಾರರು. ಮುಂದೆಯೂ ಪಡೆಯುವದಕ್ಕಾಗುವದಿಲ್ಲ. ಮತ್ತೊಬ್ಬನಿಂದ ತಮಗೆ ಕೆಟ್ಟದ್ದಾಯಿತೆಂದು ಅಪವಾದವನ್ನು ಕಲ್ಪಿಸಿಕೊಂಡು ಅದಕ್ಕೆ ಪ್ರತೀಕಾರವನ್ನು ಮಾಡುವದಕ್ಕೆ ಪ್ರಯತ್ನಿಸುವದು ವಿವೇಕಿಗಳ ಲಕ್ಷಣವಲ್ಲ. ನೀವು ಅವರಿಗೆ ಅಪಕಾರ ಮಾಡುವದರಿಂದ ಅವರು ನಿಮಗೆ ಮಾಡಿದ ಅಪಕಾರ ಹೋದಹಾಗೆ ಆಗುವದಿಲ್ಲ. ಇತರರಿಗೆ ಕೇಡುಮಾಡಬೇಕೆಂಬ ದುರಾಲೋಚನೆಗೆ ನಿಮ್ಮ ಪವಿತ್ರವಾದ ಮನಸ್ಸಿನಲ್ಲಿ ಅವಕಾಶ ಕೊಡುವದು ಮಾತ್ರ ಆಗುವದಲ್ಲದೆ ನಿಮ್ಮ ಅಮೌಲ್ಯವಾದ ಹೊತ್ತು ವ್ಯರ್ಥವಾಗಿ ಕಳೆದು ಹೋಗುವದು. ಆದ್ದರಿಂದ ನೀವು ಯಾವಾಗಲೂ ಉಗ್ರ ಸ್ವಭಾವವನ್ನು ಬಿಟ್ಟು ಶಾಂತರಾಗಿ ಇರಬೇಕು. ಶಾಂತಿಯುಳ್ಳವರಿಗೆ ಭೂಷಣವುಂಟು. ಶಾಂತಿ ಇಲ್ಲದವರಿಗಿಲ್ಲ. ಸ್ತ್ರೀಯರಿಗೆ ಪಂಡಿತರು ಭೂಮಿಯ ಸಾಮ್ಯವನ್ನು ಕೊಟ್ಟು ಇದ್ದಾರೆ. ಭೂಮಿಯು ಸಕಲ ಪ್ರಾಣಿಗಳಿಗೂ ತಾಯಿಯಂತೆ ಯಿದೆ. ಇದರಲ್ಲಿ ಕ್ಷಮಾ ಗುಣವು ಅಪಾರವಾಗಿದೆ. ಕರ್ಷಕನು ತನ್ನ ನೇಗಲಿಂದ ಭೂಮಿಯನ್ನು ಸೀಳುತ್ತಾನೆ. ಇದಕ್ಕಾಗಿ ಭೂಮಿಗೆ ಕೋಪವೇನಾದರೂ ಉಂಟೆ? ಹೆಚ್ಚಾಗಿ ಸೀಳಿದ ಹಾಗೆಲ್ಲಾ ಅವನಿಗೆ ಹೆಚ್ಚು ಫಲವನ್ನು ಕೊಡುತ್ತದೆ. ಇಂಥಾ ಕ್ಷಮಾ

ಗುಣವು ಭೂಮಿಯಲ್ಲಿ ಹೊರತು ಇನ್ಯಾತರಲ್ಲಿಯೂ ಇಲ್ಲ. ಈ ಭೂಮಿಯ ಸಾಮ್ಯವನ್ನು ಪಂಡಿತರು ನಿಮಗೆ ಕೊಟ್ಟಿರುವದ್ದರಿಂದ ಅದು ನಿಮಗೆ ಒಪ್ಪುವಂತೆ ನೀವು ಕ್ಷಮಾಪರರಾಗಿ ಯಿರಬೇಕು.

೩. ದಮ.—ದಮ ಅಂದರೆ ಮನೋನಿಗ್ರಹವು. ಈ ಗುಣವು ಮನುಷ್ಯರಲ್ಲಿ ಮುಖ್ಯವಾಗಿರಬೇಕು. ಆದರೆ ಇದನ್ನು ಕಾಪಾಡಿಕೊಂಡಿರುವದು ಶ್ರಮಸಾಧ್ಯವಾದ ಕೆಲಸ. ಮನುಷ್ಯನು ಮಿಕ್ಕ ಯಾವ ಕಷ್ಟದ ಕೆಲಸವನ್ನಾದರೂ ಮಾಡಬಲ್ಲನು. ಮನಸ್ಸನ್ನು ನಿಗ್ರಹಿಸುವದು ಮಾತ್ರ ಆಗುವದಿಲ್ಲವೆಂದು ವಿದ್ವಾಂಸರು ಹೇಳಿಯಿದ್ದಾರೆ. ಎಲ್ಲಾ ವಿಷಯಗಳಲ್ಲಿಯೂ ಮನಸ್ಸನ್ನು ನಿಗ್ರಹಿಸುವದು ಸಾಧ್ಯವೆಂದು ಹೇಳುವದಕ್ಕೆ ಆಗುವದಿಲ್ಲ. ಆದರೂ ತಮ್ಮ ಶಕ್ತ್ಯನುಸಾರವಾಗಿ ಧೈರ್ಯದಿಂದ ಯತ್ನ ಮಾಡಬೇಕು. ಮನೋನಿಗ್ರಹವಿಲ್ಲದಿದ್ದರೆ ನಾನಾವಿಧವಾದ ಸಂಕಟಗಳು ಪ್ರಾಪ್ತವಾಗುತ್ತವೆ. ಇದಕ್ಕೆ ಧೈರ್ಯವೇ ಮುಖ್ಯ ಸಾಧನವೆಂದು ಮೊದಲೇ ಹೇಳಿದ್ದೇನೆ.

೪. ಅಸ್ತೇಯ.—ಅಸ್ತೇಯವೆಂದರೆ ಕಳವು ಮಾಡದೆಯಿರುವದು. ಈ ಗುಣವು ಮನುಷ್ಯನಲ್ಲಿ ಅವಶ್ಯಕವಾಗಿ ಇರತಕ್ಕದ್ದೆಂದು ಹೇಳತಕ್ಕ ಪ್ರಕೃತವಿಲ್ಲ. ಕಳವು ಎರಡು ವಿಧವಾಗಿದೆ ಪರರ ಒಡವೆಯನ್ನು ಅವರ ಅನುಮತಿಯಿಲ್ಲದೆ ತೆಗೆದುಕೊಳ್ಳುವದು ಒಂದು ವಿಧ. ಮನಸ್ಸಿನಲ್ಲಿ ಒಂದು ವಿಧವಾಗಿಯೂ ಹೊರಗೆ ಒಂದು ವಿಧವಾಗಿಯೂ ಆಚರಿಸುವದು ಮತ್ತೊಂದು ವಿಧ. ಹೀಗೆ ಕಳವು ಎರಡು ವಿಧವಾಗಿರುವದು. ಇವೆರಡನ್ನೂ ನೀವು ಮಾಡಬಾರದು. ನಿಮ್ಮ ಒಡವೆಯನ್ನು ನಿಮ್ಮನ್ನು ಕೇಳದೆ ಇತರರು ತೆಗೆದುಕೊಂಡರೆ ನಿಮ್ಮ ಮನಸ್ಸಿಗೆ ಹ್ಯಾಗೆ ವ್ಯಾಕುಲವಾಗುತ್ತದೋ, ನೀವು ಇತರರ ಒಡವೆಯನ್ನು ಅವರನ್ನು ಕೇಳದೆ ತೆಗೆದುಕೊಂಡರೆ ಅವರಿಗೂ ಹಾಗೆಯೇ ವ್ಯಾಕುಲವಾಗುತ್ತದೆ. ಆದ್ದರಿಂದ ಹೀಗೆ ಮಾಡುವದು ಉಚಿತವಲ್ಲ. ಕಳ್ಳನೆಂದು ಒಂದು ಸಾರಿ ಜನರಿಗೆ ಗೊತ್ತಾದ ಮೇಲೆ ಅವನ ಗೌರವ ಉಳಿಯುವದಿಲ್ಲ. ಮನಸ್ಸಿನಲ್ಲಿ ಒಂದು ವಿಧವಾಗಿಯೂ ಹೊರಗೆ

ಒಂದು ವಿಧವಾಗಿಯೂ ಆಚರಿಸುವದು ಬಹಳ ಕೆಟ್ಟದ್ದು. ನೀವು ಹೊರಗೆ ಒಳ್ಳೇತನವನ್ನು ತೋರಿಸಿಕೊಂಡು ಮನಸ್ಸಿನಲ್ಲಿ ಪಾಪದ ಆಲೋಚನೆಯನ್ನು ಮಾಡುತ್ತಾ ಈ ನಿಮ್ಮ ಪಾಪದ ಆಲೋಚನೆ ಯಾರಿಗೂ ತಿಳಿಯುವದಿಲ್ಲವೆಂದು ತಿಳಿದುಕೊಳ್ಳಬಹುದು. ಜನರು ಕಾಣದಹಾಗೆ ನೀವು ಪಾಪವನ್ನು ಮಾಡಿದರೆ ಅದಕ್ಕೆ ನಿಮ್ಮ ಮನಸ್ಸು ಸಾಕ್ಷಿಯಾಗಿ ಇರುವದಲ್ಲದೆ ದೇವರೂ ತಿಳಿಯುತ್ತಾನೆ. ನೀವು ಒಳಗೆ ಪಾಪವನ್ನು ಮಾಡುತ್ತಿರುವಾಗ ನಿಮ್ಮ ಹೊರಗಿನ ಸದಾಚಾರವನ್ನು ನೋಡಿ ಜನರು ನಿಮ್ಮನ್ನು ಸಾಧುಗಳೆಂತಲೂ ಜ್ಞಾನಿಗಳೆಂತಲೂ ಕೊಂಡಾಡುತ್ತಾ ಇದ್ದರೆ ಈ ಶ್ಲಾಘನೆಗೆ ನೀವು ಯೋಗ್ಯರಲ್ಲವೆಂದು ನಿಮ್ಮ ಮನಸ್ಸು ನಿಮಗೆ ಹೇಳುವದಿಲ್ಲವೆ? ಇದೂ ಅಲ್ಲದೆ ಮುಚ್ಚಿಕೊಂಡು ಪಾಪಗಳನ್ನು ಮಾಡುವ ವಾಡಿಕೆ ಬಿದ್ದಮೇಲೆ ನೀವು ನಿರ್ಭೀತರಾಗಿ ಹೆಚ್ಚು ಪಾಪಗಳನ್ನು ಮಾಡುತ್ತೀರಿ. ಮನುಷ್ಯನು ಮೊದಲು ಮಾಡಿದ ಒಂದೆರಡು ಸಣ್ಣ ಕೆಟ್ಟ ಕೆಲಸಗಳು ಜೀರ್ಣಿಸಿದಲ್ಲಿ ಮುಂದೆಯೂ ದೊಡ ದೊಡ್ಡ ದುಷ್ಕೃತ್ಯಗಳನ್ನು ಮಾಡಲಿಕ್ಕೂ ಸಂಕೋಚ ಪಡುವದಿಲ್ಲ. ಒಂದುವೇಳೆ ಸಂಕೋಚವಾದಾಗ್ಯೂ ಮಾಡಬಾರದೆಂದು ಮನಸ್ಸಿದ್ದಾಗ್ಯೂ ಅಭ್ಯಾಸಬಲದಿಂದ ಮಾಡಲೇಬೇಕಾಗುತ್ತೆ. ಹೀಗೆ ಮಾಡುತ್ತಿರುವ ಕೆಟ್ಟ ಕೆಲಸಗಳನ್ನು ಎಷ್ಟು ದಿವಸ ಮುಚ್ಚಿಕೊಳ್ಳಬಹುದು? ಒಂದಲ್ಲದಿದ್ದರೆ ಇನ್ನೊಂದು ದಿವಸ ಹೊರಗೆ ಬಂದೇಬರುತ್ತೆ. ಅನಂತರ ಆತನಿಗೆ ಆಗುವ ಮಾನಹಾನಿ ಇಷ್ಟೆಂದು ಹೇಳಲಿಕ್ಕೆ ಆಗುವದಿಲ್ಲ. ಕೆಲವರು ಇಂಥಾ ಅವಮಾನವನ್ನು ಸಹಿಸಲಾರದೆ ಪ್ರಾಣತ್ಯಾಗವನ್ನು ಕೂಡ ಮಾಡುತ್ತಾರೆ. ಇದಕ್ಕಿಂತ ದುಃಖಕರವಾದ ಸಂಗತಿ ಇನ್ನಾವದುಂಟು? ಆದ್ದರಿಂದ ನೀವು ಈ ಎರಡು ವಿಧವಾದ ಕಳ್ಳತನವನ್ನೂ ಮಾಡಬಾರದು. ಎಂಥಾ ವಿಪತ್ತು ಬಂದಾಗ್ಯೂ ಅದರಲ್ಲಿ ಪ್ರವರ್ತಿಸಬಾರದು. ಸಣ್ಣಕಳ್ಳತನದಿಂದ ದೊಡ್ಡ ಅರಿಷ್ಟವೇನೂ ಸಂಭವಿಸುವದಿಲ್ಲವೆಂದು ಯೋಚಿಸಿ ಸಣ್ಣ ಕಳ್ಳತನಕ್ಕು ಕೂಡಾ ಪ್ರವರ್ತಿಸ ಬಾರದು. ಆಕೃತ್ಯದಲ್ಲಿ ವಾಡಿಕೆ ಬಿದ್ದಮೇಲೆ ಅದನ್ನು ಬಿಡಲಿಕ್ಕೆ ಆಗುವದಿಲ್ಲ. ಎಂದಾದರೂ ಒಂದು ದಿವಸ ಹೊರಗೆಬಂದೇ ಬರುತ್ತೆ. ಪಾಪವೆಂಬ ವಿಷವೃಕ್ಷದ ಬೀಜವು ನಿಮ್ಮ ಮನಸ್ಸಿನಲ್ಲಿ ನಾಟ

ವೊಳಕೆಯಾದರೆ ಅದು ಎಳೆದಾಗಿರುವಾಗಲೇ ಸಹ ಮೂಲವಾಗಿ ಕಿತ್ತು ಹಾಕಬೇಕು. ಸ್ವಲ್ಪ ಬೇರು ಬಿಟ್ಟುಕೊಳ್ಳುವದಕ್ಕೆ ಅವಕಾಶ ಕೊಟ್ಟಲ್ಲಿ ಬಳಿಕ ತೆಗೆದು ಹಾಕುವದಕ್ಕೆ ಸರ್ವಥಾ ಆಗುವದಿಲ್ಲ. ನೀವು ನಿಮ್ಮ ಮನಸ್ಸನ್ನು ಯಾವವಿಧವಾದ ಲೋಭಕ್ಕೂ ಒಳಪಡಿಸದೇಯಿದ್ದರೆ ನಿಮ್ಮಿಂದ ಪಾಪದ ಕೆಲಸಗಳು ನಡೆಯುವದಿಲ್ಲ. ಲೋಭವೆಂಬುವದು ಸಕಲ ಪಾಪ ಕೃತ್ಯಗಳಿಗೂ ಜನ್ಮಸ್ಥಾನವಾಗಿದೆ. ಮನುಷ್ಯನಲ್ಲಿ ಎಷ್ಟು ಸುಗುಣಗಳಿದಾಗ್ಯೂ ಲೋಭದಿಂದ ಅವು ಮಾಲಿನ್ಯವನ್ನು ಹೊಂದುತ್ತವೆ. ಆದ್ದರಿಂದ ಪಾಪಕ್ಕೆ ಮೂಲವಾಗಿಯೂ ಅಪಕೀರ್ತಿಗೆ ತೌರುಮನೆಯಾಗಿಯೂ ಇರುವ ಲೋಭವನ್ನು ನೀವು ಬಿಡಬೇಕು. ಇಲ್ಲವಾದರೆ ಕಳ್ಳತನ ಮುಂತಾದ್ದನ್ನು ಮಾಡಿ ಕೊನೆಗೆ ಆತ್ಮಘಾತವನ್ನು ಮಾಡಿಕೊಳ್ಳಬೇಕಾದೀತು.

೫. ಶೌಚ.—ಶೌಚ ಅಂದರೆ ಶುಚಿತ್ವ. ಅದು ಅಂತರಂಗದ ಶುಚಿತ್ವವೆಂತಲೂ ಬಹಿರಂಗದ ಶುಚಿತ್ವವೆಂತಲೂ ಎರಡು ವಿಧವಾಗಿದೆ. ಇವೆರಡಕ್ಕೂ ಪರಸ್ಪರ ಸಂಬಂಧ ಬಲವಾಗಿರುವದ್ದರಿಂದ ಒಂದು ಹೊರತು ಇನ್ನೊಂದು ದೊರೆಯುವದಿಲ್ಲ. ಒಂದುವೇಳೆ ದೊರೆತಾಗ್ಯೂ ಬಹಳಕಾಲ ನಿಲ್ಲುವದಿಲ್ಲ. ಆದ್ದರಿಂದ ಇವೆರಡು ವಿಧವಾದ ಶೌಚವನ್ನೂ ಮನುಷ್ಯನು ಕಾಪಾಡಿಕೊಳ್ಳಬೇಕು. ಸ್ನಾನವನ್ನು ಮಾಡಿ ಶರೀರವನ್ನೂ ಬಟ್ಟೆಗಳನ್ನೂ ಪಾತ್ರೆ ಮುಂತಾದವುಗಳನ್ನೂ ನಿರ್ಮಲವಾಗಿ ಇಟ್ಟುಕೊಳ್ಳುವದು ಹೊರಗಿನ ಶೌಚವೆನ್ನಿಸಿ ಕೊಳ್ಳುತ್ತದೆ. ಈ ಪ್ರಕಾರವಿದ್ದರೆ ಯಾವ ಕೆಲಸ ಮಾಡಲಿಕ್ಕೂ ಮನುಷ್ಯನಿಗೆ ಪಾಲುಮಾರಿಕೆ ಉಂಟಾಗುವದಿಲ್ಲ. ಮತ್ತು ರೋಗಾದಿಗಳೂ ಬರುವದಿಲ್ಲ. ಮನಸ್ಸು ನಿರ್ಮಲವಾಗಿದ್ದರೆ ಧರ್ಮ ಕೆಲಸಗಳನ್ನು ಮಾಡಲಿಕ್ಕೆ ಉತ್ಸಾಹ ಉಂಟಾಗುತ್ತೆ. ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡಿರುವದು ಒಳಗಿನ ಶುಚಿತ್ವವು. ಹೊರಗೆ ಎಷ್ಟು ನಿರ್ಮಲವಾಗಿದ್ದಾಗ್ಯೂ ಅಂತರ್ಯವು ನಿರ್ಮಲವಾಗಿಲ್ಲದಿದ್ದರೆ ಹೊರಗಿನ ಶುಚಿತ್ವದಿಂದ ಏನೂ ಪ್ರಯೋಜನವಾಗುವದಿಲ್ಲ. ಯಾವದಾದರೂ ಪಾತ್ರೆಯು ಹೊರಗೆ ಶುಭ್ರವಾಗಿದ್ದು ಒಳಗೆ ಕೊಳೆ ತುಂಬಿದ್ದರೆ ಜನರು ನೋಡಿ ಹ್ಯಾಗೆ ಸಹಿಸುವದಿಲ್ಲವೋ ಹಾಗೆಯೇ ಹೊರಗೆಮಾತ್ರ ನಿರ್ಮಲವಾಗಿದ್ದು ಒಳಗೆ ಮಲಿನ

ವಾಗಿರುವವನು ಜನರಿಗೆ ಇಷ್ಟನಾಗುವದಿಲ್ಲ. ಅಪವಿತ್ರವಾದ ಮ
ವರಿಗೆ ಯಾವಾಗಲೂ ಮರ್ಯಾದೆ ನಡೆಯುವದಿಲ್ಲ. ಅವರ ಮನ
ನಾನಾವಿಧವಾದ ಪಾಪದ ಆಲೋಚನೆಗಳು ಯಾವಾಗಲೂ ನೆಲೆಗೊ
ದ್ದರಿಂದ ಅವರಿಗೆ ಸುಖವಿರುವದಿಲ್ಲ, ಇಂಥಾ ಮನುಷ್ಯರ ಮುಖ
ನೋಡಿದಕೂಡಲೆ ಅವರ ಮುಖಭಾವವು ಒಂದು ಕನಡಿಯಹಾಗೆ
ದರಿಂದ ಅವರ ಮನಸ್ಸಿನ ಆಲೋಚನೆಗಳು ಪ್ರಾಯೇಣ ಎಲ್ಲರಿಗೂ ಗ
ಆಗುತ್ತವೆ, ಎಷ್ಟು ಪ್ರಯತ್ನ ಮಾಡಿದಾಗ್ಯೂ ಮುಚ್ಚುವದಕ್ಕಾಗು
ಆದ್ದರಿಂದ ಮನಸ್ಸಿನಲ್ಲಿ ಸರ್ವಕಾಲದಲ್ಲಿಯೂ ನಿರ್ಮಲವಾದ ಆಲೋ
ಯನ್ನು ಮಾಡುತ್ತಿರಬೇಕು. ಅದರಲ್ಲಿ ಧರ್ಮವಾಸನೆಯನ್ನು ಇಡಬೇ
ಒಂದು ಸ್ಥಲದಲ್ಲಿ ಒಂದು ಪದಾರ್ಥವನ್ನು ಇಟ್ಟರೆ ಆ ಸ್ಥಲದಲ್ಲಿ ಇನ್ನೊಂ
ಇಡುವದಕ್ಕಾಗುವದಿಲ್ಲ. ನಿಮ್ಮ ಮನಸ್ಸಿನಲ್ಲಿ ಸಂಪೂರ್ಣವಾಗಿ ಧ
ವಾಸನೆಯನ್ನು ಇಟ್ಟಲ್ಲಿ ಪಾಪದ ಆಲೋಚನೆಗಳಿಗೆ ಅಲ್ಲಿ ಸ್ಥಲ ದೊ
ವದಿಲ್ಲ. ಈ ಎರಡು ವಿಧದ ಶೌಚದಿಂದ ನಿಮಗೆ ಉಂಟಾಗುವ ಸ
ಅನುಭವದಿಂದಲೆ ಗೊತ್ತಾಗತಕ್ಕದ್ದು. ಆದ್ದರಿಂದ ಅದು ಬಣ್ಣಿಸಲಸಾ

೬. ಇಂದ್ರಿಯ ನಿಗ್ರಹವು.–ನಿಮ್ಮ ಇಂದ್ರಿಯಗಳು ತುಂ
ಳಂತೆ ಇವೆ. ಮತ್ತು ಅವುಗಳ ಗತಿಯನ್ನು ತಡೆಯುವದು ಸುಲಭ
ಜ್ಞಾನವೂ ಧೈರ್ಯವೂ ಇದ್ದವನಿಗೆ ಅವನ್ನು ನಿಗ್ರಹಿಸುವದು ತ
ಟ್ಟಿಗೆ ಸುಲಭವಾಗಿರುವದು. ಪಂಡಿತರು ಈ ಇಂದ್ರಿಯಗಳನ್ನು
ಕಟ್ಟುವ ಮದಿಸಿದ ಕುದುರೆಗಳಿಗೆ ಹೋಲಿಸುತ್ತಾರೆ. ಇವು ತಮ್ಮ
ವಿದ್ದ ಕಡೆಗೆ ಎಳದುಕೊಂಡು ಹೋಗಬೇಕೆನ್ನುತ್ತವೆ. ಅಡ್ಡಿಮಾಡದೆ ಬ
ಅವುಗಳನ್ನು ಹೂಡಿರುವ ಶರೀರವೆಂಬ ರಥವು ಮುರಿದು ಚೂರುಚೂ
ವದು. ಆದ್ದರಿಂದ ಈ ಕುದುರೆಗಳ ಕಡಿವಾಣಗಳನ್ನು ಬಹು ಜಾ
ಕತೆಯಿಂದ ಹಿಡದಿರಬೇಕು. ಆಯಾಯಿಂದ್ರಿಯಗಳಿಗೆ ಇಷ್ಟವಾ
ವಿಷಯಗಳು ಅವುಗಳ ಸಮೀಪಕ್ಕೆ ಬಂದಲ್ಲಿ ಅವುಗಳು ಸ್ವಾಧೀನ
ಹೊಗಲಿಕ್ಕೆ ಎತ್ನಿಸುತ್ತವೆ. ಆದ್ದರಿಂದ ಇಂಥಾ ವಿಷಯಗಳನ್ನು ಅವ
ಸಮೀಪಕ್ಕೆ ಬರಗೊಡಬಾರದು. ಒಂದುವೇಳೆ ಮೋಹಕ ವಿಷಯ

ಸಮೀಪದಲ್ಲಿ ಇಲ್ಲದೆ ಇದ್ದಾಗ್ಯೂ ಇಂದ್ರಿಯಾಶ್ವಗಳು ಸ್ವೇಚ್ಛೆಯಾಗಿ ಹೋಗುವಂತೆ ಕಂಡಲ್ಲಿ ಆಗ ಅವುಗಳ ಕಡಿವಾಣಗಳನ್ನು ಹಿಡಿದು ಎಳೆಯಬೇಕು. ಮನುಷ್ಯನ ಮನಸ್ಸು ಇಂದ್ರಿಯಗಳೆಂಬ ಕುದುರೆಗಳಿಗೆ ಕಡಿವಾಣವಾಗಿದೆ. ಈ ಮನಸ್ಸನ್ನು ಸರ್ವಕಾಲದಲ್ಲಿಯೂ ಸತ್ಕಾರ್ಯದಲ್ಲಿ ಇಟ್ಟಿದ್ದರೆ ಇಂದ್ರಿಯಗಳು ಸ್ವಾಧೀನವಾಗಿರುತ್ತವೆ. ಇಂದ್ರಿಯಗಳನ್ನು ನಿಮ್ಮ ಅಧೀನದಲ್ಲಿಟ್ಟುಕೊಂಡಿರಬೇಕೇ ಹೊರತು ನೀವು ಅವುಗಳಿಗೆ ಅಧೀನರಾಗಿ ಅವು ಎಳೆದ ಕಡೆಗೆ ಹೋಗಬಾರದು. ಇಂದ್ರಿಯಾಧೀನರಾದವರು ಪಶುಗಳಿಗಿಂತಲೂ ಹೀನರಾಗಿ ಕಾಣುವದ್ದರಿಂದ ಅವರನ್ನು ಯಾರೂ ಮನುಷ್ಯರೆನ್ನುವದಿಲ್ಲ. ಜಿತೇಂದ್ರಿಯರಾಗಿ ಇರುವವರು ದಿನೇದಿನೇ ಉತ್ತಮವಾದ ಕೆಲಸಗಳನ್ನು ಮಾಡುವದ್ದರಿಂದ ಅವರನ್ನು ಜನರು ದೇವರಂತೆ ಭಾವಿಸುತ್ತಾರೆ.

೭. ಧೀ.—ಧೀ ಅಂದರೆ ಧರ್ಮವಿಷಯಕವಾದ ಬುದ್ಧಿಯು. ಜನರು ಮಾಡುವ ಕೆಲಸಗಳಲ್ಲಿ ಧರ್ಮಕ್ಕೆ ಅನುಸಾರವಾದದ್ದು ಯಾವದು? ವಿರೋಧವಾದದ್ದು ಯಾವದು? ಎಂಬುವದನ್ನು ಆಲೋಚನೆಯಿಂದ ನಿಶ್ಚಯಿಸುವದು ಧಾರ್ಮಿಕವಾದ ಬುದ್ಧಿಯ ಕೆಲಸವಾಗಿದೆ. ಇಂಥಾ ಬುದ್ಧಿಗೆ ವಿವೇಕವೆಂದು ಹೇಳುತ್ತಾರೆ. ವಿವೇಕವಿಲ್ಲದಿದ್ದರೆ ಸದಸದ್ವಿಚಾರಮಾಡಿ ಒಳ್ಳೇಕೆಲಸದಲ್ಲಿ ಪ್ರವರ್ತಿಸುವದಕ್ಕೂ ಕೆಟ್ಟ ಕೆಲಸಗಳನ್ನು ಬಿಡುವದಕ್ಕೂ ಆಗುವದಿಲ್ಲ. ಆದರೆ ಎಲ್ಲರಿಗೂ ಬುದ್ಧಿಯು ಒಂದೇ ಸಮನಾಗಿರುವದಿಲ್ಲ. ಧಾರ್ಮಿಕನಿಗೆ ಅನುಚಿತವಾದದ್ದೆಂದು ಕಾಣುವ ಕೆಲಸ ಇತರರಿಗೆ ಒಳ್ಳೇದೆಂದು ಕಾಣುತ್ತೆ. ಆದ್ದರಿಂದ ವಿಷಯಗಳಲ್ಲಿ ಸದಸದ್ವಿಚಾರವನ್ನು ಮಾಡುವದಕ್ಕೆ ಯೋಗ್ಯತೆಯನ್ನು ಉಂಟುಮಾಡುವ ಬುದ್ಧಿಯು ನಿಮ್ಮಲ್ಲಿ ಇರಬೇಕು. ಧರ್ಮವಿಷಯಕವಾದ ಬುದ್ಧಿಯೇ ಈ ವಿಚಾರಕ್ಕೆ ಯೋಗ್ಯವಾದದ್ದು. ಇಂಥಾ ಬುದ್ಧಿಯು ನಿಮ್ಮಲ್ಲಿ ಇದ್ದರೆ ಧರ್ಮವಿರುದ್ಧವಾದ ಕೆಲಸ ಮಾಡಬೇಕೆಂದು ನಿಮ್ಮ ಮನಸ್ಸಿಗೆ ಬಂದಾಗ್ಯೂ ನೀವು ಮಾಡುವದಿಲ್ಲ. ಇದರಿಂದ ನಿಮಗೂ ಇತರರಿಗೂ ಸುಖವಾಗಿ ನಿಮಗೆ ಶ್ರೇಯಸ್ಸುಂಟಾಗುತ್ತೆ.

೮. ವಿದ್ಯೆ.—ವಿದ್ಯೆಯೆಂದರೆ ಈಶ್ವರ ವಿಷಯಕವಾದ ಜ್ಞಾನವು. ಈ ವಿದ್ಯೆಯು ಇಲ್ಲದಿದ್ದರೆ ಸರ್ವೋತ್ತಮವಾದ ಸುಖವು ಇಂಥಾದ್ದೆಂದು

ತಿಳಿಯುವದಿಲ್ಲ. ಅದಕಾರಣ ಪ್ರತಿಮನುಷ್ಯನಿಗೂ ಈ ವಿದ್ಯೆಯು ಅವಶ್ಯಕವಾಗಿರಬೇಕು. ವಿದ್ಯೆಯಿಲ್ಲದೆ ಇರುವವರು ತಮಗೆ ಸುಖವಾಗಬೇಕೆಂದು ಸದಸದ್ವಿಚಾರವಿಲ್ಲದೆ ಅನೇಕ ಕೆಲಸಗಳನ್ನು ಮಾಡುತ್ತಾರೆ. ಆದರಿಂದ ಅವರಿಗೆ ಸುಖವೇನೂ ಆಗದೆ ಸಾಯುವವರಿಗೂ ಅನೇಕ ದುಃಖಗಳು ಸಂಭವಿಸುವವು. ಅವರು ತಾವು ಮಾಡುವ ಪ್ರಯತ್ನದಿಂದ ತಮಗೆ ಸುಖವೇ ಆಗುತ್ತೆಂದು ತಿಳಿದು, ಅನ್ಯರಿಗೆ ಒಳ್ಳೇದು ಅಥವಾ ಕೇಡಾಗುವದೆಂಬ ವಿಚಾರ ಮಾಡದೆ ಅಜ್ಞಾನದಿಂದ ಕೆಲಸಗಳನ್ನು ಮಾಡುವದ್ದರಿಂದ ಅನರ್ಥಗಳೇ ಉಂಟಾಗುತ್ತವೆ. ಅನಂತರ ತಾವು ಮಾಡಿದ್ದು ತಪ್ಪಾಯಿತೆಂದು ತಿಳಿದು ಪಶ್ಚಾತ್ತಾಪದಿಂದ ದುಃಖಪಡುತ್ತಾರೆ. ಇಂಥವರಿಗೆ ಸುಖವೆಂಬುವದೆಲ್ಲಿ? ಆದ್ದರಿಂದ ನೀವು ಈಶ್ವರನ ಮೇಲೆ ಭಾರವನ್ನು ಹಾಕಬೇಕು. ನಮ್ಮ ಬುದ್ಧಿಯ ಬಲದಿಂದ ಕೆಲಸಗಳನ್ನು ಮಾಡಿ ನಾವು ಸುಖಪಡುತ್ತೇವೆಂಬ ಆಶೆಯು ಸ್ವಪ್ನದಲ್ಲಿಯೂ ಇರಬಾರದು. ಹಾಗಿದ್ದರೆ ನಿಮಗೆ ಮುಂದೆ ಪಶ್ಚಾತ್ತಾಪ ಉಂಟಾಗಲಾರದು. ಪ್ರಪಂಚದಲ್ಲಿ ಒಳ್ಳೇದಾದರೂ ಕೆಟ್ಟದ್ದಾದರೂ ಭಗವತ್ಸಂಕಲ್ಪಾನುಗುಣವಾಗಿಯೇ ಆಗುವದು. ಬಂದುವೇಳೆ ನಿಮಗೆ ಯಾವದಾದರೂ ಸಂಕಟವು ಪ್ರಾಪ್ತವಾದರೆ ದೇವರು ನಿಮಗೆ ಕೆಟ್ಟದ್ದನ್ನು ಮಾಡಿದನೆಂದು ಮಾತ್ರ ನೀವು ಎಣಿಸಬಾರದು. ದೇವರು ಸರ್ವಕಾಲದಲ್ಲಿಯೂ ಜಗತ್ತಿನ ಹಿತವನ್ನೇ ಮಾಡುತ್ತಾ ಇರುತ್ತಾನೆ. ನಾವು ಆತನ ಮಕ್ಕಳಾಗಿರುವದರಿಂದ ನಮಗೆ ಆತನು ಎಂದಿಗೂ ಕೇಡುಮಾಡುವದಿಲ್ಲವೆಂದು ತಿಳಿದುಕೊಂಡು ಆತನು ನಮ್ಮನ್ನು ಯಾವಸ್ಥಿತಿಯಲ್ಲಿ ಇಟ್ಟಿದ್ದರೂ ನಾವು ಸಂತುಷ್ಟರಾಗಿರಬೇಕು. ಈಶ್ವರನ ಮೇಲೆ ಭಾರವನ್ನು ಹಾಕಿ ಆತನ ಪ್ರೇಮಕ್ಕೆ ಪಾತ್ರರಾದರೆ ಎಂಥಾ ಕಷ್ಟಗಳು ಸಂಭವಿಸಿದಾಗ್ಯೂ ಅವುಗಳಿಂದ ನಮಗೆ ತೊಂದರೆ ಆಗದೆ ನಾವು ಸಂತುಷ್ಟರಾಗಿರುತ್ತೇವೆ. ದೈವಭಕ್ತಿಯಲ್ಲಿ ಮುಳುಗಿರುವ ಮನುಷ್ಯನ ಸುಖವು ಇಂಥಾದ್ದೆಂದು ಹೇಳಲಿಕ್ಕಾಗುವದಿಲ್ಲ. ಜಗತ್ತಿನಲ್ಲಿ ಆ ಸುಖಕ್ಕೆ ಸಮಾನವಾದ ಸುಖ ಮತ್ತೊಂದಿಲ್ಲ. ಇಂಥಾ ಅನುಪಮವಾದ ಮತ್ತು ಅಮೌಲ್ಯವಾದ ಸುಖವನ್ನು ಹೊಂದಿರುವ ಮನುಷ್ಯನು ಇತರ ಕ್ಷುಲ್ಲಕ ವಿಷಯದಲ್ಲಿ ಆಶೆ ಪಡುವದಿಲ್ಲ,

ಅದರಿಂದ ಉಂಟಾಗುವ ಸಂಕಟಗಳಿಗೂ ಗುರಿಯಾಗುವದಿಲ್ಲ. ದೈವಭಕ್ತಿಯಿಂದ ಉಂಟಾಗುವ ಸುಖಕ್ಕೆ ಸಮಾನವಾದ ಸುಖವು ಪ್ರಪಂಚದಲ್ಲಿ ಮತ್ತೊಂದಿಲ್ಲವೆಂದು ಪ್ರಸಿದ್ಧವಾಗಿಯೇ ಇದೆ. ಅದು ದೊರೆಯಬೇಕಾದರೆ ಈಶ್ವರ ವಿಷಯಕವಾದ ಜ್ಞಾನವು ಅವಶ್ಯವಾಗಿರಬೇಕು. ಈ ಜ್ಞಾನವಿಲ್ಲದ ಮನುಷ್ಯನ ಜನ್ಮವು ವ್ಯರ್ಥವಾದ್ದರಿಂದ ಮನುಷ್ಯರೆಂದೆನಿಸಿಕೊಳ್ಳುವರೆಲ್ಲರೂ ಈ ಜ್ಞಾನವನ್ನು ಸಂಪಾದಿಸಿ ಕೊಳ್ಳಬೇಕು.

೯. ಸತ್ಯವು.—ಸತ್ಯವನ್ನಾಡುವದೂ, ಆಡಿದಂತೆ ನಡೆಯುವದೂ, ಈ ಗುಣವು ಅತಿ ಶ್ರೇಷ್ಠವಾದದ್ದು. ಸತ್ಯವಿಲ್ಲದವನಲ್ಲಿ ವಿದ್ಯೆ ದ್ರವ್ಯ ಮತ್ತು ಇತರ ಒಳ್ಳೇಗುಣಗಳು ಎಷ್ಟಿದ್ದಾಗ್ಯೂ ಅಲ್ಪ ಜನರಿಗೂ ಅವನಲ್ಲಿ ಗಣ್ಯತೆ ಇರುವದಿಲ್ಲ. ಅವನು ಸುಳ್ಳು ಹೇಳತಕ್ಕವನೆಂದು ಒಂದುಸಾರಿ ಜನರಿಗೆ ತಿಳಿದಕೂಡಲೇ ಅವನನ್ನು ಯಾರೂ ನಂಬುವದಿಲ್ಲ. ಮತ್ತು ಅವನ ವಿಷಯದಲ್ಲಿ ಜಾಗರೂಕರಾಗಿ ಯಿರುತ್ತಾರೆ. ಆತನೂ ಯಿತರರಿಗೆ ಹೆದರಿಕೊಂಡು ನಡೆಯುತ್ತಾ ಯಿರಬೇಕಾಗುತ್ತೆ. ಜನರಲ್ಲಿ ಯಾವಾಗಲೂ ಹೆದರಿಕೊಂಡು ನಡೆಯುವವನ ಮನಸ್ಸಿಗೆ ಶಾಂತಿಯೇ ಯಿರುವದಿಲ್ಲ. ಆದ್ದರಿಂದ ನೀವು ಸತ್ಯವನ್ನೇ ಆಡಬೇಕು, ಮತ್ತು ಆಡಿದಂತೆ ನಡೆಯಬೇಕು. ನೀವು ಯಾವದಾದರೂ ಕೆಟ್ಟ ಕೆಲಸವನ್ನು ಮಾಡಿ ಅದನ್ನು ಜನರು ತಿಳಿದರೆ ನಿಮಗೆ ಅವಮಾನವಾಗುತ್ತೆಂದಾಗಲಿ ಅಥವಾ ಶಿಕ್ಷೆಯಾಗುವದೆಂದಾಗಲಿ ಹೆದರಿ ಸುಳ್ಳಾಡಬಾರದು. ನಿಜವನ್ನು ಹೇಳಿದರೆ ಜನರು ನಿಮ್ಮನ್ನು ಕೊಂಡಾಡಿ ನಿಮ್ಮ ತಪ್ಪನ್ನು ಒಂದುವೇಳೆ ಕ್ಷಮಿಸುವರು. ಸತ್ಯವನ್ನಾಡುವದಕ್ಕೆ ಎಂದಿಗೂ ಹೆದರಬಾರದು. ಎಷ್ಟು ಪ್ರಯತ್ನಮಾಡಿ ಸುಳ್ಳನ್ನು ಮುಚ್ಚಿ ಇಟ್ಟಾಗ್ಯೂ ಅದು ಬೈಲಿಗೆ ಬಂದೇ ಬರುತ್ತೆ. ಬೆಂಕಿಯನ್ನು ಒಣಗಿದ ಹುಲ್ಲಿನ ಮೆದೆಯಲ್ಲಿ ಮುಚ್ಚಿಟ್ಟರೆ ಕಾಣಿಸಿಕೊಳ್ಳದೇ ಇರುವದೆ ? ನೀವು ಮನಸ್ಸಿನಲ್ಲಿ ಒಂದನ್ನು ಇಟ್ಟುಕೊಂಡು ಬಾಯಿಂದ ಸುಳ್ಳನ್ನು ಆಡಿದಾಗ್ಯೂ ನಿಮ್ಮ ಮುಖಭಾವದಿಂದ ನಿಮ್ಮ ಸುಳ್ಳು ಇತರರಿಗೆ ಗೊತ್ತಾಗುತ್ತೆ. ಆದ್ದರಿಂದ ನಿರರ್ಥಕವಾಗಿ ಸುಳ್ಳಾಡಿ ಜನರಲ್ಲಿ ಅವಮಾನ ಹೊಂದಿ ದೇವರಲ್ಲಿ ಯಾತಕ್ಕೆ ಅಪರಾಧಿಯಾಗಬೇಕು. ಸತ್ಯವನ್ನು ಆಡಿದ್ದರಿಂದ ನಿಮ್ಮ ಪ್ರಾಣ

ಹೋಗುವದಾದರೂ ನೀವು ಹೆದರಬಾರದು. ದೇವರು ನಿಮ್ಮ ಹಿಂದೆಯಿದ್ದು ನಿಮ್ಮನ್ನು ಸಂರಕ್ಷಣೆ ಮಾಡುತ್ತಾನೆಂದು ನಂಬಿ ನೀವು ಯಾವದಕ್ಕೂ ಹೆದರದೆ ಇರಬೇಕು. ಸತ್ಯವನ್ನಾಡುವದರಿಂದ ಈಗ ಸ್ವಲ್ಪ ಕಷ್ಟವನ್ನು ಅನುಭವಿಸ ಬೇಕಾದಾಗ್ಯೂ ಕೊನೆಗೆ ಸುಖ ಉಂಟಾಗಿ ಎಲ್ಲಕ್ಕಿಂತಲೂ ಸತ್ಯವೇ ದೊಡ್ಡದು, ಅದಕ್ಕೆ ಎಲ್ಲಾ ಕೆಲಸಗಳಲ್ಲಿಯೂ ಜಯವಾಗುತ್ತೆಂದು ನಿಮಗೆ ಗೊತ್ತಾಗುವದು. ಆದ್ದರಿಂದ ನೀವು ಸತ್ಯವನ್ನು ಬಿಡಬಾರದು.

೧೦. ಅಕ್ರೋಧ ಅಂದರೆ ರಾಗದ್ವೇಷವೇ ಮೊದಲಾದವುಗಳಿಲ್ಲದೆ ಇರುವದು. ಸಿಟ್ಟೆಂಬುವದು ಮನುಷ್ಯನಿಗೆ ಒಂದು ದೊಡ್ಡ ಶತ್ರುವು; ಇದನ್ನು ಗೆಲ್ಲುವದು ಕಷ್ಟ. ಅಲ್ಪಮನಸ್ಸಿನವರು ಇದನ್ನು ಗೆಲ್ಲುವದಕ್ಕೆ ಆಗುವದಿಲ್ಲ. ಇದು ಪ್ರಬಲವಾದರೆ ದೊಡ್ಡದೊಡ್ಡ ಅನರ್ಥಗಳು ಸಂಭವಿಸುತ್ತವೆ. ಮನುಷ್ಯನಿಗೆ ಬಲವಾದ ಕ್ರೋಧ ಬಂದಕಾಲದಲ್ಲಿ ತನ್ನ ಪ್ರಾಣವನ್ನೂ ಇತರರ ಪ್ರಾಣಗಳನ್ನೂ ತೆಗೆಯುವದಕ್ಕೆ ಅನುಮಾನಿಸುವದಿಲ್ಲ. ಅಗ್ನಿಯು ತಾನು ಉತ್ಪನ್ನವಾದ ಬಿದರುಮೆಳೆ, ಕಟ್ಟಿಗೆ ಮುಂತಾದ್ದನ್ನು ಸುಡುವವರಿಗೂ ಹ್ಯಾಗೆ ಶಾಂತವಾಗುವದಿಲ್ಲವೋ ಹಾಗೆಯೇ ಕ್ರೋಧವು ಯಾರಲ್ಲಿ ಹುಟ್ಟುತ್ತದೋ ಅವನನ್ನು ಹಾಳುಮಾಡುವವರಿಗೂ ಬಿಡುವದಿಲ್ಲ. ಆದ್ದರಿಂದ ಇಂಥಾ ಕ್ರೋಧವೆಂಬ ಬೆಂಕಿಯನ್ನು ಕ್ಷಮೆ ಯೆಂಬ ನೀರಿನಿಂದ ಕೂಡಲೇ ಆರಿಸಬೇಕು. ಸಿಟ್ಟುಬಂದಕಾಲದಲ್ಲಿ ಇಂಥಾಮಾತನ್ನು ಆಡಬಹುದು ಇಂಥಾದ್ದನ್ನು ಆಡಬಾರದು ಎಂಬ ವಿವೇಕ ವಿರುವದಿಲ್ಲ. ಆಗ ವಿಚಾರವಿಲ್ಲದೆ ಆಡಿದ ಸ್ವಲ್ಪಮಾತಿನಿಂದಲೂ ಮುಂದೆ ಬಹಳ ದುಃಖಗಳು ಸಂಭವಿಸುವವು. ಮದ್ದಿನಮೇಲೆ ಬೆಂಕಿಯ ಸಣ್ಣಕಿಡಿ ಬಿದ್ದಾಗ್ಯೂ ಅದರಿಂದ ದೊಡ್ಡದೊಡ್ಡ ಕೋಟೆಗಳು ಸಹಾ ಬಿದ್ದು ಹೋಗುತ್ತವೆ. ಹೀಗೆ ಸಿಟ್ಟಿನ ವೇಳೆಯಲ್ಲಿ ಆಡಿದ ಸಣ್ಣಮಾತಿನಿಂದ ತಮಗೂ ಇತರರಿಗೂ ಅಪಾಯ ಸಂಭವಿಸುತ್ತದೆ. ನಿಮಗೆ ಸಿಟ್ಟು ಬಂದಕೂಡಲೇ ವಿಚಾರವಿಲ್ಲದೆ ಮಾತನಾಡುವದನ್ನು ನೀವು ನಿಲ್ಲಿಸಬೇಕು, ಸ್ವಲ್ಪಹೊತ್ತು ವಿಚಾರ ಮಾಡಿದಲ್ಲಿ ಸಿಟ್ಟು ಸಂಪೂರ್ಣವಾಗಿ ಶಾಂತವಾಗುತ್ತೆ ಅಥವಾ ಬಹಳ ಮಟ್ಟಿಗೆ ಕಡಿಮೆಯಾದರೂ ಆಗುತ್ತೆ. ಆ ಮೇಲೆ ಯುಕ್ತವಿದ್ದಂತೆ ಕೆಲಸ ಮಾಡಬಹುದು.

ನೀವು ಯಾರಸಂಗಡಲೂ ದ್ವೇಷ ಮಾಡಬಾರದು. ಸ್ವಪ್ರಯೋಜನಕ್ಕಾಗಿ
ಇತರರ ಸಂಗಡ ದ್ವೇಷವನ್ನು ಮಾಡುವದು ಮೂರ್ಖತನವು. ಇದು ಪಶು
ಗಳಿಗೆ ಯೋಗ್ಯವೇಹೊರತು ಮನುಷ್ಯನಿಗೆ ಯೋಗ್ಯವಾದ್ದಲ್ಲ. ಸಣ್ಣ
ಮಾತಿಗಾಗಿ ಸಿಟ್ಟುಮಾಡುವವರಿಗೂ ಮತ್ತು ತಮ್ಮ ಪ್ರಯೋಜನಕ್ಕಾಗಿ
ಇತರರ ಸಂಗಡ ದ್ವೇಷಮಾಡುವವರಿಗೂ ಎಂದಿಗೂ ಒಳ್ಳೇದಾಗುವದಿಲ್ಲ.
ದ್ವೇಷವನ್ನು ಮಾಡುವದರಿಂದ ಒಳ್ಳೇದಾಗಿರುವದನ್ನು ಯಾರೂ ಕಂಡಿಲ್ಲ,
ಕೇಳಿಯೂ ಇಲ್ಲ. ದ್ವೇಷಮಾಡಿದವರು ಸಂಕಟಪಟ್ಟದ್ದಕ್ಕೆಮಾತ್ರ ನಿದ
ರ್ಶನಗಳಿವೆ. ಇತರರ ಸಂಗಡ ದ್ವೇಷವನ್ನು ಮಾಡಿದವನಿಗೆ ಸಂಕಟ ಬಂದ
ಕಾಲದಲ್ಲಿ ಯಾರೂ ಸಹಾಯ ಮಾಡುವದಿಲ್ಲ. "ತೋಳ ಗುಂಡಿಗೆ ಬಿದ್ದರೆ
ಆಳಿಗೆ ಒಂದು ಕಲ್ಲು" ಎಂಬಂತೆ ತನಗೆ ಬಂದ ಸಂಕಟವನ್ನು ತಾನೊಬ್ಬನೇ
ಅನುಭವಿಸಬೇಕಾಗುತ್ತದೆ. ನೀವು ನಿಮ್ಮ ನೆಂಟರಿಷ್ಟರ ಸಂಗಡಲೂ ನೆರೆ
ಹೊರೆಯವರ ಸಂಗಡಲೂ ಪ್ರೇಮದಿಂದ ನಡೆಯಬೇಕು. ಹೀಗೆ ನಡೆದರೆ
ನಿಮಗೆ ಸುಖ ಉಂಟಾಗಿ ನಿಮ್ಮ ಮೇಲೂ ಇತರರ ಮೇಲೂ ಬಂದೆರಗುವ
ಅನೇಕ ಸಂಕಟಗಳು ನಿವೃತ್ತವಾಗಿ ನಿಮ್ಮನ್ನು ಜನರು ಕೊಂಡಾಡುವರು.

ಅಲ್ಪ ಮನಸ್ಸಿನವನಿಗೆ ತನಗಿಂತ ಗುಣದಲ್ಲಿಯೂ ಐಶ್ವರ್ಯದಲ್ಲಿಯೂ
ಮರ್ಯಾದೆಯಲ್ಲಿಯೂ ಹೆಚ್ಚಾಗಿರುವವರ ವಿಷಯದಲ್ಲಿ ದ್ವೇಷವಿರುತ್ತೆ.
ಇದಕ್ಕೆ ಮತ್ಸರವೆಂತಲೂ ಹೊಟ್ಟೇಕಿಚ್ಚೆಂತಲೂ ಹೇಳುತ್ತಾರೆ. ಇಂಥಾ
ನೀಚ ಸ್ವಭಾವದವರು, ಉತ್ತಮರನ್ನು ಜನರು ಕೊಂಡಾಡುವದನ್ನು ನೋಡಿ
ಸಹಿಸಲಾರದೆ ತಮ್ಮೊಳಗೆ ತಾವೇ ಬೆಂದು ಹೋಗುತ್ತಾರೆ. ಎಷ್ಟು ಪ್ರಯತ್ನ
ಪಟ್ಟಾಗ್ಯೂ ಅವರಂತೆ ತಾವು ಸನ್ಮಾನಿತರಾಗುವದಿಲ್ಲವೆಂದು ತಿಳಿದಕೂಡಲೇ
ಅವರನ್ನು ನಿಂದಿಸುವದಕ್ಕೆ ಉಪಕ್ರಮಿಸುತ್ತಾರೆ. ನಿಂದೆಮಾಡುವ
ದೆಂದರೆ ಒಬ್ಬನಲ್ಲಿ ಇಲ್ಲದೆ ಇರುವ ದೋಷಗಳು ಅವನಲ್ಲಿ ಇವೆ ಎಂದು
ಹೇಳುವದು, ಇದು ಎಷ್ಟು ಕೆಟ್ಟದ್ದೋ ಹೇಳಲಿಕ್ಕಾಗುವದಿಲ್ಲ. ನಿಂದಿಸುವ
ವನು ಸುಳ್ಳಾಡುವದ್ದರಿಂದ ಸುಳ್ಳಾಡುವವನಿಗೆ ಆಗುವ ಫಲಗಳು ನಿಂದಿಸು
ವವನಿಗೂ ಆಗುತ್ತವೆ. ನೀಚರು ಕಾರಣವಿಲ್ಲದೆ ನಿಂದಿಸುವದ್ದರಿಂದ
ದೊಡ್ಡವರ ಯಶಸ್ಸಿಗೆ ಯಾವಹಾನಿಯೂ ಉಂಟಾಗುವದಿಲ್ಲ. ಬೆಂಕಿಯನ್ನು

ತಿರಸ್ಕಾರಮಾಡಿ ಕಾಲಿನಿಂದ ಒದ್ದರೆ ಬೆಂಕಿಗೆ ಏನೂ ಆಗುವದಿಲ್ಲ. ಒದೆದವನ ಕಾಲು ಮಾತ್ರ ಸುಟ್ಟು ಹೋಗುತ್ತದೆ. ಹೀಗೆಯೇ ನೀಚರ ನಿಂದೆಯಿಂದ ಸಜ್ಜನರಿಗೆ ಏನೂ ಬಾಧಕವಾಗುವದಿಲ್ಲ. ನೀಚರ ಸ್ವಭಾವವನ್ನು ಇವರು ತಿಳಿದಕೂಡಲೇ ಅವರ ಮುಖಾವಲೋಕನವನ್ನು ಸಹಾ ಮಾಡುವದಿಲ್ಲ. ಒಳಿಕ ದುರವಸ್ಥೆಯಲ್ಲಿ ಅವರು ತಮ್ಮ ಆಯುಷ್ಯವನ್ನು ಕಳೆಯಬೇಕಾಗುತ್ತೆ. ಆದ್ದರಿಂದ ನಿರರ್ಥಕವಾಗಿ ಮಾತ್ಸರ್ಯವನ್ನು ತಾಳಿ ಸಂಕಟಪಟ್ಟುಕೊಳ್ಳುವದಕ್ಕಿಂತ ದೇವರು ತಮ್ಮನ್ನು ಯಾವಸ್ಥಿತಿಯಲ್ಲಿ ಇಟ್ಟು ಇದ್ದಾನೆಯೋ ಅದರಲ್ಲಿಯೇ ಸಂತೋಷವಾಗಿರುವದು ಉತ್ತಮ. ಇತರರ ದೊಡ್ಡತನವನ್ನು ನೋಡಿ ಅದು ಅವರಿಗೆ ಹ್ಯಾಗೆ ಬಂತೆಂದು ವಿಚಾರಮಾಡಿ ತಾವೂ ಅವರಂತೆ ಆಗುವದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡಬೇಕು. ಇಲ್ಲದ ಪಕ್ಷದಲ್ಲಿ ಅನ್ಯಾಯವಾಗಿ ಹೊಟ್ಟೆಕಿಚ್ಚಿನಿಂದ ಅವರನ್ನು ನಿಂದಿಸಿ ದೋಷಿಗಳಾಗುವದು ಕೇವಲ ದೂಷ್ಯವಾದ ಕೆಲಸವು.

ಮನುಷ್ಯನಿಗೆ ಮತ್ಸರ ಹುಟ್ಟಿದಕೂಡಲೇ ಇತರರನ್ನು ಕೆಡಿಸುವ ಬುದ್ಧಿ ಹುಟ್ಟುತ್ತೆ. ಮತ್ತೊಬ್ಬರ ವೈಭವವನ್ನು ನೋಡಿ ಸಹಿಸದೆ ಯಾವದಾದರೂ ಒಂದು ವಿಷಯದಿಂದ ಅವರನ್ನು ಕೆಡಿಸಬೇಕೆಂದು ಯತ್ನ ಮಾಡುವವರು ತಾವೇ ಕೆಟ್ಟು ಹೋಗುತ್ತಾರೆ. ಇದರ ನಿದರ್ಶನಗಳು ಸಾವಿರಾರು ಸಿಕ್ಕಬಹುದು. ಆದ್ದರಿಂದ ಇಂಥಾ ಅನಿಷ್ಟಕಾರಕವಾದ ಸಿಟ್ಟು ಮತ್ಸರ ಮುಂತಾದವುಗಳಿಗೆ ನಿಮ್ಮ ಮನಸ್ಸಿನಲ್ಲಿ ಅವಕಾಶವನ್ನು ಕೊಡಬಾರದು. ಎಲ್ಲರ ಸಂಗಡಲೂ ಪ್ರೇಮದಿಂದಲೂ ವಿನಯದಿಂದಲೂ ಇರಬೇಕು. ನಿಮಗಿಂತ ಹೆಚ್ಚು ಯೋಗ್ಯತೆಯುಳ್ಳವರನ್ನು ನೋಡಿ ಸಂತೋಷ ಪಟ್ಟು ದೇವರು ಮನುಷ್ಯಜಾತಿಯಲ್ಲಿ ಇಂಥಾ ರತ್ನಗಳನ್ನು ನಿರ್ಮಿಸಿ ಈ ಜಾತಿಗೆ ಭೂಷಣವನ್ನು ಉಂಟುಮಾಡಿದ್ದಕ್ಕಾಗಿ ದೇವರಲ್ಲಿ ಕೃತಜ್ಞರಾಗಿರಬೇಕು. ನಿಮ್ಮ ಯೋಗ್ಯತೆಗೆ ಸಮಾನರಾದವರಲ್ಲಿ ಸ್ನೇಹವನ್ನು ಮಾಡಬೇಕು. ಸ್ನೇಹವೂ ಪ್ರೇಮವೂ ಸಮಾನಸ್ಕಂಧರಲ್ಲಿ ಮಾಡಿದರೆ ಸುಖವನ್ನುಂಟು ಮಾಡುತ್ತವೆ. ನಿಮಗಿಂತ ಸ್ಥಿತಿಯಲ್ಲಿ ಕಡಮೆಯಾದವರನ್ನೂ ನೋಡಿ ಬೇಸರ ಪಡದೆ ಅಂತಃಕರಣದಿಂದ ಕಾಣಬೇಕು. ಇದರಿಂದ ನಿಮಗೆ ದೇವರು ದಯ

ಮಾಡುತ್ತಾನೆ.* ಈ ಸಣ್ಣ ಜನರಿಗಿಂತಲೂ ನಿಮ್ಮ ಸ್ಥಿತಿಯನ್ನು ದೇವರು ಉತ್ತಮವನ್ನಾಗಿ ಮಾಡಿರುವದೇ ನಿಮ್ಮ ಮೇಲೆ ಒಂದು ಉಪಕಾರವಲ್ಲವೆ? ದೇವರಿಗೆ ನಿಮ್ಮಮೇಲೆ ಹೆಚ್ಚಾಗಿಯೂ ಅವರ ಮೇಲೆ ಕಡಮೆಯಾಗಿಯೂ ಪ್ರೀತಿಯಿದೆ ಎಂದು ಎಣಿಸಬಾರದು. ಈ ಪ್ರಕಾರ ನಿಮಗಿಂತ ಉತ್ತಮರಲ್ಲಿಯೂ ನಿಮಗೆ ಸಮಾನರಲ್ಲಿಯೂ ನಿಮಗಿಂತ ಕಡಮೆಯಾದವರಲ್ಲಿಯೂ ಯಥಾ ಯೋಗ್ಯವಾಗಿ ನಡತೆಯು ಬೆಳಸುವದನ್ನು ಕಲಿತರೆ ಸಿಟ್ಟು ಮತ್ಸರ ಮುಂತಾದ ದುರ್ಗುಣಗಳಿಗೆ ನಿಮ್ಮ ಮನಸ್ಸಿನಲ್ಲಿ ಆಸ್ಪದ ದೊರೆಯದೆ ನಿಮ್ಮ ಮನಸ್ಸು ಪ್ರಸನ್ನವಾಗಿ ಇರುವದು.

ಈ ಹತ್ತು ಲಕ್ಷಣಗಳುಳ್ಳ ಧರ್ಮವು ಮನುಷ್ಯ ಸಾಮಾನ್ಯರಿಂದ ಅಂಗೀಕೃತವಾಗಿದೆ. ಆದ್ದರಿಂದ ನೀವು ಯಾವಮತದವರಾಗಿ ಯಿದ್ದಾಗ್ಯೂ ದೇವರಲ್ಲಿ ವಿಶ್ವಾಸವಿಟ್ಟು ಈ ಧರ್ಮವನ್ನು ಕಾಪಾಡಿಕೊಂಡು ಬಂದರೆ ನೀವು ಎಲ್ಲರಲ್ಲಿಯೂ ಸನ್ಮಾನಿತರಾಗುತ್ತೀರಿ.

ಇಂಥಾ ನಿರ್ಮಲ ಧರ್ಮದಿಂದ ಪವಿತ್ರವಾದ ನಡತೆಯುಳ್ಳ ಮನುಷ್ಯನಂತೆ ಸುಖಿಯಾಗಿಯೂ ಭಾಗ್ಯವಂತನಾಗಿಯೂ ಯಾರೂ ಇಲ್ಲ. ಈ ಸಂಸಾರವು ಬಹು ಭಯಂಕರವಾದದ್ದು. ಈ ಸಂಸಾರ ಮಾರ್ಗದಲ್ಲಿ ಎಲ್ಲಿ ಭಯವಿದೆ? ಯಾವ ಮಾರ್ಗವು ಒಳ್ಳೇದು? ಯಾವದು ಕೆಟ್ಟದ್ದು? ಎಂಬುವದು ನಿಮಗೆ ಗೊತ್ತಾಗುವದಿಲ್ಲ. ಇದು ಒಳ್ಳೇದು, ಇದು ಕೆಟ್ಟದ್ದು, ಎಂಬುವದನ್ನು ತಿಳಿಸಿ ಸಮಯೋಚಿತವಾಗಿ ನಿಮ್ಮನ್ನು ಎಚ್ಚರಿಸಿ ರಕ್ಷಿಸುವಂಥಾ ಧರ್ಮದಂತೆ ನಿಸ್ಪೃಹನಾದ ಮಿತ್ರನು ಪ್ರಪಂಚದಲ್ಲಿ ಯಾರೂ ಯಿಲ್ಲ. ಆದ್ದರಿಂದ ನಿಸ್ಪೃಹವಾಗಿಯೂ ಸರ್ವದಾ ಭಯದದೆಸೆಯಿಂದ ನಿಮ್ಮನ್ನು ಸಂರಕ್ಷಣೆ ಮಾಡುವಂಥಾದ್ದಾಗಿಯೂ ಇರುವ ಧರ್ಮವನ್ನು ನೀವು ಮರೆತು ಅದನ್ನು ಅನಾದರಣೆ ಮಾಡುವದು ಯುಕ್ತವಲ್ಲ. ಆದ್ದರಿಂದ ಧರ್ಮವನ್ನು ಅನುಸರಿಸಿ ಎಲ್ಲಾ ಕೆಲಸಗಳನ್ನು ಮಾಡುವಂತೆಯೂ ಧರ್ಮದಲ್ಲಿ ತತ್ಪರರಾಗಿ ಇರುವಂತೆಯೂ ನಿಮಗೆ ಬುದ್ಧಿಯನ್ನು ಕೊಡಬೇಕೆಂದು ದೇವರನ್ನು ನಿಷ್ಕಪಟವಾದ ಭಕ್ತಿಯಿಂದ ಪ್ರಾರ್ಥಿಸಬೇಕು.

೫ನೇ ಪರಿಚ್ಛೇದ.

ವಧೂ ವೃತ್ತ.

ಮುಂದೆ ಒಳ್ಳೇಫಲವು ಉಂಟಾಗುವಂತೆ ನಿಮ್ಮ ಪ್ರಥಮ ವಯಸ್ಸಿನಲ್ಲಿ ನಡೆದುಕೊಳ್ಳಬೇಕಾದ ವಿಷಯವನ್ನು ಹೇಳಿದ್ದಾಯಿತು. ಇನ್ನುಮೇಲೆ ನಿಮಗೆ ಪ್ರಾಪ್ತವಾಗುವ ನೂತನ ಸ್ಥಿತಿಯಲ್ಲಿ ನಡೆದುಕೊಳ್ಳತಕ್ಕ ಕ್ರಮವನ್ನು ವಿವರಿಸುತ್ತೇನೆ. ದೇವರು ಜಗತ್ತಿನಲ್ಲಿ ಹೆಂಗಸು, ಗಂಡಸು, ಎಂತ ಎರಡು ಜಾತಿಯನ್ನು ಸೃಷ್ಟಿಸಿದ್ದಾನೆ. ಇವರಿಬ್ಬರೂ ಹೊಂದಿಕೊಂಡು ಅನ್ಯೋನ್ಯ ಸಹಾಯ ಮಾಡದೇ ಇದ್ದಪಕ್ಷದಲ್ಲಿ ಸಂಸಾರಕ್ಕೆ ನ್ಯೂನತೆ ಉಂಟಾಗುತ್ತೆ. ಸಂಸಾರಕ್ಕೆ ಸ್ತ್ರೀ ಪುರುಷರಿಬ್ಬರೂ ಅಂಗವಾಗಿದ್ದಾರೆ. ನಮ್ಮ ಶರೀರದಲ್ಲಿ ಯಾವದಾದರೂ ಒಂದು ಅವಯವ ಕಡಿಮೆಯಾಗಿದ್ದರೆ ಆ ಶರೀರವು ಚನ್ನಾಗಿ ಕಾಣುವದಿಲ್ಲ ಮತ್ತು ನಾವು ಮಾಡಬೇಕಾದ ಎಲ್ಲಾ ಕೆಲಸವೂ ನಮ್ಮಿಂದಾಗುವದಿಲ್ಲ. ಹೀಗೆಯೇ ಪುರುಷನು ಎಂಥಾ ವಿದ್ವಾಂಸನಾದಾಗ್ಯೂ, ಶೂರನಾದಾಗ್ಯೂ, ಧನಿಕನಾದಾಗ್ಯೂ, ನಿಸ್ಪೃಹನಾದಾಗ್ಯೂ, ಸ್ತ್ರೀಯರ ಸಹಾಯವಿಲ್ಲದೆ ಆತನಿಗೆ ಪೂರ್ಣತ್ವವಿಲ್ಲ. ಆತನಿಂದ ಯಾವ ಕೆಲಸವೂ ಚನ್ನಾಗಿ ಆಗುವದಿಲ್ಲ. ಸ್ತ್ರೀಯರ ಸಹಾಯವು ಅವಶ್ಯಕವಾಗಿ ಬೇಕಾಗಿರುವ ಕೆಲಸಗಳಲ್ಲಿ ಅವರ ಸಹಾಯ ದೊರೆಯದೆ ಹೋದರೆ ಎಲ್ಲಾ ಕೆಲಸವನ್ನು ಒಬ್ಬನೇ ಮಾಡಬೇಕಾಗುವದರಿಂದ ಆತನ ಮನಸ್ಸು ವ್ಯಗ್ರವಾಗಿ ಹೆಚ್ಚು ಶ್ರಮದಿಂದ ಆತನ ದೇಹ ಸ್ಥಿತಿಯು ಕೆಟ್ಟು ಹೋಗುವದಲ್ಲದೆ ಅನೇಕ ಅನರ್ಥಗಳುಂಟಾಗುತ್ತವೆ. ಸ್ತ್ರೀಯರ ವಿಷಯವೂ ಹೀಗೆಯೇ. ಸ್ತ್ರೀಪುರುಷರಿಬ್ಬರೂ ಪರಸ್ಪರ ಸಹಾಯಕರಾಗಿ ಇರಬೇಕೆಂಬುವದೇ ದೈವ ನಿಬಂಧನೆಯು. ಈ ನಿಬಂಧನೆಯನ್ನು ಕೆಲವರು ಅಲಕ್ಷ್ಯ ಮಾಡಿ ಪಶುಗಳಂತೆ ಸ್ವೇಚ್ಛಾಚಾರಿಗಳಾಗಿರುತ್ತಾರೆ. ಇವರು ಹೀಗೆ ದೈವ ನಿಬಂಧನೆಯನ್ನು ಮೀರಿದ ಪಾಪಕ್ಕೆ ಫಲರೂಪವಾದ ದುಃಖವನ್ನೂ ಅನುತಾಪವನ್ನೂ ಅಪಮಾನವನ್ನೂ ಅನುಭವಿಸಬೇಕಾಗುತ್ತೆ. ಆದ್ದರಿಂದ ಬುದ್ಧಿವಂತರಾದ ಸ್ತ್ರೀಪುರುಷರು ಪರಮೇಶ್ವರನಿಂದ ಗೊತ್ತು ಮಾಡಲ್ಪಟ್ಟಿರುವ ಧರ್ಮಾ

ಅನುಸಾರವಾಗಿಯೂ ಸುಖಕರವಾಗಿಯೂ ಇರುವ ಪರಸ್ಪರ ಸಂಬಂಧವನ್ನು ಇಟ್ಟುಕೊಂಡಿರಬೇಕು. ಈ ಸಂಬಂಧಕ್ಕೆ ವಿವಾಹವೆನ್ನುತ್ತಾರೆ.

ವಿವಾಹ ಮಾಡತಕ್ಕ ರೀತಿಗಳು ಅನೇಕ ದೇಶಗಳಲ್ಲಿ ಅನೇಕ ವಿಧಗಳಾಗಿವೆ. ಅವೆಲ್ಲವೂ ಚನ್ನಾಗಿವೆ ಎಂದು ಹೇಳಲಿಕ್ಕಾಗುವದಿಲ್ಲ. ನಮ್ಮ ದೇಶದಲ್ಲಿ ಹೆಣ್ಣುಮಕ್ಕಳಿಗೆ ೯—೧೦ ವರುಷ ತುಂಬುವದರೊಳಗೆ ಯಾವನಾದರೂ ಒಬ್ಬ ಅಪ್ರಬುದ್ಧನಾದ ಹುಡುಗನಿಗೆ ಲಗ್ನಮಾಡಿ ಕೊಡತಕ್ಕ ಸಂಪ್ರದಾಯವಿದೆ. ಈ ಕಾಲದಲ್ಲಿ ವಧೂವರರಿಬ್ಬರಿಗೂ ತಮ್ಮ ಪರಸ್ಪರ ಸಂಬಂಧ ವೆಂಥಾದ್ದು? ಅದನ್ನು ಕಾಪಾಡಿಕೊಳ್ಳುವ ಕ್ರಮ ಹ್ಯಾಗೆ? ಪರಸ್ಪರ ಐಕಮತ್ಯವೂ ಸನ್ಮಾನವೂ ಯಾತರಿಂದ ಉಂಟಾಗುತ್ತೆಂಬ ವಿಷಯಗಳ್ಯಾವದೂ ತಿಳಿದಿರುವದಿಲ್ಲ. ಆದಕಾರಣ ಇವರಿಗೆ ಯಾವಸುಖ ಉಂಟಾಗಬೇಕೆಂದು ಇವರ ಹಿರಿಯರು ಇವರಿಗೆ ಲಗ್ನ ಮಾಡಿರುತ್ತಾರೋ ಅದು ಪ್ರಾಯೇಣ ಲಭಿಸುವದಿಲ್ಲ. ಅನೇಕ ಸಂದರ್ಭದಲ್ಲಿ ಪರಸ್ಪರ ವೈಷಮ್ಯ ಹುಟ್ಟಿ ಅನರ್ಥಗಳು ಉಂಟಾಗುತ್ತವೆ.

ಮನುಷ್ಯನು ೮ ವರ್ಷದಿಂದ ೨೦ ವರುಷದ ವರಿಗೆ ಜ್ಞಾನವನ್ನು ಸಂಪಾದಿಸತಕ್ಕ ಕಾಲವು. ಅಷ್ಟರಲ್ಲಿಯೇ ಲಗ್ನವಾದರೆ ಈ ಜ್ಞಾನ ಸಂಪಾದನೆ ನಿಂತು ಹೋಗಿ ಇವರಿಬ್ಬರೂ ಸಂಸಾರದಲ್ಲಿ ಸಿಕ್ಕಿಕೊಳ್ಳುತ್ತಾರೆ. ಅನಂತರ ಜ್ಞಾನ ಸಂಪಾದನೆಯನ್ನು ಮಾಡುವದಕ್ಕೆ ಎಷ್ಟು ಯತ್ನಿಸಿದಾಗ್ಯೂ ಸಂಪೂರ್ಣವಾಗಿ ಸಿದ್ಧಿಸುವದಿಲ್ಲ. ಜ್ಞಾನಾರ್ಜನೆಗೆ ಅನುಕೂಲವಾದ ಪೂರ್ವವಯಸ್ಸಿನಂಥಾ ಅಮೂಲ್ಯವಾದ ಕಾಲವು ಮೀರಿಹೋದ ಮೇಲೆ ಏನು ಮಾಡಿದಾಗ್ಯೂ ತಿರುಗಿ ಸಿಕ್ಕುವದಿಲ್ಲ. ಮನುಷ್ಯ ಜನ್ಮವನ್ನೆತ್ತಿ ಜ್ಞಾನವನ್ನು ಸಂಪಾದಿಸದೆ ಇದ್ದರೆ ಅವರನ್ನು ಪಶುವಿಗಿಂತಲೂ ಕಡೆಯೆಂದೆಣಿಸಬೇಕು. ಆದಕಾರಣ ಪೂರ್ವ ವಯಸ್ಸಿನಲ್ಲಿ ವಿವಾಹ ಮಾಡಿಕೊಳ್ಳುವದು ಕೇವಲ ಅನುಚಿತವಾದ ಕಾರ್ಯವು.

* * *

ಸ್ತ್ರೀ ಪುರುಷರಿಗೆ ಪೂರ್ವ ವಯಸ್ಸಿನಲ್ಲಿಯೇ ಮಕ್ಕಳಾದಲ್ಲಿ ಆ ಮಕ್ಕಳು ಅವರ ಸಂತತಿಗಳು ಸಹಾ ಬಲಹೀನರಾಗಿಯೂ ತೇಜೋಹೀನ

ರಾಗಿಯೂ ಬುದ್ಧಿಹೀನರಾಗಿಯೂ ಆಗುವದಲ್ಲದೆ ಆಯುಷ್ಯದ ಪೂರ್ಣಾನುಭವವನ್ನು ಮಾಡದೆ ತಾರುಣ್ಯದಲ್ಲಿಯೇ ಮೃತ್ಯುವಿನ ಮುಖದಲ್ಲಿ ಬೀಳುತ್ತಾರೆ. ಇದಕ್ಕೆ ಕಾರಣವೇನೆಂದರೆ ಅಲ್ಪ ವಯಸ್ಸಿನಲ್ಲಿ ಶರೀರದೊಳಗಣ ವ್ಯಾಪಾರಗಳೂ ಮತ್ತು ಬಲವನ್ನೂ ಬುದ್ಧಿಯನ್ನೂ ಸ್ವಾಸ್ಥ್ಯವನ್ನೂ ವೃದ್ಧಿಪಡಿಸುವ ರಕ್ತ, ಮಾಂಸ, ಮಜ್ಜ, ಮೇದಸ್ಸು ಮೊದಲಾದವುಗಳೂ ಚನ್ನಾಗಿ ಬಲಿತಿರುವದಿಲ್ಲ. ಇಂಥಾ ಅಪಕ್ವ ಸ್ಥಿತಿಯಲ್ಲಿ ಮಕ್ಕಳಾಗುವದರಿಂದ ಅವರಿಗೂ ಅವರ ಸಂತತಿಗೂ ಬಲ ಮುಂತಾದ್ದು ಕಡಮೆಯಾಗಿ ಹೋಗುತ್ತದೆ.

* * *

ಕೆಲವರು ಧನವಾಗಲಿ ರೂಪವಾಗಲಿ ಇರುವದನ್ನ ಮಾತ್ರನೋಡಿ ಲಗ್ನ ಮಾಡುತ್ತಾರೆ. ಧನವೂ ರೂಪೂ ಯಾರಲ್ಲಿಯೂ ಸ್ಥಿರವಾಗಿ ನಿಲ್ಲುವದಿಲ್ಲ; ಆದ್ದರಿಂದ ಹೀಗೆ ಮಾಡುವದು ಯುಕ್ತವಲ್ಲ. ಇಂಥಾ ಧನರೂಪುಗಳನ್ನು ಮಾತ್ರ ಅವಲಂಬಿಸಿರುವ ಮನಸ್ಸು ಇವುಗಳು ನಷ್ಟವಾದ ಬಳಿಕ ಅನ್ಯತ್ರ ಪ್ರವೃತ್ತವಾಗುವದೇಸರಿ. ಇಂಥಾದ್ದರಲ್ಲಿ ಪರಸ್ಪರ ಪ್ರೇಮ ಹ್ಯಾಗೆ ನಿಂತೀತು? ಆದಕಾರಣ ಮುಖ್ಯವಾಗಿ ಸದ್ಗುಣವನ್ನೂ ವಿದ್ಯೆಯನ್ನೂ ಪ್ರೇಮವನ್ನೂ ಔದಾರ್ಯವನ್ನೂ ನೋಡಿ ಲಗ್ನಮಾಡಬೇಕು. ಇಂಥಾ ಉಪಯುಕ್ತ ಸಂಬಂಧವುಳ್ಳ ದಂಪತಿಗಳಲ್ಲಿ ಅತಿಶಯವಾದ ಪ್ರೇಮವು ಬೆಳೆದು ಇವರು ಪರಸ್ಪರ ಸುಖದುಃಖಗಳಲ್ಲಿ ಭಾಗಿಗಳಾಗುತ್ತಾರೆ. ಇದರಿಂದ ಇಂಥಾ ಸಂಸಾರದಲ್ಲಿ ಸ್ವರ್ಗಸಮವಾದ ಸುಖ ವುಂಟಾಗುವದಲ್ಲದೆ ಸಂಸಾರವೂ ಉನ್ನತಿಯನ್ನು ಪಡೆಯುತ್ತದೆ. ಈ ಪ್ರಪಂಚದಲ್ಲಿ ಇಂಥಾ ಯೋಗ್ಯವಾದ ಸಂಬಂಧವುಳ್ಳ ಸ್ತ್ರೀಪುರುಷರೇ ಧನ್ಯರು, ಇವರಿಗೆ ಎಂಥಾ ವಿಪತ್ತಿನಲ್ಲಿಯೂ ಪರಸ್ಪರ ಪ್ರೇಮ ಕಡಮೆಯಾಗದೆ ಒಬ್ಬರನ್ನೊಬ್ಬರು ನೋಡಿಕೊಂಡು ಸುಖವಾಗಿಯೇ ಕಾಲಕ್ಷೇಪ ಮಾಡುತ್ತಾರೆ. ಜಗತ್ತಿನಲ್ಲಿ ಪ್ರೇಮವೇ ಸರ್ವವಿಧವಾದ ಸುಖಕ್ಕೂ ಉತ್ಪತ್ತಿಸ್ಥಾನವು. ಪ್ರೇಮವಿಲ್ಲದವರು ಎಂದಿಗೂ ಸುಖಿಗಳಾಗುವದಿಲ್ಲ. ಪ್ರೇಮದ ಮಹಿಮೆಯಿಂದಲೇ ರಾಮಚಂದ್ರ ನಳಮಹಾರಾಯ ಮುಂತಾದವರು ಅಚಲವಾದ ತಮ್ಮ ಕೀರ್ತಿಯನ್ನು ಈ ಲೋಕದಲ್ಲಿ ನೆಲೆಗೊಳಿಸಿದ್ದಾರೆ. ಇವರಂತೆಯೇ ಸೀತೆ, ಸಾವಿತ್ರಿ, ಅರುಂಧತಿ,

ದಮಯಂತಿ, ಅನಸೂಯೆ ಮುಂತಾದವರು ಅತಿಶಯವಾದ ತಮ್ಮ ಪಾತಿವ್ರತ್ಯದಿಂದ ಸರ್ವರಿಗೂ ಮನೋರಂಜಕವಾಗಿರುವಂತೆ ತಮ್ಮ ಪುಣ್ಯಕೀರ್ತಿಯನ್ನು ಸ್ಥಾಪಿಸಿದ್ದಾರೆ. ಆದ್ದರಿಂದ ಎಲ್ಲರೂ ತಮ್ಮ ಹೃದಯದಲ್ಲಿ ಸ್ವರ್ಗಸುಖಕ್ಕೆ ಸಮಾನ ಸುಖವನ್ನು ಉಂಟುಮಾಡುವ ಪ್ರೇಮವನ್ನು ಬೆಳಸಬೇಕು. ಪ್ರೇಮವು ನಾನಾವಿಧವಾದದ್ದು. ಮಕ್ಕಳು ಮುಂತಾದವರಲ್ಲಿ ಇರುವ ಪ್ರೇಮಕ್ಕೆ ವಾತ್ಸಲ್ಯವೆನ್ನುತ್ತಾರೆ. ತಾಯಿತಂದೆಗಳಲ್ಲಿಯೂ ಗುರುಜನಗಳಲ್ಲಿಯೂ ಈಶ್ವರನಲ್ಲಿಯೂ ಇರುವ ಪ್ರೇಮಕ್ಕೆ ಭಕ್ತಿಯೆಂದು ಹೆಸರು. ಅಣ್ಣತಮ್ಮಂದಿರು ಅಕ್ಕತಂಗಿಯರು ಸ್ನೇಹಿತರು ಮುಂತಾದವರಲ್ಲಿರುವ ಪ್ರೇಮಕ್ಕೆ ಸ್ನೇಹವೆಂದು ಹೆಸರು. ಔದಾರ್ಯವುಳ್ಳವರಿಗೆ ಬಡವರಲ್ಲಿರುವ ಪ್ರೇಮಕ್ಕೆ ದಯೆಯೆಂದು ಸಂಜ್ಞೆ. ಆದರೆ ಪರಸ್ಪರ ಸುಖದುಃಖಗಳಲ್ಲಿ ಸಮಭಾಗಿಗಳಾಗಿ ಶರೀರಗಳು ಎರಡಿದ್ದಾಗ್ಯೂ ಪ್ರಾಣಗಳು ಮಾತ್ರ ಒಂದಾಗಿರುವಂತೆ ವರ್ತಿಸುವ ದಂಪತಿಗಳಲ್ಲಿ ಇರುವ ಪ್ರೇಮಕ್ಕೆ ಪ್ರೇಮವೆಂದಲ್ಲದೆ ಬೇರೆ ಹೆಸರಿಲ್ಲ. ದಂಪತಿಗಳಲ್ಲಿ ಮಾತ್ರ ಪ್ರೇಮವು ಸಂಪೂರ್ಣವಾಗಿ ಇರುತ್ತದೆ. ಇತರ ಸ್ಥಲಗಳಲ್ಲಿ ಇದರ ಅಂಶಮಾತ್ರವಿರುತ್ತದೆಯೇ ಹೊರತು ಸಂಪೂರ್ಣವಾಗಿರುವದಿಲ್ಲ. ಇಂಥಾ ಪ್ರೇಮವೆಂಬ ಧನವನ್ನು ಸದ್ವ್ಯಯಮಾಡಿ ಇನ್ನೂ ಅಭಿವೃದ್ಧಿಪಡಿಸಿಕೊಳ್ಳದೆ ಸಾವಿರಾರು ಜನರು ದುರ್ವ್ಯಯಮಾಡುವದನ್ನು ನೋಡಿ ನಾನು ದುಃಖದಿಂದಲೂ ನಾಚಿಕೆಯಿಂದಲೂ ತಲೆಯನ್ನು ತಗ್ಗಿಸ ಬೇಕಾಗಿದೆ. ಜನರು ವಿಷಯ ಲಂಪಟರಾಗಿ ಅಯೋಗ್ಯವಾದ ಸ್ಥಾನದಲ್ಲಿ ಈ ಪ್ರೇಮ ಧನವನ್ನು ವಿನಿಯೋಗಿಸುತ್ತಾರೆ. ಇದರಿಂದ ಅವರಿಗೆ ಹಾನಿಯಲ್ಲದೆ ಶ್ರೇಯಸ್ಸುಂಟಾಗುವದಿಲ್ಲ. ಮದುವೆಯಾದವರಲ್ಲಿ ವಿಶ್ವಾಸ ಘಾತಕತನವನ್ನು ಮಾಡಿ ಪ್ರೇಮವನ್ನು ಕಳೆದುಕೊಳ್ಳಬಾರದೆಂಬುವದೇ ವಿವಾಹದ ಮುಖ್ಯೋದ್ದೇಶವು. ಕೋಮಲತೆ, ಮಾಧುರ್ಯ ಮೊದಲಾದ ರಮಣೀಯವಾದ ಗುಣಗಳು ಸ್ತ್ರೀಯರಲ್ಲಿ ಸಹಜವಾಗಿ ಇರುತ್ತವೆ, ಪುರುಷರಲ್ಲಿರುವದಿಲ್ಲ. ಇದರಂತೆಯೇ ಸಾಹಸ ಸಹಿಷ್ಣುತೆ ಧೈರ್ಯ ಮೊದಲಾದ ಗುಣಗಳು ಪುರುಷರಲ್ಲಿ ಸಹಜವಾಗಿರುತ್ತವೆ, ಸ್ತ್ರೀಜನರಲ್ಲಿ ಇರುವದಿಲ್ಲ. ಈ ಎರಡು ವಿಧವಾದ ಗುಣಗಳೂ ಬೇರೆ

ಬೇರೆಯಾಗಿರುವದು ಸರಿಯಲ್ಲ. ಯಾವ ಪುರುಷನಲ್ಲಿ, ಸಾಹಸ ಧೈರ್ಯ ಶೌರ್ಯ ಮೊದಲಾದ ಕಠೋರ ಗುಣಗಳೊಡನೆ ದಯೆ ನಮ್ರತೆ ಸ್ನೇಹ ಮೊದಲಾದ ಕೋಮಲ ಗುಣಗಳ ಮೇಳನವಿಲ್ಲವೊ ಆ ಪುರುಷನು ಅತಿಕ್ರೂರನಾಗಿರುತ್ತಾನೆ. ಇದರಂತೆಯೇ ಕೋಮಲತೆ ನಮ್ರತೆ ದಯೆ ಮಮತೆ ಲಜ್ಜೆ ಮೊದಲಾದ ಗುಣಗಳುಳ್ಳ ಸ್ತ್ರೀಯರಲ್ಲಿ ಧೈರ್ಯ ಸಹಿಷ್ಣುತೆ ಸತ್ಯಪರತ್ವ ಮೊದಲಾದ ಗುಣಗಳ ಮೇಳನವಿಲ್ಲದೆ ಇದ್ದರೆ ಅವರು ಅತ್ಯಂತ ಭೀರುಗಳಾಗಿ ಯಾವಕೆಲಸವನ್ನು ಮಾಡಲಿಕ್ಕೂ ಅಶಕ್ತರಾಗಿರುತ್ತಾರೆ. ಆದಕಾರಣ ಸ್ತ್ರೀಪುರುಷರಿಬ್ಬರೂ ತಮ್ಮತಮ್ಮ ಗುಣಗಳ ಪರಸ್ಪರ ಮೇಳನವನ್ನು ಮಾಡಿದರೆ ಸಂಸಾರದಲ್ಲಿ ಸುಖಾಭಿವೃದ್ಧಿ ಯುಂಟಾಗುವದು. ನಿರಂತರ ಸಹವಾಸವಿಲ್ಲದೆ ಇದ್ದರೆ ಒಬ್ಬರ ಗುಣ ಮತ್ತೊಬ್ಬರಿಗೆ ಬರುವದಿಲ್ಲ. ಇಂಥಾ ನಿರಂತರ ಸಹವಾಸವು ಗಂಡಹೆಂಡರಲ್ಲಿ ಹೊರತು ಉಳಿದವರಲ್ಲಿ ಇದ್ದದ್ದೇ ಆದರೆ ಅದು ಲೋಕಾಚಾರಕ್ಕೂ ಧರ್ಮಕ್ಕೂ ವಿರೋಧವಾದದ್ದು.

ಪ್ರಾಣಿಗಳ ಹೃದಯವು ಬಹುದುರ್ಬಲವಾದದ್ದು. ಇದು ಸಮೀಪದಲ್ಲಿ ಮತ್ತೊಬ್ಬರ ಆಧಾರವಿಲ್ಲದೆ ನಿಲ್ಲುವದಿಲ್ಲ. ಆದಕಾರಣ ಮನುಷ್ಯನಿಗೆ ಮತ್ತೊಬ್ಬರ ಜೊತೆ ಆವಶ್ಯಕವು. ಒಬ್ಬ ಮನುಷ್ಯನಿಗೆ ಎಲ್ಲಾ ಸುಖಸಾಧನಗಳನ್ನು ಕಲ್ಪಿಸಿಕೊಟ್ಟು ಅರಣ್ಯದಲ್ಲಿ ಏಕಾಂಗಿಯಾಗಿ ವಾಸಮಾಡಬೇಕೆಂದು ಕಟ್ಟುಮಾಡಿದರೆ ಹಾಗೆ ವಾಸಮಾಡುವದು ಆವನಿಂದ ಎಂದಿಗೂ ಆಗಲಾರದು. ಮತ್ತೊಬ್ಬರ ಜೊತೆಯಿದ್ದರೆ ಎಂಥಾ ಸಂಕಟ ಬಂದಾಗ್ಯೂ ತಾನು ಸುಖಿಯೆಂದೇ ಎಣಿಸುತ್ತಾನೆ. ಆದ್ದರಿಂದ ಸಂಸಾರದಲ್ಲಿ ಎಲ್ಲರಿಗೂ ಒಬ್ಬರ ಜೊತೆ ಆವಶ್ಯಕವಾಗಿ ಬೇಕಾಗಿದೆ. ಇಂಥಾ ಜೊತೆಯವನು ತನಗೆ ಶತ್ರುವಾಗಿಯಾಗಲಿ ಅಥವಾ ಉದಾಸೀನನಾಗಿಯಾಗಲಿ ತನ್ನ ಮನಸ್ಸಿನಂತೆ ನಡೆಯುದವನಾಗಿಯಾಗಲಿ ತನ್ನ ಸುಖದುಃಖಗಳಲ್ಲಿ ಭಾಗಿಯಾಗದವನಾಗಿಯಾಗಲಿ ಇದ್ದಪಕ್ಷದಲ್ಲಿ ಅಂಥಾ ಜೊತೆಯವನು ಇದ್ದರೂ ಒಂದೇ ಇಲ್ಲದೆ ಇದ್ದರೂ ಒಂದೇ. ಜೊತೆಯವನು ಯಾವಾಗಲೂ ತನ್ನಲ್ಲಿ ಪ್ರೇಮವುಳ್ಳವನಾಗಿಯೂ ಸುಖದುಃಖಗಳ ಸಮಯಗಳಲ್ಲಿ ಒಂದೇ ಸಮನಾಗಿ ಇರುವವ

ನಾಗಿಯೂ ಇರಬೇಕು. ಇಂಥಾ ಜೋತೆಯು ಹೆಂಗಸಿಗೆ ಗಂಡನಲ್ಲದೆ ಗಂಡಸಿಗೆ ಹೆಂಡತಿಯಲ್ಲದೆ ಮತ್ತೊಬ್ಬರಲ್ಲ. ದಂಪತಿಗಳಲ್ಲಿರುವ ಅಕೃತ್ರಿಮವಾದ ಪರಸ್ಪರ ಮೈತ್ರಿಯು ಇತರರಲ್ಲಿ ಇರುವದಿಲ್ಲ.

ಅರ್ಧಂಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠತಮಸ್ಸಖಾ ।
ಭಾರ್ಯಾ ಮೂಲಂ ತ್ರಿವರ್ಗಸ್ಯ ಭಾರ್ಯಾ ಮೂಲಂ ತರಿಷ್ಯತಃ ॥

ಎಂದು ವಚನವಿರುವದ್ದರಿಂದ ವಿವಾಹವಿಲ್ಲದೆ ಮನುಷ್ಯನಿಗೆ ತಕ್ಕಜೊತೆ ಸಿಕ್ಕುವದಿಲ್ಲ. ಆದಕಾರಣ ವಿವಾಹವನ್ನು ಮಾಡಿಕೊಳ್ಳುವದು ಉತ್ತಮವು.

ಇದುವರಿಗೆ ವಿವಾಹದ ಉದ್ದೇಶ್ಯವನ್ನು ಹೇಳಿದ್ದಾಯಿತು. ಇನ್ನು ಮೇಲೆ ವಿವಾಹವಾದ ಬಳಿಕ ನೀವು ನಡೆಯತಕ್ಕ ಕ್ರಮವನ್ನು ವಿಚಾರ ಮಾಡೋಣ. ವಿವಾಹಿತರಾದ ದಂಪತಿಗಳಲ್ಲಿ ಪರಸ್ಪರ ಪ್ರೇಮ ವಿದ್ದರೇನೇ ಸುಖಿಗಳಾಗಿರುತ್ತಾರೆ. ಇಲ್ಲದ ಪಕ್ಷದಲ್ಲಿ ಅವರ ದುಃಖಕ್ಕೆ ಕೊನೆಯೇ ಇಲ್ಲವೆಂಬುವದು ಎಲ್ಲರಿಗೂ ತಿಳಿದೇ ಯಿದೆ. ಸುಖದುಃಖಗಳಲ್ಲಿ ಯಾವ ಜ್ಜೀವವೂ ಭಾಗಿಯಾಗಿ, ಪತಿಯೇ ಸರ್ವಸ್ವವೆಂದೆಣಿಸಿಕೊಂಡು, ಪತಿಯು ತನ್ನಲ್ಲಿ ಸ್ವಲ್ಪ ಒಳ್ಳೇ ಮಾತನಾಡಿದರೆ ಸ್ವರ್ಗವೇ ಕೈಸೇರಿದಂತೆ ಸಂತೋಷ ಪಡುತ್ತ ಇರುವ ಹೆಂಡತಿಯಲ್ಲಿ ಗಂಡನು ಯಾವದಾದರೂ ಒಂದು ಸಣ್ಣ ಮಾತಿಗಾಗಿ ವೈಮನಸ್ಯವನ್ನು ಹೊಂದಿ ಆಕೆಯನ್ನು ನಿರಾಕರಿಸುವದು ಅಥವಾ ಆಕೆಯನ್ನು ಪರಿತ್ಯಾಗಮಾಡಿ ಎರಡನೆ ಮದುವೆ ಮಾಡಿಕೊಳ್ಳುವದು ಮೊದಲಾದ ಪಾಪಾಚರಣೆಗಳು ನಮ್ಮ ಜನರಲ್ಲಿ ವಾಡಿಕೆಯಾಗಿವೆ. * *

ಪುರುಷರು ಸ್ತ್ರೀಯರಿಗಿಂತ ಬಲಿಷ್ಠರಾದ್ದರಿಂದ ಅವರು ಪಕ್ಷಿಮವನ್ನು ಪೂರ್ವವೆಂದಾಗ್ಯೂ ನಡಿಯುತ್ತೆ. ಆದರೆ ಈ ರೀತಿಯಲ್ಲಿ ಅನ್ಯಾಯ ಮಾಡುವದು ಪುರುಷರಿಗೆ ಸರ್ವಥಾ ನ್ಯಾಯವಲ್ಲ. ವೀರನಾದವನು ದುರ್ಬಲನು ಮಾಡಿದ ಅಪರಾಧವನ್ನು ಕ್ಷಮಿಸಿ ಮಮತೆಯಿಂದ ಆತನನ್ನು ಸ್ವಾಧೀನಪಡಿಸಿಕೊಳ್ಳಬೇಕು. ಇದು ಅವನ ಶಕ್ತಿಗೆ ಭೂಷಣವು. ಹಾಗೆ ಮಾಡದೆ ದುರ್ಬಲರಾದವರನ್ನು ಕೊಲ್ಲುವದರಲ್ಲಿಯೇ ತನ್ನ ಪರಾಕ್ರಮನ್ನು ವಿನಿಯೋಗಿಸಿದರೆ ಆತನನ್ನು ಯಾರುತಾನೇ ಕೊಂಡಾಡುವರು?

ಧರ್ಮವಿರುದ್ಧವಾದ ಇಂಥಾ ಆಚರಣೆಯಿಂದ ಅವನು ದೋಷಕ್ಕೆ ಪಾತ್ರನಾಗುತ್ತಾನೆ. ಸ್ತ್ರೀಯರ ವಿಷಯದಲ್ಲಿ ಅನ್ಯಾಯಮಾಡಿ ಅವರನ್ನು ದುಃಖಿತಪಡಿಸುವದಕ್ಕೋಸ್ಕರ ಪುರುಷರಿಗೆ ಈಶ್ವರನು ಸ್ತ್ರೀಯರಿಗಿಂತ ಹೆಚ್ಚು ಬಲವನ್ನು ಕೊಟ್ಟಿಲ್ಲ. ಆದ್ದರಿಂದ ಪುರುಷರು ಸ್ತ್ರೀಯರನ್ನು ಉದಾಸೀನಮಾಡದೆ ಮಮತೆಯಿಂದ ಸ್ವಾಧೀನಪಡಿಸಿಕೊಂಡು ಅವರಲ್ಲಿ ಸ್ಥಿರವಾದ ತಮ್ಮ ಪ್ರೇಮವನ್ನು ಇಡಬೇಕಾದ್ದು ಯುಕ್ತವಾಗಿದೆ.

ಹೆಂಗಸರಲ್ಲಿಯೂ ಕೆಲವು ಮೂರ್ಖರು ತಮ್ಮ ಗಂಡಂದಿರ ಪ್ರೇಮವು ತಮ್ಮಲ್ಲಿಲ್ಲವೆಂದು ತಿಳಿದುಕೊಂಡು ಅವರ ಮನಸ್ಸನ್ನು ತಮ್ಮ ಸ್ವಾಧೀನಪಡಿಸಿಕೊಳ್ಳುವದಕ್ಕೆ ಉಪಾಯವನ್ನು ಹುಡುಕುತ್ತಾರೆ. ಇಂಥಾ ಸ್ತ್ರೀಯರಿಗೆ ಪಂಚಾಕ್ಷರಿ, ಅಷ್ಟಾಕ್ಷರಿ ಮೊದಲಾದ ಮಂತ್ರಗಳನ್ನು ಉಪದೇಶ ಮಾಡುವವರೂ ಭಸ್ಮ, ತಾಯಿತಿ, ಮುಂತಾದ ವಶೀಕರಣದ ಉಪಾಯಗಳನ್ನು ಅನುಕೂಲಪಡಿಸಿ ಕೊಡುವವರೂ ಬೇಕಾದಷ್ಟು ಜನ ಸಿಕ್ಕುತ್ತಾರೆ. ಇಂಥಾ ಮೋಸಗಾರರು ಹೇಳಿದ್ದನ್ನೆಲ್ಲಾ ಮಾಡಲಿಕ್ಕೆ ಈ ಹುಚ್ಚು ಹೆಂಗಸರು ಸಿದ್ಧರಾಗಿರುತ್ತಾರೆ. ಇದರಿಂದ ಶ್ರಮಪಟ್ಟು ಸಂಪಾದಿಸಿದ ದ್ರವ್ಯವೂ ವ್ಯಯವಾಗಿ ಈ ದುರ್ಜನರ ದುರ್ಬೋಧೆಯಿಂದ ಆ ಸ್ತ್ರೀಯರ ಮರ್ಯಾದೆಯೂ ಉಳಿಯುವದಿಲ್ಲ, ಸ್ತ್ರೀಯರು ಇವರ ಹೇಳಿಕೆಯಂತೆ ಅನೇಕ ಅಧರ್ಮದ ಕೆಲಸಗಳನ್ನು ಮಾಡಿ ಜನರಲ್ಲಿ ಅಪವಾದಕ್ಕೆ ಗುರಿಯಾಗುತ್ತಾರೆ. ಇಷ್ಟರಲ್ಲಿಯೇ ಇದರ ಪರ್ಯವಸಾನ ಆಗುವದಿಲ್ಲ. ಈ ಮೋಸಗಾರರು ತಾವು ಹೇಳುವದು ನಿಜವೆಂದು ತೋರುವದಕ್ಕೋಸ್ಕರ ಈ ಔಷಧವನ್ನು ಇಂಥಾ ಹೊತ್ತಿನಲ್ಲಿ ಈ ರೀತಿಯಲ್ಲಿ ಗಂಡನಿಗೆ ಕೊಡು, ಇದರಿಂದ ನೀನು ಹೇಳಿದಂತೆ ಇವನು ನಡೆಯುತ್ತಾನೆಂದು ಹೇಳಿ ಯಾವದಾದರೂ ಒಂದು ವಿಧವಾದ ಕಲ್ಲು ಮಣ್ಣು ಬೂದಿ ಮುಂತಾದ್ದನ್ನು ಕೊಡುತ್ತಾರೆ. ಬುದ್ಧಿಹೀನರಾದ ಹೆಂಗಸರು ಇವುಗಳನ್ನು ಗಂಡಂದಿರಿಗೆ ಯಾವ ರೀತಿಯಲ್ಲಿಯಾದರೂ ತಿನ್ನಲಿಕ್ಕೆ ಕೊಡುತ್ತಾರೆ. ಈ ಔಷಧಗಳ ಸ್ವಭಾವವನ್ನು ಪರೀಕ್ಷಿಸತಕ್ಕಷ್ಟು ಬುದ್ಧಿ ಇವರಿಗೆ ಇರುವದಿಲ್ಲ. ಇವುಗಳಲ್ಲಿ ಒಂದೊಂದು ವೇಳೆ "ವಾತರೋಗಕ್ಕೆ ವೈದ್ಯ! ಪಿತ್ತರೋಗಕ್ಕೆ ವೈದ್ಯ! ಬಾಣಂತಿ

ರೋಗಕ್ಕೆ ವೈದ್ಯ ! ಸರ್ವ ರೋಗಕ್ಕೂ ವೈದ್ಯ !!" ಎಂದು ತಿರುಗುತ್ತಿರುವವರಲ್ಲಿ ಇರುವ ತಾಮ್ರ, ಪಾದರಸ, ಪಾಷಾಣ ಮುಂತಾದವುಗಳ ಅಪಕ್ವವಾದ ಭಸ್ಮಗಳು ಸೇರಿ ಇರುತ್ತವೆ. ಇವೇನಾದರೂ ಹೊಟ್ಟೆಗೆ ಹೋದರೆ ಸ್ವಲ್ಪ ದಿವಸದಲ್ಲಾಗಲಿ ಅಥವಾ ಕಾಲಕ್ರಮದಿಂದಲಾಗಲಿ ಆ ಮನುಷ್ಯರು ಯಮಪಟ್ಟಣವನ್ನು ನೋಡಬೇಕಾಗುತ್ತದೆ!! ಬುದ್ಧಿಹೀನರಾದ ಸ್ತ್ರೀಯರು ಆ ಮೋಸಗಾರರ ಸುಳ್ಳು ಮಾತುಗಳನ್ನು ನಂಬಿ ಗಂಡಂದಿರನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಇಂಥಾ ಅಪಾಯಕರವಾದ ವಸ್ತುಗಳನ್ನು ಅವರ ಹೊಟ್ಟೆಗೆ ಹಾಕಿ ಪ್ರಾಣಭಯವನ್ನು ಉಂಟುಮಾಡುತ್ತಾರೆ. ಇದಕ್ಕಾಗಿ ಮಂತ್ರತಂತ್ರಗಳು ಇರುವದು ಸುಳ್ಳು, ಈ ಮಂತ್ರತಂತ್ರಗಳನ್ನು ಎತ್ತಿಸುವ ಹೆಂಗಸರ ನಡತೆ ಅವರ ಗಂಡಸರಿಗೆ ಎಂದಿಗಾದರೂ ಗೊತ್ತಾಗದೆ ಹೋಗುದಿಲ್ಲ; ಗೊತ್ತಾದ ಕೂಡಲೆ ಅದುವರಿಗೂ ಅವರ ಮೇಲೆ ಇದ್ದ ಅಭಿಮಾನ ಲೇಶವೂ ಇಲ್ಲದಂತಾಗುತ್ತೆ.

ಗಂಡಂದಿರನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ಕೆಲವು ಉಪಾಯಗಳು ಉಂಟು. ಅವುಗಳನ್ನು ಸರ್ವರೂ ಮಾಡಬೇಕು. ಅವುಗಳ್ಯಾವವೆಂದರೆ :—

ತಮ್ಮ ನಡತೆ ತಮ್ಮ ಗಂಡಂದಿರ ಮನಸ್ಸು ಒಪ್ಪುವಂತೆ ಇರಬೇಕು. ಅವರಿಗೆ ಬೇಡವಾದ್ದನ್ನು ಎಂದಿಗೂ ಮಾಡಬಾರದು. ಅವರ ಎದುರಿಗೆ ಗಟ್ಟಿಯಾಗಿ ಮಾತನಾಡಬಾರದು. ಅವರನ್ನು ಎಂದಿಗೂ ನಿರಾಕರಿಸಬಾರದು. ಧರ್ಮಕ್ಕೆ ಅನುಸಾರವಾಗಿ ಯಾವ ಕೆಲಸವನ್ನು ಹೇಳಿದರೂ ಅದು ಶ್ರಮಸಾಧ್ಯವಾದಾಗ್ಯೂ ಮಾಡಬೇಕು. ಅವರು ಯಾವ ಕೆಲಸವನ್ನು ಯಾವ ವೇಳೆಯಲ್ಲಿ ಮಾಡಬೇಕೆಂದು ಹೇಳುತ್ತಾರೋ ಆ ಕೆಲಸವನ್ನು ಆ ಹೊತ್ತಿಗೆ ಸರಿಯಾಗಿ ತಪ್ಪದೆ ಮಾಡಬೇಕು. ಅವರು ಹೇಳಿದ ಕೆಲಸವು ತಮ್ಮಿಂದ ಆಗುವದಿಲ್ಲವೆಂತಲಾಗಲಿ ಅದನ್ನು ಮಾಡುವದರಲ್ಲಿ ತಮಗೆ ಬೇಸರಿಕೆಯಾಗುತ್ತೆಂತಾಗಲಿ ಉದ್ಧತತನದಿಂದ ಹೇಳಬಾರದು. ಆ ಕೆಲಸವು ತಮ್ಮಿಂದ ಆಗದಪಕ್ಷದಲ್ಲಿ ನಮ್ರತೆಯಿಂದ ಅದರ ಕಾರಣಗಳನ್ನು ಅವರಿಗೆ ತಿಳಿಯ ಪಡಿಸಬೇಕು. ಅವರಲ್ಲಿ ಯಾವವಿಧವಾದ ಸುಳ್ಳನ್ನೂ ಹೇಳ

ಬಾರದು. ಅವರ ಎದುರಿಗೆ ಇತರರ ನಿಂದೆಯನ್ನು ಮಾಡಬಾರದು. ಇತರರ ಎದುರಿಗೆ ಅವರ ನಿಂದೆಯನ್ನು ಮಾಡಬಾರದು. ನಿಷ್ಕಾರಣವಾಗಿ ಸಿಟ್ಟು ಮಾಡಿಕೊಂಡು ಅವರ ಎದುರಿಗೆ ಬಾಯಿಗೆ ಬಂದಂತೆ ಮಾತನಾಡ ಬಾರದು. ಅವರನ್ನು ಎಂದಿಗೂ ಮೋಸಗೊಳಿಸಬಾರದು. ಅವರು ಮಾಡುವ ಒಳ್ಳೇ ಕೆಲಸಕ್ಕೆ ಅಡ್ಡಿ ಮಾಡಬಾರದು. ಅವರ ಮನಸ್ಸು ನೋಯುವ ಕೆಲಸವನ್ನು ಮಾಡಬಾರದು. ಯಾವ ಕೆಲಸದಲ್ಲಿಯಾಗಲಿ ತಮ್ಮ ತಪ್ಪಾಗಿ ಯಿದ್ದರೆ ಒಪ್ಪಿಕೊಂಡು ಕ್ಷಮೆಯನ್ನು ಕೇಳಿಕೊಳ್ಳಬೇಕು. ಅವರು ಮಾಡಿದ್ದು ತಪ್ಪಾಗಿದ್ದರೆ ಅದಕ್ಕೆ ಸಿಟ್ಟು ಮಾಡಿಕೊಳ್ಳದೆ ಸಮಾಧಾನ ದಿಂದ ಅದನ್ನು ಅವರಿಗೆ ತಿಳಿಸಬೇಕು. ತಮ್ಮಿಂದ ಆದಷ್ಟು ಪ್ರೇಮದಿಂದ ಅವರ ಶುಶ್ರೂಷೆಯನ್ನು ಮಾಡಬೇಕು.

ಒಳ್ಳೇಬಟ್ಟೆಗಳನ್ನು ಉಟ್ಟುಕೊಂಡು ಒಡವೆಗಳನ್ನು ತೊಟ್ಟುಕೊಂಡು ಪತಿಗಳನ್ನು ಮೋಹಗೊಳಿಸುವ ಯತ್ನವನ್ನು ಎಂದಿಗೂ ಮಾಡಬಾರದು. ತಮ್ಮಲ್ಲಿ ಒಳ್ಳೇ ಮನಸ್ಸಿದ್ದರೆ ಅದರಿಂದಲೇ ಅವರ ಮನಸ್ಸು ತಮ್ಮ ಕಡೆಗೆ ತಿರುಗುತ್ತದೆ. ನೀವು ನಿಮ್ಮ ಸದ್ಗುಣಗಳಿಂದ ನಿಮ್ಮ ಪತಿಗಳನ್ನು ಮೋಹ ಗೊಳಿಸಬೇಕು. ಅವರಿಗೆ ಯಾವ ವಿಷಯದಲ್ಲಿಯೂ ನೀವು ವಂಚನೆ ಯನ್ನು ಮಾಡಬಾರದು. ಪತಿಗೆ ಸಮನಾದ ಸ್ನೇಹಿತನು ಈಜಗತ್ತಿನಲ್ಲಿ ಯಾರೂ ಇಲ್ಲ. ಆತನು ಗುರುವಿನಂತೆ ಸನ್ಮಾರ್ಗವನ್ನು ತೋರಿಸುತ್ತಾನೆ. ತಂದೆಯಂತೆ ಹಿತವನ್ನುಂಟುಮಾಡುತ್ತಾನೆ. ತಾಯಿಯಂತೆ ಮಮತೆ ಮಾಡಿ ವಿಶ್ವಾಸಕ್ಕೆಪಾತ್ರನಾಗಿ ಇರುತ್ತಾನೆ. ದೇವರಂತೆ ಪೂಜ್ಯನಾಗಿ ನಿಮ್ಮ ಪ್ರಾಣ ಕ್ಕಿಂತಲೂ ಪ್ರಿಯನಾಗಿರುತ್ತಾನೆ. ಇಂಥಾ ಅದ್ವಿತೀಯನಾದ ಸ್ನೇಹಿತನನ್ನು ನೀವು ವಂಚಿಸಿದ ಪಕ್ಷದಲ್ಲಿ ಇನ್ಯಾರ ಜೊತೆಯಲ್ಲಿ ತಾನೆ ನಿಷ್ಕಪಟವಾದ ಮನಸ್ಸಿನಿಂದ ಇದ್ದು ಸುಖಪಡ ಬಹುದು ? ಪತಿಯನ್ನು ವಂಚಿಸುವ ಹೆಂಗಸರು ಎಂಥಾ ಅಕೃತ್ಯವನ್ನು ಮಾಡಲಿಕ್ಕೂ ಹಿಂತೆಗೆಯುವದಿಲ್ಲ. ಆದ್ದರಿಂದ ನೀವೆಲ್ಲರೂ ನಿಮ್ಮನಿಮ್ಮ ಪತಿಗಳ ಸಂಗಡ ನಿರ್ವಂಚನೆಯಿಂದ ನಡೆದುಕೊಳ್ಳಬೇಕು. ಯಾವ ಕೆಲಸವು ನಿಮ್ಮ ಪತಿಗಳಿಗೆ ಬೇಡವಾಗಿ ದೆಯೊ ಆ ಕೆಲಸವು ನಿಮಗೆ ಎಷ್ಟು ಲಾಭಕರವಾದಾಗ್ಯೂ ಅದರಿಂದ

ಇತರರ ಪ್ರೇಮ ನಿಮ್ಮಲ್ಲಿ ಉಂಟಾಗುವಹಾಗೆ ಇದ್ದಾಗ್ಯೂ ನೀವು ಆ ಕೆಲಸವನ್ನು ಮಾಡಬಾರದು. ನಿಮ್ಮ ಪತಿಯು ನಿಮ್ಮಲ್ಲಿ ಹೇಳಿರುವ ಗುಟ್ಟಿನ ಮಾತುಗಳನ್ನು ಇತರರ ಸಂಗಡ ಸರ್ವಥಾ ಹೇಳಬಾರದು. ಏಕಾಂತದಲ್ಲಿ ನಿಮ್ಮ ಪತಿಯು ನಿಮ್ಮ ವಿಷಯದಲ್ಲಿ ಸಣ್ಣ ಮಾತುಗಳನ್ನಾಡಿದ್ದಲ್ಲಿ ಅದನ್ನು ಹೊರಪಡಿಸಬಾರದು. ಈ ಪ್ರಕಾರ ನೀವು ಆಚರಣೆಯನ್ನು ಇಟ್ಟದ್ದರೆ ನಿಮ್ಮನಿಮ್ಮಲ್ಲಿ ವಿರೋಧ ಎಂದಿಗೂ ಉಂಟಾಗುವದಿಲ್ಲ. ಕೆಲವು ಹೆಂಗಸರು ತಮ್ಮ ಭಾವಮೈದಿಂದರ ಮೇಲೂ ಅತ್ತೆ ಮಾವಂದಿರ ಮೇಲೂ ನೆರೆ ಹೊರೆಯುವರ ಮೇಲೂ ತಮ್ಮ ಗಂಡಂದಿರಿಗೆ ಕ್ಷುದ್ರವನ್ನು ಹೇಳಿ ಗಂಡಂದಿರ ಪ್ರೇಮವನ್ನು ಸಂಪಾದಿಸಲಿಕ್ಕೆ ಯತ್ನಿಸುತ್ತಾರೆ. ಹಾಗೆ ಮಾಡುವದು ಅನುಚಿತವಾದ ಕಾರ್ಯವು. ಕ್ಷುದ್ರವನ್ನು ಹೇಳುವವರನ್ನು ಯಾರೂ ನಂಬುವದಿಲ್ಲ. ತಮ್ಮಲ್ಲಿ ಇತರರ ನಿಂದೆಯನ್ನು ಮಾಡುವ ಜನರು ಇತರರಲ್ಲಿ ತಮ್ಮ ನಿಂದೆಯನ್ನೂ ಮಾಡಬಲ್ಲರೆಂದು ಎಲ್ಲರೂ ಬಲ್ಲರು. ನಿಮ್ಮ ವಿಷಯದಲ್ಲಿ ಯಾರಾದರೂ ನಿಷ್ಕಾರಣವಾಗಿ ಅಪವಾದವನ್ನಾಡಿದರೆ ಅದನ್ನು ಕೇಳಿಕೊಂಡು ಸುಮ್ಮನಿದ್ದು ನಿಮ್ಮ ಆಚರಣೆಯನ್ನು ನಿರ್ಮಲವನ್ನಾಗಿ ಮಾಡಿಕೊಂಡು ಸಮಾಧಾನದಿಂದ ಇರಬೇಕು. ಈ ಅಪವಾದವು ಸುಳ್ಳೆಂಬುವದು ಕಾಲಕ್ರಮೇಣ ಎಲ್ಲರಿಗೂ ತಿಳಿದು ಆ ಅಪವಾದವನ್ನು ಹೇಳಿದವರ ಮುಖಭಂಗವು ಆಗದೆ ತಪ್ಪದು. ನಿಮ್ಮ ಗಂಡಂದಿರ ವಿಷಯದಲ್ಲಿ ಯಾರಾದರು ಅಪವಾದವನ್ನು ನುಡಿದರೆ ಅದಕ್ಕಾಗಿ ಅವರಸಂಗಡ ವಿವಾದ ಮಾಡಬಾರದು. ಆ ಅಪವಾದವು ನಿಜವಾಗಿದ್ದ ಪಕ್ಷದಲ್ಲಿ ಅದನ್ನು ನಿವಾರಣೆ ಮಾಡುವ ಪ್ರಯತ್ನ ಮಾಡಬೇಕೇ ಹೊರತು ಅದಕ್ಕಾಗಿ ಜನರ ಸಂಗಡ ವಿವಾದ ಮಾಡಿದ್ದರಿಂದ ಏನೂ ಫಲವಿಲ್ಲ. ನಿಮ್ಮ ಗಂಡಂದರಿಗೆ ನೀವು ಎಲ್ಲಾ ಕೆಲಸದಲ್ಲಿಯೂ ನಿಮ್ಮಿಂದಾಗುವಷ್ಟು ಸಹಾಯವನ್ನು ಮಾಡಬೇಕು. ಮನೆಯಲ್ಲಿ ನಡಿಯತಕ್ಕ ಕೆಲಸವನ್ನೆಲ್ಲಾ ಹಾಲುಮಾರಿಕೆ ಯಿಲ್ಲದೆ ಕಾಲಕಾಲಕ್ಕೆ ಸರಿಯಾಗಿ ಮಾಡುತ್ತಾ ನಿಮ್ಮ ಪತಿಯು ಮತ್ತು ಮನೆಯಲ್ಲಿರುವ ಇತರ ಜನರ ಉನ್ನತಿಯಾಗುವಂಥಾ ಕೆಲಸದಲ್ಲಿ ಅವ್ಯಗ್ರವಾದ ಮನಸ್ಸನ್ನು ಇಡಬೇಕು. ಯಜಮಾನರು ಮನೆಗೆ ಬಂದ ಕೂಡಲೆ ಅವರ ಸಂಗಡ

ಕೆಲಸಕ್ಕೆ ಬಾರದ ಮಾತುಗಳನ್ನು ಆಡುತ್ತಾ ಹೊತ್ತು ಕಳೆಯಬಾರದು. ಒಂದು ದಿವಸದಲ್ಲಿ ಒಂದೆರಡು ಘಳಿಗೆಯ ವರೆಗೆ ಅವರ ಸಂಗಡ ವಿನೋದದಿಂದ ಹೊತ್ತನ್ನು ಕಳೆಯುವದು ನ್ಯಾಯವು. ಪರಂತು ಅದಕ್ಕಿಂತ ಹೆಚ್ಚು ಹೊತ್ತನ್ನು ಈ ರೀತಿಯಲ್ಲಿ ಕಳೆಯುವದರಿಂದ ಅನೇಕ ದೊಡ್ಡ ಕೆಲಸಗಳು ಕೆಡುವವಲ್ಲಗೆ ಪಾಲುವಾರಿಕೆಯಿಂದ ಹೊತ್ತು ಕಳೆಯುವ ದಂಪತಿಗಳಲ್ಲಿ ಪರಸ್ಪರ ಕಲಹಕ್ಕೆ ಕಾರಣವಾದ ಸಂಗತಿಗಳು ಹುಟ್ಟಿ ಜಗಳ ಉಂಟಾಗುತ್ತದೆ. ಇದರಿಂದ ಮನಸ್ಸೂ ಶರೀರವೂ ಅಸ್ವಸ್ಥವಾಗಿ ಯಾವ ಕೆಲಸ ಮಾಡಲಿಕ್ಕೂ ಉತ್ಸಾಹ ಉಂಟಾಗುವದಿಲ್ಲ. ನಿಮ್ಮ ಗಂಡಂದಿರ ಸಂಗಡ ಮಾತನಾಡುವಾಗ ಹೆಚ್ಚು ಹರಟೆಯನ್ನು ಬಿಟ್ಟು ನೀತಿ, ಜ್ಞಾನ, ಧರ್ಮ, ಮತ್ತು ದೇವರು ಈ ವಿಷಯದಲ್ಲಿ ಮಾತನಾಡಬೇಕು. ಸಂಸಾರಕ್ಕೆ ಬೇಕಾದ ವಿಷಯಗಳನ್ನು ಸಮಯನೋಡಿ ತಿಳಿಸುತ್ತಿರಬೇಕು. ಅವರ ಮನಸ್ಸು ಯಾವ ಕಾರಣದಿಂದಾದರೂ ಖಿನ್ನವಾಗಿದ್ದರೆ ಅವರ ಸಂಗಡ ಒಳ್ಳೇ ಮಾತುಗಳನ್ನಾಡಿ ಸಮಾಧಾನ ಪಡಿಸಬೇಕು. ಯಾವ ಕೆಲಸದಲ್ಲಿಯಾಗಲಿ ಆಶಾಭಂಗವಾಗಿ ಉತ್ಸಾಹ ಹೀನರಾದರೆ ಉತ್ಸಾಹವನ್ನು ಉಂಟುಮಾಡುವ ಮಾತುಗಳಿಂದ ಸಮಾಧಾನಪಡಿಸಿ ಧೈರ್ಯವನ್ನು ಹೇಳಬೇಕು. ಆಪತ್ತಿನ ಕಾಲದಲ್ಲಿ ಪತಿಯು ಯಾವಸ್ಥಿತಿಯಲ್ಲಿ ಇರುತ್ತಾನೋ ನೀವೂ ಮನಃಪೂರ್ವಕವಾಗಿ ಆ ಸ್ಥಿತಿಯಲ್ಲೇ ಇರಬೇಕು. ಯಾವದಕ್ಕೂ ಅಸಮಾಧಾನಪಡಬಾರದು. ಕೆಲವು ಹೆಂಗಸರು ತಮ್ಮ ಪತಿಗಳಿಗೆ ಒಳ್ಳೇಸೀರೆ, ಕುಪ್ಪಸ, ಒಡವೆ ಮುಂತಾದವುಗಳಿಗಾಗಿ ಬಹಳ ತೊಂದರೆಯನ್ನು ಕೊಟ್ಟು ಅವುಗಳನ್ನು ಆತನು ತಂದು ಕೊಡಲಾರದ ಸ್ಥಿತಿಯಲ್ಲಿ ಇದ್ದ ಪಕ್ಷದಲ್ಲಿ ತಮ್ಮ ತಂದೆ, ಚಿಕ್ಕಪ್ಪ, ಅಣ್ಣ, ತಮ್ಮ ಮುಂತಾದ ತೌರುಮನೆಯವರ ಪ್ರಶಂಸೆಯನ್ನು ಮಾಡಿ ಗಂಡನು ನಾಚಿಕೊಳ್ಳುವಂತೆ ಮಾಡುತ್ತಾರೆ. ಇದರಿಂದ ಆತನಿಗೆ ಬಹಳ ವ್ಯಸನ ಉಂಟಾಗಿ ಇವರ ವಿಷಯದಲ್ಲಿದ್ದ ಮಮತೆಯೂ ಇಲ್ಲವಾಗುತ್ತೆ. ಆದ್ದರಿಂದ ಉತ್ತಮ ಸ್ತ್ರೀಯರು ಇಂಥಾ ದುರಾಚಾರವನ್ನು ಮಾಡಬಾರದು. ಗಂಡಸರು ತಮ್ಮ ತಂದೆಯಿಂದ ಹೆಸರುವಾಸಿಯನ್ನು ಪಡಿಯುವಂತೆ ಹೆಂಗಸರು ತಮ್ಮ ಪತಿಗಳಿಂದ ಹೆಸರುವಾಸಿಯನ್ನು ಪಡೆಯುತ್ತಾರೆ. ಗಂಡನ ಸ್ಥಿತಿ ಒಳ್ಳೇದಾಗಲಿ,

ಕೆಟ್ಟದ್ದಾಗಲಿ,ಗಂಡನಿಗೆ ಐಶ್ವರ್ಯವಿರಲಿ, ಬಡತನವಿರಲಿ, ಅದನ್ನು ಹೆಂಡತಿಯೂ ಅನುಭವಿಸಬೇಕು. ಹೀಗಿರುವಲ್ಲಿ ಅನ್ಯರ ಐಶ್ವರ್ಯದಗೊಡವೆ ಇವರಿಗೇತಕ್ಕೆ ? ತಂದೆ ಧೊರೆಯಾಗಿದ್ದಾಗ್ಯೂ ಆತನ ಪದವಿಗೆ ಸ್ತ್ರೀಯು ಎಂದಿಗೂ ಅಧಿಕಾರಿಯಾಗುವದಿಲ್ಲ. ಆದ್ದರಿಂದ ತನ್ನ ಗಂಡನಮಾನವನ್ನು ಕಾಪಾಡಿ ಆತನು ಇರುವ ಸ್ಥಿತಿಯಲ್ಲಿ ತಾನೂ ಸಂತೋಷದಿಂದ ಇರಬೇಕು, ಇಂಥಾ ಸ್ತ್ರೀಯೆ ಈಲೋಕದಲ್ಲಿ ಮಾನ್ಯಳಾಗಿಯೂ ಪೂಜ್ಯಳಾಗಿಯೂ ಇರುತ್ತಾಳೆ. ನಮ್ಮ ಭರತ ಖಂಡದಲ್ಲಿ ಸೀತೆ, ಸಾವಿತ್ರಿ, ಅರುಂಧತಿ, ಲೋಪಾಮುದ್ರೆ, ದಮಯಂತಿ ಮುಂತಾದ ಕುಲಸ್ತ್ರೀಯರ ಯಶಸ್ಸು 'ಇಂದಿನವರಿಗೂ ಬೆಳದಿಂಗಳಂತೆ ನಿಷ್ಕಳಂಕವಾಗಿ ಪ್ರಕಾಶಿಸುವದಕ್ಕೆ ಕಾರಣವೇನು ? ಇವರು ತಮ್ಮ ತಮ್ಮ ಗಂಡಂದರಿಗೆ ಪರಮ ಭಕ್ತರಾಗಿ ಅವರಲ್ಲಿ ಅತ್ಯಂತವಾಗಿ ಪ್ರೇಮವನ್ನು ಇಟ್ಟು ಇದ್ದದ್ದರಿಂದಲೇ ಇಂಥಾ ಕೀರ್ತಿಯನ್ನು ಪಡೆದಿದ್ದಾರೆ. ಅಗಸ್ತ್ಯಋಷಿಯ ಪತ್ನಿಯಾದ ಲೋಪಾಮುದ್ರೆ, ಒಬ್ಬ ರಾಜನಮಗಳು, ಅಗಸ್ತ್ಯಋಷಿಯ ಆಸ್ತಿಯೆಲ್ಲಾ ಮುತ್ತುಗದ ದಂಡ, ಕಮಂಡಲ, ನಾರಬಟ್ಟೆಗಳು, ತರಗಿನ ಗುಡಿಸಲು, ಇವು ಹೊರತು ಇನ್ನೇನೂ ಇರಲಿಲ್ಲ. ಆದಾಗ್ಯೂ ಲೋಪಾಮುದ್ರೆಯು ಈ ಅಗಸ್ತ್ಯಋಷಿಗೆ ವಿವಾಹವಾದ ಕೂಡಲೆ ತನ್ನ ತಂದೆ ಕೊಟ್ಟಿದ್ದ ರಾಜಯೋಗ್ಯವಾದ ಅಮೂಲ್ಯವಾದ ವಸ್ತ್ರಾಭರಣಗಳನ್ನು ತ್ಯಜಿಸಿ ತನ್ನ ಪತಿಯ ಸ್ಥಿತಿಗೆ ಅನುರೂಪವಾದ ವಲ್ಕಲವನ್ನು ಉಟ್ಟುಕೊಂಡು, ಸಕಲ ರಾಜಭೋಗಗಳ ವಿಷಯದಲ್ಲಿಯೂ ನಿಸ್ಪೃಹಳಾಗಿ ತನ್ನ ಗಂಡನ ಹಿಂದೆಯೇ ಸಿಂಹ,ಹುಲಿ, ಮೊದಲಾದ ದುಷ್ಟಮೃಗಗಳಿಂದ ಭಯಂಕರವಾದ ಅರಣ್ಯದಲ್ಲಿ ವಾಸಮಾಡುವದಕ್ಕೆ ಹೊರಟು ಹೋದಳು.

ಪ್ರಾತಃಕಾಲದಲ್ಲಿ ಸ್ಮರಿಸುವದಕ್ಕೆ ಯೋಗ್ಯಳಾಗಿಯೂ ರಮಣೀಕುಲ ಶಿರೋಮಣಿಯಾಗಿಯೂ ಇರುವ ಪ್ರತಿವ್ರತೆಯಾದ ಸೀತೆಯ ವೃತ್ತಾಂತವನ್ನು ಆಬಾಲವೃದ್ಧರೂ ಬಲ್ಲರು. ಈಕೆಗೆ ಸಮಾನರಾದ ಸ್ತ್ರೀಯರು ಈ ಜಗತ್ತಿನಲ್ಲಿ ಯಾರೂ ಯಿಲ್ಲ. ಈ ಭೂಮಿಗೆ " ರತ್ನಗರ್ಭಾ " ಎಂದು ಹೆಸರು ಬಂದಿರುವದು ಈ ಸೀತೆಯನ್ನು ಹೆತ್ತದ್ದರಿಂದಲೇ ಎಂದು ಹೇಳಬೇಕು. ಸರ್ವರಿಂದಲೂ ಸಮ್ಮಾನಿತಳಾದ ಈ ಸೀತೆಯು ರಾಮನಿಗೆ

ಮದುವೆಯಾದಕಾಲದಲ್ಲಿ ಬಿಸಿಲಿನ ತಾಪವನ್ನೂ ಗಾಳಿ, ಸೀತ, ಮಳೆ ಮೊದಲಾದ್ದರಿಂದ ಉಂಟಾಗುವ ಕ್ಲೇಶವನ್ನೂ ಸ್ವಪ್ನದಲ್ಲಿಯೂ ಕಂಡವಳಾಗಿರಲಿಲ್ಲ. ತಂದೆಯವಾಕ್ಯವನ್ನು ಪರಿಪಾಲಿಸುವದಕ್ಕಾಗಿ ಹದಿನಾಲ್ಕು ವರುಷ ವನವಾಸಕ್ಕೆ ಹೊರಟ ತನ್ನ ಪತಿಯೊಡನೆ ಬೇಡ ಬೇಡವೆಂದು ಹೇಳಿದಾಗ್ಯೂ ಕೇಳದೆ, ಕ್ರೂರರಾದ ರಾಕ್ಷಸರಿಂದ ಅತಿ ಭಯಂಕರವಾದ ದಂಡಕಾರಣ್ಯದಲ್ಲಿ ವಾಸಮಾಡುವದಕ್ಕೆ ಹೊರಟಳು. ಆಗ ವನವಾಸಕ್ಕೆ ಯೋಗ್ಯವಾದ ನಾರುವಸ್ತ್ರವನ್ನು ಉಡುವದಕ್ಕೆ ಬಾರದೆ ಕೈಯಲ್ಲಿಟ್ಟುಕೊಂಡು ನೀರುತುಂಬಿದ ಕಣ್ಣುಗಳಿಂದ ತನ್ನ ಪತಿಯಾದ ರಾಮನ ಮುಖವನ್ನು ನೋಡಲು ಆತನು ತನ್ನ ಪ್ರಿಯಪತ್ನಿಗೆ ಆ ನಾರುವಸ್ತ್ರವನ್ನು ತನ್ನ ಕೈಯಿಂದಲೇ ಉಡಿಸಿದನು. ಬಳಿಕ ತಂದೆಗೆ ನಮಸ್ಕರಿಸಿ ವನವಾಸಕ್ಕೆ ಹೊರಟ ರಾಮನ ಹಿಂದೆಯೆ ರಾಜಮಾರ್ಗದಲ್ಲಿ ಇಂಥಾ ಶೋಚನೀಯವಾದ ಅವಸ್ಥೆಯಲ್ಲಿಯೂ ಸೀತೆಯು ಬಹು ಸಂತೋಷದಿಂದ ಹೋಗುತ್ತಿದ್ದಳು. ಆ ಕಾಲದಲ್ಲಿ ಈಕೆಯನ್ನು ನೋಡಿದ ಎಂಥಾ ಪಾಷಾಣಹೃದಯರಿಗೂ ಕಣ್ಣಲ್ಲಿ ನೀರುಬರದೆ ಇರಲಿಲ್ಲ. ಆದರೆ ಸೀತೆಗೆ ಅಣುಮಾತ್ರವೂ ದುಃಖವಿರಲಿಲ್ಲ. ಪತಿಯ ಅಗಲಿಕೆಯನ್ನು ನರಕಕ್ಕೆ ಸಮನಾಗಿಯೂ, ಪತಿಯ ಸಹವಾಸವನ್ನು ಸ್ವರ್ಗಕ್ಕೆ ಸಮನಾಗಿಯೂ ಭಾವಿಸಿದ್ದ ಈ ಸೀತೆಗೆ ಪತಿಯಲ್ಲಿದ್ದ ಪ್ರೇಮವೂ ಭಕ್ತಿಯೂ ಇಂಥಾದ್ದೆಂದು ಹೇಳುವದಕ್ಕೆ ಯಾರಿಂದಲೂ ಆಗುವದಿಲ್ಲ. ದೈವವು ಸೀತೆಗೆ ತನ್ನಿಂದಾದಷ್ಟು ದುರವಸ್ಥೆಯನ್ನು ಉಂಟುಮಾಡಿದಾಗ್ಯೂ ಆಕೆಯಲ್ಲಿದ್ದ ಪತಿಭಕ್ತಿಯಿಂದಲೂ ಪ್ರೇಮದಿಂದಲೂ ಅದನ್ನು ಲಕ್ಷ್ಯಮಾಡಲಿಲ್ಲ. ನಿರಪರಾಧಿನಿಯಾಗಿದ್ದಾಗ್ಯೂ ಪೂರ್ಣಗರ್ಭಿಣಿಯಾದ ಸೀತೆಯನ್ನು ರಾಮನು ಲೋಕಾಪವಾದಕ್ಕೆ ಭಯಪಟ್ಟು ನಿರ್ಜನವಾದ ಅಡವಿಗೆ ಕಳುಹಿಸಿಬಿಟ್ಟನು. "ಅಪಿಗ್ರಾವಾರೋದಿತ್ಯಪಿದಳತಿ ವಜ್ರಸ್ಯ ಹೃದಯಂ" ಎಂದು ಭವಭೂತಿ ಹೇಳಿರುವಂತೆ ಈಕೆಯ ದುರವಸ್ಥೆಯನ್ನು ನೋಡಿ ಕಲ್ಲುಗಳುಕೂಡಾ ರೋದನ ಮಾಡಿದವು!!

ಇಂಥಾ ಕಷ್ಟ ದಶೆಯಲ್ಲಿಯೂ ಸೀತೆಗೆ ಪತಿಯಲ್ಲಿ ಪ್ರೇಮವೂ ಪಾತಿ
ವ್ರತ್ಯವೂ ಅಣುಮಾತ್ರವೂ ಕಡಮೆಯಾಗಲಿಲ್ಲ. ತನ್ನಲ್ಲಿ ಅಪರಾಧವಿಲ್ಲ
ದಿದ್ದರೂ ರಾಮನು ತನ್ನನ್ನು ಕಾಡಿಗೆ ಕಳುಹಿಸಿ ಬಿಟ್ಟನೆಂದು ರಾಮನ
ಮೇಲೆ ದೋಷವನ್ನು ಆರೋಪಿಸಲಿಲ್ಲ. ನನ್ನ ದುರದೃಷ್ಟದಿಂದ ಇಂಥಾ
ಅವಸ್ಥೆ ತನಗೆ ಉಂಟಾಯಿತೆಂದು ಧೈರ್ಯವನ್ನು ಅವಲಂಬಿಸಿ, "ತಾವು ನನ್ನನ್ನು
ವನಕ್ಕೆ ಕಳುಹಿಸಿಬಿಟ್ಟಾಗ್ಯೂ ನಾನು ತಮ್ಮ ದಾಸಿಯು, ನಾನು ವನದಲ್ಲಿ
ದ್ದಾಗ್ಯೂ ಇತರ ಪ್ರಜೆಗಳನ್ನು ರಕ್ಷಿಸುವಂತೆ ನನ್ನನ್ನು ಸಹ ರಕ್ಷಿಸತಕ್ಕ
ವರು ತಾವೆ, ತಮ್ಮ ಕೀರ್ತಿಯು ನಿರ್ಮಲವಾಗಿರುವದನ್ನು ಕೇಳಿದರೆ
ನಾನು ಅರಣ್ಯದಲ್ಲಿಯೂ ಸುಖದಿಂದಿರುವೆನು" ಎಂದು ನೀತಿಯಿಂದಲೂ
ಧರ್ಮದಿಂದ ಕೂಡಿದ ಮಾತುಗಳನ್ನು. ಲಕ್ಷ್ಮಣನ ಸಂಗಡ ಹೇಳಿ ಕಳು
ಹಿಸಿದಳು.!! ಅಹ! ಈಕೆಯು ಧೈರ್ಯವನ್ನೂ ಪತಿ ಭಕ್ತಿಯನ್ನೂ ಎಷ್ಟು
ವರ್ಣಿಸಿದಾಗ್ಯೂ ಸ್ವಲ್ಪವೆ.

ಇಂಥಾ ಉತ್ತಮ ಸ್ತ್ರೀಯರು ಹುಟ್ಟಿದ ದೇಶವು ಎಷ್ಟು ಚಿಕ್ಕದಾ
ದಾಗ್ಯೂ ಎಂಥಾ ಹೀನ ಸ್ಥಿತಿಯಲ್ಲಿದ್ದಾಗ್ಯೂ ಲೋಕದಲ್ಲಿ ಪೂಜ್ಯವಾದದ್ದು.
ಅತ್ಯಂತ ದುರ್ದಶೆಯಿಂದ ಕೂಡಿರುವ ನಮ್ಮ ಹಿಂದೂದೇಶದ ಜನರ ದುಃಖಿತ
ವಾದ ಮನಸ್ಸನ್ನು ಸಮಾಧಾನ ಪಡಿಸುವಂಥಾ ವಿಷಯವು ಈ ದೇಶದಲ್ಲಿ
ಮತ್ತೊಂದಿಲ್ಲ. ಈ ದೇಶದಲ್ಲಿ ಹುಟ್ಟಿದ ಸೀತೆಯಂಥಾ ಉತ್ತಮಸ್ತ್ರೀಯರು
ಇನ್ನಾವ ದೇಶದಲ್ಲಿಯೂ ಹುಟ್ಟಲಿಲ್ಲವೆಂದು ಹಿಂದೂದೇಶವು ಸರ್ವರಿಂದಲೂ
ಹೊಗಳಿಸಿಕೊಳ್ಳುವದಕ್ಕೆ ಆಸ್ಪದವಾಗಿದೆ. ಇತರ ವಿಷಯದಲ್ಲಿ ಈ ಭರತ
ಖಂಡವು ಉಳಿದ ದೇಶಗಳಿಗಿಂತ ಕಡಿಮೆಯಾಗಿದ್ದಾಗ್ಯೂ ಸೀತೆಯಂಥಾ ಪತಿ
ವ್ರತೆಯರ ಸತ್ಕೀರ್ತಿವಿಷಯದಲ್ಲಿ ಇದಕ್ಕೆ ಸಮಾನವಾದ ದೇಶ ಮತ್ತೊಂ
ದಿಲ್ಲ. ದಮಯಂತಿ, ಸಾವಿತ್ರಿ, ಮುಂತಾದ ಉತ್ತಮ ಸ್ತ್ರೀಯರ ಚರಿತ್ರಗಳೂ
ಯಿದರಂತೆಯೆ ಇವೆ. ತಮ್ಮ ಸ್ತ್ರೀಜನರ ಯೋಗ್ಯತೆಯನ್ನು ಅಭಿವೃದ್ಧಿ
ಪಡಿಸುವದಕ್ಕೆ ಅಪೇಕ್ಷೆಯುಳ್ಳ ಸ್ತ್ರೀಯರು ಮೇಲೆ ಹೇಳಿದಂಥಾ ಪವಿತ್ರ
ವಾದ ನಡತೆಯು ಮರಳಿ ಉಜ್ಜೀವಿತವಾಗುವಂತೆ ನಡೆದು ಕೊಳ್ಳಬೇಕು.

ಪತಿಗೆ ಬೇಸರವಾಗುವ ಆಚರಣೆ ಮೊದಲಾದ್ದನ್ನು ಆಚರಿಸಬಾರದೆಂದು ಮೊದಲೇ ಹೇಳಿಯಿದೆ. ಆದರೆ ಪತಿಯು ಧರ್ಮಕ್ಕೆ ವಿರುದ್ಧವಾದನಡತೆಯನ್ನು ನಡೆದರೆ ಆತನಿಗೆ ಸದುಪದೇಶವನ್ನು ಮಾಡಿ ಆ ಮಾರ್ಗದಿಂದ ಆತನನ್ನು ಹಿಂದಕ್ಕೆ ತಿರುಗಿಸುವದು ಸ್ತ್ರೀಯರಿಗೆ ಅವಶ್ಯಕವಾದ ಕೆಲಸವು. ಯಾವ ಹೆಂಗಸು ಗಂಡನ ಪ್ರೀತಿಯನ್ನು ಸಂಪಾದಿಸಿ ಕೊಳ್ಳುವದಕ್ಕೆ ಆತನು ಹೌದು ಎಂದದ್ದನ್ನು ಹೌದು ಎಂದು ಹೇಳಿ, ಆತನು ಮನಸ್ಸಿಗೆ ಬಂದಂತೆ ನಡೆಯುತ್ತಾ ಇದ್ದರೆ ಅದನ್ನು ಅನುಮೋದಿಸಿ, ಆತನ ದುರ್ಮಾರ್ಗದಲ್ಲಿ ಸಹಾಯವನ್ನು ಮಾಡುತ್ತಾಳೋ, ಆಕೆಯು ನಿಜವಾಗಿಯೂ ಉತ್ತಮ ಸ್ತ್ರೀಯೆನಿಸಿಕೊಳ್ಳುವದಿಲ್ಲ. ಆಕೆಯನ್ನು ಸ್ವಪ್ರಯೋಜನಪರಳೆಂದು ಎಣಿಸಬೇಕು. ಸಂಸಾರದಲ್ಲಿ ಹೆಂಡತಿಯು ಗಂಡನಿಗೆ ಪರಮಾಪ್ತಳಾಗಿರುತ್ತಾಳೆ. ಆಕೆಗೆ ಸಮಾನರಾದ ಮಿತ್ರರು ಮತ್ತೊಬ್ಬರಿಲ್ಲ. ತನ್ನ ಸ್ನೇಹಿತನ ಮನಸ್ಸು ಯಾವದಾದರು ಒಂದು ಕೆಟ್ಟ ವಿಷಯದಲ್ಲಿ ಪ್ರವೃತ್ತವಾದರೆ ಅದನ್ನು ಬಿಡಿಸುವದಕ್ಕಾಗಿ ತಕ್ಕ ಮಾತನ್ನಾಡಬೇಕು. ಆತನ ಮನಸ್ಸಿಗೆ ವಿಷಾದವಾಗಲಿ ಅಥವಾ ಕೋಪವಾಗಲಿ ಉಂಟಾಗಿ ಸ್ನೇಹಕ್ಕೆ ಭಂಗ ಬಂದೀತೆಂದು ಯೋಚಿಸಬಾರದು. ಆತನಿಗೆ ಹಿತವನ್ನು ಉಂಟುಮಾಡುವದಕ್ಕಾಗಿ ತನ್ನ ಸುಖದ ಆಶೆಯನ್ನೂ ಬಿಟ್ಟು, ಹೇಳತಕ್ಕ ಮಾತುಗಳನ್ನು ಹೇಳಲೇಬೇಕು. ಭಾರವಿ ಎಂಬ ಮಹಾಕವಿಯು "ಹಿತಂ ಮನೋಹಾರಿಚ ದುರ್ಲಭಂ ವಚಃ" ಅಂದರೆ ಪರಿಣಾಮದಲ್ಲಿ ಹಿತವಾಗಿಯೂ ತತ್ಕಾಲದಲ್ಲಿ ಮನೋಹರವಾಗಿಯೂ ಇರುವಂಥಾ ಮಾತು ದುರ್ಲಭವೆಂದು ಹೇಳಿದ್ದಾನೆ. ಧರ್ಮಸಮ್ಮತವಾಗಿಯೂ ಹಿತಕರವಾಗಿಯೂ ಇರುವ ಮಾತನ್ನು ಹೇಳುವದರಿಂದ ಪತಿಯ ಪ್ರೇಮ ಕಡಮೆಯಾದರೂ ಇತರರ ಪ್ರೇಮ ಕಡಮೆಯಾದರೂ ಭಯಪಡಕೂಡದು. ಸತ್ಯವನ್ನಾಡಿದರೆ ಎಂದಿಗೂ ಭಯವಿಲ್ಲ. ಮೊದಲು ಸ್ವಲ್ಪ ಕಷ್ಟ ಪ್ರಾಪ್ತವಾದಾಗ್ಯೂ ಧಾರ್ಮಿಕನಿಗೆ ಕೊನೆಯಲ್ಲಿ ಸುಖಉಂಟಾಗುವದು. ಆದ್ದರಿಂದ ಪತಿಯ ಪ್ರೇಮವನ್ನೂ ಇತರರ ಪ್ರೇಮವನ್ನೂ ಸಂಪಾದಿಸುವದಕ್ಕೋಸ್ಕರ ಧರ್ಮಕ್ಕೆ ವಿರುದ್ಧವಾದ ಮಾರ್ಗವನ್ನು ಎಂದಿಗೂ ಅವಲಂಬಿಸಬಾರದು. ಆ ಮಾರ್ಗಕ್ಕೆ ಅನುಮೋದಿಸಲೂ ಬಾರದು.

ಅನ್ಯರ ವಸ್ತ್ರಾಭರಣಾದಿಗಳ ವೈಭವವನ್ನು ನೋಡಿ ತಾವೂ ಅವರಂತೆಯೇ ಇರಬೇಕೆಂದು ಅನೇಕ ಸ್ತ್ರೀಯರು ಅವುಗಳನ್ನು ತಂದು ಕೊಡೆಂದು ತಮ್ಮ ಪತಿಗಳನ್ನು ನಾನಾವಿಧವಾಗಿ ಪೀಡಿಸುತ್ತಾರೆ. ಪತಿಯು ಅಸಮರ್ಥನಾಗಿದ್ದರೆ ತಮ್ಮ ರಾಕ್ಷಸಸ್ವಭಾವವನ್ನು ಆತನ ಮೇಲೆ ತೋರಿಸಿ ಬೈಗಳುಗಳಿಂದಲೂ ಸಣ್ಣಸಣ್ಣ ಮಾತುಗಳಿಂದಲೂ ಆತನ ಮನಸ್ಸನ್ನು ನೋಯಿಸಿ ಅನಾದರಣೆಯನ್ನು ಮಾಡುತ್ತಾರೆ. ಹೀಗೆ ಮಾಡುವದು ನೀತಿಗೆ ವಿರೋಧವಾಗಿಯೂ ಅನುಚಿತವಾಗಿಯೂ ಇರುವದ್ದರಿಂದ ಇಂಥಾ ಕಾರ್ಯವನ್ನು ಎಂದಿಗೂ ಮಾಡಬಾರದು. ಲೋಭವು ಮನುಷ್ಯನಿಗೆ ಪ್ರಬಲವಾದ ಶತ್ರುವು. ಲೋಭಿಯು ಸ್ನೇಹವನ್ನು ಯಾರೂ ಮಾಡುವದಿಲ್ಲ. ಲೋಭಿಯು ಒಂದು ಕಾಸಿನ ಪದಾರ್ಥಕ್ಕಾಗಿ ಜನ್ಮಾರಭ್ಯ ತನ್ನ ಹಿತಚಿಂತಕರಾಗಿರುವ ಕೃಪಾಳುಗಳಾದ ಮಿತ್ರರ ಸಂಗಡ ದ್ವೇಷವನ್ನು ಮಾಡುವದಕ್ಕೂ ಹಿಂತೆಗಿಯುವದಿಲ್ಲ. ಆದಕಾರಣ ನೀವು ಲೋಭಗ್ರಸ್ತರಾಗಿ ನಿಮ್ಮ ಪ್ರಾಣವಲ್ಲಭರನ್ನು ನೋಯಿಸಬಾರದು. ಯಾವಕಾಲಕ್ಕೆ ಏನು ದೊರೆಯುವದೋ ಅದರಿಂದಲೇ ಸಂತುಷ್ಟರಾಗಿರಬೇಕು. ಸಂತುಷ್ಟವಾದ ಸ್ವಭಾವವುಳ್ಳವರು ನರಕ ಯಾತನೆಗೆ ಸರಿಯಾದ ಸಂಕಟ ಬಂದಾಗ್ಯೂ ಸುಖವಾಗಿರುತ್ತಾರೆ. ಅಸಂತುಷ್ಟರು ಸ್ವರ್ಗದಲ್ಲಿದ್ದಾಗ್ಯೂ ಅವರಿಗೆ ಸುಖವಿಲ್ಲ. ನಿಮ್ಮ ಪತಿಯು ಒಂದು ಕಡ್ಡಿಯನ್ನು ನಿಮಗೆ ಪ್ರೀತಿಪೂರ್ವಕವಾಗಿ ಕೈ ಯೆತ್ತಿ ಕೊಟ್ಟರೂ ಅದನ್ನು ಅನಾದರಣೆ ಮಾಡದೆ ಪ್ರೇಮದಿಂದ ಸ್ವೀಕರಿಸಬೇಕು. ಸ್ಪರ್ಶಮಣಿ ಸೋಕಿದ ಮಾತ್ರಕ್ಕೆ ಕಬ್ಬಿಣ ಭಂಗಾರವಾಗುವಂತೆ ಪ್ರೇಮದ ಸಂಸರ್ಗವಾದ ಮಾತ್ರಕ್ಕೆ ಬೆಲೆಯಿಲ್ಲದ ಪದಾರ್ಥವೂ ಬೆಲೆಯುಳ್ಳದ್ದಾಗುತ್ತದೆ. ಪ್ರೇಮವಿಲ್ಲದೆ ಕೊಟ್ಟ ಭಂಗಾರದ ಒಡವೆಗಳಿಗಿಂತಲೂ ಪ್ರೇಮದಿಂದ ಕೊಟ್ಟ ಕಲ್ಲುಗಳ ಬೆಲೆಹೆಚ್ಚು. ಅನೇಕ ಸ್ತ್ರೀಯರು ಲೋಭಗ್ರಸ್ತರಾಗಿ ತಮ್ಮ ಪತಿಗಳು ತಮಗೆ ಬೇಕಾದ ವಸ್ತುಗಳನ್ನು ಸಂಪಾದಿಸಿ ತಂದು ಕೊಡಲಾರದೇ ಹೋದರೆ ನಾನಾ ವಿಧವಾದ ಕೆಟ್ಟ ಕೆಲಸವನ್ನು ಮಾಡುವದಕ್ಕೆ ಆರಂಭಿಸುತ್ತಾರೆ. ಇದರಿಂದ ಅವರಿಗೆ ತಾವು ಅಪೇಕ್ಷಿಸುವ ಸುಖ ಉಂಟಾಗದೆ ಅತ್ಯಂತ ದುಃಖ ಉಂಟಾಗುವದಲ್ಲದೆ ಮಾನವೂ ಉಳಿ

ಯುವದಿಲ್ಲ. ಹೋದ ಮಾನವು ಎಂದಿಗೂ ಬರುವದಿಲ್ಲ. ಅದಕಾರಣ ಪ್ರಾಣವಿರುವವರೆಗೂ ದುಃಖವನ್ನು ಅನುಭವಿಸಿಕೊಂಡಿರಬೇಕಾಗುತ್ತೆ. ಆದ್ದರಿಂದ ತಮ್ಮತಮ್ಮ ಪತಿಗಳ ಪ್ರಕೃತ ಸ್ಥಿತಿಯಲ್ಲಿ ಸಂತುಷ್ಟರಾಗಿದ್ದರೆ ಪ್ರತಿಷ್ಠೆಯೂ ಮಹತ್ವವೂ ಸುಖವೂ ಉಂಟು.

ಈ ಪ್ರಕಾರ ಪತಿಯ ಮನಸ್ಸನ್ನು ಅನುಸರಿಸಿ, ಧರ್ಮಕ್ಕೂ ಪಾಪಕ್ಕೂ ಹೆದರಿಕೊಂಡು, ತಮ್ಮ ನಡತೆಯನ್ನು ಪವಿತ್ರವಾಗಿ ಯಿಟ್ಟುಕೊಳ್ಳುವ ಪತಿವ್ರತೆಯರೇ ಸ್ತ್ರೀಯರೆನ್ನಿಸಿಕೊಳ್ಳುತ್ತಾರೆ. ಕೆಲವು ಸ್ತ್ರೀಯರು ಈ ಪ್ರಕಾರ ಆಚರಿಸದೆ ಪತಿಯ ಎಂಜಲನ್ನು ಉಣ್ಣುವುದು, ಆತನ ಕಾಲು ತೊಳೆದ ನೀರನ್ನು ಕುಡಿಯುವದು ಮೊದಲಾದ ಆಚರಣೆಗಳನ್ನು ಮಾತ್ರ ಜನರು ಮೆಚ್ಚುವಂತೆ ಮಾಡುತ್ತಾ ಪತಿವ್ರತೆಯರಂತೆ ನಟಿಸುತ್ತಾರೆ. ಆದರೆ ಈ ನಟನೆಯು ಬಹುಕಾಲ ನಡೆಯಲಾರದು. ಶರತ್ಕಾಲದ ಮೇಘದಂತೆ ಬಹುಬೇಗ ಕಾಣಿಸದೆ ಹೋಗುತ್ತೆ. ಬಳಿಕ ಆಯ ಸ್ತ್ರೀಯರ ನಿಜವಾದ ಸ್ವರೂಪವು ಸರ್ವರಿಗೂ ಗೋಚರವಾಗುತ್ತೆ. ಆದ್ದರಿಂದ ಕೊನೆಯವರೆಗೂ ನಿಶ್ಚಲವಾಗಿ ನಿಲ್ಲುವಂಥಾ ನಿಷ್ಕಪಟವಾದ ಪ್ರೇಮವನ್ನು ನಿಮ್ಮ ಪತಿಗಳಲ್ಲಿ ಇರಿಸಬೇಕು. ತಮಗೆ ಅದ್ವಿತೀಯಮಿತ್ರನಾದ ಪತಿಗೆ ಹೊರತರದ ಭಕ್ತಿಯನ್ನು ತೋರಿಸಿ, ಕಪಟಪ್ರೇಮದಿಂದ ಅವನನ್ನು ಮೋಸಗೊಳಿಸುವ ಸ್ತ್ರೀಯರಂಥಾ ನೀಚರು ಪ್ರಪಂಚದಲ್ಲಿ ಯಾರೂ ಇಲ್ಲ. ಹೀಗೆ ಮೋಸಮಾಡುವ ಸ್ತ್ರೀಯರು ಕೊನೆಗೆ ತಾವೇ ಮೋಸ ಹೋಗುತ್ತಾರೆ. ಅನೇಕ ಸ್ತ್ರೀಯರು "ನನ್ನ ಗಂಡನಿಗೆ ನನ್ನ ಮೇಲೆ ಪ್ರೇಮವಿಲ್ಲ, ನನಗೆ ಬಹಳ ಅವಮಾನ ಮಾಡುತ್ತಾನೆ" ಎಂದು ಹೇಳಿಕೊಳ್ಳುತ್ತಾರೆ.

ಹೀಗೆ ಹೇಳಿಕೊಳ್ಳುವದು ಕೆಲವರಲ್ಲಿ ನಿಜವಾದಾಗ್ಯೂ ವಿಚಾರಮಾಡಿ ನೋಡಿದರೆ ಅನೇಕ ಕಡೆಗಳಲ್ಲಿ ಆ ಪ್ರಕಾರ ಇರುವದಿಲ್ಲ. ಸ್ತ್ರೀಯರು ಮೂರ್ಖರಾಗಿ ವಿರೋಧವಾದ ಆಚರಣೆಯನ್ನು ಮಾಡುವದರಿಂದಲೇ ದಂಪತಿಗಳಲ್ಲಿ ಪರಸ್ಪರ ವಿರೋಧ ಉಂಟಾಗುತ್ತೆ. ಆದಕಾರಣ ಯಾವ ಕಾಲದಲ್ಲಿ ಯಾವ ಮಾತುಗಳನ್ನು ಆಡಿದರೆ ತಮ್ಮ ತಮ್ಮಲ್ಲಿ ವಿರೋಧ ಉಂಟಾಗುತ್ತೋ

ಅಂಥಾ ಮಾತುಗಳನ್ನು ಆಡದೇ ಬಿಡಬೇಕು. ಯಾವಾಗಲೂ ತಮ್ಮ ಯೋಗ್ಯವಲ್ಲದ ಕೆಲಸವನ್ನು ಮಾಡದೆ ಇದ್ದರೆ ಎಂದಿಗೂ ಮಾನಹಾನಿಯಾಗುವದಿಲ್ಲ. ಪತಿಗೆ ಕೋಪ ಬಂದ ಕಾಲದಲ್ಲಿಯೂ ಅಥವಾ ವ್ಯಾಧಿ, ಶೋಕ ಮುಂತಾದವುಗಳಿಂದ ಆತನ ಮನಸ್ಸು ಅಸ್ವಸ್ಥವಾಗಿರುವ ಕಾಲದಲ್ಲಿಯೂ ಆತನ ಸಂಗಡ ಹೆಚ್ಚು ಕಡಿಮೆ ಮಾತುಗಳನ್ನಾಡಬಾರದು. ಕೋಪದ ಸಮಯದಲ್ಲಿ ಸಮಾಧಾನದಿಂದ ಮಾತನಾಡಿ ಆತನ ಕೋಪವನ್ನು ಹೋಗಲಾಡಿಸಬೇಕು. ವ್ಯಾಧಿ ಶೋಕ ಮುಂತಾದವು ಪ್ರಾಪ್ತವಾದ ಕಾಲದಲ್ಲಿ ಸಮಯೋಚಿತವಾದ ಮಧುರವಚನಗಳಿಂದ ಆತನ ಸಂತಾಪವನ್ನು ನಿವಾರಣೆ ಮಾಡಬೇಕು. ಯತ್ನಿಸಿದ ಕೆಲಸ ಸಿದ್ಧಿಸದೆ ಹೋದರೆ ಮನುಷ್ಯನು ಉತ್ಸಾಹಹೀನನಾಗಿ ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಕೂತುಕೊಳ್ಳುತ್ತಾನೆ, ಅಂಥಾ ಸಮಯದಲ್ಲಿ ಉತ್ಸಾಹ ಉಂಟಾಗುವಂತೆ ಮಾತನಾಡಬೇಕು.

ಹೀಗೆ ಎಲ್ಲಾ ಕೆಲಸದಲ್ಲಿಯೂ ಎಲ್ಲಾ ಕಾಲದಲ್ಲಿಯೂ ಪತಿಯ ಮನಸ್ಸನ್ನು ಅನುಸರಿಸಿ ಆತನಿಗೆ ಸಹಾಯ ಮಾಡುವದು ಸ್ತ್ರೀಯರ ಮುಖ್ಯಧರ್ಮವಾಗಿದೆ. ಈ ಪ್ರಕಾರ ಆಚರಿಸುವ ಸ್ತ್ರೀಯರೇ ತಮ್ಮ ಪತಿಗಳ ಅರ್ಧಾಂಗವೆನ್ನಿಸಿಕೊಳ್ಳುತ್ತಾರೆ. ತಮ್ಮ ಸ್ವಾರ್ಥವನ್ನು ಮಾತ್ರ ನೋಡಿಕೊಂಡು ಪತಿಗಳಿಗೆ ಯಾವ ಸಹಾಯವನ್ನೂ ಮಾಡದೆ ಇರುವ ಸ್ತ್ರೀಯರನ್ನು ಪತಿವ್ರತೆಯರೆನ್ನಕೂಡದು. ಯಾವ ಸ್ತ್ರೀಯು ನಿಸ್ಪೃಹಳಾಗಿ ಪ್ರತಿಕ್ಷಣದಲ್ಲಿಯೂ ತನ್ನ ಪತಿಗೆ ಸಹಾಯಮಾಡುತ್ತಾ ಇರುತ್ತಾಳೋ ಆಕೆಯ ಮೇಲೆ ಆಕೆಯ ಪತಿಯ ಪ್ರೇಮವು ಇದ್ದೇ ಇರುತ್ತೆ. ಆಕೆಯ ವಿಷಯದಲ್ಲಿ ಆತನು ಸನ್ಮಾನವನ್ನು ಮಾಡಿಯೇ ಮಾಡುತ್ತಾನೆ. ತಮ್ಮ ಮನೆಯಲ್ಲಿ ಇಷ್ಟಸಾಧನಸಂಪತ್ತು ಇರುವಾಗ ಇದನ್ನು ಬಿಟ್ಟು ಅನ್ಯತ್ರ ಹೋಗುವಂಥಾ ಪುರುಷಾಧಮರು ಯಾರುತಾನೇ ಇದ್ದಾರೆ. ಮೇಲೆ ವಿವರಿಸಿದಂತೆ ನೀವು ನಡೆದುಕೊಂಡರೆ ನಿಮ್ಮ ಪತಿಯು ನಿಮ್ಮ ವಶನಾಗುತ್ತಾನೆ. ನಿಷ್ಕಪಟವಾಗಿ ಮಾತನಾಡುವದು, ಪತಿಯ ಮನಸ್ಸಿನಂತೆ ನಡೆಯುವದು, ಇವೆರಡೂ ಪತಿಯ ವಶೀಕರಣಕ್ಕೆ ಉತ್ತಮವಾದ ಮಂತ್ರಗಳೆಂದು ಎಣಿಸಬೇಕು. ರಾಕ್ಷಸ ಸ್ವಭಾವವುಳ್ಳ ಪುರುಷರು ಕೂಡಾ ಈ ಮಂತ್ರಗಳಿಂದ ಸ್ವಾಧೀನರಾಗುತ್ತಾರೆ.

ಜನರಲ್ಲಿ ಸನ್ಮಾನಿತರಾಗುವದೂ, ಪ್ರೀತಿಪಾತ್ರರಾಗುವದೂ, ತಮ್ಮ ತಮ್ಮ ಕೈಯಲ್ಲಿಯೇ ಇದೆ. ನಾವು ಇತರರಲ್ಲಿ ಎಂಥಾ ನಡತೆಯನ್ನು ಇಡುತ್ತೇವೋ ಅವರೂ ನಮ್ಮಲ್ಲಿ ಅಂಥಾ ನಡತೆಯನ್ನು ಇಡುತ್ತಾರೆ ಎಂಬುವದನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಂಡು ನಡೆದರೆ ಸರ್ವಥಾ ಅವಮಾನಪ್ರಾಪ್ತಿಯಾಗಲಾರದು. ಇದರ ಮೇಲೂ ಪ್ರಾಪ್ತವಾದರೆ ಧೈರ್ಯವನ್ನು ಬಿಡಬಾರದು. ಇನ್ನು ಮೇಲೆ ಸ್ತ್ರೀಯರು ತಮ್ಮ ಗೃಹ ಕೃತ್ಯವನ್ನು ನಡೆಸುವ ಕ್ರಮವನ್ನು ಹೇಳುತ್ತೇನೆ.

೬ನೇ ಪರಿಚ್ಛೇದ.

ಗೃಹಕೃತ್ಯ.

ಪೂರ್ವಿಕರಾದ ದೊಡ್ಡ ವಿದ್ವಾಂಸರು, ಮನುಷ್ಯರಿಗೆ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸವೆಂದು ನಾಲ್ಕು ಆಶ್ರಮಗಳನ್ನು ಕಲ್ಪಿಸಿ ಅವುಗಳಲ್ಲಿ ಗೃಹಸ್ಥಾಶ್ರಮವೇ ದೊಡ್ಡದೆಂದು ನಿಶ್ಚಯಿಸಿ ಇದ್ದಾರೆ. ಈ ಗೃಹಸ್ಥಾಶ್ರಮದಿಂದಲೇ ಮಿಕ್ಕ ಮೂರು ಆಶ್ರಮದವರಿಗೂ ಸಂರಕ್ಷಣೆಯಾಗುತ್ತೆ. ಪ್ರಪಂಚದಲ್ಲಿ ಪರೋಪಕಾರಕ್ಕಿಂತಲೂ ಹೆಚ್ಚಾದ ಪುಣ್ಯದ ಕೆಲಸ ಮತ್ತೊಂದಿಲ್ಲ. ಇದು ಗೃಹಸ್ಥಾಶ್ರಮದವರಿಂದ ಆದಷ್ಟು ಇತರ ಆಶ್ರಮದವರಿಂದ ಆಗುವದಿಲ್ಲ, ಆದ್ದರಿಂದ ಇವರೇ ದೊಡ್ಡವರೆನ್ನಿಸಿಕೊಳ್ಳುತ್ತಾರೆ. ಯುಕ್ತಪ್ರಕಾರದಲ್ಲಿ ಮದುವೆಯಾಗಿ ಗಂಡಹೆಂಡರು ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳುವದೇ ಗೃಹಸ್ಥಾಶ್ರಮವು. ವಿವಾಹವಾದಮೇಲೆ ಪತಿಯನ್ನು ಪತ್ನಿಯು ಹ್ಯಾಗೆ ಅನುವರ್ತಿಸಿಕೊಂಡು ಇರಬೇಕೋ ಅದನ್ನು ಮೊದಲೇ ಹೇಳಿದ್ದೇನೆ. ಸ್ತ್ರೀಯು ತನ್ನ ಪತಿಗೆ ಸರ್ವಕಾರ್ಯಗಳಲ್ಲಿಯೂ ಸಹಾಯಳಾಗಿರಬೇಕು. ಈಕೆಯು ಸಹಾಯ ಮಾಡಬೇಕಾದ ಕೆಲಸಗಳು ಬಹಳವಾಗಿವೆ. ಇವುಗಳಲ್ಲಿ ಕೆಲವನ್ನು ಮೊದಲು ಹೇಳಿದ್ದೇನೆ. ಮುಖ್ಯವಾಗಿ ಗೃಹಕೃತ್ಯದಲ್ಲಿ ಈಕೆಯ ಸಹಾಯ ಅವಶ್ಯಕವಾಗಿರಬೇಕು.

ಗೃಹಕೃತ್ಯವೆಂಬುವದು ಮುಖ್ಯವಾಗಿ ಹೆಂಗಸರ ಕೆಲಸವು. ಇದರಲ್ಲಿ ಅವರು ಪಾಲುಮಾರಿಕೆಯನ್ನು ಮಾಡಕೂಡದು. ಸ್ತ್ರೀಯರು ತಮ್ಮ ಕೆಲಸವನ್ನು ಮಾಡದೆ ಯಿರುವ ಮನೆಯಲ್ಲಿ ಸುಖವಿರುವದಿಲ್ಲ. ಪಂಡಿತರು "ಗೃಹಿಣೀ ಗೃಹಂ" ಎಂದು ಹೇಳಿದ್ದಾರೆ. ಹೆಂಗಸರಾಗಿ ಹುಟ್ಟಿದಮಾತ್ರದಿಂದಾಗಲಿ ಅಥವಾ ಯಾರನ್ನಾದರು ಮದುವೆಯಾದ ಮಾತ್ರದಿಂದಾಗಲಿ ಹೆಂಗಸು ಗೃಹಿಣಿ ಯೆನಿಸಿಕೊಳ್ಳುವದಿಲ್ಲ. ಈ ಹೆಸರಿಗೆ ಯೋಗ್ಯರಾಗಬೇಕಾದರೆ ಬಹಳ ಶ್ರಮಪಡಬೇಕು. ಅಲ್ಪ ಬುದ್ಧಿಯುಳ್ಳ ಸ್ತ್ರೀಯರಿಗೆ ಈ ಹೆಸರು ಬರುವದಿಲ್ಲ. ಈ ಹೆಸರನ್ನು ಪಡೆಯಲಪೇಕ್ಷೆಯುಳ್ಳವರು

ಬುದ್ಧಿವಂತರಾಗಿ ಮನೆಯಲ್ಲಿ ಸರ್ವರ ಸಂಗಡಲೂ ಪ್ರೇಮದಿಂದ ನಡೆದು ಕೊಳ್ಳಬೇಕು.

ಮನುಷ್ಯನು ಮೊದಲು ಪಾಲುಮಾರಿಕೆಯನ್ನು ಬಿಡಬೇಕು. ಮನುಷ್ಯನಿಗೆ ಪಾಲುಮಾರಿಕೆಯು ಒಂದು ಶತ್ರುವು. ಪಾಲುಮಾರಿಕೆಯು ಅಧಿಕಾರವು ಯಾರ ಮನಸ್ಸಿನ ಮೇಲೆ ನಡೆಯುತ್ತೋ ಅವನನ್ನು ಮನುಷ್ಯನೆಂದು ಹೇಳುವದಕ್ಕಾಗುವದಿಲ್ಲ. ಮನುಷ್ಯತ್ವಕ್ಕೆಯೋಗ್ಯವಾದ ಯಾವಕೆಲಸವೂ ಅವನಿಂದ ನಡೆಯುವದಿಲ್ಲ. ಇದರಂತೆಯೇ ಅಹಂಕಾರ, ಕೋಪ, ದ್ವೇಷ, ಲೋಭ, ಹಿಂಸೆ, ನಿಂದಕತೆ, ಕಪಟ, ಅಸತ್ಯ, ಅವಸರ, ದುರಭಿಮಾನ, ಡಂಭ, ಸ್ವಾರ್ಥಪರತೆ, ಈರ್ಷ್ಯೆ, ಅಮಿತಾಚರಣೆ ಮೊದಲಾದ ದುರ್ಗುಣಗಳಿಗೆ ತಮ್ಮಲ್ಲಿ ಅವಕಾಶವನ್ನು ಕೊಡಕೂಡದು. ಇವುಗಳಿಂದ ಉಂಟಾಗುವ ನಷ್ಟಗಳನ್ನು ಹೇಳುತ್ತೇನೆ.

ಆಲಸ್ಯವು.—ಈ ದುರ್ಗುಣವು ಮನುಷ್ಯನಲ್ಲಿ ಪ್ರವೇಶಮಾಡಿದ ಕೂಡಲೇ ಅತಿದುರ್ಲಭವಾದ ಮನುಷ್ಯನ ಆಯುಸ್ಸು ವ್ಯರ್ಥವಾಗಿ ಕಳೆದು ಹೋಗುತ್ತೆ. ಪಾಲುಮಾರಿಕೆಯು ಜನರು ಹೊತ್ತಿಗೆ ಸರಿಯಾಗಿ ಯಾವ ಕೆಲಸವನ್ನೂ ಮಾಡುವದಿಲ್ಲ. ಅವರು ಈಗ ಮಾಡಬೇಕಾದ ಕೆಲಸವನ್ನು ಒಂದು ಘಳಿಗೆಯನ್ನು ಬಿಟ್ಟು ಮಾಡೋಣವೆನ್ನುತ್ತಾರೆ. ಬಳಿಕ ಘಳಿಗೆಯಮೇಲೆ ದಿವಸ, ದಿವಸದಮೇಲೆ ತಿಂಗಳು, ಹೀಗೆಯೇ ಕೆಲಸ ನಿಂತು ಹೋಗುತ್ತೆ. ಈರೀತಿಯಲ್ಲಿ ಹೋದ ಹೊತ್ತು ಭೂಮಂಡಲವನ್ನೆಲ್ಲಾ ಕೊಟ್ಟು ತಿರುಗಿ ಸಂಪಾದಿಸಬೇಕೆಂದರೂ ಸಾಧ್ಯವಾಗುವದಿಲ್ಲ. ಸತ್ತ ಮನುಷ್ಯರು, ಕಳೆದು ಹೋದ ಹೊತ್ತು, ಹರಿದುಹೋದ ನೀರು, ಇವು ಎಷ್ಟು ಪ್ರಯತ್ನ ಮಾಡಿದಾಗ್ಯೂ ಹಿಂದಕ್ಕೆ ತಿರುಗುವದಿಲ್ಲ. ಆಯಾ ಹೊತ್ತಿನಲ್ಲಿ ಮಾಡಬೇಕಾದ ಕೆಲಸವನ್ನು ಮಾಡುವದಕ್ಕೆ ಪಾಲುಮಾರಿದರೆ, ಹೊತ್ತು ವ್ಯರ್ಥವಾಗಿ ಹೋಗುವದಲ್ಲದೆ, ಕಾರ್ಯವೂ ಕೆಟ್ಟು ಒಂದೊಂದುವೇಳೆ ಇತರವಿಧವಾದ ನಷ್ಟವೂ ಸಂಭವಿಸುವದುಂಟು. ಆದ್ದರಿಂದ ಹೊತ್ತಿಗೆ ಸರಿಯಾಗಿ ಎಲ್ಲಾ ಕೆಲಸವನ್ನೂ ಮಾಡಬೇಕು. ಮಳೆ ಬರುವದಕ್ಕೆ ಮುಂಚೆ ಒಕ್ಕಲಿಗನು ಉಕ್ಕೆ ಹೊಡೆದು ಕೊಂಡಿದ್ದು ಮಳೆಬಿದ್ದ ಕೂಡಲೆ ಹದವರಿತು ಬೀಜವನ್ನು ಬಿತ್ತದೆ ಇದ್ದರೆ

ಅವನಿಗೆ ಬೆಳೆ ಹ್ಯಾಗೆ ಆದೀತು? ಪ್ರತಿದಿವಸವೂ ಯಾವಯಾವ ಹೊತ್ತಿನಲ್ಲಿ ಯಾವಯಾವ ಕೆಲಸವನ್ನು ಮಾಡಬೇಕೋ ಅದನ್ನು ಗೊತ್ತು ಮಾಡಿಕೊಂಡು ಅದರಂತೆ ತಪ್ಪದೆ ಕೆಲಸವನ್ನು ಮಾಡಬೇಕು. ಹೀಗೆ ಪ್ರತಿದಿನದಲ್ಲಿಯೂ ಸ್ವಲ್ಪಸ್ವಲ್ಪ ಕೆಲಸಮಾಡುವದರಿಂದ ಕಾಲಕ್ರಮೇಣ ಬಹಳ ಕೆಲಸವಾಗುತ್ತೆ, ಹಾಗೆ ಮಾಡದೆ ಪೋಲುಮಾರಿದರೆ ಕೊನೆಗೆ ಕೆಲಸವು ಗುಡ್ಡದ ಹಾಗೆ ಬೆಳೆದು ಅದನ್ನು ಮಾಡದೆ ಯಿದ್ದರೆ ನಿರ್ವಾಹವಿಲ್ಲದ ಪಕ್ಷದಲ್ಲಿ ಬಹಳ ಶ್ರಮಪಡಬೇಕಾಗುತ್ತೆ, ಇದರಿಂದ ಅವರ ದೇಹಸ್ಥಿತಿಯೂ ಕೆಡುವದಲ್ಲದೆ ಅವಸರದಲ್ಲಿ ಮಾಡುವದರಿಂದ ಕೆಲಸವೂ ಚನ್ನಾಗಿ ಆಗುವದಿಲ್ಲ. ಹೀಗೆ ನಾನಾಪ್ರಕಾರವಾದ ಹಾನಿಯೂ ಜನರ ಅಪಹಾಸ್ಯವೂ ದೇಹಾಯಾಸವೂ ಮನೋವ್ಯಥೆಯೂ ಉಂಟಾಗುವವು. ಆದ್ದರಿಂದ ಇದಕ್ಕೆಲ್ಲಾ ಕಾರಣವಾದ ಆಲಸ್ಯವನ್ನು ಬಿಡಬೇಕು.

ಅಹಂಕಾರ.—ಅಹಂಕಾರವುಳ್ಳ ಮನುಷ್ಯನಿಗೆ ಎಂದಿಗಾದರೂ ಮಾನಚ್ಯುತಿಯಾಗುವದೇ ನಿಶ್ಚಯವೆಂದು ಬಲ್ಲವರು ಗೊತ್ತು ಮಾಡಿದ್ದಾರೆ. ಇದಕ್ಕೆ ಸಾವಿರಾರು ನಿದರ್ಶನಗಳಿದ್ದಾಗ್ಯೂ ಜನರು ಅಜ್ಞಾನದಿಂದ ಕಣ್ಣು ಮುಚ್ಚಿಕೊಂಡು ಅವುಗಳನ್ನು ನೋಡುವದಿಲ್ಲ. ಧನ, ಮಾನ, ಬಲ, ಐಶ್ವರ್ಯ, ಸಹಾಯ ಮೊದಲಾದವುಗಳು ಇದ್ದಮಾತ್ರಕ್ಕೆ ನೀವು ಗರ್ವಪಡಬಾರದು, ಇವುಗಳಲ್ಲಿ ಯಾವದೂ ಕೊನೆಯವರಿಗೂ ನಿಲ್ಲುವದಿಲ್ಲ. ರಾವಣ, ಹೈಹಯ, ದುರ್ಯೋಧನ, ನೆಪೋಲಿಯನ್, ಔರಂಗಜೇಬ ಮುಂತಾದ ಚಕ್ರವರ್ತಿಗಳಲ್ಲಿ ಶೌರ್ಯ, ಔದಾರ್ಯ, ಸತ್ಯಪ್ರತಿಜ್ಞತೆ, ಬಲ ಮುಂತಾದ ಗುಣಗಳಿದ್ದಾಗ್ಯೂ ಕೊನೆಗೆ ಅವರು ಅಹಂಕಾರದಿಂದಲೇ ನಿಂದೆಗೆ ಒಳಗಾದರು. "ನಾನು ಏನು ಬೇಕಾದರೂ ಮಾಡ ಬಲ್ಲೆನು, ನನಗೆ ಯಾರೂ ಸರಿ ಇಲ್ಲ" ಎಂಬ ಅಹಂಕಾರವು ಎಂದಿಗೂ ನಡೆಯುವದಿಲ್ಲ. ಅಹಂಕಾರವು ಅಜ್ಞಾನಕ್ಕೆ ಮುಖ್ಯ ಲಕ್ಷಣವಾಗಿಯೂ ಅಧಃಪತನಕ್ಕೆ ಪೂರ್ವ ಸೂಚನೆಯಾಗಿಯೂ ಇದೆ. ಈ ಜಗತ್ತಿನಲ್ಲಿ ಯಾವದೂ ಶಾಶ್ವತವಲ್ಲ. ಇದಕ್ಕೆ ನೀವೇ ಸಾಕ್ಷಿ. ನೀವು ಚಿಕ್ಕವರಾಗಿರುವಾಗ ನಿಮ್ಮ ಶರೀರ ಮನಸ್ಸು ಆಶೆ ಸಹಾ ಚಿಕ್ಕವುಗಳಾಗಿದ್ದವು. ಆಗ ನಿಮ್ಮ ಮನಸ್ಸು ಸರಳವಾಗಿಯೂ

ನಿರ್ಮಲನಾಗಿಯೂ ಇತ್ತು. ನಿಮಗೆ ಯಾವ ಚಿಂತೆಯೂ ಇರಲಿಲ್ಲ. ನೀವು ತಿಳಿಯದಂತೆಯೇ ಕಾಲವು ಕಳೆದು ಹೋಗಿ ನೀವು ಯೌವನಸ್ಥರಾದಿರಿ. ಈಗ ನಿಮ್ಮ ಮನಸ್ಸಿನಲ್ಲಿ ನಾನಾವಿಧವಾದ ಯೋಚನೆಗಳು ಹುಟ್ಟಿವವು ನಿಮ್ಮ ಆಶೆಯೂ ಬೆಳೆಯಿತು. ನಿಮ್ಮ ಅದೃಷ್ಟದಿಂದ ನಿಮಗೆ ಧನ, ಮಾನ, ಸಹಾಯ, ಸ್ವಜನ, ಸುಖ ಮೊದಲಾದ ಅನುಕೂಲಗಳುಂಟಾಗಿರಬಹುದು. ಯೌವನದಿಂದ ಮದಿಸಿ ನಿಮ್ಮ ತಲೆಯ ಮೇಲೆ ನಾಲ್ಕು ಬೆರಳಿನಷ್ಟು ದೂರ ದಲ್ಲಿಯೇ ಸ್ವರ್ಗವಿದೆಯೆಂದು ನೀವು ಎಣಿಸಬಹುದು. ನಿಮಗೆ ನಾನಾ ವಿಧವಾದ ಸುಖದ ಸ್ವಪ್ನಗಳೂ ಬೀಳಬಹುದು. ಆದಾಗ್ಯೂ ನಿಮ್ಮ ಈ ಸ್ಥಿತಿಯು ಶಾಶ್ವತವಲ್ಲವೆಂದು ಚನ್ನಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಭೂಮಿ, ಚಂದ್ರ, ಸೂರ್ಯ, ನಕ್ಷತ್ರಗಳು, ಕಾಲ, ಪ್ರಕೃತಿ, ವಾಯು, ಜಲ ಮುಂತಾದ ದೇವಾಂಶ ಭೂತಗಳಾದ ಪದಾರ್ಥಗಳಿಗೂ ಪರಿವರ್ತನೆ ಇರುವಲ್ಲಿ ಪರಮಾಣು ಸಮರಾದ ನಮ್ಮ ನಿಮ್ಮ ಪಾಡೇನು ? ನಾವು ಯಾತಕ್ಕಾಗಿ ಅಹಂಕಾರ ಪಡಬೇಕು ? ನಮ್ಮ ಧನ ಮೊದಲಾದದ್ದು ಮಂಜಿನಂತೆ ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ನಷ್ಟವಾಗಿ ಅನಂತವಾದ ಆಕಾಶಗರ್ಭದಲ್ಲಿ ಎಲ್ಲಿ ಸೇರಿಹೋಗುತ್ತದೊ ಹೇಳುವದಕ್ಕಾಗುವದಿಲ್ಲ.

ಕ್ರೋಧ, ಈರ್ಷೆ, ದ್ವೇಷ, ಹಿಂಸೆ ಇವುಗಳಿಂದ ಆಗುವ ನಷ್ಟವನ್ನು ನಾಲ್ಕನೇ ಪರಿಚ್ಛೇದದಲ್ಲಿ ಹೇಳಿದ್ದೇನೆ. ಆದಾಗ್ಯೂ ಮರಳಿ ಸಂಕ್ಷೇಪವಾಗಿ ಹೇಳುತ್ತೇನೆ. ಸಂಸಾರವನ್ನು ನಡೆಸುವ ಭಾರವನ್ನು ವಹಿಸಿಕೊಂಡಿರುವ ಸ್ತ್ರೀಯರು ಸರ್ಪಗಳ ಕಂಡಂತೆ ಈ ದುರ್ಗುಣಗಳಿಗೆ ಹೆದರಿಕೊಳ್ಳಬೇಕು. ಸಂಸಾರದಲ್ಲಿ ನಾನಾವಿಧವಾದ ಸ್ವಭಾವದವರು ಸೇರಿರುತ್ತಾರೆ. ಅವರೆಲ್ಲರ ಸಂಗಡಲೂ ವಿರೋಧವಿಲ್ಲದೆ ನಡೆದುಕೊಳ್ಳುವದಕ್ಕೆ ಧೈರ್ಯ, ಕ್ಷಮೆ, ಸಹಿಷ್ಣುತೆ, ಪ್ರೇಮ ಮೊದಲಾದ ಸದ್ಗುಣಗಳು ನಿಮ್ಮಲ್ಲಿರಬೇಕು. ನಿಂದ ಕತೆ, ಡಂಭ, ಲೋಭ, ಕಪಟ ಯಾರಲ್ಲಿ ಇರುತ್ತವೋ ಅವನು ಮನು ಷ್ಯನಲ್ಲ. ಅವನಲ್ಲಿ ಮನುಷ್ಯಶಬ್ದವನ್ನು ಪ್ರಯೋಗಿಸಿದರೆ ಅಪಪ್ರ ಯೋಗ ಮಾಡಿದಂತೆ ಆಗುತ್ತೆ. ಅಂಥಾ ಮನುಷ್ಯನನ್ನು ಯಾರೂ ನಂಬು ವದಿಲ್ಲ. ಸಜ್ಜನರ ನಿಂದೆಯನ್ನು ಮಾಡಿಮಾಡಿ ಅವನ ನಾಲಗೆ ಯಾವಾಗಲೂ

ದೂಷಿತವಾಗಿರುತ್ತೆ. ಇವನು ಮುಂದಕ್ಕೂ ಬರುವದಿಲ್ಲ. ಉತ್ತಮರು ಈತನ ನೆರಳಿಗೆ ಕೂಡ ಹೆದರಿಕೊಳ್ಳುತ್ತಾರೆ. ಇಂಥವನು ಮನುಷ್ಯನಾಗಿಹುಟ್ಟಿದ್ದೇ ವ್ಯರ್ಥವು.

ಅವಸರ, ಅಮಿತಾಚಾರಗಳು ಕೂಡಾ ಹೀಗೆಯೇ ಅಹಿತಕಾರಿಗಳು. ಅವಸರ ಪಡುವವನಿಗೆ ಯಾವ ಕೆಲಸದಲ್ಲಿಯೂ ಸ್ಥೈರ್ಯ ವಿರುವದಿಲ್ಲ. ಸ್ಥೈರ್ಯವಿಲ್ಲದವನ ಮಾತಿನಲ್ಲಿ ಜನರಿಗೆ ನಂಬಿಕೆ ಹುಟ್ಟುವದಿಲ್ಲ. ಅಮಿತಾಚಾರಿಯಾದವನ ಧನವೂ ಕಾಲವೂ ವ್ಯರ್ಥವಾಗಿ ಹೋಗುತ್ತವೆ. ಅವನಿಂದ ಯಾವ ಕೆಲಸವೂ ಆಗುವದಿಲ್ಲ.

ಪ್ರತಿನಿತ್ಯವೂ ಉಷಃಕಾಲದಲ್ಲಿ ಅಂದರೆ ಹೊತ್ತು ಹುಟ್ಟುವದಕ್ಕೆ ನಾಲ್ಕು ಘಳಿಗೆಗೆ ಮುಂಚೆಯೇ ಏಳಬೇಕು. ಆಗ ಇನ್ನೂ ನಿದ್ರೆ ಬರುವಂತೆ ಇದ್ದಾಗ್ಯೂ ಮಾಡಬಾರದು. ಪ್ರಾತಃಕಾಲದಲ್ಲಿ ನಿದ್ರೆ ಮಾಡುವದರಿಂದ ಶರೀರದಲ್ಲಿ ಆಲಸ್ಯ ತುಂಬಿಕೊಂಡು ಪ್ರತಿನಿತ್ಯವೂ ಹೀಗೆ ಆಗುತ್ತಾ ಕೊನೆಗೆ ರೋಗಗಳು ಹುಟ್ಟುತ್ತವೆ. ಆದ್ದರಿಂದ ಪ್ರತಿನಿತ್ಯವೂ ಹೊತ್ತಿಗೆ ಸರಿಯಾಗಿ ಮಲಗಿಕೊಂಡು ರಾತ್ರಿ ಇನ್ನೂ ಐದು ಘಳಿಗೆ ಇರುವಾಗಲೇ ಏಳುವ ಅಭ್ಯಾಸವನ್ನು ಮಾಡಬೇಕು. ಹೀಗೆ ಮಾಡಿದರೆ ಕೆಲಸವೆಲ್ಲವೂ ಹೊತ್ತಿಗೆ ಸರಿಯಾಗಿ ನಿರಾಯಾಸವಾಗಿ ನಡೆದು ಹೋಗುತ್ತೆ. ಇಲ್ಲದೆಹೋದರೆ ಕೆಲಸವೆಲ್ಲಾ ಏಕಕಾಲದಲ್ಲಿ ಒದಗಿ ಯಾವದನ್ನೂ ಸರಿಯಾಗಿ ಮಾಡುವದಕ್ಕೆ ಅವಕಾಶವಾಗದೆ ಒಂದು ದಿವಸದಲ್ಲಿ ಒಂದು ಘಳಿಗೆಯಾದರೂ ವಿಶ್ರಮಿಸಿಕೊಳ್ಳುವದಕ್ಕೆ ತೆರಪು ಇರುವದಿಲ್ಲ. ಪ್ರತಿನಿತ್ಯವೂ ಆಯಾಕಾಲಕ್ಕೆ ಮಾಡತಕ್ಕ ಕೆಲಸವನ್ನು ಸರಿಯಾದ ಹೊತ್ತಿನಲ್ಲಿ ಮಾಡುವ ಅಭ್ಯಾಸವಿದ್ದದ್ದೇ ಆದರೆ ಮನುಷ್ಯನಿಗೆ ರೋಗಗಳು ಸಂಭವಿಸುವದಿಲ್ಲ. ಶರೀರವು ಸ್ವಸ್ಥವಾಗಿರುವ ಕಾಲದಲ್ಲಿ ಆರು ಏಳು ತಾಸಿಗಿಂತ ಹೆಚ್ಚು ನಿದ್ರೆಯನ್ನು ಮಾಡಬಾರದು. ರಾತ್ರೆ ೯ ಘಂಟೆಗೆ ಮಲಗುವ ಅಭ್ಯಾಸವಿಟ್ಟು ಇರುವರಿಗೆ ೬ ತಾಸು ಅವಿಚ್ಛಿನ್ನವಾಗಿ ನಿದ್ರೆ ಬಂದು ಎಚ್ಚರಿಕೆಯಾಗುತ್ತೆ. ಕೂಡಲೆ ಎದ್ದರೆ ಶರೀರದ ಆಯಾಸವು ಕಳೆದು ಹೋಗಿ ಲವಲವಿಕೆಯುಂಟಾಗಿ ಮನಸ್ಸು

ಶಾಂತವಾಗಿ ಕೆಲಸವನ್ನು ಮಾಡುವದಕ್ಕೆ ತಿರುಗಿ ಉತ್ಸಾಹ ಉಂಟಾಗುತ್ತದೆ. ಎದ್ದಕೂಡಲೆ ತಣ್ಣೀರಿನಿಂದ ಮುಖವನ್ನೂ ಬಾಯನ್ನೂ ಮುಖ್ಯವಾಗಿ ಕಣ್ಣುಗಳನ್ನೂ ತೊಳೆದುಕೊಳ್ಳಬೇಕು. ಮನುಷ್ಯನು ಮಲಗಿ ನಿದ್ರೆ ಮಾಡುವಾಗ ಆಯಾ ಅವಯವಗಳಿಂದ ನಡೆಯಬೇಕಾದ ಕೆಲಸಗಳು ಸರಿಯಾಗಿ ನಡೆಯುವದಿಲ್ಲ. ಆದಕಾರಣ ಬಾಯಲ್ಲಿಯೂ ಕಣ್ಣಿನಲ್ಲಿಯೂ ಮಲದ ಅಂಶಗಳು ಕೂಡಿರುತ್ತವೆ. ಕಣ್ಣಿನಲ್ಲಿ ಕೊಳೆತ ನೀರೂ ಇತರ ಮಲವೂ ಸಹ ಸೇರಿ ಅದರ ಕಾಂತಿಯು ಕಡಮೆಯಾಗಿರುತ್ತೆ. ಅದನ್ನು ತಣ್ಣೀರಿನಿಂದ ತೊಳೆಯದೆ ಇದ್ದರೆ ದಿನಕ್ರಮದಲ್ಲಿ ಅದರ ಕಾಂತಿಯು ಕಡಮೆಯಾಗುತ್ತಾ ಹೋಗುತ್ತೆ. ಆದ್ದರಿಂದ ಎದ್ದಕೂಡಲೆ ಬಾಯನ್ನೂ ಕಣ್ಣುಗಳನ್ನೂ ತಣ್ಣೀರಿನಿಂದ ತೊಳೆದುಕೊಂಡು ಬಳಿಕ ಇತರ ಯಾವ ಕೆಲಸವನ್ನಾದರೂ ಮಾಡಬೇಕು. ಈ ಉಷಃಕಾಲದಲ್ಲಿ ಮನಸ್ಸು ನಿರುಪಾಧಿಕವಾಗಿಯೂ ಪ್ರಸನ್ನವಾಗಿಯೂ ಇರುತ್ತೆ. ಜನರ ಗದ್ದಲವಾಗಲಿ ಅವಸರವಾಗಲಿ ಇರುವದಿಲ್ಲ. ಆದ್ದರಿಂದ ಈ ಕಾಲದಲ್ಲಿ ಯಾವ ಕೆಲಸ ಮಾಡಬೇಕಾದಾಗ್ಯೂ ಅದರಲ್ಲಿ ಮನಸ್ಸೂ ಬುದ್ಧಿಯೂ ಬೇಗ ಲಗ್ನವಾಗುತ್ತವೆ. ಇಂಥಾ ಕಾಲದಲ್ಲಿ ಭಕ್ತಿಪೂರ್ವಕವಾಗಿ ಸರ್ವರ ಸಂರಕ್ಷಕನಾಗಿಯೂ ಜಗತ್ಪತಿಯಾಗಿಯೂ ಇರುವ ಪರಮೇಶ್ವರನ ಭಜನೆಯನ್ನು ಮಾಡಬೇಕು. ತಾಯಿ ಗರ್ಭದಲ್ಲಿ ಉಸುರು ಬಿಡುವದಕ್ಕೂ ಸಹ ಅವಕಾಶವಿಲ್ಲದ ಅಂಧಕೂಪದಲ್ಲಿ ಸಂರಕ್ಷಣೆ ಮಾಡಿ ಹುಟ್ಟಿದ ಕೂಡಲೆ ಇತರ ಪದಾರ್ಥಗಳನ್ನು ಸೇವಿಸುವದಕ್ಕೆ ಯೋಗ್ಯತೆಯಿಲ್ಲದಕಾರಣ ಪ್ರೇಮಭರಿತವಾದ ತಾಯಿ ಹೃದಯದಲ್ಲಿ ಅಮೃತಕ್ಕೆ ಸದೃಶವಾದ ಹಾಲನ್ನು ನಿರ್ಮಿಸಿ, ನಾವು ದೊಡ್ಡವರಾದ ಹಾಗೆಲ್ಲಾ ನಮ್ಮನಮ್ಮ ಉತ್ಕರ್ಷಕ್ಕೆ ತಕ್ಕ ಸಾಧನಗಳನ್ನು ಕಲ್ಪಿಸಿ, ನಮಗೆ ಯಾವದಕ್ಕೂ ಕೊರತೆಯಿಲ್ಲದಂತೆ ತಾಯಿತಂದೆಗಳಂತೆ ನಮ್ಮನ್ನು ಕಾಪಾಡಿ, ನಾವು ತಿಳಿಯದ ಹಾಗೆ ನಮಗೆ ಬರುವ ಆಪತ್ತುಗಳನ್ನು ಪರಿಹರಿಸಿ, ನಮಗೆ ಹಿತವನ್ನು ಆಲೋಚಿಸುವ ಕರುಣಾಸಮುದ್ರನಾದ ಭಗವಂತನ ಅಗಣಿತವಾದ ಉಪಕಾರವನ್ನು ಸ್ಮರಣೆಗೆ ತಂದುಕೊಂಡು ಆತನಲ್ಲಿ ಅನನ್ಯ ಶರಣರಾಗಿ ಆತನ ಚರಣಗಳಲ್ಲಿ

ತಮ್ಮ ಸರ್ವಸ್ವವನ್ನು ಸಮರ್ಪಿಸಿ, ಕೃತಜ್ಞರಾಗಿರಬೇಕಾದ್ದು ಸರ್ವರಿಗೂ ಕರ್ತವ್ಯವಾಗಿದೆ. ಹೀಗೆ ಮಾಡದೆ ಇರುವ ಮನುಷ್ಯನಿಗೆ ಸಮಾನನಾದ ಕೃತಘ್ನನೂ ಪಾತಕಿಯೂ ಪ್ರಪಂಚದಲ್ಲಿ ಯಾರೂ ಇಲ್ಲ. ಆದ್ದರಿಂದ ಪ್ರಾತಃಕಾಲದಲ್ಲಿ ಏಕಾಂತ ಸ್ಥಲದಲ್ಲಿ ಕುಳಿತು ದೇವರ ಸ್ಮರಣೆಯನ್ನು ಮಾಡಬೇಕು. ಏಕಾಗ್ರಚಿತ್ತದಿಂದ ಆತನಲ್ಲಿ ನಿಮ್ಮ ಆತ್ಮ ಸಮರ್ಪಣೆ ವನ್ನು ಮಾಡಿ ನೀವು ಮಾಡಿದ ಅಪರಾಧಗಳಿಗಾಗಿ ಅತಿ ನಮ್ರತೆಯಿಂದ ಕ್ಷಮೆಯನ್ನು ಬೇಡಿಕೊಳ್ಳಬೇಕು. ಆತನ ಇಚ್ಛೆಗೆ ವಿರುದ್ಧವಾಗದಂತೆ ನಿಮ್ಮ ಬಂಧು ಬಳಗಕ್ಕೂ ನೆರೆಹೊರೆಯುವರಿಗೂ ನಿಮ್ಮ ಶತ್ರುಗಳಿಗೂ ಶ್ರೇಯಸ್ಸನ್ನು ಉಂಟುಮಾಡಬೇಕಂತಲೂ, ಸಂಸಾರದ ಎಲ್ಲಾ ಕೆಲಸ ಗಳಲ್ಲಿಯೂ ನಿಮಗೆ ಒಳ್ಳೇಬುದ್ಧಿಯೂ ಧರ್ಮವಾಸನೆಯೂ ನಿಮ್ಮಲ್ಲಿ ಅಚಲವಾಗಿ ಇರುವಂತೆ ಧೈರ್ಯವನ್ನು ಉಂಟುಮಾಡಬೇಕೆಂತಲೂ, ದೇವ ರನ್ನು ಪ್ರಾರ್ಥಿಸಬೇಕು. ದೇವರು ನಿಮಗೆ ಮಾಡುವ ಉಪಕಾರಕ್ಕೆ ಪ್ರತ್ಯುಪಕಾರವು ನಿಮ್ಮಿಂದ ಎಂದಿಗೂ ಆಗಲಾರದು. ಆತನಲ್ಲಿ ಅಚಲವಾದ ಭಕ್ತಿಯನ್ನು ಇಟ್ಟದ್ದೇಆದರೆ ಸ್ವಲ್ಪವಟ್ಟಿಗಾದರೂ ಮಾಡಿದಂತೆ ಆಗುತ್ತೆ. ಈ ಮೇರಿಗೆ ದೇವರ ಸ್ಮರಣೆ ಮಾಡಿದ ಬಳಿಕ ಮುಂದೆ ಮಾಡಬೇಕಾದ ಕೆಲಸವನ್ನು ವಿಚಾರಪೂರ್ವಕವಾಗಿ ಮಾಡಬೇಕು. ವಿಚಾರವಿಲ್ಲದೆ ಮಾಡಿದ ಯಾವ ಕೆಲಸವೂ ಚನ್ನಾಗಿ ಆಗುವದಿಲ್ಲ. ಮಾಡಿದ ಕೆಲಸವು ಒಂದು ವೇಳೆ ಸಿದ್ಧಿಸಿದಾಗ್ಯೂ ಅದು ಬಹು ಕಾಲ ನಿಲ್ಲುವದಿಲ್ಲ. ಅಸ್ತಿವಾರವನ್ನು ಹಾಕದೆ ಕಟ್ಟಿದ ಮನೆಯಂತೆ ಕಾಲಕ್ರಮದಿಂದ ಆ ಕೆಲಸ ಕೆಟ್ಟು ಹೋಗುತ್ತೆ. ಇದ ರಿಂದ ದುಃಖವುಂಟಾಗಿ ವಿಚಾರವಿಲ್ಲದೆ ಮಾಡಿದ ಕೆಲಸಕ್ಕಾಗಿ ಪಶ್ಚಾತ್ತಾಪ ಉಂಟಾಗುತ್ತೆ. ಆದ್ದರಿಂದ ಎಲ್ಲಾ ಕೆಲಸಗಳಲ್ಲಿಯೂ ಪೂರ್ವಾಪರ ವಿಚಾರ ಮಾಡಿ ಕೆಲಸವನ್ನು ಮಾಡಬೇಕು. ಈ ಪ್ರಕಾರ ವಿಚಾರ ಮಾಡಿ ತನ್ನಿಂದ ಈ ಕೆಲಸ ಸಾಧ್ಯವೆಂದು ನಿಶ್ಚಯಿಸಿದ ಬಳಿಕ ಕೆಲಸವನ್ನು ಆರಂಭಿಸಿ ಎಷ್ಟು ಅಭ್ಯಂತರಗಳು ಬಂದಾಗ್ಯೂ ಬಿಡದೆ ಕೆಲಸವನ್ನು ಮುಗಿಸುವದಕ್ಕೆ ದೃಢಸಂಕಲ್ಪರಾಗಿರಬೇಕು. ಪ್ರತಿನಿತ್ಯವೂ ಇಂಥಾ ಕೆಲಸವನ್ನು ಮಾಡ ಬೇಕು, ಇಂಥಾ ಕೆಲಸವನ್ನು ಮಾಡಬಾರದು ಎಂಬುವದನ್ನು ನಿಶ್ಚೈಸಿ

ಅದರಂತೆ ನಡೆದುಕೊಳ್ಳುತ್ತಾ ಬಂದರೆ ಮಾಡಿದ ಸಂಕಲ್ಪವನ್ನು ನೆರವೇರಿಸುವ ಅಭ್ಯಾಸ ಉಂಟಾಗುತ್ತೆ. ಹೀಗೆ ಮಾಡುವದರಿಂದ ಬಹುಶ್ರಮ ಸಾಧ್ಯವಾದ ಕೆಲಸವನ್ನು ಆರಂಭಿಸಿದಾಗ್ಯೂ ಅದನ್ನು ನೆರವೇರಿಸುವದಕ್ಕೆ ಬಹಳ ಶ್ರಮ ಉಂಟಾಗುವದಿಲ್ಲ. ಮನುಷ್ಯನು ತನ್ನ ಮನಸ್ಸನ್ನು ನಿಗ್ರಹಿಸುವದರಿಂದ ತನ್ನಯೋಗ್ಯತೆಗೆ ಮೀರಿದ ಕೆಲಸದಲ್ಲಿ ಪ್ರವರ್ತಿಸುವದಿಲ್ಲ. ಆದಕಾರಣ ಎಲ್ಲಾ ಕೆಲಸದಲ್ಲಿಯೂ ಆತ್ಮ ಸಂಯಮನವನ್ನು ಮಾಡಬೇಕು. ಈ ಸಂಯಮನವು ಸಂಸಾರಿಗಳೆಲ್ಲರಿಗೂ ಆವಶ್ಯಕವು. ಅನೇಕರು ಯಾವದಾದರೂ ಒಂದು ಕೆಲಸವನ್ನು ಮಾಡುವದಕ್ಕೆ ಉಪಕ್ರಮಿಸಿ ಸ್ವಲ್ಪ ವಿಘ್ನಬಂದ ಕೂಡಲೆ ಅದನ್ನು ಬಿಟ್ಟು ಬಿಡುತ್ತಾರೆ. ಹೀಗೆ ಮಾಡುತ್ತಾ ಬಂದರೆ ಅವರಿಗೆ ಸಣ್ಣ ಸಣ್ಣ ಕೆಲಸಗಳಲ್ಲಿಯೂ ಪ್ರತಿಜ್ಞೆಯನ್ನು ಭಂಗಪಡಿಸಿಕೊಳ್ಳುವ ಅಭ್ಯಾಸ ಉಂಟಾಗುತ್ತದೆ. ಮುಂದೆ ಅವರ ಕೈಯಿಂದ ಯಾವ ಕೆಲಸವೂ ನಡೆಯುವದಿಲ್ಲ. ಆದ್ದರಿಂದ ಹಿಡಿದ ಕೆಲಸ ಸಣ್ಣದಾಗಲಿ ದೊಡ್ಡದಾಗಲಿ ಅದನ್ನು ಪಾಲುಮಾರಿಕೆ ಯಿಲ್ಲದೆ ಮುಗಿಸಬೇಕು. ಹಿಡಿದ ಕೆಲಸವನ್ನು ಮುಗಿಸುವದಕ್ಕೆ ಒಂದು ಉಪಾಯವಿದೆ, ಅದು ಯಾವದೆಂದರೆ:—ಒಂದು ಕೆಲಸಕ್ಕೆ ಒಂದು ಕಾಲವನ್ನು ಗೊತ್ತು ಮಾಡಿ ಆ ಕಾಲ ಮುಗಿಯುವ ವರಿಗೂ ತಪ್ಪದೆ ಆ ಕೆಲಸವನ್ನೇ ಮಾಡಬೇಕು. ಆ ಹೊತ್ತಿನಲ್ಲಿ ಮತ್ತೊಂದು ಕೆಲಸದ ಕಡೆಗೆ ಮನಸ್ಸನ್ನು ಬಿಡಬಾರದು. ಒಂದು ಕೆಲಸವನ್ನು ಮಾಡುವ ಹೊತ್ತಿನಲ್ಲಿ ಇನ್ನೊಂದನ್ನು ಮಾಡುವದಕ್ಕೆ ಹೋದರೆ ಅದೂ ಆಗುವದಿಲ್ಲ ಇದೂ ಆಗುವದಿಲ್ಲ. ಎಲ್ಲಾ ಕೆಲಸದಲ್ಲಿಯೂ ಸ್ವಬುದ್ಧಿಯಿಂದಲೇ ನಡೆಯಬಾರದು. ಯಾವದಾದರೂ ಹೊಸ ಕೆಲಸವನ್ನು ಮಾಡಬೇಕಾದರೆ ಅಂಥಾ ಕೆಲಸಗಳನ್ನು ಬಹಳವಾಗಿ ಮಾಡಿ ಅನುಭವವಿರುವರನ್ನು ಕೇಳಿ ಚನ್ನಾಗಿ ತಿಳಿದುಕೊಂಡು ಮಾಡಬೇಕು. ಅನೇಕರು ತಮಗೆ ತಿಳಿಯದೆ ಇರುವದನ್ನು ಇತರರಿಂದ ತಿಳಿದುಕೊಳ್ಳುವದು ಅವಮಾನವೆಂದು ಎಣಿಸುತ್ತಾರೆ. ಇದು ಯುಕ್ತವಲ್ಲ. ಬೆಳಗ್ಗೆ ಎದ್ದ ಮೇಲೆ ಮೊದಲು ಮನೆಯ ಎಲ್ಲಾ ಭಾಗದಲ್ಲಿಯೂ ಕಸವನ್ನು ಗುಡಿಸಬೇಕು. ಮನುಷ್ಯನ ಶರೀರದ ಕೊಳೆಯನ್ನು ಅನೇಕ ದಿವಸಗಳ

ವರಿಗೂ ತೋಳಿಯದೆ ಇದ್ದರೆ ಅದರಿಂದ ರೋಗಗಳು ಹುಟ್ಟುವಂತೆ ಮನೆಯ ಮೂಲೆ ಮೂಲೆಗಳಲ್ಲಿಯೂ ಮಲಗುವಮನೆ ಅಡಿಗೇಮನೆ ಬಚ್ಚಲು ಮನೆಗಳಲ್ಲಿಯೂ ಕಸವನ್ನು ಕೂಡಲೆ ತೆಗೆಯದೆ ಹೋದರೆ ಅದರಿಂದ ಮನೆಯ ಗಾಳಿಯು ಕೆಟ್ಟುಹೋಗಿ, ಅದು ಉಚ್ಛ್ವಾಸದಿಂದ ಶರೀರದೊಳಕ್ಕೆ ವಿಷದಂತೆ ಹೊಕ್ಕು ಶರೀರಸ್ಥಿತಿಯನ್ನು ಕೆಡಿಸಿ ರೋಗ ವನ್ನು ಹುಟ್ಟಿಸುತ್ತದೆ. ಆದ್ದರಿಂದ ಸ್ತ್ರೀಯರೆಲ್ಲರೂ ತಮ್ಮತಮ್ಮ ಮನೆ ಯನ್ನು ನಿರಂತರವೂ ನಿರ್ಮಲವಾಗಿ ಇಟ್ಟುಕೊಂಡಿರಬೇಕು. ಮನೆಯಲ್ಲಿ ಗಂಡಸರು ಬಹಳ ಹೊತ್ತು ಇರುವದಿಲ್ಲ, ಹೆಂಗಸರೇ ಇರುತ್ತಾರೆ. ಆದ್ದರಿಂದ ಇದರ ಲಾಭನಷ್ಟಗಳು ಇವರಿಗೇ ಹೆಚ್ಚಾಗಿ ಸಂಭವಿಸುತ್ತವೆ. ಮನೆ ಯಲ್ಲಿರುವ ಎಲ್ಲರ ದೇಹಾರೋಗ್ಯವನ್ನು ಸ್ತ್ರೀಯರು ಮುಖ್ಯವಾಗಿ ನೋಡಿಕೊಳ್ಳಬೇಕು. ರೋಗವನ್ನು ಹುಟ್ಟಿಸುವ ನಾನಾವಿಧವಾದ ಪದಾರ್ಥಗಳೊಗಳಗೆ ದುರ್ಗಂಧಯುಕ್ತವಾದ ವಾಯುವು ಮುಖ್ಯವಾದದ್ದು ಆದ್ದರಿಂದ ಮನೆಯ ವಾಯುವು ವಿಷಪರಮಾಣುಗಳಿಂದ ಕೂಡಿ ದುಷ್ಟ ವಾಗದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಮನೆಯಲ್ಲಿ ಎಲ್ಲಿಯೂ ಕಸದ ರಾಶಿ ಬೀಳದಂತೆ ನೋಡಿಕೊಳ್ಳಬೇಕು. ಮನೆಯಲ್ಲಿ ಅಲ್ಲಲ್ಲಿ ಕಸವನ್ನು ಕೂಡಿ ಹಾಕುವದರಿಂದ ಗಾಳಿ ಕೆಡುವದು ಮಾತ್ರವೆ ಅಲ್ಲದೆ ನೋಡುವದಕ್ಕೂ ಚನ್ನಾಗಿ ಇರುವದಿಲ್ಲ. ಚೇಳು ಜರಿ ಮುಂತಾದ ಹುಳುಗಳು ಸೇರಿಕೊಳ್ಳು ತ್ತವೆ, ಮನೆಯ ಕಸ, ಕೊಟ್ಟಿಗೆಯ ಸಗಣಿ, ಮತ್ತು ಕೊಳತ ಹುಲ್ಲು ಮುಂತಾದ್ದನ್ನು ತೆಗದು ಮನೆಯ ಸಮೀಪದಲ್ಲಿಯೇ ಹಾಕಬಾರದು. ಬೀದಿಯನ್ನುಗುಡಿಸುವವನು ಪ್ರತಿನಿತ್ಯವೂ ಯಾವ ಸ್ಥಳದಿಂದ ತೆಗೆದು ಕೊಂಡು ಹೋಗುತ್ತಾನೊ ಆ ಸ್ಥಳದಲ್ಲಿಯಾಗಲಿ ಅಥವಾ ಯಾವ ಸ್ಥಳದಲ್ಲಿ ಹಾಕಿದರೆ ಮನೆಯ ಕಡೆಗೆ ದುರ್ವಾಸನೆ ಬರುವದಿಲ್ಲವೋ ಅಂಥಾ ಸ್ಥಳದಲ್ಲಿ ಯಾಗಲಿ ಹಾಕಬೇಕು. ಕೈಗೆ ಸಿಕ್ಕಿದ ಕೆಲಸವನ್ನುಹ್ಯಾಗಾದರೂ ಮಾಡಿ ದರೆ ಸರಿ ಯೆಂದು ತಿಳಿಯಬಾರದು. ಎಲ್ಲಾ ಕೆಲಸವನ್ನೂ ಮನಃಪೂರ್ವ ಕವಾಗಿ ಶ್ರದ್ಧೆಯಿಂದ ಮಾಡಬೇಕು. ನಮ್ಮ ದೇಶದಲ್ಲಿ ಮನೆಯನ್ನು ಸಾರಿಸುವ ವಾಡಿಕೆ ಇದೆ. ಇದು ಉತ್ತಮವಾದದ್ದು. ಆದರೆ ಇದನ್ನು

ಸರಿಯಾಗಿ ಮಾಡದೇ ಯಿರುವದ್ದರಿಂದ ರೋಗಗಳಿಗೆ ಆಸ್ಪದವಾಗುತ್ತೆ. ಸಗಣಿ ೧೫ ದಿವಸದ್ದೇ ಆಗಲೀ ಅಥವಾ ತಿಂಗಳದೇ ಆಗಲಿ ಅದರಿಂದ ಸಾರಿಸಿದ ಮಾತ್ರದಿಂದ ಮನೆಯು ಪವಿತ್ರವಾಗುತ್ತೆಂದು ತಿಳಿದು ದುರ್ವಾಸನೆಯಿಂದ ಕೂಡಿ ಹುಳ ಬಿದ್ದಿರುವ ಸಗಣಿಯನ್ನು ಸಹ ಸಾರಿಸುವದಕ್ಕೆ ಉಪಯೋಗಿಸುತ್ತಾರೆ.

ಇದರಿಂದ ಮನೆಯ ವಾಯುವು ಕೆಟ್ಟುಹೋಗುತ್ತೆ. ಮನೆಯನ್ನು ಸಾರಿಸಲಿಕ್ಕೆ ಹೊಸ ಸಗಣಿಯನ್ನು ತಂದು ಅದರ ಜೋತೇಲಿ ಸ್ವಲ್ಪ ಬಿಳ್ಳೀ ಸ್ಥಳದ ಮಣ್ಣನ್ನು ಬೆರೆಸಿ ಸಾರಿಸಬೇಕು. ಮಣ್ಣಿನ ಯೋಗದಿಂದ ಸಗಣಿಯ ದುರ್ಗಂಧವೂ ಇತರ ದೋಷವೂ ಹೋಗುತ್ತವೆ. ಹೀಗೆ ಪ್ರತಿನಿತ್ಯವೂ ಅಥವಾ ನಾಲ್ಕು ದಿವಸಕ್ಕೆ ಒಂದಾವರ್ತಿಯಾದರೂ ನೆಲವನ್ನು ಸಾರಿಸಬೇಕು. ಗೋಡೆಗೆ ಸುಣ್ಣವನ್ನು ಹಚ್ಚದೆ ಇದ್ದರೆ ಅದರಲ್ಲಿ ತಿಗಣೆ ಮುಂತಾದವುಗಳು ಸೇರುತ್ತವೆ. ಗೋಡೆಗೆ ಸುಣ್ಣವನ್ನು ಹಚ್ಚಬೇಕಾದರೆ ಆರು ತಿಂಗಳಿಗೆ ಒಂದುಸಾರಿ ಹಚ್ಚಿದರೆ ಸಾಕು. ಸುಣ್ಣದಲ್ಲಿ ಒಂದು ವಿಧವಾದ ತೀಕ್ಷ್ಣವಾದ ರಸವಿರುತ್ತೆ. ಇದರಿಂದ ದುರ್ಗಂಧ ನಷ್ಟವಾಗಿ ವಾಯುವು ನಿರ್ಮಲವಾಗುತ್ತೆ. ಕಶ್ಮಲದಿಂದ ಹುಟ್ಟುವ ಸೊಳ್ಳೆ ಮುಂತಾದವುಗಳು ನಾಶವಾಗುತ್ತವೆ. ಗೋಡೆ, ಕಂಭ, ಚೌಕಟ್ಟು, ಬಾಗಲು ಮೊದಲಾದವುಗಳಿಗೆ ಜಿಡ್ಡಿನ ಕೈಯನ್ನು ಒರಸುವದು, ಇದ್ದಲಿನಿಂದ ಬರೆಯುವದು, ಉಗಿಯುವದು, ಸಿಂಬಳವನ್ನು ತೆಗೆದು ಒರಸುವದು ಮೊದಲಾದ ಅಸಹ್ಯವಾದ ಕೆಲಸವನ್ನು ಮಾಡಬಾರದು. ಇದು ನೋಡುವದಕ್ಕೂ ಚನ್ನಾಗಿ ಕಾಣುವದಿಲ್ಲ. ರೋಗಗಳುಸಹ ಹುಟ್ಟುತ್ತವೆ. ಮನೆಯ ಅಂಗಳದಲ್ಲಿ ಅಥವಾ ಹಿತ್ತಲಲ್ಲಿ ಮಲ್ಲಿಗೆ, ಜಾಜಿ, ಗುಲಾಬಿ, ಸುಗಂಧರಾಜ, ತುಳಸಿ, ಪಾರಿಜಾತ ಮುಂತಾದ ಗಿಡಗಳನ್ನು ಹಾಕಬೇಕು. ನೋಡಲಿಕ್ಕೆ ಅಂದವಾಗಿರುವಂತೆ ಬಾನಿಯಲ್ಲಿ ಹಾಕಿ ಇಡಬೇಕು. ಈ ಗಿಡಗಳ ಬುಡದಲ್ಲಿಯೂ ಕೊಳೆಗಳು ಸೇರದಂತೆ ನೋಡಿಕೊಳ್ಳಬೇಕು. ಈ ಗಿಡಗಳ ಸಂಬಂಧದಿಂದಲೂ ದುರ್ಗಂಧ ನಾಶವಾಗಿ ಗಾಳಿ ತಂಪಾಗಿಯೂ ಸುಗಂಧ ಯುಕ್ತವಾಗಿಯೂ ಇರುತ್ತೆ. ಮನೆಯನ್ನು ನಿರ್ಮಲವಾಗಿ ಯಿಟ್ಟುಕೊಳ್ಳುವದೇ ಮುಂತಾದ ಕೆಲಸವನ್ನು

ಸ್ತ್ರೀಯರು ಸ್ವತಃ ಮಾಡಬೇಕು. ಸಂಬಳದವರನ್ನು ಇಟ್ಟುಕೊಳ್ಳುವ ದಕ್ಕೆ ಶಕ್ತಿಯುಳ್ಳವರು ಅವರ ಕಡೆಯಿಂದ ಮಾಡಿಸಬಹುದು. ಆದರೆ ಅನೇಕ ಸಂಗತಿಗಳಲ್ಲಿ ಸಾಂಬಳದವರು ಮನೆಯ ಯಜಮಾನತಿಯನ್ನು ಲಕ್ಷಿಸದೆ ಅವರ ಮೇಲೆಯೇ ತಮ್ಮ ಅಧಿಕಾರವನ್ನು ನಡೆಸುವ ವಾಡಿಕೆಯಿದೆ. ಇದು ಈ ಸಂಬಳದವರ ದೋಷವಲ್ಲ. ಇವರ ಕೈಲಿ ಕೆಲಸವನ್ನು ತೆಗದುಕೊಳ್ಳುವವರ ದೋಷವೆ. ಇಂಥಾ ಸಣ್ಣ ಕೆಲಸದಲ್ಲಿ ಪ್ರಾಯೇಣ ಕುಲೀನರಾಗಿಯೂ ಮರ್ಯಾದಸ್ಥರಾಗಿಯೂ ಇರುವವರು ಸೇರುವದಿಲ್ಲ. ದುಃಸಹವಾಸದಿಂದ ಇವರ ಬುದ್ಧಿಯು ನೀಚವಾಗಿರುತ್ತೆ. ಇವರನ್ನು ಒಳ್ಳೇ ಮಾರ್ಗಕ್ಕೆ ತಂದು ನಮ್ಮ ಗೌರವವನ್ನು ಕಾಪಾಡಿಕೊಳ್ಳುವದು ನಮ್ಮ ಕೈಯಲ್ಲೇ ಯಿರುತ್ತೆ. ಅವರ ಸಂಗಡ ನಾವು ವ್ಯವಹಾರ ಇಟ್ಟಂತೆಯೇ ಅವರು ಸಹ ನಮ್ಮ ಸಂಗಡ ಇಡುತ್ತಾರೆ. ಸೇವಕರ ಸಂಗಡ ಕೆಲಸಕ್ಕೆ ಎಷ್ಟು ಅವಶ್ಯಕವೋ ಅಷ್ಟೇ ಮಾತನಾಡಬೇಕು. ಹೆಚ್ಚು ಮಾತನಾಡಬಾರದು. ಅವರ ಸಂಗಡ ಹಾಸ್ಯ ಮಾಡುವದನ್ನೂ ಅಕಾರಣವಾಗಿ ನಗುವದನ್ನೂ ಲಜ್ಜಾಸ್ಪದಗಳಾದ ಮಾತುಗಳನ್ನಾಡುವದನ್ನೂ ನಿಲ್ಲಿಸಬೇಕು. ಪರಂತು ಸರ್ವಕಾಲದಲ್ಲಿಯೂ ಮುಖವನ್ನು ಗಂಟುಹಾಕಿಕೊಂಡು ಕೋಪದಿಂದ ಗದ್ದರಿಸುತ್ತಾ ಮಾತನಾಡಬಾರದು. ಅವರಿಗೆ ಏನಾದರೂ ಹೇಳಬೇಕಾದರೆ ಸೌಮ್ಯತೆಯಿಂದ ಪ್ರಸನ್ನಮುಖರಾಗಿ ಹೇಳಬೇಕು. ಅವರಿಂದ ಏನಾದರೂ ತಪ್ಪಿನ ಕೆಲಸನಡೆದರೆ ಒಳ್ಳೇಮಾತಿನಿಂದ ಅವರ ತಪ್ಪನ್ನು ಅವರಿಗೆ ಒಪ್ಪಿಸಿ ಅದಕ್ಕಾಗಿ ಸ್ವಲ್ಪ ತಿರಸ್ಕಾರ ಮಾಡಬೇಕು. ಇದರಿಂದ ಸೇವಕರು ಮಾರ್ಗಕ್ಕೆ ಬರುವಂತೆ ಇನ್ಯಾವ ರೀತಿಯಿಂದಲೂ ಬರುವದಿಲ್ಲ. ಕೆಲವು ಯಜಮಾನರು ಯಜಮಾನತಿಯರು ಸಹ ಅತಿಕಠೋರವಾದ ಮಾತುಗಳನ್ನಾಡಿ ಸೇವಕರನ್ನು ಹೊಡೆಯುವದು ಸಹ ಉಂಟು. ಇದು ಕೇವಲ ನಿಂದ್ಯವಾದ ಕೆಲಸವು. ಇದರಿಂದ ಸೇವಕರು ಮೊಂಡರಾಗಿ ಯಾವದಕ್ಕೂ ಹೆದರದಂತೆ ಆಗುತ್ತಾರೆ. ಮತ್ತೊಬ್ಬರನ್ನು ತಮ್ಮ ಸ್ವಾಧೀನ ಮಾಡಿಕೊಳ್ಳುವದಕ್ಕೆ ಮೃದುವಾದ ವ್ಯಾಪಾರ ಹೊರತು ಮತ್ತೊಂದು ಉಪಾಯವಿಲ್ಲ. ಇದರಿಂದ ಸಿಂಹ ಹುಲಿ ಮುಂತಾದ ಕ್ರೂರಮೃಗಗಳು ಕೂಡಾ ಸಾಧುವಾಗುತ್ತವೆ.

ಮನುಷ್ಯನು ಮಾರ್ಗಕ್ಕೆ ಬರುವದೇನಾಶ್ಚರ್ಯ? ಸೇವಕರ ಮನಸ್ಸನ್ನು ನೋಯಿಸುವಂಥಾ ಕಠಿಣವಾದ ಮಾತುಗಳನ್ನು ಎಂದಿಗೂ ಆಡಬಾರದು. ಅವರನ್ನು ಪ್ರೀತಿಯಿಂದ ಕಂಡರೆ ಅವರೂ ಹಾಗೆಯೇ ನಡೆದುಕೊಳ್ಳುತ್ತಾರೆ. ಗರ್ವದಿಂದ ಎಂದಿಗೂ ಅವರನ್ನು ಅನಾದರಣೆ ಮಾಡಬಾರದು. ಸೇವಕರನ್ನು ಇಟ್ಟುಕೊಳ್ಳುವಂಥಾ ಉತ್ತಮ ಸ್ಥಿತಿಯು ನಮಗೆ ಈಶ್ವರ ಕೃಪೆಯಿಂದ ಬಂದಿದೆ. ಈಶ್ವರಾನುಗ್ರಹ ಇದಲ್ಲದೆ ಇರುವದರಿಂದಲೇ ಈ ಸೇವಕರಿಗೆ ಈ ದುರ್ದಶೆ ಪ್ರಾಪ್ತವಾಗಿದೆ ಎಂಬುವದನ್ನು ಚನ್ನಾಗಿ ಮನಸ್ಸಿನಲ್ಲಿ ಇಡಬೇಕು. ಈ ಸ್ಥಿತಿಯು ಉಭಯತ್ರರಿಗೂ ಶಾಶ್ವತವಲ್ಲ. ಐಶ್ವರ್ಯವಾಗಲಿ ದರಿದ್ರತೆಯಾಗಲಿ ಯಾವ ಕಾಲಕ್ಕೆ ಬರುವದೋ ಅದನ್ನು ತಿಳಿಯುವದಕ್ಕೆ ಯಾರಿಂದಲೂ ಆಗದು. ನಾವು ಭಾಗ್ಯಹೀನರಾಗಿ ನಮ್ಮಲ್ಲಿ ಸೇವಕರಾಗಿ ಇದ್ದವರು ಕಾಲಕ್ರಮೇಣ ಭಾಗ್ಯವಂತರಾಗಿ ಅವರಲ್ಲಿ ನಾವು ಉಪಸರ್ಪಣೆ ಮಾಡುವ ಕಾಲವು ಒಂದು ವೇಳೆ ಬರಬಹುದು. ಆದ್ದರಿಂದ ಸೇವಕರಲ್ಲಿ ಅಹಂಕಾರವನ್ನು ತೋರಿಸುವದು, ಕ್ರೂರವಾಗಿ ನಡೆಯುವದು, ಅಯೋಗ್ಯವಾದ ಕೆಲಸದಲ್ಲಿ ಅವರನ್ನು ನಿಯೋಗಿಸುವದು ಮುಂತಾದ ಅಸಭ್ಯವಾದ ಕೆಲಸವನ್ನು ಮಾಡಬಾರದು. ಅವರಲ್ಲಿ ದಯಾಶೀಲರಾಗಿಯೂ ಮಮತೆಯುಳ್ಳವರಾಗಿಯೂ ಯಿರಬೇಕು. ಅವರಿಗೆ ದುಃಖ ಪ್ರಾಪ್ತವಾದ ಕಾಲದಲ್ಲಿ ಸಮಾಧಾನ ಪಡಿಸಬೇಕು. ಅವರಿಗೆ ವ್ಯಾಧಿಯುಂಟಾದಲ್ಲಿ ತಾಯಿ ತಂದೆಗಳಂತೆ ಆದರಿಸಿ ಆರೈಕೆ ಮಾಡಬೇಕು. ಅವರು ಅಲ್ಪಜನರೆಂದು ಅವರನ್ನು ಅನಾದರಣೆ ಮಾಡಬಾರದು. ಅವರು ಅಸ್ವಸ್ಥರಾಗಿ ಮಲಗಿರುವಸ್ಥಳಕ್ಕೆ ಹೋಗುವದಕ್ಕೆ ಅಸಹ್ಯಪಟ್ಟುಕೊಳ್ಳಬಾರದು. ಸೇವಕರಿಗೂ ಯಜಮಾನರಿಗೂ ತಾಯಿ ಮಕ್ಕಳಿಗೆ ಇರುವಂತೆ ಸಂಬಂಧ ವಿರುವದರಿಂದ ಪರಸ್ಪರ ವ್ಯವಹಾರವೂ ಹಾಗೆಯೇ ಇರಬೇಕು. ಕೆಲವು ಸೇವಕರು ಯಜಮಾನನ ಗುಣವನ್ನು ತಿಳಿದು ಅದಕ್ಕೆ ತಕ್ಕಹಾಗೆ ನಡೆದು ಕೊಳ್ಳುತ್ತಾ ಯಾರ ಮೇಲಾದರೂ ದೂರು ಹೇಳಿ, ಅದರಿಂದ ತಮ್ಮ ಧಣಿಯ ಮನಸ್ಸನ್ನು ಸಂತೋಷಪಡಿಸಿ, ತಮ್ಮ ಕಡೆಗೆ ತಿರಿಗಿಸಿಕೊಂಡು, ಮತ್ತೊಬ್ಬರಲ್ಲಿ ವೈರವನ್ನು ಉಂಟುಮಾಡುವದಕ್ಕೆ ಯತ್ನಿಸುತ್ತಾರೆ. ಇಂಥವರ ಮಾತುಗಳಲ್ಲಿ

ನಂಬಿಕೆಯನ್ನು ಇಟ್ಟು ತಾವು ಪ್ರತ್ಯಕ್ಷವಾಗಿ ನೋಡದೆ ಯಾರಮೇಲೂ ದೋಷವನ್ನು ಆರೋಪಿಸಬಾರದು. ನಮ್ಮನ್ನು ಸಂತೋಷಪಡಿಸುವದಕ್ಕೆ ಇತರರ ಮೇಲೆ ಚಾಡಿಯನ್ನು ಹೇಳುವವರು ಸ್ವಪ್ರಯೋಜನಕ್ಕಾಗಿಯೇ ಹೇಳುತ್ತಾರೆಂದು ತಿಳಿಯಬೇಕು. ಸಮಯ ಬಿದ್ದ ಕಾಲದಲ್ಲಿ ಇವರು ಇತರರ ಸಂಗಡ ನಮ್ಮ ನಿಂದೆಯನ್ನು ಮಾಡುವದಕ್ಕೂ ಹಿಂತೆಗೆಯಲಾರರು. ಮುಖಸ್ತುತಿಯನ್ನು ಮಾಡುವ ಸೇವಕರು ಎದುರಿಗೆ ಸ್ತೋತ್ರ ಮಾಡಿ ದಯವನ್ನು ಸಂಪಾದಿಸಿ ಗೃಹಕೃತ್ಯದ ಅಂತರಂಗವನ್ನು ತಿಳಿದುಕೊಂಡು ಅದನ್ನು ಪ್ರಕಟಪಡಿಸುತ್ತಾರೆ. ಇದರಿಂದ ಮುಂದೆ ಅಸಂಗತಗಳು ಉಂಟಾದರೆ ಆಗ ತಾವು ನಿರ್ಲಿಪ್ತರಾಗಿ ತಮ್ಮ ಮುಖಸ್ತುತಿಗೆ ಮೋಸಹೋದ ಹೆಂಗಸರನ್ನು ಬೈಲಿಗೆ ಎಳದು ಅವರನ್ನೇ ನಿಂದಿಸುವದಕ್ಕೆ ಆರಂಭಿಸುತ್ತಾರೆ. ಆದಕಾರಣ ಇಂಥವರ ದೆಸೆಯಿಂದ ತಮ್ಮ ಮಾನವನ್ನು ಬಹು ಜಾಗರೂಕತೆಯಿಂದ ಸಂರಕ್ಷಣೆ ಮಾಡಿಕೊಳ್ಳಬೇಕು. ತನ್ನ ಪತಿ, ಅತ್ತೆ ಮಾವಂದಿರು, ಭಾವ ಮೈದುನರು ಮುಂತಾದವರ ವಿಷಯಕವಾದ ಗುಟ್ಟಿನ ಮಾತುಗಳನ್ನು ಈ ಸೇವಕರ ಸಂಗಡ ಸರ್ವಥಾ ಹೇಳಬಾರದು, ಅವರ ಮೇಲಿನ ಚಾಡಿಯನ್ನೂ ಕೇಳಬಾರದು. ಸೇವಕರಿಗೆ ಸಂತೋಷದಿಂದ ಏನಾದರೂ ಕೊಡಬೇಕಾದಲ್ಲಿ ಯಜಮಾನ, ಅತ್ತೆ ಮುಂತಾದವರ ಸಮ್ಮತಿಯನ್ನು ಕೇಳಿ ಯುಕ್ತಾಯುಕ್ತ ವಿಚಾರವನ್ನು ಮಾಡಿ ಕೊಡಬೇಕು. ಯಾವ ಸೇವಕನೇ ಆಗಲಿ ಬಹುಮಾನವನ್ನು ಪಡೆಯುವಂಥಾ ಕೆಲಸವನ್ನು ಮಾಡಿದರೆ ಹಬ್ಬ ಹುಣ್ಣಿವೆ ಮುಂತಾದ ದಿವಸಗಳಲ್ಲಿ ಸರ್ವರೂ ಸಂತೋಷದಿಂದಿರುವ ಕಾಲದಲ್ಲಿ ನಿಮ್ಮ ಯೋಗ್ಯತೆಗೂ ಅವನ ಯೋಗ್ಯತೆಗೂ ತಕ್ಕಹಾಗೆ ಏನಾದರೂ ಬಹುಮಾನವನ್ನು ಅವಶ್ಯಕವಾಗಿ ಕೊಡಬೇಕು. ಇಂಥಾ ಸಮಯಗಳಲ್ಲಿ ತನಗೆ ಏನೂ ದೊರೆಯದೆ ಇದ್ದರೆ ಅವನ ಮನಸ್ಸು ಖಿನ್ನವಾಗುತ್ತದೆ. ಸಮಯದಲ್ಲಿ ಕಷ್ಟಪಟ್ಟು ಕೆಲಸ ಮಾಡಿದ್ದಕ್ಕಾಗಿ ತಕ್ಕ ಬಹುಮಾನವನ್ನು ಕೊಡದೆ ಸರ್ವದಾ ನಿಷ್ಕರುಣಿಯಾಗಿರುವ ಯಜಮಾನನಲ್ಲಿ ಸೇವಕನಿಗೆ ಭಕ್ತಿಯೂ ಕೃತಜ್ಞತೆಯೂ ಇರುವದಿಲ್ಲ, ಆಪತ್ತಿನ ಕಾಲದಲ್ಲಿ ಇಂಥಾ ದಣಿಗಳಿಗೆ ಸೇವಕರು ಶತ್ರುಗಳುಕೂಡ ಆಗುತ್ತಾರೆ.

ಸೇವಕರ ಜೊತೆಯಲ್ಲಿ ಸರಿಯಾಗಿ ಕೂತುಕೊಳ್ಳಬಾರದು. ಅವರ ಹಾಸಿಗೆಯ ಮೇಲೆ ಕೂತುಕೊಳ್ಳ ಬಾರದು. ತಮ್ಮ ಬಟ್ಟೆಗಳನ್ನು ಅವರಿಗೆ ಉಡುವದಕ್ಕೆ ಕೊಡಬಾರದು. ಯಾವ ರೀತಿಯಿಂದಲೂ ತಮ್ಮ ಗೌರವಕ್ಕೆ ಹಾನಿ ಬರದಂತೆ ಜಾಗರೂಕರಾಗಿರಬೇಕು. ಅವರು ಮಾಡಿದ ಸಣ್ಣ ತಪ್ಪಿಗೆ ದೊಡ್ಡ ಸಿಕ್ಷೆಯನ್ನು ಮಾಡಬಾರದು. ಅವರಿಂದ ಅಪರಾಧವಿಲ್ಲದೆ ಇರುವಾಗ ಸಣ್ಣ ಮಾತುಗಳನ್ನು ಆಡಬಾರದು. ಇತರ ವಿಧವಾಗಿ ಶಿಕ್ಷೆಯನ್ನೂ ಮಾಡಬಾರದು. ತಾವು ಮಾಡಿದ ತಪ್ಪಿಗೂ ಅಥವಾ ಇತರರು ಮಾಡಿದ ತಪ್ಪಿಗೂ ಸೇವಕರನ್ನು ಗುರಿಮಾಡ ಬಾರದು. ಹೀಗೆ ಮಾಡಿದರೆ ಸೇವಕರರಲ್ಲಿ ಸ್ವಾಮಿಭಕ್ತಿಯೂ ಪ್ರೀತಿಯೂ ಶುದ್ಧಾಂಗ ವಾಗಿ ಇಲ್ಲವಾಗುತ್ತೆ. ಸೇವಕರರಲ್ಲಿ ಹೆಚ್ಚಾಗಿ ವಿಶ್ವಾಸವನ್ನೂ ಇಡ ಬಾರದು. ದಣಿಯ ಪ್ರೀತಿ ತಮ್ಮ ಮೇಲೆ ಸಂಪೂರ್ಣವಾಗಿ ಯಿದೆ ಎಂದು ತಿಳಿದ ಕೂಡಲೆ ಅವರು ಸುಮ್ಮನೆ ಕೂತು ಕಾಲಕ್ಷೇಪ ಮಾಡುತ್ತಾರೆ. ಅಂಗಡಿಯಿಂದ ಜಿನಸಿ ಮುಂತಾದ್ದನ್ನು ಸೇವಕರಿಂದ ತರಿಸುವಾಗ ಅದರ ಧಾರಣೆ ಮುಂತಾದ್ದನ್ನು ಚನ್ನಾಗಿ ವಿಚಾರಿಸಿ ಇರಬೇಕು. ಸೇವಕರಲ್ಲಿ ಅನೇಕರು ಮನೆಯ ಯಜಮಾನತಿಗೆ ಧಾರಣೆ ತಿಳಿಯದೆಂದು ಒಂದಕ್ಕೆರಡು ಧಾರಣೆಯನ್ನು ಹೇಳಿ ದುಡ್ಡನ್ನು ಕಳುತ್ತಾರೆ. ತಂದ ಜಿನಸಿ ಯಲ್ಲಿಯೂ ಅಲ್ಪಸ್ವಲ್ಪ ಕಳುವದೂ ಉಂಟು. ಈ ವಿಷಯದಲ್ಲಿ ಯಜಮಾನತಿಯು ಸಂಪೂರ್ಣವಾಗಿ ಲಕ್ಷ್ಯವನ್ನು ಇಟ್ಟಿರಬೇಕು. ಸೇವಕರ ಯೋಗ್ಯತೆಯನ್ನು ಆಗಾಗ್ಯೆ ಪರೀಕ್ಷಿಸುತ್ತಾ ಇರಬೇಕು. ಯಾವದಾದರೂ ತಿನ್ನತಕ್ಕ ಪದಾರ್ಥವನ್ನಾಗಲಿ ಅಥವಾ ಯಾವದಾದರು ಸಣ್ಣ ಒಡವೆಯನ್ನಾಗಲಿ ಅಥವಾ ಕೆಲವು ದುಡ್ಡುಗಳನ್ನಾಗಲಿ ಒಂದು ಕಡೆಯಲ್ಲಿಟ್ಟು ಅದನ್ನು ನೋಡದೆ ಯಿರುವಂತೆಯೂ ಅದನ್ನು ಮರ ತಂತೆಯೂ ಇರಬೇಕು. ಸೇವಕರು ಅಲ್ಪಬುದ್ಧಿಯವರಾದರೆ ಕಳು ತ್ತಾರೆ. ಇಲ್ಲವಾದರೆ ಇದ್ದಂತೆ ಇರುತ್ತೆ. ಇಂಥಾ ಉಪಾಯಗಳಿಂದ ಸೇವಕರ ಯೋಗ್ಯತೆಯನ್ನು ತಿಳಿದುಕೊಂಡು ಜಾಗರೂಕರಾಗಿರಬೇಕು. ಸಣ್ಣಸಣ್ಣ ತಪ್ಪಿಗಾಗಿ ಅವರನ್ನು ಕೆಲಸದಿಂದ ತೆಗೆದುಹಾಕ ಬಾರದು.

ಕೆಟ್ಟ ನಡತೆಯುಳ್ಳ ಅನೇಕ ಸೇವಕರು ಧಣಿಯ ಒಳ್ಳೇ ನಡತೆಯಿಂದಲೂ ನೀತಿಪರವಾದ ಉಪದೇಶದಿಂದಲೂ ಮಾರ್ಗಕ್ಕೆ ಬರುವದೂ ಉಂಟು. ಸೇವಕರ ಯೋಗ್ಯತೆಯನ್ನು ಸ್ವಲ್ಪ ದಿವಸದಲ್ಲಿಯೇ ನಿಶ್ಚಯಿಸುವದಕ್ಕಾಗುವದಿಲ್ಲ. ಕೆಲವರು ಮೊದಲು ನಂಬಿಗಸ್ತರ ಹಾಗೆ ಇದ್ದು ಸಮಯ ಸಿಕ್ಕಿದ ಕೂಡಲೆ ಕೃತಘ್ನರಾಗುತ್ತಾರೆ. ಆದ್ದರಿಂದ ಇವರ ವಿಷಯದಲ್ಲಿ ಸರ್ವದಾ ಜಾಗರೂಕರಾಗಿರಬೇಕು. ಮುಖ್ಯವಾಗಿ ಸೇವ್ಯ ಸೇವಕರಲ್ಲಿ ತಾಯಿ ಮಕ್ಕಳ ನ್ಯಾಯವಿರುವದ್ದರಿಂದ ಮಮತೆಯಿಂದ ನಡೆದುಕೊಳ್ಳಬೇಕು.

ಮನೆಯ ಪದಾರ್ಥಗಳನ್ನೆಲ್ಲಾ ಹರಡಬಾರದು. ಒಂದಕ್ಕೊಂದನ್ನು ಬೆರಸಬಾರದು. ಬೇಕಾದ ಕೂಡಲೆ ಸಿಕ್ಕುವಂತೆ ತಕ್ಕ ಸ್ಥಳದಲ್ಲಿ ಅಚ್ಚುಗಟ್ಟಾಗಿ ಇಟ್ಟಿರಬೇಕು. ಇವುಗಳನ್ನು ಇಡುವ ಸ್ಥಳದಲ್ಲಿ ಕಸವನ್ನು ಸೇರಗೊಡಬಾರದು. ಆಗಿಂದಾಗ್ಯೆ ಗುಡಿಸುತ್ತಾ ಇರಬೇಕು. ಅಂಗಡಿಯಿಂದ ತಂದ ಧಾನ್ಯಾದಿಗಳನ್ನು ಕುಟ್ಟಿ, ಕೇರಿ, ಕಸ ಮುಂತಾದ್ದನ್ನು ತೆಗೆದು ಇಲಿ, ಬೆಕ್ಕು, ಮಕ್ಕಳು ಮುಂತಾದವರು ಹಾಳು ಮಾಡದಂತೆ ಜೋಪಾನವಾಗಿ ಮುಚ್ಚಿ ಅಥವಾ ಕಟ್ಟಿ ಇಡಬೇಕು. ಯಾವ ಪದಾರ್ಥವನ್ನೂ ತೆರೆದು ಇಟ್ಟಿರಬಾರದು. ತೆರದಿಟ್ಟರೆ ನೊಣ, ಇರುವೆ, ಹುಳ, ಮುಂತಾದ್ದು ಸೇರುತ್ತದೆ. ಇಂಥಾ ಪದಾರ್ಥಗಳು ಮನುಷ್ಯನ ಹೊಟ್ಟೆಗೆ ಸೇರಿದರೆ ರೋಗಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಅಕ್ಕಿ, ಬೇಳೆ ಮುಂತಾದವುಗಳನ್ನು ಕುಟ್ಟಿ, ಕೇರಿ, ಒನೆಮ, ಇಟ್ಟಿರಬೇಕು. ಬೆಲ್ಲ ಸಕ್ಕರೆ ಮುಂತಾದ್ದರಲ್ಲಿ ಕಸವನ್ನು ಆರಿಸಿ ಇಡಬೇಕು. ಈ ಪ್ರಕಾರ ಮನೆಯನ್ನೂ ಪದಾರ್ಥಗಳನ್ನೂ ನಿರ್ಮಲವಾಗಿ ಇಟ್ಟುಕೊಂಡಿರಬೇಕು. ಮನೆಯನ್ನು ನೋಡಿದರೆ ಮನೆಯ ಯಜಮಾನತಿಯ ಯೋಗ್ಯತೆ ಎಲ್ಲರಿಗೂ ಗೊತ್ತಾಗುತ್ತೆ. ಯಾವ ಮನೆಯಲ್ಲಿ ಎಲ್ಲಾ ಪದಾರ್ಥಗಳೂ ತಕ್ಕ ಸ್ಥಳದಲ್ಲಿ ಅಚ್ಚುಗಟ್ಟಾಗಿ ಇಡಲ್ಪಟ್ಟಿರುತ್ತವೋ ಆ ಮನೆಯ ಯಜಮಾನತಿಯು ಚತುರಳೆಂಬುವದಕ್ಕೆ ಬೇರೆ ದೃಷ್ಟಾಂತ ಬೇಕಾಗುವದಿಲ್ಲ. ಯಾವ ಮನೆಯಲ್ಲಿ ಕಂಡಕಂಡ ಕಡೆಯಲ್ಲಿ ಪದಾರ್ಥಗಳು ಹರಡಿಕೊಂಡು ಕಸದಿಂದ ಕೂಡಿ ಬಿದ್ದಿರುತ್ತವೋ ಆ ಮನೆಯನ್ನು ನೋಡಿದರೆ ಅದರ ಯಜಮಾನತಿಗೆ ಗೃಹಿಣೀರೋಗ ಸಂಭವಿಸಿರು

ವದೆಂದು ತಿಳಿಯಬೇಕು. ಮನೆಯಲ್ಲಿ ಸಿಕ್ಕಿದ ಕಡೆಯಲ್ಲಿ ನೀರು ಚಲ್ಲಿ ತೇವವನ್ನು ಮಾಡಬಾರದು. ಬಚ್ಚಲಲ್ಲಿ ಕಸ ಕಡ್ಡಿ ತುಂಬಿ ದುರ್ವಾಸನೆ ಬರದಂತೆ ನೋಡಿಕೊಳ್ಳಬೇಕು. ಆಗಿಂದಾಗ್ಯೆ ಬಚ್ಚಲಿಗೆ ನೀರು ಹಾಕಿ ತೊಳೆದು ನಿರ್ಮಲವಾಗಿ ಇಟ್ಟಿರಬೇಕು. ಕೂತುಕೊಳ್ಳುವ ಸ್ಥಳದಲ್ಲಿಯೂ ಮಲಗುವ ಸ್ಥಳದಲ್ಲಿಯೂ ನಾನಾವಿಧವಾದ ಪದಾರ್ಥಗಳನ್ನು ತುಂಬಿ ಇರಿಸಬಾರದು. ಈ ಸ್ಥಳವನ್ನು ಸಾಧ್ಯವಾದ ಮಟ್ಟಿಗೂ ತೆರಪು ಮಾಡಿಕೊಂಡಿರಬೇಕು. ಹಾಗೆ ತೆರಪಾಗಿಲ್ಲದೆ ಇಕ್ಕಟ್ಟಾಗಿದ್ದರೆ ಅಲ್ಲಿ ಕೂತುಕೊಳ್ಳುವವರ ಮತ್ತು ಮಲಗುವವರ ಉಛ್ವಾಸಗಳಿಂದ ಅಲ್ಲಿನ ಗಾಳಿಯು ಕೆಟ್ಟು ಹೋಗುತ್ತೆ. ಇಂಥಾ ಕೆಟ್ಟ ಗಾಳಿಯು ಪುನಹ ಅವರ ಶರೀರಕ್ಕೆ ಪ್ರವೇಶಿಸುವದರಿಂದ ರೋಗ ಉಂಟಾಗುತ್ತೆ. ಆದಕಾರಣ ಕೂತುಕೊಳ್ಳುವ ಮನೆಯೂ ಮಲಗುವ ಮನೆಯೂ ತೆರಪಾಗಿಯೂ ವಿಸ್ತಾರವಾಗಿಯೂ ಇರಬೇಕು. ನಾನಾವಿಧವಾದ ಪದಾರ್ಥಗಳು ಇಕ್ಕಟ್ಟಾಗಿ ತುಂಬಿರುವ ಸ್ಥಳದಲ್ಲಿ ಬಹಳ ಹೊತ್ತು ನಿಲ್ಲಬಾರದು.

ಅಡಿಗೆ ಮಾಡುವ ಪಾತ್ರೆಗಳನ್ನೂ ನೀರು ಬಳಸುವ ಪಾತ್ರೆಗಳನ್ನೂ ಹಾಲು, ಮೊಸರು, ಮಜ್ಜಿಗೆ ಮೊದಲಾದ್ದನ್ನು ತುಂಬಿಡುವ ಪಾತ್ರೆಗಳನ್ನೂ ಚನ್ನಾಗಿ ತೊಳೆಯಬೇಕು. ತೊಳೆಯದೆ ಹೋದರೆ ಅವುಗಳಲ್ಲಿ ಸೇರುವ ಕಿಲುಬು ಕೊಳೆ ಮುಂತಾದ್ದು ಆಹಾರದ ಸಂಗಡ ಹೊಟ್ಟೆಗೆ ಸೇರಿ ರೋಗಗಳನ್ನು ಉಂಟು ಮಾಡುತ್ತವೆ. ಹಾಸಿಗೆಯನ್ನೂ ಹೊದ್ದಿಕೆಯನ್ನೂ ಉಡುವ ವಸ್ತ್ರಗಳನ್ನೂ ನಿರ್ಮಲವಾಗಿ ಇಟ್ಟುಕೊಂಡಿರಬೇಕು. ಬೆವರಿನಿಂದ ಮಾಸಿದ ಬಟ್ಟೆಗಳನ್ನು ತೊಟ್ಟುಕೊಳ್ಳ ಕೂಡದು. ಅವುಗಳನ್ನು ತೊಟ್ಟುಕೊಂಡರೆ ಅವುಗಳ ಕೊಳೆಯು ಬೆವರಿನ ದ್ವಾರಗಳಿಂದ ಶರೀರಕ್ಕೆ ಪ್ರವೇಶಿಸಿ ರಕ್ತವನ್ನು ಕೆಡಿಸುತ್ತದೆ. ಆದ್ದರಿಂದ ಬಳಕೆ ಮಾಡುವ ವಸ್ತ್ರಗಳನ್ನು ಶುಭ್ರವಾಗಿಟ್ಟುಕೊಂಡಿರಬೇಕು. ಉಟ್ಟುಕೊಳ್ಳುವ ವಸ್ತ್ರಗಳನ್ನು ಪ್ರತಿನಿತ್ಯವೂ ಒಗೆಯಬೇಕು. ಹಾಸಿಕೊಳ್ಳುವ ಮತ್ತು ಹೊದ್ದುಕೊಳ್ಳುವ ಬಟ್ಟೆಗಳನ್ನು ನಾಲ್ಕು ದಿವಸಕ್ಕೆ ಒಂದಾವರ್ತಿಯಾದರೂ ಒಗೆಯಬೇಕು. ಈ ಪ್ರಕಾರ ಮನೆಯ ಎಲ್ಲಾ

ಪದಾರ್ಥಗಳನ್ನು ಶುದ್ಧಿಮಾಡಿ ಸೂರ್ಯೋದಯಕ್ಕೆ ಮುಂಚೆಯೇ ಸ್ನಾನ ಮಾಡಬೇಕು. ನಿತ್ಯವೂ ಪ್ರಾತಃಸ್ನಾನ ಮಾಡುವವರಿಗೆ ಶರೀರದಲ್ಲಿ ಬಲವೂ ಸ್ಫೂರ್ತಿಯೂ ಇರುತ್ತವೆ. ಶರೀರಕ್ಕೆ ಒಗ್ಗಿದ್ದರೆ ತಣ್ಣೀರಿನಲ್ಲಿ ಸ್ನಾನ ಮಾಡುವದು ಒಳ್ಳೇದು. ಇದರಿಂದ ಶರೀರಕ್ಕೆ ಬಲಬರುತ್ತದೆ. ಬಹಳ ಸೀತಕಾಲವಾಗಿದ್ದರೆ ನೆಗಡಿ ಜ್ವರ ಮುಂತಾದ್ದು ಹುಟ್ಟುತ್ತದೆ; ಆದ್ದರಿಂದ ಇಂಥಾ ಕಾಲದಲ್ಲಿ ನೀರನ್ನು ಸ್ವಲ್ಪ ಕಾಯಿಸಿಕೊಂಡು ಸ್ನಾನಮಾಡಬೇಕು. ಸ್ನಾನಮಾಡುವ ನೀರು ಮೈಮೇಲೆ ಬಿದ್ದರೆ ಸುಡುವಂತೆ ಇರಬಾರದು. ಅನುಕೂಲವಿದ್ದರೆ ನಿತ್ಯವೂ ಶಿರಸ್ನಾನಮಾಡಬೇಕು. ಇಲ್ಲವಾದರೆ ನಿತ್ಯವೂ ಕಂಠಸ್ನಾನಮಾಡಿ ಎರಡುಮೂರು ದಿವಸಕ್ಕೆ ಒಂದಾವರ್ತಿ ಶಿರಸ್ನಾನವನ್ನು ಮಾಡಬೇಕು. ಮೈಮೇಲೆ ನೀರು ಹಾಕಿ ಕೊಳ್ಳುವದಕ್ಕೆ ಮುಂಚೆ ತಲೆಯ ಮೇಲೆ ಸ್ವಲ್ಪ ನೀರನ್ನು ಹಾಕಿ ತಟ್ಟಿಕೊಂಡು ಕೂಡಲೇ ಮೈಮೇಲೆ ನೀರನ್ನು ಹಾಕಿಕೊಳ್ಳಬೇಕು. ಹಾಗೆಮಾಡದೆ ಮೈಮೇಲೆ ನೀರು ಹಾಕಿಕೊಂಡರೆ ಶರೀರದ ಕಾವು ತಲೆಗೆ ಏರಿ ತಲೆನೋವು ಮುಂತಾದ್ದು ಬರುತ್ತೆ. ನೀರನ್ನು ಸುಮ್ಮನೆ ಮೈಮೇಲೆ ಸುರಿದುಕೊಂಡು ಕಾಕ ಸ್ನಾನ ಮಾಡಬಾರದು. ಮೊದಲು ಮೈಯನ್ನು ತೋಯಿಸಿ ಒದ್ದೆಬಟ್ಟೆಯಿಂದ ಮೈಯನ್ನು ಚನ್ನಾಗಿ ತಿಕ್ಕಿಕೊಂಡು ಬಳಿಕ ನೀರು ಹಾಕಿಕೊಳ್ಳಬೇಕು. ಸ್ನಾನ ಮಾಡಿದಕೂಡಲೆ ಒಣಗಿದ ಬಟ್ಟೆಗಳನ್ನು ಉಟ್ಟುಕೊಳ್ಳಬೇಕು. ಒದ್ದೆಯನ್ನು ಉಡಬಾರದು. ನೀರಿನಲ್ಲಿ ಬಹಳಹೊತ್ತು ನೆನೆಯಬಾರದು. ಇದರಿಂದ ಮೈನೋಯುವದು, ಕೀಲುಗಳು ಹಿಡಿದುಕೊಳ್ಳುವದು, ಜ್ವರ ಬರುವದೂ ಉಂಟು. ಮೈಯೆಲ್ಲಾ ಮುಚ್ಚುವಂತೆ ಬಟ್ಟೆಯನ್ನು ಉಡಬೇಕು. ಕೆಲವರು ಮಡಿ ಉಡುವದೆಂಬ ನೆವದಿಂದ ಬಟ್ಟೆಯನ್ನು ಅಡ್ಡ ಸೆರಗು ಹಾಕಿಕೊಳ್ಳುವರು. ಕೆಲವರು ಅಂಗಗಳು ಕಾಣುವಂತೆ ಸೆರಗನ್ನು ಮೇಲಕೆ ಸಿಕ್ಕಿಸಿಕೊಳ್ಳುವರು, ಕೆಲವರು ನರಿಗೆಯನ್ನು ಮೇಲಕ್ಕೆ ಕಟ್ಟಿಕೊಳ್ಳುವರು, ಕೆಲವರು ಏರುಕಚ್ಚೆಯನ್ನು ಹಾಕಿಕೊಳ್ಳುವರು, ಲಜ್ಜೆಯುಳ್ಳ ಕುಲೀನ ಸ್ತ್ರೀಯರು ಹೀಗೆ ಅಂಗಗಳು ಕಾಣುವಂತೆ ಸೀರೆಯನ್ನು ಉಟ್ಟುಕೊಳ್ಳಬಾರದು. ಲಜ್ಜೆಗಾಗಿಯಲ್ಲವೆ ವಸ್ತ್ರವನ್ನುಡುವದು ? ೧೬—೧೭.

ಮೊಳದ ಉದ್ದವೂ ೨|| ಅಥವಾ ೩ ಮೊಳ ಅಗಲವೂ ಯಿರುವ ಸೀರೆಗಳಿರುವಾಗ ಯಾಕೆ ಮೈತುಂಬಾ ಬಟ್ಟೆಯನ್ನು ಉಟ್ಟುಕೊಳ್ಳಬಾರದು ? ಅನೇಕರು ಮಡಿಯನ್ನು ಉಟ್ಟುಕೊಳ್ಳುವದಾಗಿ ೨-೩ ಮೊಳದ ತುಂಡನ್ನು ಅಥವಾ ಸಹಸ್ರ ಛಿದ್ರವಾದ ಬಟ್ಟೆಗಳನ್ನು ಸುತ್ತಿಕೊಂಡು ರಾಜಬೀದಿಯಲ್ಲಿ ಎಲ್ಲರ ಎದುರಿಗೂ ಹೋಗುತ್ತಾರೆ. ಅಮ್ಮಂದಿರು ಇನ್ನೂ ಹೆಚ್ಚು ಮಾಡುತ್ತಾರೆ. ಇದು ಕುಲೀನರಾದ ಸ್ತ್ರೀಯರಿಗೆ ಅನುಚಿತವಾದ ಕೆಲಸವು. ಈ ವಿಷಯವು ಪುಸ್ತಕದಲ್ಲಿ ಬರೆಯತಕ್ಕದ್ದಲ್ಲವಾದಾಗ್ಯೂ ನಮ್ಮವರ ಆಚರಣೆ ನೋಡಿ ನಾಚಿಕೆಯಿಂದ ತಲೆಯನ್ನು ತಗ್ಗಿಸಬೇಕಾಗಿರುವಕಾರಣ ಸಹಿಸದೆ ಬರೆದು ಇದ್ದೇನೆ. ಇದನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೀದಿಯಲ್ಲಿ ನೀರು ಮುಂತಾದ್ದನ್ನು ತರುವಾಗಲೂ ಮೈಮೇಲಿನ ವಸ್ತ್ರಗಳ ವಿಷಯದಲ್ಲಿ ಜಾಗರೂಕರಾಗಿರಬೇಕು. ನೀರು ತರುವಾಗಲೂ ಇತರ ಕೆಲಸವನ್ನು ಮಾಡುವಾಗಲೂ ವಸ್ತ್ರಗಳನ್ನು ಸ್ವಲ್ಪ ಮುದುರಿಕೊಳ್ಳಬೇಕಾಗುತ್ತೆ, ಆದಾಗ್ಯೂ ಶರೀರದ ಯಾವ ಭಾಗವೂ ಕಾಣಿಸದಹಾಗೆ ನೋಡಿಕೊಂಡು ಮುದರಿಕೊಳ್ಳಬೇಕು. ಮೈಮೇಲೆ ಎರಡನೇ ವಸ್ತ್ರವಿಲ್ಲದೆ ಬೀದಿಯಲ್ಲಿ ನಮ್ಮ ಸ್ತ್ರೀಜನರು ಧಾರಾಳವಾಗಿ ಹೋಗುತ್ತಾರೆ. ಹೀಗೆಯೇ ಪರಪುರುಷರ ಎದುರಿಗೂ ನಾಲ್ಕು ಜನ ಸೇರಿದ ಸ್ಥಳದಲ್ಲಿಯೂ ತಲೆಮೇಲೆ ಹೊದಿಯದೆ ಅಡ್ಡಸೆರಗು ಮುಂತಾದ್ದನ್ನು ಹಾಕಿಕೊಂಡು ಹೋಗುವ ವಾಡಿಕೆ ಯಿರುವದರಿಂದ ಇದರಲ್ಲಿ ಯಾರಿಗೂ ವ್ಯಂಗ್ಯ ಕಾಣುವದಿಲ್ಲ. ವಿಚಾರಮಾಡಿದಲ್ಲಿಮಾತ್ರ ಇದು ಅನಾಚಾರವೆಂದು ತಿಳಿಯಬಹುದು. ಕುಲಸ್ತ್ರೀಯರಾದವರು ಇದನ್ನು ಬಿಟ್ಟು ಬಿಡಬೇಕು. ಹೊರಕ್ಕೆ ದೋಗಬೇಕಾದ ಕಾಲದಲ್ಲಿಯೂ ಅಥವಾ ಪರಕೀಯರನ್ನು ನೋಡಬೇಕಾದ ಕಾಲದಲ್ಲಿಯೂ ಶಿರಸ್ಸಿನಿಂದ ಕಾಲಿನವರಿಗೂ ಮುಚ್ಚುವಂತೆ ಉತ್ತರೀಯವನ್ನು ಹಾಕಿಕೊಳ್ಳಬೇಕು. ಉತ್ತರ ಹಿಂದುಸ್ಥಾನದಲ್ಲಿ ಈ ಮೇರೆಗೆ ಉತ್ತರೀಯವನ್ನು ಹೊದಿಯುವ ಸಂಪ್ರದಾಯವಿದೆ. ಈ ಒಳ್ಳೇ ಸಂಪ್ರದಾಯವನ್ನು ನಮ್ಮವರೂ ಅನುಸರಿಸಬೇಕಾದ್ದು ನ್ಯಾಯವು. ಅತಿ ನೀಚರಾದವರಲ್ಲಿಯೂ ಒಳ್ಳೇ

ಗುಣಗಳಿದ್ದರೆ ಅವನ್ನು ಸ್ವೀಕರಿಸಬೇಕೆಂದು ದೊಡ್ಡವರು ಹೇಳುತ್ತಾರೆ. ನಮ್ಮಲ್ಲಿ ಲಗ್ನಕಾಲದಲ್ಲಿ ಮದವಣಿಗಿತ್ತಿಗೂ ಬೀಗಿತಿಗೂ ಉತ್ತರೀಯವೆಂಬ ನೆವದಿಂದ ೨-೩ ಮೊಳದ ತುಂಡನ್ನು ಮೈಮೇಲೆ ಹಾಕಿರುತ್ತಾರೆ. ಅವರು ಇದರ ಕಾರಣವನ್ನು ಅರಿಯದೆ ಇದನ್ನು ಒಂದು ಆಭರಣದಂತೆ ಎಣಿಸುತ್ತಾರೆ.

ಸ್ನಾನವಾದಮೇಲೆ ಸ್ತ್ರೀಯರು ತಾವು ಮಾಡಬೇಕಾದ ನಿತ್ಯಕಟ್ಲೆಯ ಕೆಲಸಗಳನ್ನೆಲ್ಲಾ ಸಾವಕಾಶಮಾಡದೆ ಅಚ್ಚುಕಟ್ಟಾಗಿ ಮಾಡಬೇಕು. ಯಾವದಾದರೂ ಒಂದು ಕೆಲಸವನ್ನು ಹಿಡಿದು ಅದರಲ್ಲಿಯೇ ಕಾಲವನ್ನು ಕಳೆಯಬಾರದು. ಇದರಿಂದ ಮಾಡುವ ಕೆಲಸವು ತಪ್ಪುವದಿಲ್ಲ, ಕ್ಷಣದ ವಿರಾಮವೂ ಸಿಕ್ಕುವದಿಲ್ಲ. ಮಾಡಬೇಕಾದ ಕೆಲಸಗಳನ್ನೆಲ್ಲಾ ಬೇಗ ತೀರಿಸುವದರಿಂದ ವಿಶ್ರಾಂತಿಗೆ ಹೊತ್ತು ಸಿಕ್ಕುತ್ತೆ. ತನ್ನ ಕೈಯಿಂದ ಆಗಬಹುದಾದ ಯಾವ ಕೆಲಸ ಕಣ್ಣಿಗೆ ಬಿದ್ದಾಗ್ಯೂ ಅದನ್ನು ಕೂಡಲೇ ಮಾಡಬೇಕು. ಅತ್ತೆ, ಅತ್ತಿಗೆ, ನಾದಿನಿ, ಮುಂತಾದವರು ಮಾಡಲಿ ಎಂದು ಸುಮ್ಮನಿರಬಾರದು ಸಣ್ಣದಾಗಲಿ ದೊಡ್ಡದಾಗಲಿ ತಮ್ಮಿಂದ ಆಗತಕ್ಕ ಕೆಲಸಕ್ಕೆ ಇತರರಿಗೆ ತೊಂದರೆಯನ್ನು ಕೊಡಬಾರದು. ಎಂಥಾ ಕೆಲಸವಾದಾಗ್ಯೂ ಮನುಷ್ಯನ ಪ್ರಯತ್ನಕ್ಕೆ ಸಾಧ್ಯವಾಗಿಯೇ ಯಿರುತ್ತೆ. ಆದ್ದರಿಂದ ಯಾವ ಕೆಲಸವೇ ಆಗಲಿ ಇದು ನನ್ನಿಂದ ಆಗಲಾರದೆಂದು ತಿಳಿದು ಸುಮ್ಮನೆ ಕೂತುಕೊಳ್ಳಬಾರದು. ತನ್ನ ಕೈಲಾದ ಮಟ್ಟಿಗೂ ಯತ್ನವನ್ನು ಮಾಡಿ ನೋಡಿ ಬಿಡಬೇಕು. ಅಡಿಗೆ ಮಾಡುವದು ಹೆಂಗಸರಿಗೆ ಮುಖ್ಯವಾದ ಕೆಲಸವು. ಅಡಿಗೆ ಮಾಡಿದ ಪದಾರ್ಥವು ರುಚಿಯಾಗಿಯೂ ಅಚ್ಚುಗಟ್ಟಾಗಿಯೂ ಇದ್ದರೆ ಅದನ್ನು ಭೋಜನ ಮಾಡುವದ್ದರಿಂದ ಮನುಷ್ಯನಿಗೆ ಬಲಬರುವದಲ್ಲದೆ ರೋಗವೂ ಸೇರುವದಿಲ್ಲ; ಆದ್ದರಿಂದ ಅಡಿಗೆ ಮಾಡುವ ರೀತಿಯನ್ನು ಚನ್ನಾಗಿ ಕಲಿಯಬೇಕು. ಯಾವಯಾವ ಕಾಲದಲ್ಲಿ ಯಾವ ಯಾವ ಪದಾರ್ಥವನ್ನು ಭೋಜನಮಾಡಿದರೆ ಆರೋಗ್ಯವೋ ಅದನ್ನು ತಿಳಿದು ಕೊಂಡಿರಬೇಕು. ಮನೆಯಲ್ಲಿ ಯಿರುವ ಎಲ್ಲಾ ಜನರ ದೇಹಸ್ಥಿತಿಯು ಚನ್ನಾಗಿ ಯಿರುವಂತೆ ಅನ್ನಪಾನಾದಿಗಳ ವ್ಯವಸ್ಥೆ ಮಾಡಬೇಕಾದ್ದು ಸ್ತ್ರೀಯರಿಗೆ ಮುಖ್ಯವಾದ

ಕೆಲಸವಾಗಿದೆ. ತಾನು ಅಡಿಗೆಮಾಡಿ ಅಥವಾ ಮಾಡತಕ್ಕವರಿಂದ ಮಾಡಿಸಿ ಸರ್ವರಿಗೂ ಪಂಜ್ತಿಭೇದವನ್ನು ಮಾಡದೆ ಬಡಿಸಬೇಕು. ಅನೇಕರು ಪಂಜ್ತಿಭೇದವನ್ನು ಮಾಡುತ್ತಾರೆ. ಇದು ಬಹಳ ಕೆಟ್ಟ ಸಂಪ್ರದಾಯ ವಾಗಿ ಇದೆ, ಮನೆಯಲ್ಲಿ ಸರ್ವರೂ ಯಾವಬಗೆಯ ಊಟವನ್ನು ಮಾಡು ತ್ತಾರೋ ಅದಕ್ಕಿಂತಲೂ ಹೆಚ್ಚಾಗಿ ಅಥವಾ ಉತ್ತಮವಾದ ಅಡಿಗೆಯನ್ನು ಮಾಡಿ ತಾವು ಊಟ ಮಾಡಬಾರದು. ಮನೆಗೆ ಗಂಡಸರು ಯಾವಪದಾರ್ಥ ವನ್ನು ತಂದಾಗ್ಯೂ ಅದನ್ನು ಮನೆಯಲ್ಲಿ ಇರುವವರೆಲ್ಲರಿಗೂ ಯಥಾಯೋಗ್ಯ ವಾಗಿ ಹಂಚಿಕೊಟ್ಟು, ಉಳಿದ್ದರಲ್ಲಿ ತಾವು ಸಂತೋಷಪಟ್ಟುಕೊಳ್ಳಬೇಕು. ಒಂದು ವೇಳೆ ಉಳಿಯದೆ ಇದ್ದಾಗ್ಯೂ ಖಿನ್ನರಾಗಬಾರದು. ಉಳಿದ ಸರ್ವವಿಷಯಗಳಲ್ಲಿಯೂ ಇದರಂತೆಯೇ ಸ್ವಾರ್ಥಪರರರಾಗದೆ ಯಿರ ಬೇಕು. ಸ್ವಾರ್ಥಪರರಾಗದೆ ಸಂತುಷ್ಟರಾಗಿರುವವರು ದರಿದ್ರಾವಸ್ಥೆಯ ಲ್ಲಿಯೂ ಸುಖವಾಗಿರುತ್ತಾರೆ. ಸ್ವಾರ್ಥಪರರಾಗಿಯೂ ಲೋಭಿಗಳಾಗಿಯೂ ಯಿರುವವರಿಗೆ ಭೂಮಂಡಲದ ಅಧಿಪತ್ಯವಿದ್ದಾಗ್ಯೂ ಸುಖದ ಲೇಶವೂ ಅವರಿಗೆ ದೊರೆಯುವದಿಲ್ಲ. ಮನೆಯಲ್ಲಿರುವ ಸರ್ವರನ್ನು ವಶ ಮಾಡಿ ಕೊಳ್ಳುವದಕ್ಕೆ ಅಸ್ವಾರ್ಥವಾದ (ಪ್ರೀತಿಗೆ ಸಮನಾದ ವಶೀಕರಣ ಮಂತ್ರ ಮತ್ತೊಂದಿಲ್ಲ.

ಮನೇಯಲ್ಲಿ ಇರುವ ಎಲ್ಲರ ಸಂಗಡಲೂ ಮರ್ಯಾದೆಯಿಂದಲೂ, ಪ್ರೀತಿಯಿಂದಲೂ, ಭಕ್ತಿಯಿಂದಲೂ, ನಡೆದುಕೊಳ್ಳಬೇಕು. ಯಾರ ಸಂಗ ಡಲೂ ಹೆಚ್ಚು ಮಾತಿಗೆ ಹೋಗಬಾರದು. ಜಗಳವಾಡಬಾರದು. ಯಾರಾ ದರೂ ಸಣ್ಣಮಾತನಾಡಿದರೆ ತಿರುಗಿ ಅವರಂತೆ ತಾವೂ ಆಡಬಾರದು. ಯಾರಲ್ಲಿ ಆಗಲಿ ಏನಾದರು ಅಸದ್ವ್ಯವಹಾರವಿದ್ದಾಗ್ಯೂ ಧೈರ್ಯದಿಂದ ತಾಳಿ ಕೊಳ್ಳಬೇಕು. ಯಾರಸಂಗಡಲೂ ಸಿಟ್ಟಿನಿಂದ ಮಾತನಾಡಬಾರದು. ಯಾರು ಏನು ಕೇಳಿದಾಗ್ಯೂ ಪ್ರಸನ್ನಮುಖರಾಗಿ ಸರಳವಾದ ಅಂತಃಕರಣದಿಂದ ಸಮಯೋಚಿತವಾಗಿ ಉತ್ತರವನ್ನು ಕೊಡಬೇಕು. ಯಾವಮಾತನ್ನು ಆಡ ಬೇಕಾದರೂ ಆಲೋಚನೆ ಮಾಡಿ ಆಡಬೇಕು. ಯಾರಮೇಲೂ ಚಾಡಿ ಹೇಳಬಾರದು. ಯಾರು ಏನು ಹೇಳಿದಾಗ್ಯೂ ಕೇಳಿಕೊಂಡು ಸುಮ್ಮನೆ

ಇರಬೇಕು. ಯಾರಗುಟ್ಟಿನ ಮಾತನ್ನೂ ಇತರರಿಗೆ ಹೇಳಬಾರದು. ವಿಶ್ವಾಸ ಘಾತಕತನವನ್ನಾಗಲಿ ಕೇಡನ್ನಾಗಲಿ ಯಾರಿಗೂ ಮಾಡಬಾರದು. ಅಂಥಾ ಆಲೋಚನೆಯನ್ನು ಸಹ ಮನಸ್ಸಿಗೆ ತರಬಾರದು. ನಿಮಗೆ ಯಾರಾದರೂ ಅನ್ಯಾಯ ಮಾಡಿದರೆ ಕ್ಷಮಿಸಬೇಕು. ಅತ್ತೆ ಮಾವಂದಿರು, ಭಾವಂದಿರು, ಅತ್ತಿಗೆಯರು ಮುಂತಾದ ಹಿರಿಯರಲ್ಲಿ ದೇವರಂತೆ ಭಕ್ತಿಯಿರಬೇಕು. ಧರ್ಮಾನುಸಾರವಾಗಿ ಅವರು ಏನು ಹೇಳಿದಾಗ್ಯೂ ಅದರಂತೆ ನಡದು ಕೊಳ್ಳಬೇಕು. ಸಾಧ್ಯವಾದ ಮಟ್ಟಿಗೂ ಪ್ರೀತಿಯಿಂದ ಅವರ ಸೇವೆಯನ್ನು ಮಾಡಬೇಕು. ಅವರಿಗೆ ಎಂದಿಗೂ ಅವಮಾನವನ್ನು ಮಾಡಬಾರದು. ಅವರ ಎದುರಿಗೆ ಘಟ್ಟಿಯಾಗಿ ನಾಚಿಕೆಯಿಲ್ಲದೆ ನಗುತ್ತಾ ಅಮರ್ಯಾದೆಯಾದ ಮಾತುಗಳನ್ನು ಆಡಬಾರದು. ಕಾಲುಚಾಚಿಕೊಂಡು ಕೂತುಕೊಳ್ಳಬಾರದು. ಅವರ ಬಾಯಿಗೆಹತ್ತಿ ಅನುಚಿತವಾದ ಉತ್ತರಗಳನ್ನು ಕೊಡಬಾರದು. ಅವರ ಸಂಗಡ ಜಗಳವಾಡಬಾರದು. ಅವರ ಅಭಿಪ್ರಾಯಕ್ಕೆ ವಿರೋಧವಾಗಿ ತಮ್ಮ ಮನಸ್ಸಿಗೆ ಬಂದಂತೆ ನಡೆಯಬಾರದು. ಅವರು ಮನೆಯಲ್ಲಿರುವಾಗ ತಾವು ಸ್ವಾತಂತ್ರ್ಯವನ್ನು ವಹಿಸಿಕೊಂಡು, ಅವರ ಮೇಲೆ ಅಧಿಕಾರವನ್ನು ತೋರಿಸಬಾರದು. 'ನೀ ರಂಡೆ' 'ನೀ ರಂಡೆ' ಮುಂತಾದ ಅಸಂಗತವಾದ ಮಾತುಗಳಿಂದ ಜಗಳವನ್ನು ಮಾಡಬಾರದು. ತಮ್ಮ ಕೈಯಲ್ಲಿ ಶಕ್ತಿಯಿರುವಾಗ ತಮ್ಮ ಗೇಮೆಯನ್ನು ತಮಗಿಂತ ಹಿರಿಯರಿಂದಾಗಲೀ ಗಂಡಸರಿಂದಾಗಲಿ ಮಾಡಿಸಿಕೊಳ್ಳಬಾರದು. ಗಂಡ, ತಂದೆ, ಅಣ್ಣ ತಮ್ಮಂದಿರು ಹೊರತು ಮಿಕ್ಕ ಯಾವ ಗಂಡಸರ ಸಂಗಡಲೂ, ಏಕಾಸನದಲ್ಲಿಯಾಗಲಿ ಕೇವಲ ಸಮೀಪದಲ್ಲಿಯಾಗಲಿ ಅಥವಾ ವಿಜನ ಪ್ರದೇಶದಲ್ಲಿಯಾಗಲಿ ಕೂತುಕೊಳ್ಳ ಕೂಡದು. ಗಂಡಸರ ಸಂಗಡ ಹಾಸ್ಯಮಾಡಬಾರದು, ಅವರು ನಾಚಿಕೆ ಉಂಟಾಗುವ ಮಾತುಗಳನ್ನಾಡಿದರೆ ಅಲ್ಲಿ ನಿಲ್ಲದೆ ಹೊರಟು ಹೋಗಬೇಕು. ಅಥವಾ ಒಳ್ಳೆಮಾತಿನಿಂದ ಇಂಥಾ ಮಾತುಗಳನ್ನು ಅವರು ಆಡದಂತೆ ಮಾಡಬೇಕು. ಯಾರನ್ನೂ ಬಯ್ಯಬಾರದು. ಒಬ್ಬರ ಮನಸ್ಸು ನೋಯುವಂತೆ ಕ್ರೂರವಾಗಿ ಮಾತನಾಡಬಾರದು. ಯಾರಿಗೂ ಮೋಸ ಮಾಡಬಾರದು. ಸತ್ಯಕ್ಕೆ ಅವಮಾನ

ಮಾಡಿ ಅಸತ್ಯದಿಂದ ಅಥವಾ ದುರಾಚರಣೆಯಿಂದ ತನ್ನ ಸ್ವಾರ್ಥವನ್ನು ಸಾಧಿಸಿ ಕೊಳ್ಳಬಾರದು. ಯಾರಾದರೂ ಕೆಟ್ಟ ಮಾತುಗಳನ್ನು ಆಡುತ್ತಿದ್ದರೆ ಅದಕ್ಕೆ ಸಹಾಯ ಮಾಡಬಾರದು. ನಿರಂತರದಲ್ಲಿಯೂ ತಮ್ಮ ಕೈಲಾದ ಮಟ್ಟಿಗೆ ಎಲ್ಲರ ಸಂಗಡಲೂ ಸೌಮ್ಯತೆಯಿಂದಲೂ ಪ್ರೀತಿಯಿಂದಲೂ ನಡೆದು ಕೊಳ್ಳಬೇಕು. ಮೈದುನ, ನಾದುನಿ, ಬಲಮಕ್ಕಳು ಮುಂತಾದ ಚಿಕ್ಕವರ ಸಂಗಡ ನಮ್ರತೆಯಿಂದಲೂ ಮಮತೆಯಿಂದಲೂ ನಡೆಯಬೇಕು. ಯಾರ ಸಂಗಡಲೂ ದ್ವೇಷವನ್ನು ಮಾಡಬಾರದು.

ತಮ್ಮ ಕೆಲಸವನ್ನು ಬಿಟ್ಟು ವ್ಯರ್ಥವಾಗಿ ಕಾಲವನ್ನು ಕಳೆಯಬಾರದು. ಬೀದಿಯಲ್ಲಿ ನಡೆಯುವ ವಿನೋದವನ್ನು ನೋಡುತ್ತ ಮನೆಯ ಬಾಗಲಲ್ಲಿಯೂ ಅಥವಾ ಕಿಟಕಿಯಲ್ಲಿಯೂ ನಿಲ್ಲಬಾರದು. ಹಗಲು ಹೊತ್ತು ಯಾವಾಗಲೂ ಸುಮ್ಮನೆ ಕೂತಿರಬಾರದು, ಮಲಗಲೂಬಾರದು. ಹಗಲು ನಿದ್ರೆಮಾಡುವದು ಸ್ತ್ರೀಯರಿಗೆ ಅನುಚಿತವಾದ ಕೆಲಸವು. ಮಧ್ಯಾಹ್ನದಲ್ಲಿ ಸರ್ವರ ಭೋಜನವಾದ ಮೇಲೆ ತಾನು ಭೋಜನಮಾಡಬೇಕು. ಮಿತವಾಗಿಯೂ ಶರೀರಸ್ಥಿತಿಗೆ ಅನುಕೂಲವಾಗಿಯೂ ಇರುವಂತೆ ಭೋಜನವನ್ನು ಮಾಡಬೇಕು. ಹೆಚ್ಚಾಗಿ ಊಟಮಾಡಿದರೆ ಪಾಲುಮಾರಿಕೆ ಯುಂಟಾಗಿ ಯಾವ ಕೆಲಸ ಮಾಡುವದಕ್ಕೂ ಆಗುವದಿಲ್ಲ. ಭೋಜನವಾದ ಮೇಲೆ ಇತರ ಕೆಲಸವೇನಾದರು ಇದ್ದರೆ ಮಾಡಿ ಬಳಿಕ ಮನೆಯಲ್ಲಿ ಇರುವದನ್ನು ಇಲ್ಲದ್ದನ್ನು ನೋಡಿ ಇಲ್ಲದ್ದನ್ನು ತರಿಸಿ ಇಡಬೇಕು. ಮನೆಯ ಆದಾಯವೆಚ್ಚವನ್ನು ಬರೆದು ಇಡಬೇಕು. ಆದಾಯಕ್ಕಿಂತ ವೆಚ್ಚ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಕಾರಣವಿಲ್ಲದೆ ಹಣವನ್ನು ವೆಚ್ಚಮಾಡಬಾರದು. ಸಂಸಾರಿಯು ಹಣವನ್ನು ಬಹಳ ಜೋಪಾನದಿಂದ ಕಾಪಾಡಬೇಕು. ವಿದ್ವಾಂಸರು ದ್ರವ್ಯವನ್ನು ಮನುಷ್ಯನ ಹೊರಗಿನ ಜೀವವೆಂದು ಹೇಳುತ್ತಾರೆ. ಮನುಷ್ಯನಿಗೆ ಲೋಕದಲ್ಲಿ ದ್ರವ್ಯವಿರುವವರಿಗೇನೆ ಮಾನ ಮರ್ಯಾದೆಗಳು ನಡೆಯುತ್ತವೆ. ದ್ರವ್ಯ ಹೀನನಾದವನು ಗುಣಾಢ್ಯನಾದಾಗ್ಯೂ ಸತ್ಕುಲದಲ್ಲಿ ಹುಟ್ಟಿದವನಾದಾಗ್ಯೂ ಅವನನ್ನು ಯಾರೂ ಮಾತನಾಡಿಸುವದಿಲ್ಲ. ಮನುಷ್ಯನಿಗೆ ದ್ರವ್ಯವು ಸರ್ವಕಾಲದಲ್ಲಿಯೂ ಅವಶ್ಯಕವಾಗಿರಬೇಕು. ಆಪತ್ತಿನಲ್ಲಿ

ದ್ರವ್ಯಕ್ಕೆ ಸಮನಾದ ಮಿತ್ರನು ಯಾರೂಯಿಲ್ಲ. ಮನುಷ್ಯನಿಗೆ ದ್ರವ್ಯದ ಆಗತಿಯು ಒಂದೇ ಸಮನಾಗಿರುವದಿಲ್ಲ. ಒಂದೊಂದುವೇಳೆ ಹೆಚ್ಚಾಗಿ ದೊರೆಯುವದು. ಆ ಕಾಲದಲ್ಲಿ ಗರ್ವಪಡದೆ ದ್ರವ್ಯದ ಸಂರಕ್ಷಣೆಯನ್ನು ಮಾಡಬೇಕು. ಕೇವಲ ನಿರ್ವಾಹವಿಲ್ಲದ ಪದಾರ್ಥಗಳನ್ನು ಮಾತ್ರ ಕೊಂಡು ಕೊಳ್ಳಬೇಕು. ಅವಶ್ಯಕವಿಲ್ಲದ ಪದಾರ್ಥಗಳನ್ನೂ ಅನವಶ್ಯಕವಾದ ಹೆಚ್ಚುಬೆಲೆಯುಳ್ಳ ಬಟ್ಟೆಗಳನ್ನೂ ಕೊಂಡುಕೊಳ್ಳಬಾರದು. ಒಂದೊಂದು ಕಾಸನ್ನು ಗಂಟು ಹಾಕುತ್ತಾ ಬಂದರೆ ಲಕ್ಷಾವಧಿ ರೂಪಾಯಿಗಳು ಸೇರುತ್ತವೆ. ಒಂದೊಂದು ಕಾಸಾಗಿ ವೆಚ್ಚ ಮಾಡುತ್ತಾ ಬಂದರೆ ಲಕ್ಷಾವಧಿ ರೂಪಾಯಿಗಳು ಬರಿದಾಗುತ್ತವೆ. ಆದಕಾರಣ ಎಲ್ಲಾ ವಿಷಯದಲ್ಲಿಯೂ ಮಿತಾಚರಣೆಯೂ ಮಿತ ವ್ಯಯವೂ ಹಿತಕಾರಿಯಾದದ್ದು. ಪತಿಯ ಆಜ್ಞೆಯಿಲ್ಲದೆ ಯಾವ ಕೆಲಸವನ್ನೂ ಮಾಡಬಾರದು. ಆತನು ಮನೆಯಲ್ಲಿ ಯಿಲ್ಲದಾಗ ನಿರ್ವಾಹವಿಲ್ಲದೆ ಮಾಡಬೇಕಾದ್ದನ್ನು ಕೇಳದೆ ಮಾಡಬಹುದು. ಸನ್ಮಾರ್ಗವನ್ನು ಅವಲಂಬಿಸಿ ವಿಚಾರ ಪೂರ್ವಕವಾಗಿ ಯಾವ ಕೆಲಸವನ್ನು ಮಾಡುವದಕ್ಕೂ ಹಿಂದೆ ಮುಂದೆ ನೋಡಬಾರದು. ಧರ್ಮ, ಪರೋಪಕಾರ, ದೇಶಹಿತ ಮೊದಲಾದ ಕೆಲಸಗಳಲ್ಲಿ ಬೇಕಾದಷ್ಟು ಧನವನ್ನು ವೆಚ್ಚ ಮಾಡಬೇಕು. ಇಂಥಾ ಸಂಗತಿಯಲ್ಲಿ ಕಾರ್ಪಣ್ಯಪಡಬಾರದು. ದಾನಕ್ಕೆ ಸಮಾನವಾದ ಧರ್ಮವಿಲ್ಲವೆಂದು ಸತ್ಪುರುಷರು ಹೇಳುತ್ತಾರೆ. ಅನ್ಯರಿಂದ ಮೆಚ್ಚಿಸಿಕೊಳ್ಳುವದಕ್ಕಾಗಿ ದಾನವನ್ನು ಮಾಡಬಾರದು. ಪರಾರ್ಥ ಬುದ್ಧಿಯಿಂದ ದಾನಮಾಡಬೇಕು. ದಾನವು ನಾನಾವಿಧವಾದದ್ದು. ಅದರಲ್ಲಿ ದ್ರವ್ಯದಾನ, ಅನ್ನದಾನ, ವಸ್ತ್ರದಾನ, ಮುಂತಾದವು ಮುಖ್ಯವಾದವುಗಳು. ದ್ರವ್ಯದಾನಕ್ಕೆ ಪಾತ್ರಾಪಾತ್ರ ವಿಚಾರ ಮಾಡಬೇಕು. ಯಾರಿಗೆ ಕೊಟ್ಟರೆ ದ್ರವ್ಯ ದುರ್ವ್ಯಾಪಾರದಲ್ಲಿ ವಿನಿಯೋಗವಾಗುತ್ತೆಂದು ಕಾಣುತ್ತೋ ಅಂಥವನಿಗೆ ದ್ರವ್ಯವನ್ನು ಕೊಡಬಾರದು. ಕಾಯಪುಷ್ಟಿವುಳ್ಳವರಾಗಿ ಮನೆಮನೆಗೆ ತಿರುಗುತ್ತಿರುವ ಸೋಮಾರಿಗಳಿಗೂ ದ್ರವ್ಯವನ್ನು ಕೊಡಬಾರದು. ಇದರಿಂದ ಪೋಲುಮಾರಿಕೆಗೆ ಪ್ರೋತ್ಸಾಹವನ್ನು ಉಂಟುಮಾಡಿದಂತೆ ಆಗುತ್ತೆ. ಅನಾಯಾಸವಾಗಿ ತಿನ್ನುವದಕ್ಕೆ ಸಿಕ್ಕಿದರೆ ಯಾರು ತಾನೆ ಕೆಲಸ ಮಾಡ್ಯಾರು?

ಈ ಪ್ರಕಾರ ಶ್ರಮವಿಲ್ಲದೆ ಕಾಲಕ್ಷೇಪ ಮಾಡುವರಿಗೆ ಯಾವ ಯೋಚನೆಯೂ ಇಲ್ಲದೆ ನಾನಾವಿಧವಾದ ಕೆಟ್ಟಕೆಲಸವನ್ನು ಮಾಡುತ್ತಾರೆ. ಮನುಷ್ಯನು ಯಾವಾಗಲೂ ಸುಮ್ಮನೆ ಇರುವದಕ್ಕಾಗುವದಿಲ್ಲ, ಅವನ ಮನಸ್ಸಿಗೆ ಯಾವದಾದರೂ ಒಂದು ಕೆಲಸ ಬೇಕಾಗಿರುತ್ತೆ. ಆ ಮನಸ್ಸಿಗೆ ಒಳ್ಳೇಕೆಲಸ ಸಿಕ್ಕದೇ ಇದ್ದರೆ ಅದು ಕೆಟ್ಟಕೆಲಸಕ್ಕೆ ಬಿದ್ದು ಅವನ ಯೋಗ್ಯತೆಯನ್ನೇ ಕೆಡಿಸಿ ಬಿಡುತ್ತೆ. ಸೋಮಾರಿಗಳ ಮನಸ್ಸು ಶ್ರಮಸಾಧ್ಯವಾದ ಯಾವ ಕೆಲಸದಲ್ಲಿಯೂ ಪ್ರವೇಶಿಸದೆ ದುರ್ಮಾರ್ಗಕ್ಕೆ ಬಿದ್ದು ನಷ್ಟವನ್ನು ಉಂಟುಮಾಡುತ್ತೆ. ಈ ನಷ್ಟವು ಆ ಸೋಮಾರಿಗಳಿಗೆ ಮಾತ್ರವೇ ಆಗುವದಿಲ್ಲ, ಮನುಷ್ಯ ಸಮಾಜಕ್ಕೇನೆ ಉಂಟಾಗುತ್ತೆ. ಆದ್ದರಿಂದ ಸಾಧುಗಳೆಂದು ವೇಷ ಹಾಕಿಕೊಂಡು ಕೆಟ್ಟ ಕೆಲಸಗಳನ್ನು ಮಾಡುವ ಸೋಮಾರಿಗಳಿಗೆ ದುಡ್ಡನ್ನು ಕೊಡಬಾರದು.

ಹಸಿದವರಿಗೆ ಅನ್ನವನ್ನೂ, ಬಾಯಾರಿದವರಿಗೆ ನೀರನ್ನೂ, ಸೀತದಿಂದ ವ್ಯಾಕುಲರಾದವರಿಗೆ ವಸ್ತ್ರವನ್ನೂ, ಶೋಕಾಕುಲರಿಗೆ ಸಮಾಧಾನವನ್ನೂ, ಹತೋತ್ಸಾಹರಿಗೆ ಧೈರ್ಯವನ್ನೂ, ಅನಾಥರಿಗೆ ಆಶ್ರಯವನ್ನೂ ಕೊಡಬೇಕಾದ್ದು ಅವಶ್ಯಕವು. ಕುರುಡರು, ಕುಂಟರು, ಮೂಕರು, ಮಹಾರೋಗಗ್ರಸ್ತರು, ಮುದುಕರು ಮುಂತಾದವರಿಗೆ ಕೈಲಾದಮಟ್ಟಿಗೂ ಸಹಾಯವನ್ನು ಮಾಡಬೇಕು, ಇಂಥವರನ್ನು ಕಂಡು ಹಾಸ್ಯಮಾಡಬಾರದು, ಅಥವಾ ಇನ್ಯಾವ ರೀತಿಯಿಂದಲೂ ಇವರ ಮನಸ್ಸನ್ನು ನೋಯಿಸಬಾರದು. ಅನುಕೂಲ್ಯ ತಪ್ಪಿದರೆ ನಮ್ಮ ಅವಸ್ಥೆಯು ಇವರಂತೆಯೇ ಆಗಬಹುದು, ಆದ್ದರಿಂದ ಯಥಾಶಕ್ತಿ ಸ್ವಾರ್ಥಪರರಾಗದೆ ಪರೋಪಕಾರ ಮಾಡಬೇಕಾದ್ದು ಅವಶ್ಯಕವು. ಯಾರಿಗೆ ಉಪಕಾರ ಮಾಡಬೇಕಾದರೂ ಅವರ ಕಡೆಯಿಂದ ಪ್ರತ್ಯುಪಕಾರವನ್ನು ಪಡೆಯಬೇಕೆಂಬ ಆಶೆಯನ್ನು ಇಟ್ಟುಕೊಂಡು ಮಾಡಬಾರದು. ದೇವರು ನಿಮಗೆ ಹೆಚ್ಚಾಗಿ ಅನುಕೂಲಗಳನ್ನು ಕೊಟ್ಟಹಾಗೆಲ್ಲಾ ನೀವೂ ಹೆಚ್ಚಾಗಿ ಪರೋಪಕಾರವನ್ನು ಮಾಡಬೇಕು. ಹೀಗೆ ಮಾಡಿದಾಗ್ಯೂ "ನಾವೇ ಇತರರಿಗೆ ಉಪಕಾರಮಾಡಿದ್ದೇವೆ, ಇತರರ ಹಂಗು ನಮಗೇನೂ ಯಿಲ್ಲ" ಎಂದು ದುರಭಿಮಾನ ಪಡಬಾರದು. "ನಾವು ಇತರರಿಗೆ ಮಾಡು

ವದು ಉಪಕಾರವಲ್ಲ, ಅವರ ಸಾಲವನ್ನು ತೀರಿಸುತ್ತೇವೆ" ಯೆಂದು ತಿಳಿದು ಕೊಳ್ಳಬೇಕು. ಇತರರು ನಿಮಗೆ ಮಾಡಿರುವ ಉಪಕಾರಕ್ಕೆ ನೀವು ಎಷ್ಟು ಪ್ರತ್ಯುಪಕಾರವನ್ನು ಮಾಡಿದಾಗ್ಯೂ ತೀರದು. ನಿಮ್ಮ ತಾಯಿತಂದೆಗಳು ನಿಮ್ಮ ಬಾಲ್ಯದಲ್ಲಿ ನಿಮಗೆ ಮಾಡಿರುವ ಉಪಕಾರವೆಷ್ಟೆಂದು ನೆನಿಸಿಕೊಳ್ಳಿ? ನೀವು ಬಹಳ ಸಣ್ಣವರಾಗಿ ಅಶಕ್ತರಾಗಿ ಇದ್ದಾಗ ಅವರು ತಮ್ಮ ಸುಖವನ್ನೆಲ್ಲಾ ಬಿಟ್ಟು ಬಹು ಶ್ರಮದಿಂದ ನಿಮ್ಮನ್ನು ಸರ್ವಪ್ರಕಾರದಿಂದಲೂ ಸಂರಕ್ಷಣೆಯನ್ನು ಮಾಡಿರುತ್ತಾರೆ. ಈ ಸಾಲವನ್ನು ನೀವು ತೀರಿಸುವದಕ್ಕೆ ಆದೀತೆ? ಆದಾಗ್ಯೂ ನಿಮ್ಮ ಕೈಲಾದಮಟ್ಟಿಗೂ ಅವರ ಶುಶ್ರೂಷೆಯನ್ನು ಮಾಡಿ ಭಕ್ತಿಯಿಂದ ಅವರ ಆಜ್ಞಾಪರಿಪಾಲನೆ ಮಾಡುವದರಿಂದಲೂ ಅವರು ನಿಮ್ಮನ್ನು ರಕ್ಷಿಸಿದಂತೆ ನೀವು ಸಹ ನಿಮ್ಮ ಸಂತಾನವನ್ನು ರಕ್ಷಿಸುವದ್ದರಿಂದಲೂ ಆ ಸಾಲವನ್ನು ತೀರಿಸಬೇಕು. ಜನರು ನಿಮಗೆ ಧನವನ್ನೂ ಮಾನವನ್ನೂ ಪ್ರೀತಿಯನ್ನೂ ಸುಖವನ್ನೂ ಇನ್ನೂ ಇತರವಿಧವಾದ ಅನುಕೂಲಗಳನ್ನೂ ಉಂಟುಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ನೀವು ಸಹ ನಿಮ್ಮ ನೆರೆಹೊರೆಯವರಲ್ಲಿ ಪ್ರೀತಿಯಿಟ್ಟು ಅವರಿಗೆ ನಿಮ್ಮ ಕೈಲಾದಷ್ಟು ಸಹಾಯವನ್ನೂ ಮಾನ ಮರ್ಯಾದೆಗಳನ್ನೂ ಮಾಡಿ ಅವರ ಸಾಲವನ್ನು ತೀರಿಸಬೇಕು. ಯಾರಾದರು ಕೆಟ್ಟಕೆಲಸವನ್ನು ಮಾಡುತ್ತಿದ್ದರೆ ಅವರನ್ನು ಒಳ್ಳೇದಾರಿಗೆ ತಿರುಗಿಸಬೇಕು. ಪ್ರತ್ಯುಪಕಾರವನ್ನು ಅಪೇಕ್ಷಿಸದೆ ಅನ್ಯರಿಗೆ ಉಪಕಾರವನ್ನು ಮಾಡಿ ಕೆಲವರನ್ನಾದರೂ ನಿಮ್ಮ ಋಣಿಗಳನ್ನಾಗಿ ಮಾಡಿಕೊಳ್ಳಬೇಕು. ದುರ್ಬಲರಾಗಿ ತೊಂದರೆಯಲ್ಲಿ ಸಿಕ್ಕಿರುವವರಿಗೆ ಸಹಾಯ ಮಾಡುವದಕ್ಕೆ ಸಮಾನವಾದ ಧರ್ಮ ಮತ್ತೊಂದಿಲ್ಲ. ಗೃಹಸ್ಥರಿಂದ ಸಹಾಯವನ್ನು ಹೊಂದಬೇಕೆಂದು ಇತರ ಆಶ್ರಮದವರು ಕಾದುಕೊಂಡಿರುತ್ತಾರೆ. ಆದ್ದರಿಂದ ನಿಮ್ಮ ಕೈಲಾದ ಮಟ್ಟಿಗೂ ಅವರ ಆಶೆಯನ್ನು ಪೂರ್ಣಮಾಡಬೇಕು. ನಿಮ್ಮಲ್ಲಿ ಅರ್ಥಿಗಳಾಗಿ ಬಂದವರನ್ನು ಅನಾದರಣೆ ಮಾಡಬಾರದು. ಇತರರಿಗೆ ಸಹಾಯ ಮಾಡುವ ಅನುಕೂಲವನ್ನು ದೇವರು ನಿಮಗೆ ಕೊಟ್ಟಿರುವದ್ದರಿಂದಲ್ಲವೆ ಅವರು ನಿಮ್ಮ ಬಳಿಗೆ ಬರುವದು? ಫಲವನ್ನು ಭಕ್ಷಿಸುವದಕ್ಕೆ ಅಪೇಕ್ಷೆಯುಳ್ಳ ಮನುಷ್ಯರಾಗಲಿ

ಇತರ ಜಂತುಗಳಾಗಲೀ ಫಲಭರಿತಗಳಾದ ವೃಕ್ಷಗಳ ಸಮೀಪಕ್ಕೂ, ಬಿಸಲಿನಿಂದ ದಣಿದವರು ಗಿಡಗಳ ಸಮೀಪಕ್ಕೂ ಹೋಗುವಂತೆ ದರಿದ್ರರಾದವರು ಧನಿಕರಾದ ನಿಮ್ಮ ಬಳಿಗೆ ಬರುತ್ತಾರೆ. ಫಲವಾಗಲಿ ಪುಷ್ಪಗಳಾಗಲಿ ಶಾಖೆಗಳಾಗಲಿ ಇಲ್ಲದ ವೃಕ್ಷಗಳನ್ನು ಯಾರು ತಾನೇ ಆಶ್ರಯಿಸುತ್ತಾರೆ. ನಿಮ್ಮನ್ನು ಆಶ್ರಯಿಸಿ ಕೊಂಡಿರುವರನ್ನು ನೀವು ನಿಷ್ಠುರವಾದ ಮಾತುಗಳಿಂದ ನೋಯಿಸಬಾರದು. ಎಲ್ಲರ ಸಂಗಡಲೂ ಸ್ನೇಹವಾಗಿ ನಡೆದುಕೊಳ್ಳುವ ಪರೋಪಕಾರಿಗಳಿಗೆ ಯಾರ ಭಯವೂ ಇಲ್ಲ, ಇಂಥವರಲ್ಲಿ ಸರ್ವರ ಪ್ರೀತಿಯೂ ಇರುತ್ತೆ. ಆಪತ್ತಿನಲ್ಲಿ ಅನ್ಯರಿಗೆ ಸಹಾಯ ಮಾಡುತ್ತಿರುವ ಮನುಷ್ಯನಿಗೆ ಸಂಕಟ ಬಂದು ಒದಗಿದರೆ ಎಲ್ಲರೂ ಸಹಾಯ ಮಾಡುತ್ತಾರೆ. ನೀವು ಅನ್ಯರನ್ನು ಸ್ವಾಧೀನಪಡಿಸಿಕೊಳ್ಳ ಬೇಕಾದರೆ ಅವರಲ್ಲಿ ಪ್ರೇಮವನ್ನು ಇಡಬೇಕು. ದುಃಖಪಡಿಸುವದರಿಂದಲೂ ಭಯಪಡಿಸುವದರಿಂದಲೂ ಬಲಾತ್ಕಾರದಿಂದಲೂ ಅನ್ಯರು ಸ್ವಾಧೀನರಾಗುವದಿಲ್ಲ. ಈ ಜಗತ್ತಿನಲ್ಲಿ ಪ್ರೇಮಕ್ಕೆ ವಶರಾಗುವಂತೆ ಬಲಾತ್ಕಾರಕ್ಕೆ ವಶರಾಗುವದಿಲ್ಲ. ಪ್ರೇಮಯುಕ್ತನಾಗಿ ಪರೋಪಕಾರಿಯಾಗಿರುವ ಮನುಷ್ಯನಿಗೆ ಸಮನಾದ ಸುಖಿಯು ಯಾರೂ ಇಲ್ಲ, ಇಂಥಾ ಮನುಷ್ಯನು ಎಲ್ಲರ ಪ್ರೀತಿಗೂ ಪಾತ್ರನಾಗುತ್ತಾನೆ. ಸ್ವಾರ್ಥಾಪೇಕ್ಷೆಯಿಲ್ಲದೆ ಪರೋಪಕಾರವನ್ನು ಮಾಡುವ ಸಜ್ಜನನಿಗೆ ಇರುವಷ್ಟು ಸುಖವು ದುರ್ಜನನಿಗೆ ಭೂಮಂಡಲದ ಅಧಿಪತ್ಯವಿದ್ದರೂ ಇಲ್ಲ. ಆದಕಾರಣ ಸರ್ವಪ್ರಾಣಿಗಳಲ್ಲಿಯೂ ದಯಾಶೀಲರಾಗಿರಬೇಕು. ಯಾರಾದರೂ ಒಬ್ಬ ಮನುಷ್ಯನು ಕೆಟ್ಟ ಕೆಲಸವನ್ನು ಮಾಡಿ ಜನರಲ್ಲಿ ನಿಂದ್ಯನಾಗಿದ್ದರೂ ಅವನನ್ನು ನೀವು ನಿಂದಿಸಬಾರದು. ನಿಮ್ಮ ಕೈಲಾದರೆ ಅವನನ್ನು ಒಳ್ಳೇ ಮಾರ್ಗಕ್ಕೆ ಹತ್ತಿಸಬೇಕು. ಯಾರನ್ನು ನಿಂದಿಸಿ ನೀವು ದೊಡ್ಡವರಾಗಬೇಕೆಂದು ಯೋಚಿಸುತ್ತೀರೋ ಅವರ ದೋಷ ಹೊರಗೆ ಬಂದದ್ದರಿಂದ ತಾನೇ ಅವರು ನೀಚರಾದದ್ದು? ಒಬ್ಬರೂ ಕಾಣದಂತೆ ಅಂತರಂಗದಲ್ಲಿ ನೀವು ಎಷ್ಟು ಪಾಪಗಳನ್ನು ಮಾಡಿದ್ದೀರೋ ಅದನ್ನು ಆಲೋಚಿಸಿನೋಡಿದಲ್ಲಿ ಮತ್ತೊಬ್ಬರನ್ನು ನಿಂದಿಸುವ ನಿಮಗಿಂತ ಅವರೇ ಉತ್ತಮರೆಂದು ಕಾಣಬಹುದು. ನಾಲ್ಕು ಜನ ಹೆಂಗಸರು ಬಂದು ಕಡೆ

ಸೇರಿದರೆ ಪ್ರಾಯಶಃ ಅನ್ಯರ ದೋಷೋದ್ಘಾಟನೆಯ ಮಾತುಗಳನ್ನಲ್ಲದೆ ಇನ್ಯಾವ ಮಾತುಗಳನ್ನೂ ಆಡುವದಿಲ್ಲ. ಇದರಿಂದ ಒಳ್ಳೇ ವಿಷಯದ ಪ್ರಸ್ತಾಪಕ್ಕೆ ಅವಕಾಶವಿಲ್ಲದಂತೆ ಆಗುವದಲ್ಲದೆ ಪರನಿಂದೆಯಲ್ಲೇ ಅವರ ಅಮೌಲ್ಯವಾದ ಹೊತ್ತು ವ್ಯರ್ಥವಾಗಿ ಕಳೆದು ಹೋಗುವದು. ಇದು ಹೊರತು ಅನ್ಯರ ಪ್ರೇಮವು ಅವರ ಮೇಲೆ ಇಲ್ಲದಹಾಗೆ ಆಗಿ ಲೋಕದಲ್ಲಿ ನಿಂದಕ ರೆಂಬ ಅಪಖ್ಯಾತಿಯನ್ನು ಪಡೆಯುತ್ತಾರೆ. ಆದಕಾರಣ ಸರ್ವದುಃಖಕ್ಕೂ ಮೂಲವಾಗಿಯೂ ಅಲಕ್ಷ್ಮಿಗೆ ತೌರುಮನೆಯಾಗಿಯೂ ಕಲಹಕ್ಕೆ ಬೀಜ ವಾಗಿಯೂ ಇರುವ ಪರನಿಂದೆಯನ್ನು ಮಾಡುವ ಅಭ್ಯಾಸವನ್ನು ಬಿಡ ಬೇಕು. ಇತರರು ನೀಚರೆಂತಲೂ ನಾವು ಉತ್ತಮರೆಂತಲೂ ಅಹಂಕಾರ ಪಡುವದು ಅನುಚಿತವು. ಒಬ್ಬ ತಂದೆಗೆ ಹತ್ತು ಮಕ್ಕಳಿದ್ದರೆ ಹಿರಿಯ ಮಗನಲ್ಲಿ ಪ್ರೀತಿ ಹೆಚ್ಚಾಗಿಯೂ ಕಿರಿಯವರಲ್ಲಿ ಕಡಿಮೆಯಾಗಿಯೂ ಇರುವದಿಲ್ಲ, ಹೀಗೆಯೆ ಜಗತ್ತಿಗೆಲ್ಲಾ ತಂದೆಯಾದ ದೇವರಿಗೆ ಸರ್ವರಲ್ಲಿಯೂ ಸಮಾನವಾದ ಪ್ರೀತಿ ಇರುತ್ತೆ. ಆತನು ಪರಮಕಾರುಣಿಕನು, ಲೋಕದಲ್ಲಿ ಇರುವ ಮುಖ್ಯಪದಾರ್ಥಗಳನ್ನು ಎಲ್ಲರಿಗೂ ಸಮನಾಗಿ ಹಂಚಿಕೊಟ್ಟಿ ದ್ದಾನೆ. ಅವನ ದಯೆಗೆ ಎಲ್ಲರೂ ಸಮಾನವಾಗಿ ಪಾತ್ರರಾಗಿ ಇದ್ದಾರೆ. ಮನುಷ್ಯ, ಪಶು, ಪಕ್ಷಿ ಮುಂತಾದ ಸರ್ವಪ್ರಾಣಿಗಳಲ್ಲಿಯೂ ನೀವು ದಯಾ ಪರರಾಗಿ ನಡೆದುಕೊಳ್ಳಬೇಕು. ಯಾರಾದರು ನಿಮಗೆ ಉಪಕಾರವನ್ನು ಮಾಡಿದರೆ ನೀವು ಅವರಿಗೆ ಹತ್ತರಷ್ಟು ಪ್ರತ್ಯುಪಕಾರವನ್ನು ಮಾಡಬೇಕು. ನಿಮ್ಮ ಮನೆಗೆ ಯಾರಾದರು ಅತಿಥಿಗಳು ಬಂದರೆ ಅವರನ್ನು ಚನ್ನಾಗಿ ಆದರಿಸ ಬೇಕು. ಅವರ ಸಂಗಡ ಒಳ್ಳೇ ಮಾತುಗಳನ್ನಾಡಿ ಸಂತೋಷಪಡಿಸಬೇಕು.

ಮನೆಯಲ್ಲಿ ಯಿರುವ ವಸ್ತುಗಳ ಪಟ್ಟಿಯನ್ನು ಬರೆದು ಭದ್ರವಾಗಿ ಯಿಡಬೇಕು. ಯಾರಾದರು ಏನಾದರೂ ಒಂದು ಪದಾರ್ಥವನ್ನು ಎರವ ಲಾಗಿ ತೆಗೆದು ಕೊಂಡು ಹೋಗಿದ್ದರೆ ಅದನ್ನು ತೆಗೆದುಕೊಂಡು ಹೋಗಿರು ವವರು ಇಷ್ಟುದಿವಸಕ್ಕೆ ಹಿಂದಕ್ಕೆ ಕೊಡುತ್ತಾರೆಂಬುವದನ್ನು ನೆನಪಿಗಾಗಿ ಬರೆದು ಇಡಬೇಕು. ಅಗಸ ಮುಂತಾದವರ ಸಂಬಳ ಕೊಟ್ಟದ್ದನ್ನು ಗವಳಿಗರು ಮುಂತಾದವರ ಲೆಖ್ಖ ತೀರಿಸಿದ್ದನ್ನು ಸಹ ಬರದು ಇಡಬೇಕು.

ಯಾರಲ್ಲಿಯೇ ಆಗಲಿ ಸಾಲಮಾಡುವ ಸಂಪ್ರದಾಯು ಒಳ್ಳೇದಲ್ಲ. ಸ್ವಲ್ಪ ಸ್ವಲ್ಪವಾಗಿ ಮಾಡಿದ್ದು ಬಹಳವಾಗಿ ಬೆಳದು ಹೋಗುತ್ತೆ ಬಳಿಕ ಎಲ್ಲವನ್ನು ಒಟ್ಟಿಗೆ ತೀರಿಸುವದು ಶ್ರಮವಾಗುತ್ತೆ. ಸಾಲಮಾಡಿದವನಷ್ಟು ದುಃಖ ಪಡುವವನು ಯಾರೂ ಇಲ್ಲ. ಅವರಿವರಲ್ಲಿ ಸಾಲ ತೆಗೆದುಕೊಂಡವನು ದಾಸನಂತೆ ತಲೆಯನ್ನು ತಗ್ಗಿಸಿಕೊಂಡು ಯಾರು ಏನು ಅಂದಾಗ್ಯೂ ಸಹಿಸಿ ಕೊಳ್ಳಬೇಕಾಗುತ್ತೆ. ಮರ್ಯಾದಸ್ಥರಾದವರಿಗೆ ಇದಕ್ಕಿಂತಲೂ ಸಾವಯು ವದೇ ಲೇಸು ಅನ್ನಿಸುತ್ತದೆ. ಅದ್ದರಿಂದ ತಮ್ಮತಮ್ಮ ಆದಾಯಕ್ಕೆ ತಕ್ಕಂತೆ ಸಂಸಾರ ನಡಿಸಿಕೊಂಡು ಹೋಗಬೇಕು. ದೊಡ್ಡವರನ್ನು ನೋಡಿ ನಾವೂ ಅವರಂತೆಯೇ ನಡಿಯಬೇಕೆಂಬ ಹೆಮ್ಮೆಯನ್ನು ಹಚ್ಚಿಕೊಳ್ಳ ಬಾರದು. ಸಾಲವಿಲ್ಲದೆ ಅರಹೊಟ್ಟೆ ಹಿಟ್ಟುತಿಂದು ಹರಕು ಬಟ್ಟೆಯನ್ನುಟ್ಟು ಕೊಂಡಿರುವವನಿಗೆ ಇರುವಷ್ಟು ನೆಮ್ಮದಿಯೂ ಸುಖವೂ ಮರ್ಯಾದೆಯೂ ಸಾಲಗಾರನಾಗಿರುವ ರಷ್ಯಾದೇಶದ ಚಕ್ರವರ್ತಿಗೂ ಇಲ್ಲವೆಂದು ಕಾಣುತ್ತೆ. ಸಾಲವೆಂಬ ಜಿಗಣೆಯು ಮನುಷ್ಯನಿಗೆ ಒಂದುಸಲ ಅಂಟಿದರೆ ಅವನ ರಕ್ತ ವನ್ನೆಲ್ಲಾ ಹೀರುವ ವರಿಗೂ ಬಿಡುವದಿಲ್ಲ "ಋಣಂಕೃತ್ವಾ ಘೃತಂಪಿಬೇತ್" ಎಂಬ ಗಾದೆಯಂತೆ ಆಚರಿಸುವ ನಮ್ಮ ಜನರಿಗೆ ಮಾನನಷ್ಟವೂ ಅದಕ್ಕೆ ಸಮಾನವಾದ ಇತರ ಅನರ್ಥಗಳೂ ಸಂಭವಿಸುತ್ತವೆ. ಈ ವಿಷಯದಲ್ಲಿ ನಮ್ಮವರು ದೃಷ್ಟಿಯಿಡದೆ ಇರುವದಕ್ಕಾಗಿ ನಾನು ಬಹಳ ವ್ಯಸನಪಡು ತ್ತೇನೆ. ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡುವದರಿಂದ ಅನೇಕ ರಾಜ್ಯಗಳೇ ಹಾಳಾಗಿವೆ, ಇಂಥಾದ್ದರಲ್ಲಿ ಒಬ್ಬ ಮನುಷ್ಯನ ಪಾಡೇನು ? ಆದಕಾರಣ ಯಾವಾಗಲೂ ಮಿತವಾಗಿ ವೆಚ್ಚ ಮಾಡಬೇಕು. ಸತ್ಕಾರ್ಯದಲ್ಲಿ ವಿನಿಯೋ ಗಿಸಿ ಉಳಿದ ದ್ರವ್ಯವನ್ನು ತಮಗಾಗಲಿ ಇತರರಿಗಾಗಲಿ ಉಪಯೋಗವಾಗು ತ್ತೆಂದು ತಿಳಿದು ಇಟ್ಟಿರಬೇಕು. ಸರ್ವರೂ ಹೀಗೆ ಮಾಡಿದರೆ ನಮ್ಮ ದೇಶಕ್ಕೆ ಆಗಿಂದಾಗ್ಯೆ ಉಂಟಾಗುವ ಕ್ಷಾಮದ ತೊಂದರೆಯೂ, ಕ್ಷಾಮದ ತೊಂದರೆ ಯಿಂದುಂಟಾಗುವ ಲಕ್ಷಾವಧಿ ಪ್ರಾಣ ನಾಶವೂ ತಪ್ಪಿಹೋಗುವವು- ದೇಶದ ದರಿದ್ರಾವಸ್ಥೆಯೇ ಕ್ಷಾಮಕ್ಕೆ ಕಾರಣವಾದ್ದರಿಂದ ಅದನ್ನು ನಿವಾ ರಣೆ ಮಾಡುವದಕ್ಕೆ ಎಲ್ಲರೂ ಯತ್ನ ಮಾಡಬೇಕು.

ಈ ಪ್ರಕಾರ ಮನೆಯ ಕೆಲಸವನ್ನೆಲ್ಲಾ ಮಾಡಿದ ಬಳಿಕ ಸ್ವಲ್ಪ ಹೊತ್ತು ವಿಶ್ರಮಿಸಿ ಕೊಳ್ಳಬೇಕು. ಕಾಲಕಾಲಕ್ಕೆ ವಿಶ್ರಮಿಸಿಕೊಳ್ಳದೇ ಇದ್ದರೆ ದೇಹಸ್ಥಿತಿಯು ಕೆಟ್ಟುಹೋಗುವದು. ಧನದಂತೆಯೇ ಕಾಲವನ್ನು ಬಹುಜಾಗರೂಕತೆಯಿಂದ ವೆಚ್ಚ ಮಾಡಬೇಕು. ಕಳೆದು ಹೋದ ಹಣವನ್ನಾದರೂ ತಿರುಗಿ ಸಂಪಾದಿಸ ಬಹುದು. ಹೊತ್ತನ್ನು ಸಂಪಾದಿಸುವದಕ್ಕೆ ಆಗುವದಿಲ್ಲ.

ರಾತ್ರಿಯಲ್ಲಿ ಎಲ್ಲರ ಭೋಜನವೂ ಆದಮೇಲೆ ಮಾಡತಕ್ಕ ಕೆಲಸವನ್ನೆಲ್ಲಾ ಮಾಡಿ ಮನೆಯಲ್ಲಿರುವವರೆಲ್ಲರ ಪರಾಂಬರಿಕೆಯನ್ನು ತೆಗೆದುಕೊಂಡು ಎಲ್ಲರೂ ಮಲಗಿದ ಬಳಿಕ ತಲಬಾಗಲು ಹಾಕಿರುವದನ್ನು ನೋಡಿಕೊಂಡು ಅತ್ತಿತ್ತ ಬಿದ್ದಿರುವ ಪದಾರ್ಥಗಳನ್ನೆಲ್ಲಾ ಸರಿಯಾಗಿಡಬೇಕು. ಮಲಗುವದಕ್ಕೆ ಮುಂಚೆ ಆ ದಿವಸ ಯಾವಯಾವ ಕೆಲಸ ಮಾಡಬೇಕೆಂದು ನಿಶ್ಚಯವಾಗಿತ್ತು, ಅದರಲ್ಲಿ ಯಾವ ಕೆಲಸವಾಯಿತು, ಯಾವದು ಆಗಲಿಲ್ಲವೆಂಬುವದನ್ನು ನೋಡಿಕೊಳ್ಳಬೇಕು. ಗೃಹಕೃತ್ಯ ವಿಷಯದಲ್ಲಿ ತಮಗೆ ಹಿತವಾಗುವ ಮಾರ್ಗವನ್ನು ಹುಡುಕುವದರಲ್ಲಿ ಆಲಸ್ಯಪಡಬಾರದು. ನಾನಾ ವಿಧವಾದ ನೀತಿಗ್ರಂಥಗಳನ್ನೂ ಈಶ್ವರ ವಿಷಯಕವಾದ ಜ್ಞಾನವನ್ನುಂಟು ಮಾಡುವ ಉಪಾಖ್ಯಾನಗಳನ್ನೂ ತಮಗೆ ತಿಳಿಯ ಬಹುದಾದ ಶಾಸ್ತ್ರವಿಚಾರವನ್ನೂ ವರ್ತಮಾನಪತ್ರಗಳನ್ನೂ ಓದಿ ಯಾವದರಲ್ಲಿಯಾದರೂ ಏನಾದರೂ ಸದುಪದೇಶವು ಸಿಕ್ಕಿದರೆ ಅದನ್ನು ನೆನಪಿನಲ್ಲಿ ಇಟ್ಟುಕೊಂಡು ತಮ್ಮ ವೃತ್ತಿಯು ದಿನೇದಿನೆ ಉತ್ಕರ್ಷವನ್ನು ಹೊಂದುವಂತೆ ಏಕಾಗ್ರಚಿತ್ತರಾಗಬೇಕು. ಇತರರ ಆಚಾರವನ್ನು ನೋಡಿ ಅವರು ಆಡುವ ಮಾತುಗಳನ್ನು ಕೇಳಿ ಅದರಲ್ಲಿ ಸಾರವಾದದ್ದನ್ನು ತಿಳಿದುಕೊಳ್ಳಬೇಕು ಶುಷ್ಕವಾದ ಹರಟೆಯಲ್ಲಿ ಕಾಲವನ್ನು ಕಳೆಯಬಾರದು. ಸಾಯಂಕಾಲವಾದ ೩ ತಾಸಿನ ಒಳಗಾಗಿ ಮಲಗಿ ಇನ್ನು ೨—೩ ತಾಸು ರಾತ್ರಿ ಇರುವಾಗಲೇ ಏಳಬೇಕು. ಸಂಸಾರದಲ್ಲಿ ಯಾರೂ ಕಾಣದಂತೆ ಮಾಡಿದ ಪಾಪವು ಸರ್ವಸಾಕ್ಷಿಯಾದ ಭಗವಂತನಿಗೆ ತಿಳಿಯದೆ ಇರಲಾರದೆಂತಲೂ ಪಾಪಕ್ಕೆ ತಕ್ಕ ಶಿಕ್ಷೆ ತಪ್ಪುವದಿಲ್ಲವೆಂತಲೂ ದೃಢವಾಗಿ ನಂಬಿ ಎಚ್ಚರವಾಗಿ ನಡೆದುಕೊಳ್ಳಬೇಕು.

೭ನೇ ಪರಿಚ್ಛೇದ.

ಮಕ್ಕಳ ಪೋಷಣೆ ಮತ್ತು ಶಿಕ್ಷಣೆ.

ಗೃಹಕೃತ್ಯದ ಎಲ್ಲಾ ಕೆಲಸಗಳಲ್ಲಿಯೂ ಮಕ್ಕಳನ್ನು ಪೋಷಿಸಿ ಅಭಿವೃದ್ಧಿಗೆ ತರುವದು ಮುಖ್ಯವಾದ ಕೆಲಸವಾಗಿದೆ. ಇದರಲ್ಲಿ ಸ್ತ್ರೀಯರು ಬಹಳ ದೂರದವರಿಗೆ ಯೋಚನೆಮಾಡಿ ಜಾಗರೂಕರಾಗಿ ನಡೆದುಕೊಳ್ಳಬೇಕು. ಮಹಾಶೂರನಾದ ನೆಪೋಲಿಯನ್ ಬೋನಾಪಾರ್ಟನನ್ನು "ನೀವು ಭೂಮಂಡಲದಲ್ಲೆಲ್ಲಾ ಇಷ್ಟು ಶೂರರೆನ್ನಿಸಿ ಕೊಳ್ಳುವದಕ್ಕೆ ಕಾರಣವೇನು" ಎಂದು ಯಾರೋಕೇಳಿದ್ದಕ್ಕೆ ನನ್ನ ತಾಯಿ ನನ್ನನ್ನು ಈ ಸ್ಥಿತಿಗೆ ತಂದಳೆಂದು ಉತ್ತರ ಕೊಟ್ಟನೆಂದು ಇತಿಹಾಸವಿದೆ. ಈ ಉತ್ತರವು ಸಂಕ್ಷೇಪವಾಗಿದ್ದಾಗ್ಯೂ ಇದರ ಒಂದೊಂದು ಅಕ್ಷರದಲ್ಲಿ ಮಹಾಭಾರತದಷ್ಟು ಅರ್ಥವು ಗರ್ಭಿತವಾಗಿರುವಂತೆ ಕಾಣಿಸುತ್ತದೆ. ಮಕ್ಕಳು ಬದುಕುವದಾಗಲಿ ಕೆಡುವದಾಗಲಿ ಅವರು ಪ್ರಪಂಚದಲ್ಲಿ ದೊಡ್ಡವರಾಗುವದಾಗಲಿ ನೀಚರಾಗುವದಾಗಲಿ ಅವರವರ ತಾಯ ಕೈಯಲ್ಲಿದೆ.

ತಾಯಗುಣಗಳೇ ಮಕ್ಕಳಲ್ಲಿ ಪ್ರಾಯೇಣ ವಿಶೇಷವಾಗಿಯಿರುತ್ತವೆ. ಗರ್ಭಧಾರಣ ಮೊದಲುಗೊಂಡು ಜನನವಾಗುವ ವರಿಗೂ ತಾಯ ರಕ್ತಮಾಂಸಗಳ ಸಂಸರ್ಗದಿಂದಲೂ, ಜನನವಾದ ಮೇಲೆ ಇತರೆ ಪದಾರ್ಥಗಳನ್ನು ತಿನ್ನುವಷ್ಟು ಯೋಗ್ಯತೆ ಬರುವವರಿಗೂ ತಾಯ ಸ್ತನ್ಯಪಾನದಿಂದಲೂ ಮಗುವಿನ ಪೋಷಣೆ ಯಾಗುವದ್ದರಿಂದ ಮನುಷ್ಯರ ಶರೀರದಲ್ಲಿ ತಾಯರಕ್ತಭಾಗವೇ ಹೆಚ್ಚಾಗಿ ಯಿರುತ್ತೆ. ಆದ್ದರಿಂದ ತಾಯ ಸ್ವಭಾವವೇ ಮಕ್ಕಳಲ್ಲಿ ಹೆಚ್ಚಾಗಿ ಯಿರುತ್ತೆ. ಮುಂದೆಯು ತಾಯಿ ಆಡುವ ಮಾತುಗಳನ್ನೂ ಆಕೆಮಾಡುವ ಕೆಲಸವನ್ನು ಮಕ್ಕಳು ಕಲಿಯುವದರಿಂದ ಎಲ್ಲಾ ವಿಷಯಗಳಲ್ಲಿಯೂ ಮಕ್ಕಳು ತಾಯನ್ನೇ ಅನುಕರಿಸುತ್ತಾರೆ. ಆದಕಾರಣ ತಾಯ ಸ್ವಭಾವವೂ ಆಚರಣೆಯೂ ಚನ್ನಾಗಿದ್ದರೆ ಮಕ್ಕಳು ಸಹ ಒಳ್ಳೇಯವರಾಗುತ್ತಾರೆ. ಅವರ ನಡತೆ ಚನ್ನಾಗಿಲ್ಲದಿದ್ದರೆ ಮಕ್ಕಳು ಸಹ

ಕೆಟ್ಟು ಹೋಗುತ್ತಾರೆ. ಯಾರಿಗಾಗಲಿ ವಿದ್ಯೆಯಿಲ್ಲದೆ ಜ್ಞಾನ ಉಂಟಾಗುವದಿಲ್ಲ. ಜ್ಞಾನವಿಲ್ಲದೆ ಸ್ವಾಧೀನ ಚಿತ್ತತೆ, ತೇಜಸ್ಸು, ಸತ್ಯಪರಾಯಣತೆ, ಧಾರ್ಮಿಕತ್ವ ಮೊದಲಾದ ಉತ್ತಮಗುಣಗಳು ಎಂದಿಗೂ ಉಂಟಾಗುವದಿಲ್ಲ. ಈ ಉತ್ತಮ ಗುಣಗಳು ಯಾವ ಮನುಷ್ಯರಲ್ಲಿ ಇರುವದಿಲ್ಲವೋ ಅವರ ಸಂತತಿಯು ಉನ್ನತಿಯನ್ನೂ ತೇಜಸ್ಸನ್ನೂ ಪಡೆಯುವದಿಲ್ಲ. ಹುಲ್ಲು ಕೂಡಾ ಹುಟ್ಟದೆ ಇರುವ ಚೌಳು ಭೂಮಿಯಲ್ಲಿ ಸೀಮಾಪಿನಗಿಡ ಬೆಳೆಯುವದುಂಟೆ?

ಇದೇಪ್ರಕಾರ ತಾಯಿ ತೇಜೋರಹಿತಳಾಗಿದ್ದರೆ ಅವಳ ಮಕ್ಕಳಿಗೆ ತೇಜಸ್ಸು ಎಲ್ಲಿಂದ ಬಂದೀತು? "ಗರ್ಭೋತ್ಪತ್ತಿಯ ಕಾಲದಲ್ಲಿ ಸ್ತ್ರೀಪುರುಷರ ಆಕೃತಿಯೂ ಮನೋಭಾವವೂ ಯಾವ ಮೇರೆಗೆ ಇರುತ್ತೋ ಅದರಂತೆಯೇ ಅವರ ಮಕ್ಕಳಿಗೂ ಇರುತ್ತೆಂದು" ವೈದ್ಯ ಶಾಸ್ತ್ರದಲ್ಲಿ ಹೇಳಿಯಿದ್ದಾರೆ. ಮನುಷ್ಯನ ಮನಸ್ಸಿನಲ್ಲಿ ಆಯಾ ಕಾಲದಲ್ಲಿ ಹುಟ್ಟುವ ಭಾವನೆಯನ್ನು ಅನುಸರಿಸಿ ಅವನ ಶರೀರಕ್ರಿಯೆ ನಡೆಯುವಂತೆಯೇ ಸಂತಾನೋತ್ಪತ್ತಿಯೂ ಭಾವನೆಯನ್ನನುಸರಿಸಿ ಆಗುವದರಲ್ಲಿ ಆಶ್ಚರ್ಯಕರವಾದ್ದು ಏನು ಇಲ್ಲ. ಇದಕ್ಕೆ ನಮ್ಮ ದೇಶದ ಈಗಿನ ಸ್ಥಿತಿಯೇ ಪ್ರಮಾಣವಾಗಿದೆ. ಈ ದೇಶದಲ್ಲಿ ಪುರುಷರ ಮನಸ್ಸಿನಲ್ಲಿ ಸ್ತ್ರೀಯರ ವಿಷಯದಲ್ಲಿ ನೀಚಭಾವವು ತುಂಬಿ ಯಿರುವದ್ದರಿಂದ ಸ್ತ್ರೀಯರಲ್ಲಿ ಧಾರಾಳವಾದ ಅಂತಃಕರಣವನ್ನು ಇಡದೆ ಅಂತರ್ಯದಲ್ಲಿ ಕಪಟವನ್ನು ಇಟ್ಟುಕೊಂಡು ಹೊರಗೆಮಾತ್ರ ಸ್ನೇಹಭಾವವನ್ನು ತೋರಿಸುತ್ತಾರೆ. ಪುರುಷರ ಇಂಥಾ ನಡತೆಯಿಂದ ಸ್ತ್ರೀಯರ ಮನಸ್ಸುಕೂಡಾ ಚನ್ನಾಗಿರುವದಿಲ್ಲ. ಸರ್ವದಾ ಜ್ಞಾನಶೂನ್ಯರಾಗಿ ದಾಸ್ಯವೃತ್ತಿಯಲ್ಲಿ ಇರುವದರಿಂದ ಅವರ ಚಿತ್ತವು ಮಲಿನವಾಗಿಯೂ ಉತ್ಸಾಹಹೀನವಾಗಿಯೂ ತೇಜೋಹೀನವಾಗಿಯೂ ಅಸತ್ಯ ಪರಾಯಣವಾಗಿಯೂ ಇರುತ್ತೆ. ಇಂಥಾ ಮಲಿನವಾದ ಚಿತ್ತದಲ್ಲಿ ಧರ್ಮವಾಸನೆಯೂ ಈಶ್ವರಪ್ರೇಮವೂ ಸತ್ಸಾಹಸವೂ ಇರುವದೇ ಇಲ್ಲ. ಇಂಥಾ ನೀಚಸ್ವಭಾವದ ತಂದೆ ತಾಯಿಗಳ ಕೈಯಲ್ಲಿ ಶಿಕ್ಷಿತರಾದ ಮಕ್ಕಳು ಎಷ್ಟುಮಟ್ಟಿಗೆ ಅಭಿವೃದ್ಧಿಗೆ ಬರಬಹುದೋ

ಅದನ್ನು ನಾನು ಹೇಳತಕ್ಕ ಪ್ರಕೃತವಿಲ್ಲ. ಮಕ್ಕಳು ತಂದೆಗಿಂತ ತಾಯ ಸಮೀಪದಲ್ಲಿಯೇ ಹೆಚ್ಚುಕಾಲ ಇರುವದರಿಂದ ಆಕೆಯ ಗುಣಗಳನ್ನೇ ಬಹಳವಾಗಿ ಕಲಿಯುತ್ತವೆ, ಆದ್ದರಿಂದ ಸ್ತ್ರೀಯರ ಯೋಗ್ಯತೆಯನ್ನು ಅನುಸರಿಸಿ ಅವರ ಮಕ್ಕಳ ಯೋಗ್ಯತೆಯೂ ಇರುತ್ತೆಂಬ ವಿಷಯದಲ್ಲಿ ಸಂಶಯ ಪಡಕೆಲಸವಿಲ್ಲ. ನಮ್ಮ ದೇಶದಲ್ಲಿ ಸ್ವದೇಶಾಭಿಮಾನಿಗಳೆಂಬ ಜನರು "ನಮ್ಮ ದೇಶವು ಭಾಗ್ಯಹೀನವಾಗಿದೆ. ಇದನ್ನು ಉದ್ಧಾರ ಮಾಡಬೇಕು, ಇದಕ್ಕಾಗಿ ಜನರು ಕುಶಲತೆಯನ್ನು ಕಲಿಯಬೇಕು, ಪೂರ್ವದಲ್ಲಿ ನಮ್ಮವರು ಪರಾಕ್ರಮಿಗಳಾಗಿಯೂ ಸ್ವಾಧೀನರಾಗಿಯೂ ಇದ್ದರು, ನಾವು ಪರಾವಲಂಬಿಗಳಾಗಿ ಯಿದ್ದೇವೆ, ಇದನ್ನು ತಪ್ಪಿಸುವದಕ್ಕಾಗಿ ಸರ್ವರೂ ಒಂದೇಮನಸ್ಸಿನಿಂದ ಪ್ರಯತ್ನ ಮಾಡಬೇಕು" ಎಂದು ಮೋಹದಂತೆ ಗಂಭೀರವಾದ ಧ್ವನಿಯಿಂದ ಮಾತನಾಡುತ್ತಾರೆ. ಇದರಿಂದ ಏನೂ ಆಗುವದಿಲ್ಲ, ಎಲ್ಲವೂ ಮಾತಿನಲ್ಲಿಯೇ ಪರ್ಯವಸಾನವಾಗುತ್ತೆ. ಇಂಥಾ ಮಾತುಗಳನ್ನು ಕೇಳಿದವರು ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಬಿಟ್ಟು ಬಿಡುತ್ತಾರೆ, ಅಥವಾ ಒಂದೆರಡು ಮಾತುಗಳು ತಮ್ಮ ಮೈಮೇಲೆ ಎಲ್ಲಿಯಾದರೂ ಅಂಟಿಕೊಂಡಾವೆಂಬ ಭಯದಿಂದಲೋ ಎಂಬಹಾಗೆ ಬಟ್ಟೆಗಳನ್ನು ಕೊಡವಿಕೊಂಡು ತಮ್ಮತಮ್ಮ ಮನೆಗೆ ಹೊರಟು ಹೋಗುತ್ತಾರೆ. ನಾಲ್ಕು ಜನರು ಸೇರಿದ ಕೂಡಲೆ ಉಮೇದವಾರ ಕಚೇರಿಯವರಂತೆ ದೊಡ್ಡದೊಡ್ಡ ಆಲೋಚನೆಯ ಮಾತುಗಳನ್ನು ಆಡಿ ಕಾಲವನ್ನು ಕಳೆಯುತ್ತಾರೆಯೇ ಹೊರತು ಆಡಿದಂತೆ ಒಂದು ಕೆಲಸವನ್ನೂ ನಡೆಸುವದಿಲ್ಲ. ತಮ್ಮ ತಾಯಿ ತಂದೆಗಳಿಂದ ಸಂಪಾದಿಸಿಕೊಂಡ ಅಧೀರಪ್ರಕೃತಿ ಯಿರುವಲ್ಲಿ ಅವರಿಗೆ ಧೈರ್ಯ, ಕರ್ತವ್ಯ ಬುದ್ಧಿ ಮೊದಲಾದ ಸದ್ಗುಣಗಳು ಎಲ್ಲಿಂದ ಬಂದಾವು ? ಮೇಲೆ ಹೇಳಿದಂತೆ ಬಾಯಲ್ಲಿಮಾತ್ರ ಆಡುತ್ತಾರೆಯೇ ಹೊರತು ಮನಃಪೂರ್ವಕವಾಗಿ ಆಡುವದಿಲ್ಲ. ಇಂಗ್ಲೀಷುಜನರ ನಡತೆಯನ್ನು ನೋಡಿ, ಅವರ ಪುಸ್ತಕಗಳನ್ನೂ ವರ್ತಮಾನ ಪತ್ರಗಳನ್ನೂ ಓದಿ, ಆಡುವ ಮಾತು ಎಲ್ಲೀವರಿಗೆ ತಾನೇ ನಿಂತೀತು ? ಇವರು "ನಮ್ಮ ಪೂರ್ವಿಕರು ದೊಡ್ಡವರಾಗಿದ್ದರು" ಎನ್ನುತ್ತಾರೆ, ಅದು ನಿಜ! ಯಾರುತಾನೆ ಅಲ್ಲವೆನ್ನುತ್ತಾರೆ!

ಅವರು ಏಳಂತಾಳೆ ಮರದ ಉದ್ದವಿದ್ದರು! ಅದರಿಂದ ನಿಮಗೆ ಬಂದ ಭಾಗ್ಯವೇನು? ಅವರಿಗೆ ಸದೃಶವಾದಗುಣ ನಿಮ್ಮಲ್ಲಿ ಇಲ್ಲದ ಮೇಲೆ ವಂಶಕ್ಕೆ ಅಪಕೀರ್ತಿ ತರುವಂಥಾ ನೀವು ಅಂಥಾ ವಂಶದಲ್ಲಿ ಯಾಕೆ ಹುಟ್ಟಿದಿರಿ? ನಿಮ್ಮ ಪೂರ್ವಿಕರು ದೀಪವಂತೆ ಲೋಕದಲ್ಲಿ ತಮ್ಮ ಗುಣ ಪ್ರಕಾಶವನ್ನು ಉಂಟುಮಾಡಿ ಹೋದರು. ನಿಮ್ಮ ಜನ್ಮಭೂಮಿಯ ಮುಖವನ್ನು ಕಪ್ಪು ಮಾಡುವದಕ್ಕಲ್ಲವೆ ನೀವು ಕಾಡಿಗೆಯಂತೆ ಅವರ ಹೊಟ್ಟೆಯಲ್ಲಿ ಹುಟ್ಟಿದ್ದು? ನಿಮ್ಮ ಪೂರ್ವಿಕರು ತಮ್ಮ ಸ್ತ್ರೀಯರನ್ನು ಆಕಾಲದಲ್ಲಿ ದಾಸಿಯರಂತೆ ಎಣಿಸದೆ ಇದ್ದಕಾರಣ ಅಷ್ಟು ತೇಜಸ್ವಿಗಳಾಗಿದ್ದರು, ಅವರು ತಮ್ಮ ಸ್ತ್ರೀಯರಿಗೆ ಜ್ಞಾನೋಪದೇಶವನ್ನು ಮಾಡಿ ಅವರಲ್ಲಿ ತೇಜಸನ್ನುಂಟುಮಾಡುತ್ತಿದ್ದರು. ಅವರು ಸ್ತ್ರೀಯರನ್ನು ಅಲಕ್ಷ್ಯಮಾಡಿ ತಮ್ಮ ಮನಸ್ಸಿಗೆ ಬಂದಂತೆ ಆಚರಿಸುತ್ತಿರಲಿಲ್ಲ. ಸ್ತ್ರೀಯರ ಮರ್ಯಾದೆಯನ್ನು ಕಾಪಾಡುತ್ತಿದ್ದರು ಅದ್ದರಿಂದ ಆಕಾಲದ ಸ್ತ್ರೀಯರು ಗುಣವಂತೆಯರಾಗಿ ಬಡತನದಲ್ಲಿಯೂ ರಾಜಸ್ತ್ರೀಯರಂತೆ ಸುಖವಾಗಿದ್ದರು. ಅವರಿಂದ ಶಿಕ್ಷಿತರಾದ ಅವರ ಮಕ್ಕಳು ಕೂಡಾ ತೇಜಸ್ವಿಗಳಾಗಿಯೂ ಧಾರ್ಮಿಕರಾಗಿಯೂ ಸತ್ಯಪ್ರತಿಜ್ಞರಾಗಿಯೂ ಇರುತ್ತಿದ್ದರು. ಈಗ ನಮ್ಮ ದೇಶವನ್ನು ತಿರುಗಿ ಉನ್ನತಿಗೆ ತರಬೇಕೆಂಬ ಅಪೇಕ್ಷೆಯುಳ್ಳವರು ಸ್ವಾರ್ಥ ಬುದ್ಧಿಯನ್ನು ಬಿಡಬೇಕು. ಸ್ತ್ರೀಯರಲ್ಲಿ ಸದ್ಗುಣಗಳು ಉಂಟಾಗುವಂತೆ ಮಾಡಬೇಕು. ಹೀಗೆ ಮಾಡುವದರಿಂದ ಸ್ತ್ರೀಯರು ಉತ್ಸಾಹಿಗಳಾಗಿಯೂ ತೇಜಸ್ವಿಗಳಾಗಿಯೂ ಆಗುತ್ತಾರೆ, ಅವರ ಮಕ್ಕಳು ಸಹಾ ಆ ಸ್ತ್ರೀಯರ ಸದ್ಗುಣವನ್ನೂ ಸ್ವಭಾವವನ್ನೂ ಅನುಸರಿಸಿ ಯೌವ್ವನದಲ್ಲಿ ದೃಢಪ್ರತಿಜ್ಞರಾಗಿಯೂ ಧೈರ್ಯಶಾಲಿಗಳಾಗಿಯೂ ಕರ್ತವ್ಯನಿಷ್ಠರಾಗಿಯೂ ಆಗುತ್ತಾರೆ. ಇಂಥಾವರ ಯತ್ನದಿಂದ ಈದೇಶಕ್ಕೆ ದುರ್ದಶೆ ಹೋಗಿ ಭಾಗ್ಯ ಉಂಟಾದೀತೆ ಹೊರತು ಅವರಿಗೂ ಸಾವಿರಾರು ಸಭೆಯವರು ಸೇರಿ ಮಾತನಾಡುತ್ತಿದ್ದರೂ ಅದರಿಂದ ಏನು ಆಗುವದಿಲ್ಲ. ಗಿಡದ ಬೇರನ್ನು ಕಡಿಯುತ್ತಿದ್ದು ಅದರ ತಲೆಯಮೇಲೆ ನೀರನ್ನು ಹಾಕುತ್ತಿದ್ದರೆ ಆಗಿಡ ಬದುಕಿ ಅಭಿವೃದ್ಧಿ ಯಾದೀತೆ? ಇದು ಹಾಗಿರಲಿ, ಪ್ರಕೃತ ವಿಷಯವನ್ನು ನೋಡೋಣ. ನಮ್ಮಲ್ಲಿ ಹೆಂಗಸರಿಗೆ ಮಕ್ಕಳ ಪೋಷಣೆಯನ್ನು ಹ್ಯಾಗೆ

ಮಾಡಬೇಕೋ ಅದು ತಿಳಿಯದೆ ಇರುವದ್ದರಿಂದ ಮೊದಲಿಂದಲೂ ಮಕ್ಕಳ ದೇಹಸ್ಥಿತಿಯನ್ನು ಕೆಡಿಸಿ ಬಿಡುತ್ತಾರೆ. ಆದಕಾರಣ ತಿಳುವಳಿಕೆಯುಳ್ಳ ಸ್ತ್ರೀಯರು ಈ ವಿಷಯದಲ್ಲಿ ಜಾಗರೂಕರಾಗಿ ಇರಬೇಕು.

ಮಕ್ಕಳಂದಿಗರಾದ ಸ್ತ್ರೀಯರು ಮುಖ್ಯವಾಗಿ ಆತ್ಮಸಂಯಮನವನ್ನು ಮಾಡಬೇಕು. ಹೆಚ್ಚಾಗಿ ಊಟಮಾಡಬಾರದು. ತಂಗಳನ್ನೂ ಬಹಳ ಖಾರವಾಗಿರುವ ಪದಾರ್ಥವನ್ನೂ ಊಟಮಾಡಬಾರದು. ಇಂಥಾ ಅಪಥ್ಯಕಾರಿಗಳಾದ ಪದಾರ್ಥಗಳನ್ನು ಊಟಮಾಡುವದರಿಂದ ಸ್ತನ್ಯವು ಕೆಟ್ಟು ಅದು ಮಗುವಿನ ಹೊಟ್ಟೆಗೆ ಸೇರುವದರಿಂದ ಮಗುವಿಗೆ ಅಜೀರ್ಣವಾಗಿ ಅದರಿಂದ ನಾನಾ ಪ್ರಕಾರವಾದ ರೋಗಗಳು ಹುಟ್ಟುತ್ತವೆ. ಮನುಷ್ಯರು ಊಟಮಾಡುವ ಪದಾರ್ಥವು ಹೊಟ್ಟೆಯಲ್ಲಿ ಪಚನವಾಗಿ ರಕ್ತವಾಗುತ್ತದೆ. ಆ ರಕ್ತವು ಅವಯವದಲ್ಲೆಲ್ಲಾ ವ್ಯಾಪಿಸಿ ಶರೀರವನ್ನು ಪೋಷಿಸುತ್ತದೆ. ಅಪಥ್ಯಕಾರಿಯಾದ ಪದಾರ್ಥಗಳನ್ನು ತಿಂದರೆ ಜಠರಾಗ್ನಿ ಮಂದವಾಗಿ ಆ ಪದಾರ್ಥಗಳು ಪಚನವಾಗುವದಿಲ್ಲ. ಅದರಿಂದ ಎಲ್ಲಾ ಅವಯಗಳ ವ್ಯಾಪಾರವೂ ಕೆಟ್ಟು ರೋಗ ಉಂಟಾಗುವದು. ಎಳೇಮಕ್ಕಳ ಜೀರ್ಣಶಕ್ತಿಯು ಕಡಮೆಯಾಗಿರುವದರಿಂದ ಆಹಾರದಲ್ಲಿ ಸ್ವಲ್ಪ ಹೆಚ್ಚು ಕಡಮೆಯಾದಾಗ್ಯೂ ಪ್ರಬಲವಾದ ರೋಗಗಳು ಉಂಟಾಗುತ್ತವೆ. ಮಕ್ಕಳ ರೋಗಕ್ಕೆ ಔಷಧವನ್ನು ಕೊಡುವದು ಸುಲಭವಲ್ಲ. ಆದ್ದರಿಂದ ರೋಗಗಳು ಬರದಂತೆ ಪಥ್ಯವಾಗಿರಬೇಕು. ಕೆಲವು ಸ್ತ್ರೀಯರಿಗೆ ಸಣ್ಣಸಣ್ಣ ರೋಗಗಳಿಗೆ ಯಾವ ಔಷಧಗಳನ್ನು ಕೊಡಬೇಕೋ ಅದು ತಿಳಿಯದೆ ಬಜೆ, ಅಕಲಕರೆ, ಚಿರಾಯತ ಮುಂತಾದ ಮನಸ್ಸಿಗೆ ಬಂದ ಜಿನಸು ಹಾಕಿ ಔಷಧವನ್ನು ಮಾಡಿಕೊಟ್ಟು ಮಕ್ಕಳನ್ನು ವ್ಯಥೆ ಪಡಿಸುತ್ತಾರೆ. ಸಣ್ಣ ರೋಗಗಳಿಗೆ ಬಲವಾದ ಔಷಧಗಳನ್ನು ಕೊಡಬಾರದು. ಕೆಲವು ರೋಗಗಳು ತಾವಾಗಿಯೇ ಉಪಶಮಿತವಾಗುತ್ತವೆ. ಸಾಧಾರಣವಾದ ರೋಗಗಳಿಗೆ ಮಾಡತಕ್ಕ ಉಪಾಯಗಳನ್ನು ತಿಳಿದುಕೊಂಡು ಅದರಂತೆ ನಡಿಸಬೇಕು. ತಮಗೆ ತಿಳಿಯದೆ ಯಿರುವ ಸಂಗತಿಯನ್ನು ಪ್ರಾಜ್ಞರಾದ ವೈದ್ಯರನ್ನು ಕೇಳಿ ಅವರು ಹೇಳಿದಂತೆ ಚಿಕಿತ್ಸೆಯನ್ನು ಮಾಡಬೇಕು.

ಅನೇಕರು ಕಂಡಕಂಡವರು ಹೇಳಿದಂತೆ ನಾನಾ ಪ್ರಕಾರವಾದ ಚಿಕಿತ್ಸೆಗಳನ್ನು ಮಾಡುತ್ತಾರೆ. ಇನ್ನು ಕೆಲವರು ಬೀದಿಯಲ್ಲಿ ಕೂಗಿಕೊಂಡು ಹೋಗುವವರಲ್ಲಿ ಅಗ್ಗವಾಗಿ ದೊರೆಯುವ ಉಪದ್ರವಕಾರಿಗಳಾದ ಪದಾರ್ಥಗಳನ್ನು ಔಷಧಗಳೆಂದು ನಂಬಿ ಮಕ್ಕಳಿಗೆ ತಿನ್ನಿಸುತ್ತಾರೆ. ಇಂಥಾ ನಡತೆಯಿಂದ ಪ್ರಾಯೇಣ ಬಹಳ ತೊಂದರೆಗಳು ಉಂಟಾಗುತ್ತವೆ. ಬುದ್ಧಿಶಾಲಿಗಳಾದ ಸ್ತ್ರೀಯರು ಹೀಗೆ ಮಾಡುವದು ಯುಕ್ತವಲ್ಲ. ಹರಕೆ ಮಾಡಿಕೊಳ್ಳುವದು, ತಾಯಿತಿ ಕಟ್ಟುವದು, ಯಾರಾದರು ಯೋಗೀಶ್ವರರೆಂದು ಬಂದರೆ ಅವರ ಕಡೆಯಿಂದ ಮಂತ್ರ ಹಾಕಿಸುವದು, ಭಸ್ಮ ಹತ್ತಿಸುವದು, ಇಂಥಾದ್ದನ್ನೆಲ್ಲಾ ಮಾಡುತ್ತಾರೆ. ಇದರಿಂದ ಏನೂ ಪ್ರಯೋಜನವಿಲ್ಲ. ಮಕ್ಕಳಿಗೆ ಆಗಾಗ್ಗೆ. ಸ್ವಲ್ಪ ಎಣ್ಣೆಯನ್ನು ಹಚ್ಚಿ ಹದವಾದ ಬಿಸಿನೀರಿನಿಂದ ತೊಳೆಯುವದು ಒಳ್ಳೇದು. ಎಣ್ಣೆಯನ್ನು ಬಹಳವಾಗಿ ಹಚ್ಚಿದರೆ ತೊಳೆಯುವದಕ್ಕೆ ಶ್ರಮವಾಗಿ ಅದರ ಶೇಷ ಮೈಮೇಲೆ ನಿಂತರೆ ಬೆವರು ಹೊರಡುವ ದಾರಿ ಮುಚ್ಚಿ ಹೋಗುತ್ತದೆ. ಮಕ್ಕಳ ಕಣ್ಣಿಗೆ ಎಣ್ಣೆ ಹಾಕುವದು ಉಂಟು. ಇದರಿಂದ ಕಣ್ಣಿನಿಂದ ನೀರು ಹೊರಟು ಕಣ್ಣು ನಿರ್ಮಲವಾಗುತ್ತೆಂದು ಕೆಲವರು ಹೇಳುತ್ತಾರೆ. ಪರಂತು ಇದರಿಂದ ಮಕ್ಕಳು ಅಳುವದು ಹೊರತು ಬೇರೆ ಪ್ರಯೋಜನ ಕಾಣುವದಿಲ್ಲ. ಕೆಲವರು ಮಕ್ಕಳು ಎಷ್ಟು ಅತ್ತಾಗ್ಯೂ ಬಿಡದೆ ಮೈಯನ್ನು ತಿಕ್ಕಿತಿಕ್ಕಿ ನೋಯಿಸುತ್ತಾರೆ. ಮತ್ತೂ ಬಿಸಿಬಿಸಿಯಾಗಿರುವ ನೀರನ್ನು ಹಾಕುತ್ತಾರೆ. ಎಳೇ ಮಕ್ಕಳನ್ನು ಈಪ್ರಕಾರ ನೋಯಿಸಬಾರದು. ಮೈಯನ್ನು ಮೆತ್ತಗೆ ತಿಕ್ಕಿ ಬಹಳ ಬಿಸಿಯಿಲ್ಲದ ಹದವಾದ ನೀರನ್ನು ಹಾಕಿದರೆ ಮಕ್ಕಳು ಉಲ್ಲಾಸದಿಂದ ಇರುತ್ತಾರೆ. ಅವರ ಅವಯವದ ಯಾವ ಭಾಗದಲ್ಲಿಯೂ ಕೊಳೆಯು ಇಲ್ಲದಂತೆ ನೋಡಿಕೊಳ್ಳಬೇಕು. ಮಕ್ಕಳನ್ನು ಬಹಳ ಹೊತ್ತು ನೀರಿನಲ್ಲಿ ಇರಗೊಡಬಾರದು. ಅವರ ಬಟ್ಟೆಗಳು ಬಹಳ ನಿರ್ಮಲವಾಗಿ ಇರಬೇಕು. ಪ್ರಾಯೇಣ ಎಲ್ಲಾ ಸ್ತ್ರೀಯರಿಗೂ ಅವರ ಮಕ್ಕಳ ಮೈಮೇಲೆ ಒಡವೆಗಳನ್ನಿಟ್ಟು ಅಲಂಕಾರ ಮಾಡಬೇಕೆಂಬ ಆಶೆ ಬಹಳವಾಗಿ ಇರುತ್ತದೆಯೇ ಹೊರತು ಮಕ್ಕಳ ಶರೀರವನ್ನೂ ಅವರ ಬಟ್ಟೆಗಳನ್ನೂ ನಿರ್ಮಲವಾಗಿಡುವದರಲ್ಲಿ ಅಷ್ಟು

ಅವಶ್ಯಕತೆ ಬೀಳುವದಿಲ್ಲ. ಅಜ್ಞಾನಾವಸ್ಥೆಯಲ್ಲಿ ಮಕ್ಕಳ ಮೈಮೇಲೆ ಬಡವೆಗಳನ್ನು ಹಾಕುವದರಿಂದ ಅನೇಕ ಅನರ್ಥಗಳು ನಡೆಯುತ್ತವೆ. ಆದಕಾರಣ ಬಡವೆ ಹಾಕುವದನ್ನು ಬಿಟ್ಟು ಅವರ ಶರೀರವೂ ಅವರ ಬಟ್ಟೆಗಳೂ ಸ್ವಚ್ಛವಾಗಿರುವದನ್ನು ಮಕ್ಕಳ ತಾಯಿಗಳು ನೋಡಿಕೊಳ್ಳಬೇಕು. ಮಕ್ಕಳು ಹಾಸಿಗೆಯ ಮೇಲೆ ಮಲಮೂಲ ವಿಸರ್ಜನೆಯನ್ನು ಮಾಡಿ ಅದರ ಶೀತ ಮೈಗೆ ತಗಲಿದ ಕೂಡಲೆ ಅಳುತ್ತವೆ. ಆ ಬಟ್ಟೆಯನ್ನು ಕೂಡಲೆ ತೆಗದು ಬೇರೆ ಬಟ್ಟೆಗಳನ್ನು ಹಾಕಬೇಕು. ಮಕ್ಕಳ ಹೊಲಸು ಬಟ್ಟೆಗಳನ್ನು ಪ್ರತಿನಿತ್ಯವೂ ಒಗೆಯಬೇಕು.

ಕೆಲವರು ಮಕ್ಕಳು ಅತ್ತ ಕೂಡಲೆ ಅವು ಯಾಕೆ ಅಳುತ್ತವೆ? ಎಂದು ವಿಚಾರ ಮಾಡದೆ ಪದೇಪದೇ ಅವಕ್ಕೆ ಸ್ತನ್ಯವನ್ನು ಕೊಡುತ್ತಾರೆ. ಇದರಿಂದ ಮಕ್ಕಳಿಗೆ ಅಜೀರ್ಣವಾಗುತ್ತೆ. ಆದಕಾರಣ ಮಕ್ಕಳಿಗೆ ಸ್ತನ್ಯಪಾನ ಮಾಡಿಸುವದಕ್ಕೆ ಹೊತ್ತು ಗೊತ್ತು ಮಾಡಬೇಕು. ಎರಡು ತಾಸಿನ ವರಿಗಾದರೂ ತಿರುಗಿ ಹಾಲನ್ನು ಕುಡಿಸಬಾರದು. ಹೀಗೆ ಹೊತ್ತನ್ನು ಗೊತ್ತು ಮಾಡಿಕೊಂಡು ಹಾಲನ್ನು ಕುಡಿಸುವದ್ದರಿಂದ ಕಾಲಕಾಲಕ್ಕೆ ಹಸಿವೆಯಾಗಿ ಆರೋಗ್ಯವಾಗಿ ಯಿರುತ್ತವೆ. ಈ ನಡುವೇ ಪುನಃ ಅತ್ತರೆ ಹೊಟ್ಟೆ ಹಸಿವಿನಿಂದಲ್ಲ, ಅಳುವದಕ್ಕೆ ಇನ್ನೇನೋ ಕಾರಣ ಉಂಟೆಂದು ಯೋಚಿಸಿ ತಿಳಿದು ಅದರ ನಿವಾರಣೆಯನ್ನು ಮಾಡಬೇಕು. ಮಕ್ಕಳು ಅಳುವದಕ್ಕೆ ಹೊಟ್ಟೆ ಹಸಿವೆ ಒಂದೇ ಕಾರಣವಲ್ಲ. ಮಕ್ಕಳು ಸ್ವಸ್ಥವಾಗಿ ನಿದ್ದೆ ಮಾಡಲೆಂದು ಕೆಲವು ಸ್ತ್ರೀಯರು ಅಫೀಮು ಹಾಕುವದು ಉಂಟು. ಇದರಿಂದ ಅತಿ ಭಯಂಕರವಾದ ಪರಿಣಾಮಗಳುಂಟಾಗುತ್ತವೆ. ಮತ್ತನ್ನು ಉಂಟುಮಾಡುವ ಪದಾರ್ಥಗಳನ್ನು ಚಿಕ್ಕತನದಲ್ಲಿ ತಿನ್ನಲಿಕ್ಕೆ ಕಲಿತ ಅಭ್ಯಾಸವು ಬೇಗ ಬಿಡುವದಿಲ್ಲ. ಅಫೀಮನ್ನು ಹಾಕುವದರಿಂದ ಮಕ್ಕಳಿಗೆ ಅಮಲು ಉಂಟಾಗಿ ಅವುಗಳು ಸುಸ್ತಿನಿಂದ ಸುಮ್ಮನೆ ಬಿದ್ದಿರುತ್ತವೆ. ಹೀಗೆ ಮಾಡುವದರಿಂದ ಮಕ್ಕಳ ಸ್ವಾಭಾವಿಕವಾದ ಚಪಲತೆ ನಿಂತು ಹೋಗಿ ಜೀರ್ಣಶಕ್ತಿಯು ಕಡಿಮೆಯಾಗಿ ನಾನಾವಿಧಗಳಾದ ರೋಗಗಳು ಹುಟ್ಟುತ್ತವೆ. ಮಕ್ಕಳ ಶರೀರದ ವ್ಯಾಪಾರಗಳು ಸರಿಯಾಗಿ

ನಡೆಯುವಂತೆ ಅವಕಾಶ ಕೊಡಬೇಕು. ಮಕ್ಕಳಿಗೆ ನಿದ್ರೆ ಬಂದಾಗ ಮಲಗಿಸಬೇಕು. ಹಸಿವೆಯಾದಾಗ ಹೊಟ್ಟೆಗೆ ಕೊಡಬೇಕು. ಮಲಗಿದ್ದ ಮಕ್ಕಳನ್ನು ಆವೇಳೆಯಲ್ಲಿ ಎಬ್ಬಿಸಿ ತಿನ್ನಲಿಕ್ಕೆ ಕೊಡಬಾರದು. ಮಕ್ಕಳು ಕೈಗೆ ಸಿಕ್ಕಿದ ಮಣ್ಣು ಮುಂತಾದ್ದನ್ನು ತಿನ್ನುವದಕ್ಕೆ ಎತ್ನಿಸುತ್ತವೆ ಇದರಿಂದ ಹೊಟ್ಟೆಯಲ್ಲಿ ಜಂತುಗಳು ಹೆಚ್ಚುತ್ತವೆ. ಆದ್ದರಿಂದ ಮಣ್ಣು ಮುಂತಾದ್ದು ಅವುಗಳ ಕೈಗೆ ಸಿಕ್ಕದಂತೆ ನೋಡಿಕೊಳ್ಳಬೇಕು. ತಾಯಿ ತನ್ನ ಮಗುವನ್ನು ಸರ್ವದಾ ತನ್ನ ಕಣ್ಣೆದುರಿಗೆ ಇಟ್ಟುಕೊಂಡಿರಬೇಕು. ಮಕ್ಕಳ ಶರೀರಸ್ಥಿತಿ ಕೆಡದಂತೆ ಅವುಗಳ ಆಚರಣೆಯನ್ನೂ ತಮ್ಮ ಆಚರಣೆಯನ್ನೂ ಇಟ್ಟುಕೊಂಡಿರಬೇಕು. ಮಕ್ಕಳು ಆರೋಗ್ಯವಾಗಿರುವದಕ್ಕೆ ನಾಲ್ಕು ಮುಖ್ಯ ಸಾಧನಗಳುಂಟು. ಅವು ಯಾವವೆಂದರೆ :—

(೧.) ಶರೀರದ ಕೊಳೆಯನ್ನು ಆಗಾಗ್ಯೆ ತೊಳೆಯದೆ ಇದ್ದರೆ ಕಜ್ಜಿ, ಇಸಬು ಮುಂತಾದ ಚರ್ಮರೋಗಗಳು ಉಂಟಾಗುತ್ತವೆ. ಆದ್ದರಿಂದ ಪ್ರತಿನಿತ್ಯವೂ ನಿರ್ಮಲವಾಗಿ ತೊಳೆಯಬೇಕು. ನಿರ್ಮಲವಾದ ಬಟ್ಟೆಗಳನ್ನು ಹಾಕಬೇಕು. ಮಲಮೂತ್ರದಿಂದಲೂ ಬೆವರಿನಿಂದಲೂ ಎಣ್ಣೆಯಿಂದಲೂ ಮಲಿನವಾಗಿರುವ ಬಟ್ಟೆಗಳನ್ನು ಹಾಕಬಾರದು.

(೨.) ನಿರ್ಮಲವಾದ ಗಾಳಿಯಿಲ್ಲದೆ ದುರ್ಗಂಧದಿಂದ ಕೂಡಿ, ವಾಯು ಸಂಚಾರವಿಲ್ಲದ ಅತಿ ಸಂಕೋಚವಾದ ಕತ್ತಲೆಯ ಮನೆಯಲ್ಲಿ ಮಕ್ಕಳನ್ನು ಮಲಗಿಸ ಕೂಡದು. ಮನುಷ್ಯರ ಶರೀರದಿಂದ ಹೊರಕ್ಕೆ ಹೊರಡುವ ವಾಯುವು ವಿಷದ ಪರಮಾಣುಗಳಿಂದ ಕೂಡಿರುತ್ತದೆ. ಇಂಥಾ ವಾಯುವು ಉಛ್ವಾಸದಿಂದ ಶರೀರಕ್ಕೆ ಪ್ರವೇಶಿಸಿದರೆ ಮಕ್ಕಳಿಗೆ ರೋಗ ಉಂಟಾಗುತ್ತದೆ. ಆದಕಾರಣ ನಿರ್ಮಲವಾದ ಗಾಳಿ ಬರುವ ಸ್ಥಳದಲ್ಲಿ ಇಟ್ಟಿರಬೇಕು. ದೊಡ್ಡವರಿಗಿಂತ ಮಕ್ಕಳಿಗೆ ನಿರ್ಮಲವಾದ ಗಾಳಿಯು ಅವಶ್ಯಕವಾಗಿ ಬೇಕಾಗಿರುವದ್ದರಿಂದ ಅವಕಾಶವಿದ್ದರೆ ಬೆಳಗ್ಗೆ ಸಾಯಂಕಾಲ ಬೈಲಲ್ಲಿಯಾಗಲಿ ತೋಟದಲ್ಲಿಯಾಗಲಿ ಮಕ್ಕಳನ್ನು ನಿರ್ಮಲವಾದ ಗಾಳಿಯಲ್ಲಿ ತಿರಿಗಿಸಲಿಕ್ಕೆ ತಾಯಿ ಕರದುಕೊಂಡು ಹೋಗಬೇಕು. ಇಲ್ಲವೇ ಯಾರ ಸಂಗಡಲಾದರೂ ಕಳುಹಿಸಬೇಕು.

(೩.) ಹೊಟ್ಟೆಗೆ ಅನುಕೂಲವಾಗಿರುವ ಆಹಾರವನ್ನು ಕಾಲಕಾಲಕ್ಕೆ ಸಾಕಾದಷ್ಟು ಕೊಡಬೇಕು.

(೪.) ಬುದ್ಧಿಯು ಅಭಿವೃದ್ಧಿಯಾಗುವದಕ್ಕೋಸ್ಕರ ವೇಳವೇಳೆಗೆ ಸಾಕಾದಷ್ಟು ಹೊತ್ತು ನಿದ್ರೆ ಮಾಡಿಸಬೇಕು.

ಈ ಮೇರಿಗೆ ಮಕ್ಕಳನ್ನು ಅವರ ತಾಯಿಗಳು ಪೋಷಣೆ ಮಾಡ ಬೇಕು. ಈ ವಿಷಯದಲ್ಲಿ ತಮ್ಮ ಮನಸ್ಸಿಗೆ ಬಂದಂತೆಯೂ ವರ್ತಿಸ ಕೂಡದು. ಸಿಕ್ಕಿಸಿಕ್ಕಿದವರು ಹೇಳಿದಂತೆ ದಿವಸಕ್ಕೆ ಒಂದೊಂದು ವಿಧ ವಾಗಿ ನಡೆಯಬಾರದು. ಮಕ್ಕಳ ಸಂರಕ್ಷಣೆಯ ವಿಷಯದಲ್ಲಿ ತಿಳಿಯ ಬೇಕಾದ ಭಾಗಗಳನ್ನೆಲ್ಲಾ ತಿಳಿದುಕೊಂಡು ಅದರಂತೆ ನಡೆದುಕೊಳ್ಳ ಬೇಕು. ಮಕ್ಕಳನ್ನು ಪೋಷಣೆ ಮಾಡುವದರಲ್ಲಿ ತಾಯಿಗೆ ಬಹಳ ಶ್ರಮವಾಗುತ್ತೆ. ಆದಾಗ್ಯೂ ಈ ಕೆಲಸದಲ್ಲಿ ಸ್ವಲ್ಪವೂ ಪಾಲುಮಾರ ಬಾರದು. ಮಕ್ಕಳನ್ನು ಸಾಕತಕ್ಕದ್ದು ಒಂದು ವಿಧವಾದ ಸಾಲವನ್ನು ತೀರಿಸತಕ್ಕದ್ದೆಂದೆಣಿಸಿ ಆ ವಿಷಯದಲ್ಲಿ ತಮಗೆ ಯಾವ ಸುಖವಿಲ್ಲದಿದ್ದರೂ ಅದಕ್ಕಾಗಿ ಯೋಚನೆ ಮಾಡಬಾರದು. ನಮ್ಮನ್ನು ಬಾಲ್ಯದಲ್ಲಿ ಸಂರಕ್ಷಿ ಸಿದ ತಾಯಿತಂದೆಗಳ ಸಾಲವನ್ನು ನಾವು ತೀರಿಸುವದಕ್ಕಾಗುವದಿಲ್ಲ. ಆದರೆ ನಮ್ಮ ಕೈಲಾದ ಮಟ್ಟಿಗೂ ಅವರ ಶುಶ್ರೂಷೆಯನ್ನು ಮಾಡುವದ ರಿಂದಲೂ ನಮ್ಮ ಮಕ್ಕಳನ್ನು ನಾವು ಶ್ರಮಪಟ್ಟು ಪೋಷಿಸುವದ್ದರಿಂದಲೂ ಸ್ವಲ್ಪ ಮಟ್ಟಿಗಾದರೂ ತಾಯಿತಂದೆಗಳ ಋಣವನ್ನು ತೀರಿಸಬಹುದು.

ಮಕ್ಕಳು ಬೆಳೆದ ಹಾಗೆಲ್ಲಾ ನಡೆನುಡಿಗಳನ್ನು ಕಲಿಯುತ್ತಾ ಹೋಗುತ್ತಾರೆ. ಆ ಕಾಲದಲ್ಲಿ ಅವರ ನಡತೆ ಒಳ್ಳೇದಾಗುವದಕ್ಕಾಗಿ ತಾಯಿಗಳು ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಮನುಷ್ಯನು ದೊಡ್ಡವನಾದಾಗ ಅವನಲ್ಲಿರುವ ಗುಣಕ್ಕನುಸಾರವಾಗಿ ಒಳ್ಳೇ ಫಲವಾಗಲಿ ಕೆಟ್ಟ ಫಲವಾಗಲಿ ಲಭಿಸುವದು. ಬಾಲ್ಯದಲ್ಲಿ ಮಕ್ಕಳ ಹೃದಯವೆಂಬ ಭೂಮಿಯಲ್ಲಿ ಸದ್ಗುಣವೆಂಬ ಬೀಜವನ್ನು ಬಿತ್ತಿದರೆ ಸದಾಚರಣೆಯೆಂಬ ಗಿಡ ಹುಟ್ಟಿ ಅದರಿಂದ ಮಾನ, ಧನ, ವಿದ್ಯೆ, ಕೀರ್ತಿ, ಸುಖಗಳೆಂಬ ಫಲಗಳು

ಕ್ಕೆ ಸೇರುವವು. ಬಾಲ್ಯದಲ್ಲಿ ದುರ್ಗುಣವೆಂಬ ಬೀಜವನ್ನು ಬಿತ್ತಿದರೆ ಅವಿವೇಕವೆಂಬ ಗಿಡವು ಹುಟ್ಟಿ ಅದರಿಂದ ಉಂಟಾಗುವ ದುಃಖ, ಭಯ, ಅವಮಾನ, ದಾರಿದ್ರ್ಯ, ಪಾಪಗಳೆಂಬ ಫಲಗಳನ್ನು ಅನುಭವಿಸಬೇಕಾಗುತ್ತೆ.

ಬಾಲ್ಯಾವಸ್ಥೆಯೂ ಅದರ ಅಸ್ಫುಟ ವೃತ್ತಿಯೂ ಮಣ್ಣಿನ ಮುದ್ದೆಯಂತೆ ಇರುವದ್ದರಿಂದ ಅವನ್ನು ಹ್ಯಾಗೆ ಬೇಕಾದರೂ ತಿರುಗಿಸಬಹುದು. ಮನುಷ್ಯನು ಪ್ರಬುದ್ಧನಾದ ಮೇಲೆ ಗುಣದೋಷಗಳಿಂದ ಉಂಟಾಗುವ ಕೀರ್ತಿ ಅವಮಾನಗಳಿಗೆ ಅವನು ಕಾರಣನಲ್ಲ. ಬಾಲ್ಯದಲ್ಲಿ ಅವನನ್ನು ಪೋಷಿಸಿ ನಡೆ ನುಡಿಗಳನ್ನು ಕಲಿಸಿ ಮಾರ್ಗಕ್ಕೆ ಹತ್ತಿಸಿದವರೇ ಕಾರಣರಾಗುತ್ತಾರೆ. ಮಕ್ಕಳು ಪ್ರಾಯಶಃ ಬಾಲ್ಯದಲ್ಲಿ ತಾಯಿ ಸಮೀಪದಲ್ಲಿ ಇರುವದ್ದರಿಂದ ಅವಳಂತೆಯೇ ನಡೆ ನುಡಿಗಳನ್ನು ಕಲಿಯುತ್ತಾರೆ.

ಬಾಲ್ಯದಲ್ಲಿ ಮಕ್ಕಳ ಹೃದಯದಲ್ಲಿ ಸದ್ಗುಣದ ಬೀಜವನ್ನು ಬಿತ್ತುವ ಕೆಲಸವು ಮುಖ್ಯವಾಗಿ ತಾಯಿಗೆ ಸೇರಿದ್ದು. ತಾಯಿ ಮಕ್ಕಳ ದೋಷವನ್ನು ಬಾಲ್ಯದಲ್ಲಿಯೇ ನಿವಾರಣೆ ಮಾಡದಿದ್ದರೆ ಅದರಿಂದುಂಟಾಗುವ ಘೋರವಾದ ಪರಿಣಾಮಕ್ಕೆ ಅವಳೇ ಕಾರಣಭೂತಳೆಂಬುವದಕ್ಕೆ ಅನೇಕ ದೃಷ್ಟಾಂತಗಳಿವೆ. ಮಾತು ಕಲಿಯುವದಕ್ಕೆ ಉಪಕ್ರಮವಾಗಿ ಚನ್ನಾಗಿ ಸ್ವಬುದ್ಧಿಯುಂಟಾಗುವ ವರಿಗೂ ಮಕ್ಕಳಿಗೆ ಒಳ್ಳೆ ನಡತೆಯನ್ನು ಕಲಿಸತಕ್ಕದ್ದು ತಾಯಿಗೆ ಮುಖ್ಯವಾದ ಕೆಲಸವು.

ತಾಯಿಯು ಮೊದಲು ತಾನು ಒಳ್ಳೇ ನಡತೆಯುಳ್ಳವಳಾಗಿ ಇರಬೇಕು. ಮನೆಯಲ್ಲಿರುವ ಇತರರ ಆಚರಣೆಯು ಚನ್ನಾಗಿರುವಂತೆ ನೋಡಿಕೊಳ್ಳಬೇಕು. ನೆರೆಹೊರೆಯವರಲ್ಲಿ ಬಳಕೆಯನ್ನು ಇಡಬೇಕಾದರೆ ಒಳ್ಳೆಯವರ ಸಂಗಡಲೇ ಇಡಬೇಕು. ಅಸಭ್ಯರಾದವರ ಸಂಗಡ ಬಳಕೆಯನ್ನು ಮಾಡಬಾರದು. ತಾಯಿ ಮಾತನಾಡಿದಂತೆ ಮಕ್ಕಳೂ ಆಡುತ್ತಾರೆ. ತಾಯಿ ಎಂಥವರ ಸಂಗಡ ನಡತೆಯನ್ನು ಬಳಸುತ್ತಾಳೋ ಮಕ್ಕಳು ಸಹ ಅಂಥವರ ಸಂಗಡ ನಡತೆಯನ್ನು ಬಳಸುತ್ತಾರೆ. ಬಾಲ್ಯದಲ್ಲೇ ಮಕ್ಕಳಿಗೆ

ಕೆಟ್ಟ ಸಹವಾಸ ಬಿದ್ದರೆ ಆಗ ಕಲಿತ ದುರ್ಬುದ್ಧಿಯು ಸ್ಥಿರತವಾಗಿ ನಿಲ್ಲುತ್ತೆ. ಪ್ರೌಢರಾದ ಮೇಲೆ ಈ ದುರ್ಬುದ್ಧಿಯನ್ನು ಬಿಡಬೇಕೆಂದು ಯತ್ನ ಮಾಡಿದಾಗ್ಯೂ ಆಗುವದಿಲ್ಲ. ರಷ್ಯಾದೇಶದಲ್ಲಿ ಪೂರ್ವದಲ್ಲಿ ಪೀಟರ್ ದಿ ಗ್ರೇಟ್ ಎಂಬ ಚಕ್ರವರ್ತಿಯಿದ್ದನು. ಅವನು ಆದೇಶಕ್ಕೆ ಅಗಣಿತವಾದ ಹಿತವನ್ನು ಉಂಟು ಮಾಡಿದನು. ಆತನು ಸ್ವತಃ ಅನೇಕ ವಿದ್ಯೆಗಳನ್ನು ಕಲಿತು ತನ್ನನ್ನು ಸಮಸ್ತ ದೇಶದ ಧೊರೆಗಳೂ ಅನುಕರಿಸುವದಕ್ಕೆ ಯೋಗ್ಯವಾದ ನಡತೆಯನ್ನು ನಡೆದು ಲೋಕದಲ್ಲಿ ಶಾಶ್ವತವಾದ ಕೀರ್ತಿಯನ್ನು ಸ್ಥಾಪಿಸಿದನು. ಆತನಿಗೆ ಸ್ವಭಾವತಃ ಒಳ್ಳೇ ಬುದ್ಧಿಯಿದ್ದಾಗ್ಯೂ, ಬಾಲ್ಯದಲ್ಲಿ ಒಳ್ಳೇ ಸಹವಾಸ ಸಿಕ್ಕದೆ ಇದ್ದದ್ದರಿಂದ ಆತನಲ್ಲಿ ಕಾಮಕ್ರೋಧಗಳು ಬಹು ಪ್ರಬಲವಾಗಿ ಇದ್ದವು. ಅವುಗಳು ಉದ್ರೇಕವಾದಾಗ ಅದು ತನ್ನ ಪದವಿಗೆ ಅನುಚಿತವಾದ್ದೆಂದು ತಿಳಿದು ಯಿದ್ದಾಗ್ಯೂ ಬಾಲ್ಯದ ಕೆಟ್ಟ ಸಹವಾಸದಿಂದ ತನಗೆ ಉಂಟಾಗಿದ್ದ ಈ ದುರ್ನಡತೆಗಳನ್ನು ಎಷ್ಟು ಪ್ರಯತ್ನಪಟ್ಟಾಗ್ಯೂ ಸಂಪೂರ್ಣವಾಗಿ ಬಿಡುವದಕ್ಕೆ ಆಗುತ್ತಿರಲಿಲ್ಲ. ಅದಕ್ಕಾಗಿ ಅವನು ನನ್ನ ಬಾಲ್ಯದಲ್ಲಿ ಒಳ್ಳೇ ಸಹವಾಸವು ದೊರೆಯದೆ ಇದ್ದದ್ದರಿಂದ ಈರೀತಿ ಆಯಿತೆಂದು ಪದೇಪದೇ ಪಶ್ಚಾತ್ತಾಪಪಡುತ್ತಾ ಇದ್ದನು. ಆತನಿಗೆ ಬಾಲ್ಯದಲ್ಲಿ ಒಳ್ಳೇ ಸಹವಾಸ ಮಾತ್ರ ಸಿಕ್ಕಿದ್ದರೆ ಅವನು ಸರ್ವಾಂಶದಲ್ಲಿಯೂ ನಿರ್ದೋಷಿಯಾಗಿ ದೇವರಂತೆ ಪೂಜಿಸಲ್ಪಡುತ್ತಿದ್ದನು. ಆದ್ದರಿಂದ ಹುಡುಗರು ಕೆಟ್ಟವರಾಗುವದು ಅವರ ತಪ್ಪಲ್ಲ. ಅವರನ್ನು ಪೋಷಣೆ ಮಾಡಿದವರ ತಪ್ಪಾಗಿರುತ್ತೆ.

ಮಕ್ಕಳು ಮಾತಾಡುವದಕ್ಕೆ ಆರಂಭವಾಗುತ್ತಲೇ ಅವರ ತಾಯಿಗಳು ಅವರಿಗೆ ಸತ್ಯವಾಗಿಯೂ ಸಭ್ಯವಾಗಿಯೂ, ಮಧುರವಾಗಿಯೂ, ಇರುವ ಮಾತುಗಳನ್ನು ಕಲಿಸಬೇಕು. ಮಕ್ಕಳ ಎದುರಿಗೆ ತಾವು ಯಂದಿಗೂ ಅಸತ್ಯವಾದ ಅಥವಾ ಕ್ರೂರವಾದ ಮಾತುಗಳನ್ನು ಆಡಕೂಡದು. ಹೀಗೆ ಇನ್ಯಾರಾದರೂ ಮಾತನಾಡುತ್ತಿದ್ದರೂ ಅವರ ಸಮೀಪಕ್ಕೆ ಮಕ್ಕಳನ್ನು ಹೋಗಗೊಡಬಾರದು. ಅನೇಕ ಸ್ತ್ರೀಯರು ತಾವು ಕೆಟ್ಟಕೆಲಸವನ್ನು ಮಾಡಿ ಅದನ್ನು ಇತರರಿಗೆ ಹೇಳಬೇಡಿರೆಂದು ಮಕ್ಕಳಿಗೆ ಭೋಧಿಸಿ ಸುಳ್ಳು ಹೇಳು

ವದನ್ನು ತಾವೇ ಕಲಿಸುತ್ತಾರೆ. ಮಕ್ಕಳು ಬಾಲ್ಯದಲ್ಲಿ ಹೀಗೆ ಕಲಿತು ಮುಂದೆ ಸುಳ್ಳಾಡುತ್ತಾ ಹೋದರೆ ಆ ತಪ್ಪು ತಾಯಿದಲ್ಲದೆ ಮಕ್ಕಳದಲ್ಲ. ನಾಲ್ಕು ಜನ ಹೆಂಗಸರು ಒಂದುಕಡೆ ಸೇರಿದಕೂಡಲೆ ನೆರೆ ಹೊರೆಯವರ ಮೇಲಣ ದೂರನ್ನೂ, ಮನೆಯವರ ಮೇಲಣ ದೂರನ್ನೂ, ಅಂತರಂಗದ ಮಾತುಗಳನ್ನೂ, ಪರಸ್ಪರ ದೋಷೋದ್ಘಾಟನೆಯ ಮಾತುಗಳನ್ನೂ, ಅಶ್ರಾವ್ಯವಾಗಿಯೂ ಲಜ್ಜಾಸ್ಪದಗಳಾಗಿಯೂ ಇರುವ ಮಾತುಗಳನ್ನೂ, ಆಡುವದಕ್ಕೆ ಪ್ರಾರಂಭಿಸುತ್ತಾರೆ. ಆಗ ಅವರ ಸಮೀಪದಲ್ಲಿ ಮಕ್ಕಳಿದ್ದರೆ ಈ ಮಾತುಗಳೆಲ್ಲಾ ಅವರ ಕಿವಿಗೆ ಬಿದ್ದೇ ಬೀಳುತ್ತವೆ. ಈ ಮಾತು ಗಳೆಲ್ಲಾ ಅವರಿಗೆ ಚನ್ನಾಗಿ ತಿಳಿಯದೇ ಯಿದ್ದಾಗ್ಯೂ ವಿಷಯಮಾತ್ರ ಮನಸ್ಸಿಗೆ ಹೊಕ್ಕು ಅದರ ಅರ್ಥವು ಕಾಲಕ್ರಮೇಣ ತಿಳಿದು ತಾವು ಕೇಳಿದ ಪ್ರಕಾರವೇ ನಡೆಯುವದಕ್ಕೆ ಆರಂಭಿಸುತ್ತಾರೆ. ಅನೇಕರು ಸಾಧಾರಣವಾಗಿ ಮಾತನಾಡುವಾಗ ಮಕ್ಕಳನ್ನೂ ಇತರರನ್ನೂ ನಾನಾವಿ ಧವಾಗಿ ಬಯ್ಯುತ್ತಾರೆ. ಹೀಗೆ ಬಯ್ಯುವದನ್ನು ಕೇಳಿ ಮಕ್ಕಳು ಸಹ ಅದರಂತೆ ಬಯ್ಯುವದನ್ನು ಕಲಿಯುತ್ತಾರೆ. ಇದಲ್ಲದೆ ದೊಡ್ಡ ವರಾಗಿಯೂ ಜ್ಞಾನಿಗಳಾಗಿಯೂ ಇತರರಿಗೆ ಸದುಪದೇಶವನ್ನು ಮಾಡು ವವರಾಗಿಯೂ ಇರುವ ಅನೇಕರು ಬಾಲ್ಯದ ದುರಭ್ಯಾಸದಿಂದ ಬೈಯ್ಯದೇ ಇರುವದಕ್ಕೆ ಆಗದೇ ಇರುವದನ್ನು ನಾನು ನೋಡಿದ್ದೇನೆ. ಈಪ್ರಕಾರ ತಾವು ಮಾತನಾಡುವದು ಅಸಂಗತವೆಂದು ತಿಳಿಯದೆ ದೊಡ್ಡವರ ಎದುರಿಗೂ ಹೆಂಗಸರ ಎದುರಿಗೂ ಮಕ್ಕಳ ಎದುರಿಗೂ ಆಡುತ್ತಾರೆ. ವಿದ್ಯಾರ್ಥಿಗಳು ದಾರಿತಪ್ಪಿದರೆ ಅವರನ್ನು ಮಾರ್ಗಕ್ಕೆ ತಂದು ಜ್ಞಾನೋಪ ದೇಶವನ್ನು ಮಾಡಿ ಭವಿಷ್ಯಜ್ಜಗತ್ತನ್ನು ಉನ್ನತಿಗೆ ತರುವವರು ಕೂಡಾ ಅಕ್ಕಾ, ಅಮ್ಮಾ, ಎಂದು ಬಯ್ಯುತ್ತಾರೆ. ದುರ್ದಶೆಯಲ್ಲಿರುವ ಈ ನಮ್ಮ ದೇಶವು ಉದ್ಧಾರವಾಗುವದಕ್ಕಾಗಿ ಇಂಥಾ ದುರ್ನಡತೆಗಳನ್ನೆಲ್ಲಾ ಬಿಡಬೇಕು. ಬೇವಿನಬೀಜವನ್ನು ಹಾಕಿ ಮಾವಿನಹಣ್ಣು ಆಗಬೇಕೆಂದರೆ ಆಗಲಾರದು. ಒಳ್ಳೇಮಾತನ್ನು ಆಡುವದರಿಂದ ತನಗೂ ಇತರರಿಗೂ ಉಂಟಾಗುವ ಸೌಖ್ಯವು ಇನ್ಯಾತರಿಂದಲೂ ಉಂಟಾಗದು. ಇದರಂತೆಯೇ

ಕೆಟ್ಟಮಾತುಗಳನ್ನು ಆಡುವದರಿಂದ ಉಂಟಾಗುವ ಕೆಡಕು ಇನ್ಯಾತರಿಂದಲೂ ಉಂಟಾಗಲಾರದು. ಧನಬಲ ಮೊದಲಾದ ಎಲ್ಲಾ ಬಲಗಳಿಗಿಂತಲೂ ವಾಗ್ಬಲವೇ ಹೆಚ್ಚಾದದ್ದು. ಆದ್ದರಿಂದ ಬಾಲ್ಯದಿಂದಲೂ ಮಕ್ಕಳಿಗೆ ಸತ್ಯವಾಗಿಯೂ ಶುದ್ಧವಾಗಿಯೂ ಸೌಮ್ಯವಾಗಿಯೂ ಮಧುರವಾಗಿಯೂ ಮಾತಾಡುವದನ್ನು ಕಲಿಸಬೇಕು. ನಮ್ಮ ದೇಶದಲ್ಲಿ ಮಕ್ಕಳಿಗೆ ಮೊದಲು ಮಾತು ಬಂದಕೂಡ್ಲೆ ವಿನೋದಕ್ಕಾಗಿ "ಅವನ ಕಣ್ಣು ಹ್ಯಾಗಿದೆ ತೋರಿಸು, ಅವನು ನಡೆಯುವದು ಹ್ಯಾಗೆ, ಮದುವೆ ಮಾಡುವದು ಯಾವಾಗ ಎಂದು ನಿಂಮಂಮನನ್ನು ಮುಖದ ಮೇಲೆ ಹೊಡೆ, ಅವರನ್ನು ಬಯ್ಯಿ, ಒಬ್ಬರೂ ಕಾಣದಂತೆ ಅದನ್ನು ತೆಗೆದುಕೊಂಡು ಬಾ" ಎಂಬ ಮಾತುಗಳನ್ನು ಹೇಳಿಕೊಡುತ್ತಾರೆ. ಹೀಗೆ ಹೇಳಿಕೊಡುವದರಿಂದ ಮುಂದೆ ಆಗುವ ಅಪಾಯವೂ ದುಷ್ಟಪರಿಣಾಮವೂ ಅವರಿಗೆ ಗೊತ್ತಾಗುವದಿಲ್ಲ. ವಿಷವೃಕ್ಷದ ಬೀಜವು ಸಾಸುವೆಯಷ್ಟು ಸಣ್ಣದಾಗಿದ್ದಾಗ್ಯೂ ಅದನ್ನು ಬಿತ್ತಿದಮೇಲೆ ಅದು ದೊಡ್ಡಮರವಾಗಿ ಫಲಿಸಿದ ಮೇಲೆ ಅದರ ಫಲದಿಂದ ಅನೇಕ ಪ್ರಾಣಿಗಳು ನಾಶವಾಗುತ್ತವೆ. ಬೆಟ್ಟದಷ್ಟು ಎತ್ತರವಾಗಿರುವ ಒಣಗಿದ ಹುಲ್ಲಿನಮೆದೆಗೆ ಒಂದು ಸಣ್ಣಕಿಡಿ ಬಿದ್ದಾಗ್ಯೂ ಆ ಹುಲ್ಲೆಲ್ಲಾ ಸುಟ್ಟು ಬೂದಿಯಾಗುತ್ತೆ. ಇದರಂತೆಯೇ ಬಾಲ್ಯದಲ್ಲಿ ಕಲಿತ ಸಣ್ಣಸಣ್ಣ ಕೆಟ್ಟಮಾತುಗಳಿಂದಲೂ ದುರಾಚಾರದಿಂದಲೂ ಉತ್ತರೋತ್ತರ ದೇಶಕ್ಕೇನೇ ಹಾನಿಯುಂಟಾಗುವದು. ಬಂಗಾಳ ದೇಶದ ನವಾಬನಾದ ಸುರಾಜ ಉದ್ದೌಲ ಎಂಬುವನು ತನ್ನ ಅಜ್ಜನಲ್ಲಿ ಮುದ್ದಿನಿಂದ ಬೆಳದು, ದುಸ್ಸಹವಾಸಕ್ಕೆ ಬಿದ್ದದ್ದರಿಂದ ಅವನ ದೇಶವು ಪರಾಕ್ರಾಂತವಾಗಿ, ಅವನು ರಾಜ್ಯಭ್ರಷ್ಟನಾದದ್ದು ಚರಿತ್ರೆಯನ್ನು ಓದಿ ನೋಡಿದರೆ ಎಲ್ಲರಿಗೂ ಗೊತ್ತಾಗುತ್ತದೆ. ಈ ಜಗತ್ತಿನಲ್ಲಿ ಯಾವದೂ ಒಂದೇಸಾರಿ ದೊಡ್ಡದಾಗುವದಿಲ್ಲ; ಸಣ್ಣದಾಗಿದ್ದು ಬರಬರ ದೊಡ್ಡದಾಗಿ ಬೆಳೆಯುತ್ತದೆ. ಹಾವಿನ ಮರಿ ಸಣ್ಣದೆಂದು ಉದಾಸೀನಮಾಡಿ ಬಿಟ್ಟದ್ದೇ ಆದರೆ ಅದು ಮುಂದೆ ಘೋರವಾದ ವಿಷಸರ್ಪವಾಗದೆ ತಪ್ಪದು. ಆದ್ದರಿಂದ ದುರ್ಗುಣದ ಅಂಕುರವನ್ನು ಕಂಡಕೂಡಲೇ ಮೂಲೋತ್ಪಾಟನೆಯನ್ನು ಮಾಡಬೇಕು.

ಸಣ್ಣದಾಗಿದ್ದಾಗ ಕಿತ್ತುಹಾಕುವದಕ್ಕೆ ಕಷ್ಟವಾಗುವದಿಲ್ಲ, ದೊಡ್ಡದಾದ ಮೇಲೆ ಅಸಾಧ್ಯವಾಗಿ ಅದರ ನೆರಳಿಗೂ ಹೋಗುವದಕ್ಕಾಗುವದಿಲ್ಲ. ಅದ್ದರಿಂದ ಬಾಲ್ಯದಲ್ಲಿಯೇ ಹುಡುಗರಿಗೆ ಯಾವ ದುರಭ್ಯಾಸವೂ ಉಂಟಾಗದಂತೆ ನೋಡಿಕೊಳ್ಳಬೇಕು.

ಹುಡುಗರನ್ನು ಕೆಟ್ಟಸಹವಾಸಕ್ಕೆ ಬಿಡಬಾರದು. ಹುಡುಗರು ಇತರ ಹುಡುಗರ ಸಂಗಡ ಆಡುವದಕ್ಕೆ ಹೋಗುತ್ತವೆ. ಆ ಹುಡುಗರು ಕೆಟ್ಟವರಾಗಿದ್ದರೆ ಅವರ ಸಂಗಡ ಆಡುವದಕ್ಕೂ ಬಿಡಬಾರದು. ಹುಡುಗರಿಗೂ ದೊಡ್ಡವರಿಗೂ ಸಹವಾಸಕ್ಕೆ ತಕ್ಕ ಗುಣಗಳು ಬರುತ್ತವೆ. ಗುಣಗಳು ಶಿಕ್ಷೆಯಿಂದ ಬರುವದಕ್ಕಿಂತಲೂ ಸಹವಾಸದಿಂದ ಬೇಗ ಬರುತ್ತವೆ. ಯಾತಕ್ಕೆಂದರೆ ಮನುಷ್ಯರಿಗೆ ಅನುಕರಣ ಶಕ್ತಿಯು ಸ್ವಭಾವಸಿದ್ಧವಾಗಿ ಇರುವದರಿಂದ ಮತ್ತೊಬ್ಬರು ಮಾಡುವಂತೆಯೇ ತಾವೂ ಮಾಡಬೇಕೆನ್ನುತ್ತಾರೆ. ಸಣ್ಣ ಹುಡರಿಗೆ ಬುದ್ಧಿಯು ಪಕ್ವವಾಗಿ ಇರುವದಿಲ್ಲ. ಅದ್ದರಿಂದ ಅವರಿಗೆ ಇದು ಒಳ್ಳೇದು, ಇದು ಕೆಟ್ಟದ್ದು ಎಂಬುವ ತಿಳುವಳಿಕೆಯೂ ಇರುವದಿಲ್ಲ. ಅವರ ಸಹವಾಸದಲ್ಲಿ ಇರುವವರು ಹ್ಯಾಗೆ ನಡೆಯುತ್ತಾರೋ ಅದೇ ಒಳ್ಳೇದೆಂದು ತಿಳಿದುಕೊಂಡು ತಾವೂ ಹಾಗೆಯೇ ನಡೆಯುತ್ತಾರೆ. ಹುಡುಗರು ತಮ್ಮ ಸಾಮೀಪ್ಯವನ್ನು ಬಿಟ್ಟುಹೋಗದಂತೆ ನೋಡಿಕೊಳ್ಳಬೇಕು. ಅವರನ್ನು ಸರ್ವದಾ ತಮ್ಮ ಆಜ್ಞೆಯಲ್ಲಿಯೇ ಇಟ್ಟಿರಬೇಕು. ಕೆಲವರು ಹುಡುಗರಿಗೆ ಭಯವಿರಬೇಕೆಂದು ಅವರನ್ನು ಮನಸ್ಸಿಗೆ ಬಂದಂತೆ ಹೊಡೆದು ಅವರ ಮನಸ್ಸನ್ನು ಕೆಡಿಸುತ್ತಾರೆ. ನಿಷ್ಕಾರಣವಾಗಿ ಹೊಡೆದು ಬಡಿದು ದಂಡಿಸುವದರಿಂದ ಮಕ್ಕಳಿಗೆ ತಾಯಿಮೇಲೆ ಪ್ರೇಮವು ಕಡಿಮೆಯಾಗುತ್ತೆ. ಹೊಡೆಯಿಸಿ ಕೊಳ್ಳುವದು ಅಭ್ಯಾಸವಾದ ಮೇಲೆ ಹುಡುಗರು ಮೊಂಡರಾಗಿ ಯಾವದಕ್ಕೂ ಬಗ್ಗುವದಿಲ್ಲ. ಯಾರನ್ನೇ ಆಗಲಿ ಕ್ರೂರತನದಿಂದ ತಮ್ಮ ಸ್ವಾಧೀನ ಪಡಿಸಿಕೊಳ್ಳುವದಕ್ಕೆ ಆಗುವದಿಲ್ಲ. ಸಾಮ್ಯತನದಿಂದ ಸಿಂಹದಂಥಾ ಕ್ರೂರಜಂತುವನ್ನೂ ಸ್ವಾಧೀನ ಪಡಿಸಿಕೊಳ್ಳಬಹುದು. ಅದ್ದರಿಂದ ಸಾಧ್ಯವಾದ ಮಟ್ಟಿಗೂ ಸಾಮ್ಯತನದಿಂದ ಸದುಪದೇಶವನ್ನು ಮಾಡಿ ಹುಡುಗರನ್ನು ಮಾರ್ಗಕ್ಕೆ ತರಬೇಕು. ಇದರಿಂದಲೂ ಆಗದೆ ಇದ್ದರೆ

ಅದಕ್ಕೆ ತಕ್ಕ ಉಪಾಯವನ್ನು ಮಾಡಬೇಕು. ಮಕ್ಕಳನ್ನು ಅಪರಾಧವಿಲ್ಲದೆ ದಂಡಿಸಬಾರದು. ಇತರರ ಅಪರಾಧಕ್ಕಾಗಲಿ ತನಗೆ ಕೋಪಬಂದದ್ದಕ್ಕಾಗಲಿ ಮಕ್ಕಳನ್ನು ದಂಡಿಸಬಾರದು. ಮಕ್ಕಳನ್ನು ಬಹಳವಾಗಿ ಲಾಲಿಸಿದರೆ ದುರ್ಮಾರ್ಗರಾಗಿ ಹೇಳಿದ ಮಾತನ್ನು ಕೇಳುವದಿಲ್ಲ. ಆದಕಾರಣ ಅವರಲ್ಲಿ ಅತಿಮೃದುತ್ವವನ್ನೂ ಅಥವಾ ಅತಿಕ್ರೂರತನವನ್ನೂ ತೋರಿಸದೆ ಮಧ್ಯಸ್ಥವಾದ ಉಪಾಯದಿಂದ ಅವರನ್ನು ಮಾರ್ಗಕ್ಕೆ ತರಬೇಕು. ಮನುಷ್ಯನ ಮನಸ್ಸು ಬಾಲ್ಯಾವಸ್ಥೆಯಲ್ಲಿ ಸರಳವಾಗಿಯೂ ನಿರ್ಮಲವಾಗಿಯೂ ಇರುವಂತೆ ಇನ್ಯಾವ ಅವಸ್ಥೆಯಲ್ಲಿಯೂ ಇರುವದಿಲ್ಲ. ಈ ಬಾಲ್ಯಾವಸ್ಥೆಯಲ್ಲಿ ಅವರನ್ನು ಯಾವ ಮಾರ್ಗಕ್ಕೆ ಬೇಕಾದರೂ ಸುಲಭವಾಗಿ ತಿರುಗಿಸ ಬಹುದು. ಮಕ್ಕಳಿಗೆ ಬಾಲ್ಯದಲ್ಲಿ ಒಳ್ಳೇನಡತೆಯನ್ನು ಕಲಿಸತಕ್ಕದ್ದು ತಾಯಿ ಕೆಲಸವು. ತಾಯ ನಡತೆಯನ್ನು ಮಕ್ಕಳು ಅನುಸರಿಸಿ ಅದರಂತೆ ನಡೆಯುವದ್ದರಿಂದ ತಾಯನಡತೆ ಒಳ್ಳೇದಾಗಿದ್ದರೆ ಮಕ್ಕಳ ನಡತೆಯೂ ಒಳ್ಳೇದಾಗುತ್ತೆ. ತಾಯನಡತೆ ಕೆಟ್ಟದ್ದಾಗಿದ್ದರೆ ಮಕ್ಕಳ ನಡತೆಯೂ ಕೆಟ್ಟದ್ದಾಗುತ್ತೆ. ಒಂದುವೇಳೆ ಮಕ್ಕಳು ಸ್ವಭಾವತಃ ಕೆಟ್ಟವರಾಗಿದ್ದಾಗ್ಯೂ ತಾಯಿ ಒಳ್ಳೇನಡತೆಯವಳಾಗಿ ಇದ್ದರೆ ಅವಳನ್ನು ನೋಡಿ ಮಕ್ಕಳು ಮಾರ್ಗಕ್ಕೆ ಬರುತ್ತಾರೆ. ಸುಮಿತ್ರೆ, ವಿದುಳಾ, ಕುಂತೀ ಮುಂತಾದವರು ತಮ್ಮ ಮಕ್ಕಳನ್ನು ಅಭಿವೃದ್ಧಿಗೆ ತಂದಂತೆ ನಮ್ಮ ದೇಶದ ಸ್ತ್ರೀಯರು ತಮ್ಮ ಮಕ್ಕಳನ್ನು ಮುಂದಕ್ಕೆ ತರಬೇಕು. ಅನ್ಯರ ಮಕ್ಕಳನ್ನು ತಾವು ರಕ್ಷಿಸಬೇಕಾಗಿ ಬಂದಲ್ಲಿ ತಮ್ಮ ಮಕ್ಕಳಿಗೂ ಆ ಮಕ್ಕಳಿಗೂ ತಾರತಮ್ಯವನ್ನು ಎಣಿಸ ಬಾರದು. ಮಕ್ಕಳಿಗೆ ಒಬ್ಬರಿಗೊಬ್ಬರು ಜಗಳವಾಡುವದಕ್ಕೆ ಆಸ್ಪದವನ್ನು ಕೊಡಬಾರದು. ಬಾಲ್ಯದಲ್ಲಿ ಆಡಿದ ಜಗಳದಿಂದ ದೊಡ್ಡವರಾದ ಮೇಲೆ ಒಬ್ಬರಿಗೊಬ್ಬರು ಕೇಡನ್ನು ಉಂಟುಮಾಡುವದಕ್ಕೆ ಯತ್ನಿಸುವದೂ ಉಂಟು. ಆದ್ದರಿಂದ ಬಾಲ್ಯದಲ್ಲಿಯೇ ಹುಡುಗರು ಒಬ್ಬರಿಗೊಬ್ಬರು ಪ್ರೇಮದಿಂದಿರುವಂತೆ ಮಾಡಬೇಕು. ಕುಂತಿಯು ತನ್ನ ಮೂರುಮಂದಿ ಮಕ್ಕಳೊಡನೆ ತನ್ನ ಸವತಿಯು ಮಕ್ಕಳಿಬ್ಬರನ್ನು ಸಾಕಿದಳು. ದೊಡ್ಡವರಾಗಿ ರಾಜ್ಯಭಾರವನ್ನು ನಿರ್ವಹಿಸುವದಕ್ಕೆ

ಯೋಗ್ಯರಾಗುವ ವರಿಗೂ ಆಮೇಲೂ ಅವರಲ್ಲಿ ಪರಸ್ಪರ ವೈಷಮ್ಯ ಬರದಂತೆಯೂ, ಪರಸ್ಪರ ಪ್ರೇಮವು ದಿನೇದಿನೇ ಅಭಿವೃದ್ಧಿಯಾಗುವಂತೆಯೂ, ಅವರನ್ನು ಚನ್ನಾಗಿ ಶಿಕ್ಷಿಸಿ ಸ್ವ ಪರವೆಂಬ ಭೇದವಿಲ್ಲದೆ ನಡಿಸಿದಳು. ಆದ್ದರಿಂದ ಆ ಐದುಜನ ಅಂಣತಮ್ಮಂದರೊಳಗೆ ಒಬ್ಬರಲ್ಲೊಬ್ಬರಿಗೆ ಅತಿಶಯವಾದ ಪ್ರೇಮವಿತ್ತು. ಅವರಲ್ಲಿ ಪರಸ್ಪರ ವೈಮನಸ್ಯವಿಲ್ಲದ್ದರಿಂದಲೂ ಅವರು ಸುಶಿಕ್ಷಿತರಾಗಿ ಇದ್ದದ್ದರಿಂದಲೂ ಪ್ರಾರಂಭದಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಾಗ್ಯೂ ಆಕಾಲದಲ್ಲಿ ಧರ್ಮಮಾರ್ಗವನ್ನು ಬಿಡದೆ ಬಹು ಧೈರ್ಯಶಾಲಿಗಳಾಗಿ ಕೊನೆಗೆ ಸ್ವರ್ಗಸಮವಾದ ರಾಜ್ಯ ಸುಖವನ್ನು ಅನುಭವಿಸಿದರು.

ರಾಮನು ವನಕ್ಕೆ ಹೊರಟಾಗ ಅವನ ಸಂಗಡ ವನವಾಸಕ್ಕೆ ತಾನೂ ಹೋಗುವದಕ್ಕೆ ಲಕ್ಷ್ಮಣನು ತನ್ನ ತಾಯಾದ ಸುಮಿತ್ರೆಯು ಅಪ್ಪಣೆಯನ್ನು ಕೇಳಿದನು, ಆಕಾಲದಲ್ಲಿ ಆಕೆಯು ಪುತ್ರವಾತ್ಸಲ್ಯದಿಂದ ಮಗನನ್ನು ತಡೆಯದೆ ರಾಮನನ್ನು ತನ್ನ ಸವತಿಯ ಮಗನೆಂದೆಣಿಸದೆ ಹೋಗೆಂದು ಅಪ್ಪಣೆಯನ್ನು ಕೊಟ್ಟು, ರಾಮನನ್ನು ದಶರಥನಂತೆಯೂ ಸೀತೆಯನ್ನು ತನ್ನಂತೆಯೂ ಅಡವಿಯನ್ನು ಅಯೋಧ್ಯಾ ಪಟ್ಟಣದಂತೆಯೂ ಭಾವಿಸಿಕೊಂಡು ಸುಖವಾಗಿ ಹೋಗಿಬಾರೆಂದು ಹೇಳಿ ಕಳುಹಿಸಿದಳು. ಹೀಗೆ ಒಳ್ಳೇ ಉಪದೇಶವನ್ನು ಮಾಡಿ, ಕರ್ತವ್ಯವನ್ನು ತಿಳಿಸಿಕೊಟ್ಟು ಸನ್ಮಾರ್ಗವನ್ನು ತೋರಿಸಿಕೊಡುವ ಧರ್ಮಜ್ಞಳಾದ ತಾಯನ್ನು ಪಡೆದಿರುವ ಮಕ್ಕಳ ಪುಣ್ಯವನ್ನು ಎಷ್ಟೆಂದು ಹೇಳಬೇಕು.

ವಿದುಳಾ ಯೆಂಬ ರಾಜಸ್ತ್ರೀಗೆ ಸಂಜಯನೆಂಬ ಮಗನಿದ್ದನು. ಈಕೆಯ ಗಂಡನು ಶತ್ರುಗಳ ಸಂಗಡ ಕಾದಾಡಿ ಯುದ್ಧದಲ್ಲಿ ಮಡಿದನು. ಬಳಿಕ ಈಕೆಯು ಮಗನಿಗೆ ಚನ್ನಾಗಿ ಬುದ್ಧಿಯನ್ನು ಕಲಿಸಿದಳು. ಕೆಲವು ಕಾಲದ ಮೇಲೆ ಅವನು ದೊಡ್ಡವನಾಗಿ ರಾಜ್ಯವನ್ನು ಆಳುತ್ತಿರುವಾಗ ಅವನ ರಾಜ್ಯಕ್ಕೆ ಶತ್ರುಗಳು ಬಂದು ಮುತ್ತಲು ಆ ಕಾಲದಲ್ಲಿ ಸಂಜಯನು ತನ್ನ ಸೇನೆಯನ್ನೆಲ್ಲಾ ಕಟ್ಟಿಕೊಂಡು ಯುದ್ಧಕ್ಕೆ ಹೋಗಿ ನೋಡುವಲ್ಲಿ ತನ್ನ

ಸೇನೆಯು ಬಹಳ ಕಡಿಮೆಯಾಗಿಯೂ ಶತ್ರುಸೇನೆಯು ಬಹಳ ಹೆಚ್ಚಾಗಿಯೂ ಇದ್ದದ್ದರಿಂದ. ಭಯಪಟ್ಟು ಮನೆಗೆ ಬಂದು ಉತ್ಸಾಹಹೀನನಾಗಿ ಕೂತುಕೊಂಡಿದ್ದನು. ಇದನ್ನು ಕೇಳಿದ ಕೂಡಲೇ ತಾಯಿಯು ಮಗನ ಸಮೀಪಕ್ಕೆ ಬಂದು ಉತ್ಸಾಹವನ್ನು ಉಂಟುಮಾಡುವ ಮಾತುಗಳನ್ನು ಹೇಳಿದಳು. ಬಳಿಕ ಸಂಜಯನು ಧೈರ್ಯವನ್ನು ಅವಲಂಬಿಸಿ ತನ್ನಲ್ಲಿದ್ದ ಸ್ವಲ್ಪ ಸೇನೆಯಿಂದಲೇ ಶತ್ರುಗಳ ಸಂಗಡ ಯುದ್ಧವನ್ನು ಮಾಡಿ ಅವರನ್ನು ಸೋಲಿಸಿ ಜಯಭೇರಿಯನ್ನು ಹೊಡಿಸಿಕೊಂಡು ಅರಮನೆಗೆ ಬಂದು ತನ್ನ ವಿಜಯಕ್ಕೆ ಕಾರಣವಾದ ಉತ್ಸಾಹವಾಕ್ಯವನ್ನು ಹೇಳಿದ ತಾಯಿಗೆ ವಂದನೆಯನ್ನು ಮಾಡಿದನು.

ಇದರಂತೆಯೇ ನಮ್ಮ ದೇಶದಲ್ಲಿ ದೊಡ್ಡದೊಡ್ಡ ರಾಜರಾಗಿಯೂ ಶೂರರಾಗಿಯೂ ಸಾಧುಗಳಾಗಿಯೂ ಪರೋಪಕಾರಿಗಳಾಗಿಯೂ ಧರ್ಮಜ್ಞರಾಗಿಯೂ ಮಹಾತ್ಮರಾಗಿಯೂ ಇದ್ದವರ ಯಶಸ್ಸಿಗೆ ಅವರವರ ತಾಯಿಗಳೇ ಮುಖ್ಯಕಾರಣರೆಂದು ಎಣಿಸಬೇಕು. ಇದರಂತೆಯೇ ಈಗಿನ ಕಾಲದಲ್ಲಿ ತಾಯಿಗಳು ತಮ್ಮತಮ್ಮ ಮಕ್ಕಳಿಗೆ ಬುದ್ಧಿಯನ್ನು ಕಲಿಸದೆಯಿರುವದರಿಂದಲೇ ನಮ್ಮ ದೇಶವು ಈಸ್ಥಿತಿಗೆ ಬಂದಿರುತ್ತದೆ. ಅದ್ದರಿಂದ ನಮ್ಮ ದೇಶವು ಅಭಿವೃದ್ಧಿಯಾಗಬೇಕೆಂದು ಅಪೇಕ್ಷಿಸುವ ಮಹಾನುಭಾವರು ಮಕ್ಕಳಿಗೆ ತಾಯಿಗಳಿಂದ ಬುದ್ಧಿಯನ್ನು ಕಲಿಸುವ ವಿಷಯದಲ್ಲಿ ಪ್ರಯತ್ನವನ್ನು ಮಾಡಬೇಕು.

೮ನೇ ಪರಿಚ್ಛೇದ.

ಇತಿಕರ್ತವ್ಯತಾ.

ಮನುಷ್ಯನಿಗೆ ಉತ್ತಮದಶೆಯಾಗಲಿ ದುರ್ದಶೆಯಾಗಲಿ ಇದ್ದಂತೆಯೇ ಇರುವದಿಲ್ಲ. ಪರಿವರ್ತನಶೀಲವಾದ ಈ ಸಂಸಾರದಲ್ಲಿ ಮೊದಲಿಂದ ಕೊನೆಯವರೆಗೂ ಒಂದೇ ಸಮನಾಗಿದ್ದದ್ದನ್ನು ಯಾರೂ ನೋಡಿಲ್ಲ. ಸೂರ್ಯಮಂಡಲದಷ್ಟು ತೇಜಸ್ಸಿನಿಂದ ಕೂಡಿದ ವಸ್ತುವು ಮತ್ತೊಂದಿಲ್ಲ. ಸೂರ್ಯನ ಕಾಂತಿಯಿಂದ ಚಂದ್ರನಿಗೂ ಭೂಮಿಗೂ ಇತರ ಗ್ರಹಗಳಿಗೂ ಕಾಂತಿಯುಂಟಾಗುತ್ತದೆ. ಇಂಥಾ ಅನಿರ್ವಚನೀಯವಾದ ತೇಜಸ್ಸಿನಿಂದ ಕೂಡಿರುವ ಸೂರ್ಯಮಂಡಲದ ಸ್ಥಿತಿಯೂ ಒಂದೊಂದು ಸಮಯದಲ್ಲಿ ಹೆಚ್ಚು ಕಡಮೆಯಾಗುತ್ತದೆ. ಕೆಲವು ಕಾಲದಲ್ಲಿ ಇದರ ಮೇಲೆ ಕಪ್ಪು ಕಣಗಳು ಕಾಣಿಸುತ್ತವೆ, ಕೆಲವು ಕಾಲದಲ್ಲಿ ಮೋಡಗಳಿಂದ ಆಚ್ಛಾದಿತವಾಗುತ್ತದೆ, ಕೆಲವು ಕಾಲದಲ್ಲಿ ಇದಕ್ಕೆ ಗ್ರಹಣ ಉಂಟಾಗುತ್ತದೆ. ಈ ಸೂರ್ಯಮಂಡಲವು ಯಾವಾಗಲೂ ತಿರುಗುತ್ತದೆ. ಇದರ ಸುತ್ತಲೂ ಗ್ರಹಗಳೂ ಉಪಗ್ರಹಗಳೂ ತಿರುಗುತ್ತವೆ. ಭೂಮಿಯೂ ಸುತ್ತುತ್ತಿದೆ, ಚಂದ್ರ, ನಕ್ಷತ್ರಗಳೂ ಸುತ್ತುತ್ತವೆ, ಭೂಮಿಯ ಮೇಲಿರುವ ಪರ್ವತ, ಸಮುದ್ರ, ನದೀ, ನದ ಮೊದಲಾದವುಗಳು ಪರಿವರ್ತನೆಯನ್ನು ಪಡೆಯುತ್ತವೆ. ಆಯಾ ಋತುಗಳನ್ನನುಸರಿಸಿ ಗಿಡಗಳು ಬೆಳೆದು, ಹುವ್ವಾಗಿ, ಫಲಿಸಿ, ಒಣಗಿ ಹೋಗುತ್ತವೆ. ಇದರಂತೆಯೇ ಮನುಷ್ಯನಿಗೆ ಬಾಲ್ಯ, ಯೌವನ, ವಾರ್ಧಿಕ, ಜಾಗ್ರತ, ಸ್ವಪ್ನ, ಸುಷುಪ್ತಿ, ಜೀವನ, ಮರಣ ಮೊದಲಾದ ಅವಸ್ಥೆಗಳು ಉಂಟಾಗುತ್ತಾ ಇರುತ್ತವೆ. ಇದಲ್ಲದೆ ಅನೇಕ ದೇಶಗಳೂ ಅವುಗಳಲ್ಲಿರುವ ಜನರೂ ಆಯಾ ಕಾಲಕ್ಕೆ ತಕ್ಕಹಾಗೆ ಉಚ್ಚನೀಚಸ್ಥಿತಿಗಳನ್ನು ಪಡೆಯುತ್ತಾ ಇರುತ್ತಾರೆ, ಇದನ್ನೆಲ್ಲಾ ನೋಡಿದರೆ ಪ್ರಪಂಚದಲ್ಲಿ ಯಾವದೂ ಸ್ಥಿರವಲ್ಲವೆಂತಲೂ ಆಗತಕ್ಕದ್ದು ತಪ್ಪುವದಿಲ್ಲವೆಂತಲೂ ತಿಳಿದು ಅಹಂಕಾರಪಡದೆ ಮಾಡಬೇಕಾದ ಕೆಲಸವನ್ನು ಮಾಡೆಂದು ಎಲ್ಲರಿಗೂ ಉಪದೇಶ ಮಾಡುವಂತೆ ಕಾಣುತ್ತದೆ.

ಮನುಷ್ಯನು ವಿಪತ್ತು ಸಂಭವಿಸಿದ ಕಾಲದಲ್ಲಿ ಧೈರ್ಯಗೆಟ್ಟು ಮುಂದೆ ತಾನು ಮಾಡಬೇಕಾದ ಕೆಲಸದ ವಿಷಯದಲ್ಲಿ ಯಾವದೂ ತೋಚದೆ ಕಳವಳಪಡುತ್ತಾನೆ. ಇಂಥಾಕಾಲದಲ್ಲಿ ಧೈರ್ಯಶಾಲಿಗಳಾದ ವಿದ್ವಾಂಸರುಕೂಡ ಬುದ್ಧಿಹೀನರಾಗಿ ಮಾಡಬಾರದ ಕೆಲಸಗಳನ್ನೂ ಮಾಡು ತ್ತಾರೆ. ಹೀಗಿರುವಲ್ಲಿ ಕೋಮಲ ಹೃದಯವುಳ್ಳ ದುರ್ಬಲರಾದ ಹೆಂಗಸರಿಗೆ ಆಪತ್ತುಗಳು ಬಂದರೆ ಅವರು ಏನುತಾನೆ ಮಾಡಬಲ್ಲರು? ಆದ್ದರಿಂದ ವಿಪತ್ತು ಬಂದಕಾಲದಲ್ಲಿ ಸ್ತ್ರೀಯರು ಏನುಮಾಡಬೇಕೆಂಬುವದನ್ನು ಈಗ ವಿಚಾರಮಾಡುತ್ತೇನೆ. ಪೂರ್ವಕಾಲದ ದೂರದರ್ಶಿಗಳಾದ ವಿದ್ವಾಂಸರು ಹೇಳಿರುವದೇನೆಂದರೆ.—

"ತಾವದ್ಭಯಸ್ಯ ಭೇತವ್ಯಂ ಯಾವದ್ಭಯ ಮನಾಗತಂ ।
ಆಗತಂತು ಭಯಂಜ್ಞಾತ್ವಾ ಪ್ರತಿಕುರ್ಯಾದ್ಯಥೋಚಿತಂ ॥"

ಅಂದರೆ ಎಂದಿನವರೆಗೂ ಭಯಉಂಟಾಗುವದಿಲ್ಲವೋ ಅಂದಿನ ವರೆಗೂ ಭಯಪಡಬೇಕು. ಭಯವು ಬಂದು ಪ್ರಾಪ್ತವಾದರೆ ಯಥೋ ಚಿತವಾದ ಉಪಾಯದಿಂದ ಅದನ್ನು ನಿವಾರಣೆ ಮಾಡಿಕೊಳ್ಳಬೇಕು. ಮನುಷ್ಯನು ಸಂಕಟ ಬಂದವೇಳೆಯಲ್ಲಿ ತನಗೆ ಸಮನಾದ ದುಃಖವುಳ್ಳ ವರು ಯಾರೂ ಯಿಲ್ಲವೆಂದು ತಿಳಿದು ತಲೆಯಮೇಲೆ ಕೈಯನ್ನು ಇಟ್ಟು ಕೊಂಡು ದುಃಖನಿವಾರಣೆಯ ಯತ್ನವನ್ನು ಮಾಡದೆ ನಿರುದ್ಯೋಗದಿಂದ ಕಾಲವನ್ನು ಕಳೆಯುತ್ತಾನೆ. ಹೀಗೆಯೇ ಸರ್ವದಾ ದುಃಖಪಡುತ್ತಿದ್ದರೆ ಅವನಿಗೆ ಯಾವ ಆಶೆಯೂ ಇರುವದಿಲ್ಲ. ಇದಲ್ಲದೆ ಆ ಮನುಷ್ಯನು ನಿರಾಶನಾಗಿ ದೇವರನ್ನಾಗಲಿ ತನ್ನ ಅದೃಷ್ಟವನ್ನಾಗಲಿ ಅಥವಾ ತನ್ನ ದುಃಖಕ್ಕೆ ಕಾರಣನಾದ ಮನುಷ್ಯನನ್ನಾಗಲಿ ದೂಷಿಸುತ್ತಾನೆ. ಇಂಥಾ ಮನುಷ್ಯನು ಯಾವವಿಧವಾದ ಉದ್ಯೋಗವನ್ನೂ ಮಾಡದೆ ಇದ್ದುಕೊಂಡು ದುಃಖವನ್ನು ಕಡಿಮೆಮಾಡಿಸುವ ಮಾರ್ಗವನ್ನು ಕಾಣದೆ ಧೈರ್ಯಗುಂದಿ ಧರ್ಮಮಾರ್ಗವನ್ನು ಬಿಟ್ಟು ಆತ್ಮಹತ್ಯ, ಪರಹತ್ಯ, ಕಳವು, ಮೋಸಗಾರಿಕೆ, ವ್ಯಭಿಚಾರ, ಮದ್ಯಪಾನ ಮುಂತಾದ ದುರ್ವ್ಯಸನಕ್ಕೆ ಬಿದ್ದು ಅದರಿಂದ ತನ್ನ ಸಂಕಟವನ್ನು ಹ್ಯಾಗಾದರೂ ಕಡಿಮೆಮಾಡಿಕೊಳ್ಳಬೇಕೆಂದು ಎತ್ನಿಸುತ್ತಾನೆ.

ಆದರೆ ಇಂಥಾ ಅಸದ್ವ್ಯಾಪಾರದಿಂದ ಅವನ ದುಃಖ ಕಡಿಮೆಯಾಗದೆ ಮೊದಲಿಗಿಂತಲೂ ನೂರರಷ್ಟು ಹೆಚ್ಚುತ್ತದೆ. ಒಂದುವೇಳೆ ಇಂಥಾ ಮನುಷ್ಯನು ಸತ್ತರೆ ಅವನ ಅಪಕೀರ್ತಿಯು ಎಲ್ಲೆಲ್ಲಿಯೂ ವ್ಯಾಪಿಸುತ್ತದೆ. ದುಃಖಪ್ರಾಪ್ತವಾದಕಾಲದಲ್ಲಿ ಅಧೀರರಾದ ಮನುಷ್ಯರು ತಾವು ಮಾಡಬೇಕಾದ ಕಾರ್ಯವನ್ನು ಯೋಚಿಸಿದರೂ ತಿಳಿಯುವದಿಲ್ಲ. ಒಂದುವೇಳೆ ತಿಳಿದಾಗ್ಯೂ ಅದನ್ನು ಮಾಡುವದಕ್ಕೆ ಬುದ್ಧಿಯೂ ಶಕ್ತಿಯೂ ಇರುವದಿಲ್ಲ. ಶೋಕಭರಿತವಾದ ಹೃದಯ ಉಳ್ಳವರಿಗೆ ಯುಕ್ತಾಯುಕ್ತ ಜ್ಞಾನವಿರುವದಿಲ್ಲ. ಆದ್ದರಿಂದ ದುಃಖದ ಸಮಯದಲ್ಲಿ ಮನಸ್ಸಿಗೆ ತೋರಿದ ಕೆಲಸಗಳನ್ನೆಲ್ಲಾ ಮಾಡಬಾರದು. ಜ್ಞಾನಿಗಳಾದ ದೊಡ್ಡವರು ಹ್ಯಾಗೆ ಹೇಳುತ್ತಾರೋ ಹಾಗೆ ನಡೆಯಬೇಕು. ಇಂಥಾ ಸಮಯದಲ್ಲಿ ಸದುಪದೇಶವನ್ನು ಮಾಡತಕ್ಕವರು ಎಲ್ಲರಿಗೂ ದೊರೆಯುವದಿಲ್ಲ. ಆದಕಾರಣ ಸಂಕಟ ಬರುವದಕ್ಕೆ ಮೊದಲೇ ಜ್ಞಾನಿಗಳು ಬರೆದು ಇಟ್ಟಿರುವ ಪುಸ್ತಕಗಳನ್ನು ಓದಿ ಅಥವಾ ಸಂಕಟಬಂದ ಸಮಯದಲ್ಲಿ ಹ್ಯಾಗೆ ನಡೆಯಬೇಕೆಂದು ದೊಡ್ಡವರನ್ನು ಮೊದಲೇ ಕೇಳಿ ತಿಳಿದುಕೊಂಡು ಅಂಥಾ ಸಮಯದಲ್ಲಿ ಧೈರ್ಯಕೆಡದೆ ಇರುವದಕ್ಕಾಗಿ ಪ್ರಯತ್ನ ಪಡಬೇಕು.

ಸಂಕಟಸಮಯದಲ್ಲಿ ಮನುಷ್ಯನಬುದ್ಧಿಯು ಕಳವಳದಿಂದ ವಿಚಾರಶೂನ್ಯವಾಗುತ್ತದೆ. ಆ ಸಮಯದಲ್ಲಿ ಯಾವದು ಒಳ್ಳೇದು ಯಾವದು ಕೆಟ್ಟದ್ದು ಎಂಬುವದು ತಿಳಿಯುವದಿಲ್ಲ. ಸ್ವಕಾರ್ಯ ನಿರತರಾದವರು ಇಂಥಾ ಸಮಯವನ್ನೇ ಸಾಧಿಸಿ ಕೊಂಡಿದ್ದು ತಕ್ಕ ಮಾತುಗಳನ್ನಾಡಿ ಮೋಸದಿಂದ ತಮ್ಮ ಕೆಲಸವನ್ನು ಸಾಧಿಸಿ ಕೊಳ್ಳುತ್ತಾರೆ. ಇವರ ಹೇಳಿಕೆಯಂತೆ ನಡೆದ್ದರಿಂದ ನಷ್ಟವನ್ನು ಹೊಂದಿದ ಆ ಮನುಷ್ಯನನ್ನು ಆಮೇಲೆ ಇವರೇ ಹಾಸ್ಯವನ್ನು ಮಾಡುವದಕ್ಕೆ ಆರಂಭಿಸುತ್ತಾರೆ. ಆದ್ದರಿಂದ ವಿಪತ್ತಿನಕಾಲದಲ್ಲಿ ಚೆನ್ನಾಗಿ ಆಲೋಚನೆಯನ್ನು ಮಾಡಿ ಚಿತ್ತಸ್ಥೈರ್ಯವನ್ನು ಹೊಂದಿದ ಬಳಿಕ ಯಾವ ಕೆಲಸವನ್ನಾಗಲಿ ಮಾಡಬೇಕು. ಇಂಥಾ ಸಮಯದಲ್ಲಿ ತಮಗೆ ಬುದ್ಧಿಯನ್ನು ಹೇಳುವವರೆಲ್ಲರೂ ಒಳ್ಳೇಯವರಾಗಿರುವದಿಲ್ಲ, ಆದಕಾರಣ ಅಂಥಾ ಬುದ್ಧಿವಾದವನ್ನು ಹೇಳುವವರ

ಯೋಗ್ಯತೆಯನ್ನು ವಿಚಾರಪೂರ್ವಕವಾಗಿ ತಿಳಿದು ಅವರು ನಿಜವಾಗಿ ಹಿತವನ್ನು ಹೇಳುವವರಾಗಿದ್ದರೆ ಅವರ ಮಾತುಗಳನ್ನು ಕೇಳಬೇಕು. ದೂರದರ್ಶಿಗಳಾದವರು ಇದು ಒಳ್ಳೇದು, ಇದು ಕೆಟ್ಟದ್ದು ಎಂಬುವದನ್ನು ಬಲ್ಲಂತೆ ವ್ಯಸನದಿಂದ ಬುದ್ಧಿಶೂನ್ಯರಾಗಿರುವವರು ಅರಿಯರು. ಎಂಥಾ ತಿಳುವಳಿಕೆಯವರಾದಾಗ್ಯೂ ಸರ್ವವನ್ನೂ ತಿಳಿದವರಾಗಿರುವದಿಲ್ಲ, ಯಾವದಾದರೂ ಒಂದು ವಿಷಯವನ್ನು ತಿಳಿಯದೇ ಇರುತ್ತಾರೆ. ಆದಕಾರಣ ತಮಗಿಂತ ತಿಳುವಳಿಕೆಯಲ್ಲಿ ಕಡಿಮೆಯಾಗಿರುವ ಯಾರು ಏನು ಹೇಳಿದಾಗ್ಯೂ ಸುಮ್ಮನೆ ಕೇಳಿಕೊಂಡು ಆಲೋಚನೆಯನ್ನು ಮಾಡಿ ಯಾವ ಕೆಲಸವನ್ನಾಗಲಿ ಮಾಡಬೇಕು. ತಾವು ಮಾತನಾಡಬೇಕಾದರೆ ಸತ್ಯವಾದದ್ದನ್ನೇ ಆಡಬೇಕು. ತಮ್ಮಿಂದಾಗುವ ಕೆಲಸವನ್ನು ಮಾಡುತ್ತೇನೆಂದು ಹೇಳಬೇಕು. ತಮ್ಮ ಕೈಲಾಗದ ಪಕ್ಷದಲ್ಲಿ ಯಾವ ಮಾತನ್ನೂ ಆಡದೆ ಸುಮ್ಮನಿರಬೇಕು. ಬಾಯಿಂದ ಹೊರಟು ಹೋದ ಮಾತನ್ನು ತಿರುಗಿಸಿಕೊಳ್ಳುವದಕ್ಕೆ ಯಾರಿಂದಲೂ ಆಗುವದಿಲ್ಲ. ತಾನು ಆಡಿದಂತೆ ನಡೆಯದೆ ಹೋದರೆ ಅಸತ್ಯವಾದಿಯೆನಿಸಿ ಕೊಳ್ಳಬೇಕಾಗುತ್ತದೆ. ಆದ್ದರಿಂದ ಅನುಚಿತವಾಗಿಯೂ ಅಧರ್ಮಸೂಚಕವಾಗಿಯೂ ಇರುವ ಮಾತುಗಳನ್ನು ಎಂದಿಗೂ ಆಡಬಾರದು. ಯಾವ ಕೆಲಸವನ್ನು ಮಾಡಬೇಕಾದರೂ ತಿಳಿದವರಸಂಗಡ ಆಲೋಚನೆಮಾಡಿ ಮಾಡಬೇಕೆಂದು ಯಾವಾಗಲೂ ಅವರ ಆಲೋಚನೆಯನ್ನೇ ಕಾದುಕೊಂಡಿರಬಾರದು. ಸಾಧ್ಯವಾದಮಟ್ಟಿಗೂ ತಮ್ಮ ಸ್ವಬುದ್ಧಿಯಿಂದಲೇ ಆಲೋಚನೆಯನ್ನು ಮಾಡಿ ಮಾಡಬೇಕಾದ ಕೆಲಸಗಳನ್ನು ಮಾಡಬೇಕು. ಎಲ್ಲಾ ಕೆಲಸದಲ್ಲಿಯೂ ಅನ್ಯರ ಸಹಾಯವನ್ನೇ ಅಪೇಕ್ಷಿಸುವಂಥಾ ಹೀನಸ್ಥಿತಿಗೆ ಸಮಾನವಾದ ಸ್ಥಿತಿ ಮತ್ತೊಂದಿಲ್ಲ. ತಮ್ಮ ಕೆಲಸವನ್ನು ತಾವು ಮಾಡದೆ "ಅವರು ಮಾಡಿಕೊಡುತ್ತಾರೆ, ಇವರು ಮಾಡಿಕೊಡುತ್ತಾರೆ" ಎಂದು ಕಾದುಕೊಂಡಿರುವವರ ಕೈಲಿ ಯಾವ ಕೆಲಸವೂ ಆಗುವದಿಲ್ಲ, ಅಂಥಾ ಮನುಷ್ಯರು ಜೀವನ್ಮೃತರಂತೆ ಇರುತ್ತಾರೆ. ವಿಪತ್ತಿನ ಸಮಯದಲ್ಲಿ ಧೈರ್ಯವನ್ನು ಬಿಡಬಾರದು. ಜಗತ್ತಿನಲ್ಲಿ ದುಃಖವು ಎಂಥಾವರಿಗೂ ತಪ್ಪಿದ್ದಲ್ಲ. ಸಂಕಟ ಬಂದು ಒದಗಿದ ಕೂಡಲೆ ಧೈರ್ಯ ಕೆಟ್ಟು ಇನ್ನು

ಮುಂದೆ ಎಂದಿಗೂ ಒಳ್ಳೇದಾಗುವದಿಲ್ಲವೆಂದು ನಿರಾಶೆಯನ್ನು ಹೊಂದುವ ಮನುಷ್ಯನಿಗೆ ಸಮನಾದ ಮೂರ್ಖರು ಯಾರೂ ಇಲ್ಲ. ಸುಖದುಃಖಗಳು ಚಕ್ರದಂತೆ ಪರಿವರ್ತನೆ ಯಾಗುತ್ತಾ ಇರುತ್ತವೆಂದು ನೀತಿಪಂತರಾದ ಧೈರ್ಯಶಾಲಿಗಳು ಹೇಳಿದ್ದಾರೆ. ಎಲ್ಲಾ ಪ್ರಾಣಿಗಳ ಅವಸ್ಥೆಯೂ ಕಪಿಲೆಯ ಬಾನಿಯಂತೆ ಒಂದುಸಾರಿ ಪೂರ್ಣವಾಗಿಯೂ, ಮತ್ತೊಂದುಸಾರಿ ಬರಿದಾಗಿಯೂ, ಒಂದುಸಾರಿ ಮೇಲಕ್ಕೂ, ಒಂದುಸಾರಿ ಕೆಳಕ್ಕೂ ಹೀಗೆ ನಾನಾಪ್ರಕಾರವಾಗಿ ಪರಿವರ್ತನೆಯನ್ನು ಹೊಂದುತ್ತಾಯಿರುತ್ತದೆ. ಆದ್ದರಿಂದ ಯಾರೂ ತತ್ಕಾಲದ ದುರ್ದಶೆಯಿಂದ ಧೈರ್ಯಗೆಟ್ಟು ನೈರಾಶ್ಯವನ್ನು ಹೊಂದಬಾರದು. ನಮಗೆ ಬಂದ ಆಪತ್ತು ಎಂದಿಗೂ ಪರಿಹಾರವಾಗಲಾರದೆಂದು ನಮ್ಮ ದೃಷ್ಟಿಗೆ ಕಾಣಬಂದಾಗ್ಯೂ ಈ ವಿಷಯದಲ್ಲಿ ನಮ್ಮ ದೃಷ್ಟಿಯೇ ಪ್ರಮಾಣವೆಂದು ಎಣಿಸಕೂಡದು. ಮಹಾ ವೀರನಾದ ನೆಪೋಲಿಯನ್ ಬೋನಾ ಪಾರ್ಟಿ ಎಂಬುವನು ಮೊದಲು ಬಡವನಾಗಿದ್ದು ದೈವಯೋಗದಿಂದಲೂ ಅವನ ಯತ್ನದಿಂದಲೂ ದೊಡ್ಡ ಪರಾಕ್ರಮಿಯಾಗಿ ಫ್ರಾನ್ಸ್‌ದೇಶಕ್ಕೆ ಅರಸಾದನು. ಇಂಥಾ ದೊಡ್ಡ ಪದವಿಯನ್ನು ಹೊಂದಿದವನಾದಾಗ್ಯೂ ಕಾಲಚಕ್ರಪರಿವರ್ತನೆಯಿಂದ ಒಂದಾವರ್ತಿ ಸೆರೆಮನೆಯಲ್ಲಿ ಇರಬೇಕಾಗಿ ಬಂತು. ಆಗ ಅವನಿಗೆ ಸಹಾಯ ಮಾಡತಕ್ಕವರಾಗಲಿ ಅಥವಾ ಒಳ್ಳೇ ಮಾತುಗಳನ್ನಾಡಿ ಸಮಾಧಾನ ಪಡಿಸತಕ್ಕವರಾಗಲಿ ಅವನ ಸಮೀಪದಲ್ಲಿ ಯಾರೂ ಇರಲಿಲ್ಲ. ಇಂಥಾ ಸಮಯದಲ್ಲಿ ಅವನು ಅಧೀರಪ್ರಕೃತಿಯ ಮನುಷ್ಯನಾಗಿದ್ದರೆ ಎದೆ ವೊಡೆದು ಸಾಯುತ್ತಿದ್ದನು. ಪರಂತು ಅವನು ಸಹನಶೀಲನಾಗಿಯೂ ಧೈರ್ಯಶಾಲಿಯಾಗಿಯೂ ಇದ್ದದ್ದರಿಂದ ಇಂಥಾ ದುಸ್ಸಹವಾದ ದುಃಖದಲ್ಲಿಯೂ ಚಿಂತೆಪಡದೆ ಧೈರ್ಯವನ್ನು ಅವಲಂಬಿಸಿ “ ನಾನು ಸೆರೆಮನೆಯಲ್ಲಿ ಒಬ್ಬನೆ ಬಿದ್ದಿದ್ದಾಗ್ಯೂ ಚಿಂತೆ ಪಡತಕ್ಕವನಲ್ಲ, ಮುಂದಣ ಆಶೆಯನ್ನೂ ತೊರೆಯುವದಿಲ್ಲ, ವಿಪತ್ತು ಸಂಪತ್ತಿನ ದೂತಿಯು, ನಾನು ಕಾಲಕ್ರಮವಾಗಿ ಇಲ್ಲಿಂದ ಬಿಡುಗಡೆಯನ್ನು ಹೊಂದಿ ನನ್ನ ಶತ್ರುಗಳಿಗೆ ಪ್ರತಿಕ್ರಿಯೆಯನ್ನು ಮಾಡದೆ ಬಿಡೆನು ” ಎಂದು ಹೇಳಿದನು. ಹೀಗೆ ವಿಪತ್ತಿನ ಸಮಯದಲ್ಲಿ ಧೈರ್ಯದ ದೃಷ್ಟಾಂತಗಳನ್ನು

ಮತ್ತೊಂದುಕಡೆಯಲ್ಲಿ ಹುಡುಕತಕ್ಕ ಅವಶ್ಯಕವಿಲ್ಲ ನಮ್ಮ ದೇಶದಲ್ಲಿಯೇ ಅನೇಕವಾಗಿ ಸಿಕ್ಕುತ್ತವೆ. ನಮ್ಮ ದೇಶದಲ್ಲಿ ೨೫೦ ವರುಷಕ್ಕೆ ಮುಂಚೆ ಕ್ಷೀಣಸ್ಥಿತಿಯಲ್ಲಿದ್ದ ಭರತವರ್ಷವನ್ನು ಉದ್ಧಾರ ಮಾಡುವದಕ್ಕೆ ಶಿವಾಜಿ ಎಂಬ ಮಹಾರಾಜನು ಹುಟ್ಟಿದನು. ಇವನು ನೆಪೋಲಿಯನ್ನನಂತೆ ಬಡತನದಲ್ಲಿ ಹುಟ್ಟಿ ತನ್ನ ಪ್ರಯತ್ನದಿಂದ ರಾಜಪದವಿಯನ್ನು ಪಡೆದನು. ಈ ಶಿವಾಜಿಯನ್ನೂ ಇವನ ಮಗನನ್ನೂ ಪ್ರಜೆಗಳಿಗೆ ಹಿಂಸಕನಾಗಿಯೂ ಸರ್ಪದಂತೆ ಅತಿಭಯಂಕರನಾಗಿಯೂ ಇದ್ದ ಔರಂಗಜೇಬನೆಂಬ ಚಕ್ರವರ್ತಿಯು ಹಿಡಿದು ಕಾರಾಗೃಹದಲ್ಲಿಟ್ಟನು. ಶೂರನಾದ ಆ ಶಿವಾಜಿಯು ಬಿಡುಗಡೆಯನ್ನು ಹೊಂದುವದಕ್ಕೆ ಮಾರ್ಗವಿಲ್ಲದೆ ಇದ್ದಾಗ್ಯೂ ಕೆಲವುಕಾಲ ಧೈರ್ಯದಿಂದ ಇದ್ದು ಪ್ರಯತ್ನವನ್ನು ಮಾಡಿ ಬಳಿಕ ಬಿಡುಗಡೆಯನ್ನು ಹೊಂದಿ ಬಂದು ಮೊಗಲಾಯರ ವಂಶಕ್ಕೇನೆ ಹಾನಿಯನ್ನುಂಟುಮಾಡುವಷ್ಟು ಬಲಿಷ್ಠನಾಗಿ ತನ್ನ ಪ್ರಜೆಗಳನ್ನು ರಕ್ಷಿಸಿ ಶಾಶ್ವತವಾದ ಸತ್ಕೀರ್ತಿಯನ್ನು ನೆಲೆಗೊಳಿಸಿದನು. ಇಂಥಾ ದೃಷ್ಟಾಂತಗಳು ಇನ್ನೂ ಅನೇಕವಾಗಿ ಇವೆ. ಆದಾಗ್ಯೂ ಗ್ರಂಥ ಬೆಳೆಯುತ್ತೆಂದು ಇಲ್ಲಿಗೆ ನಿಲ್ಲಿಸಿದ್ದೇನೆ.

ಮನುಷ್ಯನು ವಿಪತ್ತು ಸಂಭವಿಸಿದಕಾಲದಲ್ಲಿ ಯುಕ್ತಾಯುಕ್ತಜ್ಞಾನಶೂನ್ಯನಾಗಿ ಮನಸ್ಸನ್ನು ಅಧರ್ಮದಲ್ಲಿ ಬೀಳಗೊಡಬಾರದು. ಇದರಿಂದ ಯಾರಿಗೂ ಶ್ರೇಯಸ್ಸು ಉಂಟಾಗುವದಿಲ್ಲ. ಆದಕಾರಣ ಧರ್ಮವನ್ನು ಎಂದಿಗೂ ಬಿಡಬಾರದು. ಒಂದೊಂದುವೇಳೆಯಲ್ಲಿ ಧಾರ್ಮಿಕನಿಗೆ ತೊಂದರೆಯೂ ಅಧಾರ್ಮಿಕನಿಗೆ ಸೌಖ್ಯವೂ ಉಂಟಾಗುವದುಂಟು. ಇದರಿಂದ ಧರ್ಮದಿಂದ ದುಃಖವೂ ಅಧರ್ಮದಿಂದ ಸುಖವೂ ಉಂಟಾಗುತ್ತೆಂದು ಊಹಿಸಬಾರದು. ಧರ್ಮಾಧರ್ಮಗಳ ಫಲವನ್ನು ಚನ್ನಾಗಿ ಆಲೋಚಿಸಿದರೆ ತಿಳಿಯುವದೇ ಹೊರತು ಇಲ್ಲದಿದ್ದರೆ ಗೊತ್ತಾಗುವದಿಲ್ಲ. ಸುಖವನ್ನು ಹೊಂದಿದ ಪಾಪಿಗಳು ಸಾಯುವಕಾಲಕ್ಕೆ ರೆಕ್ಕೆಬಂದ ಇರುವೆಗಳಂತೆ ಬಹು ಬೇಗ ಹಾರ್ಯಾಡಿ ತಮ್ಮ ಐಶ್ವರ್ಯವನ್ನೂ ಸುಖವನ್ನೂ ಕಳೆದುಕೊಂಡು ನಾಶವಾಗುತ್ತಾರೆ. ಸತ್ತಮೇಲೂ ತಮ್ಮ ಅಪಕೀರ್ತಿಯನ್ನು ಶಾಶ್ವತವಾಗಿ ನಿಲ್ಲುವಂತೆ ಮಾಡಿ ಹೋಗುತ್ತಾರೆ. ಜನರು ಇಂಥವರ ಹೆಸರೆತ್ತುವದನ್ನೂ

ಅಪಶಕುನವೆಂದು ಭಾವಿಸುತ್ತಾರೆ. ಹೀಗೆ ಅಪಮಾನವನ್ನು ಹೊಂದುವವ ಕ್ಕಿಂತಲೂ ಹೆಚ್ಚಾದ ದುಃಖವ್ಯಾವದು ? ಯಾವದಾದರೂ ಒಂದು ಕೆಲಸ ವನ್ನು ಮಾಡುವದರಿಂದ ಉಂಟಾಗುವ ಸುಫಲ ದುಷ್ಫಲಗಳು ತನಗೊಬ್ಬ ನಿಗೆ ಮಾತ್ರ ಉಂಟಾಗುವದಿಲ್ಲ. ತನ್ನ ಕುಲಕ್ಕೂ ಇಷ್ಟ ಮಿತ್ರರಿಗೂ ಜಾತಿಗೂ ದೇಶಕ್ಕೂ ಉಂಟಾಗುತ್ತೆಂದು ತಿಳಿಯಬೇಕು. ಆದ್ದರಿಂದ ಎಲ್ಲಾ ವಿಷಯಗಳಲ್ಲಿಯೂ ಜಾಗರೂಕರಾಗಿ ಇರಬೇಕು. ತಮ್ಮ ಅಕೃತ್ಯದಿಂದ ಇತರರನ್ನು ದುಃಖಕ್ಕೆ ಭಾಗಿಗಳನ್ನಾಗಿ ಮಾಡಬಾರದು. ಲೋಕದಲ್ಲಿ ಪಾಪಗಳನ್ನು ಮಾಡುವವರು ಮಾನಹೀನರಾಗಿ ತಾವು ಮಾಡುವ ಪಾಪ ದಿಂದ ನಿರ್ದೋಷವಾದ ತಮ್ಮ ವಂಶಕ್ಕೂ ಕಳಂಕವನ್ನುಂಟುಮಾಡುತ್ತಾರೆ. ತಮ್ಮ ದೇಶಕ್ಕೂ ವಂಶಕ್ಕೂ ಅಪಕೀರ್ತಿಯನ್ನು ಉಂಟುಮಾಡುವ ಪಾಪಿ ಗಳು ಹುಟ್ಟದೆ ಇರುವದಾಗಲಿ ಅಥವಾ ಹುಟ್ಟಿನ ಕೂಡಲೆ ಸಾಯುವ ದಾಗಲಿ ಉತ್ತಮ " ಪರಿವರ್ತಿನಿ ಸಂಸಾರೇ ಮೃತಃ ಕೋವಾ ನಜಾಯತೇ | ಸಜಾತೋ ಯೇನ ಜಾತೇನ ಯಾತಿ ವಂಶಸ್ಸಮುನ್ನತಿಂ ‖ ". ಎಂದು ನೀತಿ ಜ್ಞರು ಹೇಳುವಂತೆ ಜನನಮರಣಗಳಿಂದ ಕೂಡಿರುವ ಈ ಸಂಸಾರದಲ್ಲಿ ಹುಟ್ಟಿದವರು ಸಾಯುವರು, ಸತ್ತವರು ಹುಟ್ಟುವರು, ಯಾರು ಹುಟ್ಟಿದ್ದ ರಿಂದ ವಂಶವು ಅಭಿವೃದ್ಧಿಯಾಗುತ್ತೋ ಅವನೇ ಹುಟ್ಟಿದವನೆಂದು ಎಣಿಸ ಬೇಕು. ಗೆಜ್ಜಲಿನಂತೆಹುಟ್ಟಿ ಸಾಯುವದರಿಂದ ಏನೂ ಪ್ರಯೋಜನವಿಲ್ಲ.

" ಈ ಕಾಲದಲ್ಲಿ ಯಾರು ಧರ್ಮವಾಗಿ ನಡೆಯುತ್ತಾರೋ ಅವರಿಗೆ ಅನೇಕ ದೊಡ್ಡದೊಡ್ಡ ದುಃಖಗಳು ಸಂಭವಿಸುತ್ತವೆ, ಅವರಿಗೆ ಎಂದಿಗೂ ಸುಖ ಉಂಟಾಗುವದಿಲ್ಲ " ಎಂದು ಕೆಲವು ಬುದ್ಧಿಹೀನರಾದ ಜನರು ಹೇಳುತ್ತಾರೆ. ಹೀಗೆ ಹೇಳುವದು ಸರಿಯಲ್ಲ. ವಿಚಾರ ಮಾಡಿ ನೋಡಿದರೆ ಧಾರ್ಮಿಕರಾದವರಿಗೆ ಇರುವಷ್ಟು ಸುಖವು ಯಾರಿಗೂ ಇಲ್ಲ. ದುಷ್ಟರಿಂದ ಲಾಗಲಿ ಅನ್ಯಾವ ಕಾರಣದಿಂದಲಾಗಲಿ ಅವರಿಗೆ ದುಃಖ ಉಂಟಾದಾಗ್ಯೂ ಅವರ ಮನಸ್ಸು ಸುಖವಾಗಿಯೇ ಇರುತ್ತೆ. ಅವರಿಗೆ ಎಂಥಾ ಸಂಕಟಗಳು ಬಂದಾಗ್ಯೂ ಅವರ ಮನಸ್ಸು ಸಮುದ್ರದಂತೆ ಗಂಭೀರವಾಗಿಯೂ ಆಕಾಶ ದಂತೆ ನಿರ್ಮಲವಾಗಿಯೂ ಶರತ್ಕಾಲದ ಚಂದ್ರಿಕೆಯಂತೆ ಶಾಂತವಾಗಿಯೂ

ಯಿರುತ್ತೆ. ನಿರ್ಮಲವಾದ ಮನಸ್ಸಿನಿಂದ ಉಂಟಾಗುವ ಸುಖವು ಇನ್ನಾ
ವದರಿಂದಲೂ ಉಂಟಾಗಲಾರದು. ಈಶ್ವರಭಕ್ತಿಯಲ್ಲಿ ಮಗ್ನವಾಗಿರುವ ಮನ
ಸ್ಸಿಗೆ ಹೊರಗಿನ ದುಃಖಾನುಭವ ಉಂಟಾಗುವದಿಲ್ಲ. ಧಾರ್ಮಿಕರಾದವರು
ಅಸ್ವಾರ್ಥವಾಗಿ ಪರೋಪಕಾರವನ್ನು ಮಾಡಿ ಧರ್ಮಾಚರಣೆಯಲ್ಲಿ ಇರು
ವದರಿಂದ ಅವರು ಅನುಭವಿಸುವ ಸುಖವನ್ನು ವರ್ಣಿಸುವದಕ್ಕೆ ಯಾರಿಂ
ದಲೂ ಆಗುವದಿಲ್ಲ. ಈ ಸುಖದ ರಾಶಿಯ ಮುಂದೆ ಹೊರಗಿನ ಸಣ್ಣ
ಸಣ್ಣ ದುಃಖಗಳು ಕಣ್ಣಿಗೆ ಕಾಣಿಸುವದೇ ಇಲ್ಲ. ಧರ್ಮಪ್ರಭಾವ
ದಿಂದ ಶಾಂತವಾಗಿರುವ ಮನಸ್ಸುಳ್ಳವರು ಸಂಕಟಗಳು ಬಂದಾಗ್ಯೂ ಧೈರ್ಯ
ಹೀನರಾಗಿ ಕಳವಳಿಸದೆ ಮೊದಲಿನಂತೆಯೇ ಇರುತ್ತಾರೆ. ಅವರ ಚಿತ್ತವೂ
ಶಾಂತವಾಗಿಯೇ ಇರುತ್ತೆ. ಮಾಂಡವ್ಯಋಷಿಗಳು ಅರಣ್ಯದಲ್ಲಿ ತಪಸ್ಸು
ಮಾಡುತ್ತಿದ್ದಾಗ ದುಷ್ಟರು ಅವರ ಮೇಲೆ ಕಳ್ಳತನವನ್ನು ಆರೋಪಿಸಿ
ಅವರನ್ನು ಶೂಲಕ್ಕೆ ಹಾಕಲೆತ್ನಿಸಿದರು ಅವರು ಇಂಥಾ ಪ್ರಾಣಾಂತಕವಾದ
ದುಃಖದ ದಶೆಯಲ್ಲಿಯೂ ಧೈರ್ಯವನ್ನು ಬಿಡದೆ ಶೂಲಕ್ಕೆ ಹಾಕುವದಕ್ಕೆ
ಯತ್ನಿಸಿದವರನ್ನು ಕ್ಷಮಿಸಿದರು. ಇಂಥಾವರೇ ಧಾರ್ಮಿಕರು.

ಇಂಥಾ ದೊಡ್ಡವರಿಗೆ ಇಂಥಾ ದೊಡ್ಡ ಸಂಕಟಗಳು ಪ್ರಾಪ್ತವಾಗು
ವದು ಈಶ್ವರಕೃಪೆಯಿಂದಲೇ ಎಂದು ಎಣಿಸಬೇಕು. ಇಂಥಾ ಸಂಕಟಗಳು
ಇವರಿಗೆ ಪ್ರಾಪ್ತವಾಗದೆಯಿದ್ದರೆ ಇವರ ಮಹತ್ವವು ಜನರಿಗೆ ಗೊತ್ತಾಗು
ತ್ತಿರಲಿಲ್ಲ. ಪರ್ವತದಂತೆ ಅಚಲವಾದ ಅವರ ಧೈರ್ಯವೂ, ಶಾಂತವಾಗಿಯೂ,
ನಿಷ್ಕಪಟವಾಗಿಯೂ ಇರುವ ಅವರ ಮನೋಭಾವವೂ, ಶತ್ರು ಮಿತ್ರರಲ್ಲಿ
ಯೂ ಸ್ವಜನ ಪರಜನರಲ್ಲಿಯೂ ಮನುಷ್ಯ ಮೃಗ ಪಕ್ಷಿ ಮುಂತಾದವು
ಗಳಲ್ಲಿಯೂ ಬೆಳದಿಂಗಳಂತೆ ಒಂದೇ ಸಮನಾಗಿ ಪ್ರಸರಿಸಿ ಸಂತೋಷವ
ನ್ನುಂಟುಮಾಡುವ ಅವರ ಅಧಿಕವಾದ ಪ್ರೇಮವೂ, ಜಗದ್ವಶೀಕರಣ ಮಂತ್ರ
ದಂತೆ ಉತ್ಕೃಷ್ಟವಾದ ಅವರ ಚರಿತ್ರೆಯೂ, ಅವರಿಗೆ ಇಂಥಾ ಸಂಕಟಗಳು
ಉಂಟಾಗದೆ ಇದ್ದರೆ ಜಗತ್ತಿಗೆ ಹ್ಯಾಗೆ ತಿಳಿಯುತ್ತಿತ್ತು? ಭಾಗ್ಯವಂತರಾದ
ಕೆಲವು ಮೋಸಗಾರರು ಧಾರ್ಮಿಕರೆಂದು ವೇಷವನ್ನು ಹಾಕಿಕೊಂಡು ಯಶ
ಸ್ಸನ್ನು ಸಂಪಾದಿಸುವದಕ್ಕೆ ಯತ್ನಿಸುತ್ತಾರೆ. ಆದರೆ ವಿಪತ್ತು ಬಂದ

ಕೊಡಲೆ ಇವರ ಯೋಗ್ಯತೆಯು ವ್ಯಕ್ತವಾಗುತ್ತೆ. ಪೂರ್ವದಲ್ಲಿ ಒಂದು ಕತ್ತೆಯು ಸಿಂಹದ ಚರ್ಮವನ್ನು ಹೊದ್ದುಕೊಂಡು ತಾನು ಎಲ್ಲಾ ಮೃಗಗಳಿಗೂ ಅಧಿಪತಿಯೆಂದು ಹೇಳಿಕೊಂಡು ತಿರುಗುತ್ತಿತ್ತು. ಒಂದಾನೊಂದು ದಿವಸ ಒಂದು ಆನೆಯ ಸಂಗಡ ಜಗಳವಾಡುವ ಸಂದರ್ಭ ಬಂದು ಅದರ ನಿಜಸ್ವರೂಪ ವ್ಯಕ್ತವಾಯಿತೆಂದು ಒಂದು ಕಥೆಯುಂಟು. ಇದರಂತೆ ನಾವು ಧರ್ಮಿಷ್ಠರೆಂದು ವೇಷ ಹಾಕಿಕೊಂಡು ಕಾಲಕ್ಷೇಪ ಮಾಡುವ ಆ ಮೋಸಗಾರರ ಯೋಗ್ಯತೆಯು ಸ್ವಲ್ಪ ದಿವಸದಲ್ಲಿಯೇ ವ್ಯಕ್ತವಾಗದೆ ಹೋಗುವದಿಲ್ಲ.

ಸಂಕಟ ಬಂದ ಕಾಲದಲ್ಲಿ ಕೆಲವರು "ದೇವರಿಗೆ ಕರುಣಾವಿಲ್ಲ ನಿರಪರಾಧಿಗಳನ್ನು ನಿಷ್ಕಾರಣವಾಗಿ ದುಃಖ ಪಡಿಸುತ್ತಾನೆ" ಎಂದು ದೇವರನ್ನು ದೂಷಿಸುವದುಂಟು. ಹೀಗೆ ದೇವರನ್ನು ದೂಷಿಸುವದು ಅನ್ಯಾಯವು. ದೇವರು ನಿಷ್ಕಾರಣವಾಗಿ ಸಂಕಟವನ್ನು ಉಂಟುಮಾಡುವದಿಲ್ಲ. ಅಪರಾಧ ಮಾಡಿದರೆ ಅದಕ್ಕೆ ಶಿಕ್ಷೆಯಾಗತಕ್ಕದ್ದು ಆವಶ್ಯಕವು. ಯಾವ ರಾಜ್ಯದಲ್ಲಿ ಕಳ್ಳರು ಸುಳ್ಳರು ಮುಂತಾದ ಕೆಟ್ಟ ಜನರಿಗೆ ಯಥಾಯೋಗ್ಯವಾದ ಶಿಕ್ಷೆಯಾಗುವದಿಲ್ಲವೋ ಆ ರಾಜ್ಯದಲ್ಲಿ ಅವರ ಹಾವಳಿ ಹೆಚ್ಚಾಗಿ ಜನರಿಗೆ ಉಪದ್ರವ ಉಂಟಾಗುವದು. ಆದ್ದರಿಂದ ರಾಜನು ಅಕೃತ್ಯವನ್ನು ಮಾಡಿದವರಿಗೆ ಯಥಾಯೋಗ್ಯವಾಗಿ ಶಿಕ್ಷೆಯನ್ನು ಮಾಡಬೇಕು. ಪ್ರಪಂಚದಲ್ಲಿ ಎಲ್ಲರ ಕಾಯಿಕ 'ಮಾನಸಿಕ ವಾಚಕ ಪಾಪಗಳನ್ನು ಸಮಗ್ರವಾಗಿ ತಿಳಿದುಕೊಂಡು ಅದಕ್ಕೆ ತಕ್ಕ ಶಿಕ್ಷೆಯನ್ನು ಕೊಡುವ ಯೋಗ್ಯತೆ ಯಾವ ಮನುಷ್ಯನಿಗೂ ಇಲ್ಲ. ಅನೇಕರು ಅಂತರಂಗದಲ್ಲಿ ಮಹಾ ಪಾಪಗಳನ್ನು ಮಾಡಿ ಹೊರಗೆ ತಾವು ಮಹಾ ಸಜ್ಜನರೆಂದು ತೋರ್ಪಡಿಸಿಕೊಳ್ಳುತ್ತಾರೆ. ಇಂಥವರನ್ನು ದೇವರು ಶಿಕ್ಷಿಸದೆ ಇದ್ದರೆ ಇವರ ದುರ್ಗುಣ ಕಡಮೆಯಾಗುವದು ಹ್ಯಾಗೆ? ಶಿಕ್ಷೆಯ ಭಯವಿಲ್ಲದೆ ಹೋದರೆ ಪ್ರಾಯೇಣ ಜನರು ಕಪಟಾಚರಣೆಯಿಂದ ಸತ್ಪುರುಷರನ್ನು ತೊಂದರೆ ಮಾಡದೇ ಬಿಡರು. ದೇವರು ಕಾಣದಂತೆ ಏನು ಮಾಡುವದಕ್ಕೂ ಆಗುವದಿಲ್ಲ. ಹೊರಗೆ ಸಜ್ಜನನೆಂದೆನಿಸಿಕೊಂಡು ಒಳಗೆ ಜನರಿಗೆ ಮೋಸಮಾಡುತ್ತಾ ಇರುವವನಿಗೆ ತಕ್ಕ

ಕಾಲದಲ್ಲಿ ತಕ್ಕಶಿಕ್ಷೆ ಆಗದೆ ತಪ್ಪದು. ಅವನು ವಿಚಾರಪರನಾಗಿದ್ದರೆ ತಾನು ಮಾಡಿದ ಪಾಪಕ್ಕಾಗಿ ತನಗೆ ಈ ಶಿಕ್ಷೆಯಾಯಿತೆಂದು ತಿಳಿಯುತ್ತಾನೆ. ಅನೇಕ ಸಂಗತಿಗಳಲ್ಲಿ ಮೋಸಗಾರರ ಮೋಸವು ಹೊರಕ್ಕೆ ಬರದೆ ಇರುವದಿಲ್ಲ, ಅಥವಾ ಅವರಿಗೆ ಏನಾದರೂ ಹಾನಿತಟ್ಟಿ ಅವರು ಆರಂಭಿಸಿದ್ದ ದುಷ್ಕಾರ್ಯವು ನಿಂತುಹೋಗುತ್ತೆ. ಈ ಮೇರೆಗೆ ದೇವರು ಲೋಕದಲ್ಲಿ ದುಷ್ಟನಿಗ್ರಹ ಮಾಡುತ್ತಾ ಯಿರುವದ್ದರಿಂದ ಪ್ರಪಂಚವು ಶಾಂತವಾಗಿದೆ, ಈ ಭಯವು ಇಲ್ಲದೆ ಇದ್ದರೆ ಯಾರಿಗೂ ಸುಖಕರವಾಗುತ್ತಿರಲಿಲ್ಲ. ನಾಲ್ಕು ದಿಕ್ಕಿನಲ್ಲಿಯೂ ಒಬ್ಬರಮೇಲೊಬ್ಬರು ಬಿದ್ದು ಈಗ ಸುಭಿಕ್ಷವಾಗಿರುವ ರಾಜ್ಯವೆಲ್ಲಾ ಸ್ಮಶಾನ ಭೂಮಿಯಂತೆ ಆಗುತ್ತಿತ್ತು. ಸರ್ವಪ್ರಾಣಿಗಳೂ ಈ ಭಯದಿಂದಲೇ ತಮ್ಮತಮ್ಮ ದಾರಿಯಲ್ಲಿ ನಡೆಯುತ್ತಾರೆ. ನಮ್ಮಿಂದ ಇತರರಿಗೆ ಭಯವಿಲ್ಲದೆ ಇದ್ದರೆ ಇತರರಿಂದಲೂ ನಮಗೆ ಭಯವಿರುವದಿಲ್ಲ, ಆದ್ದರಿಂದ ಸತ್ಪುರುಷರು ಯಾರಭಯವೂ ಇಲ್ಲದೆ ಪ್ರಪಂಚದಲ್ಲಿ ಬೇಕಾದ್ದನ್ನು ಮಾಡುತ್ತಾರೆ. ಈ ಕಾರಣದಿಂದ ಮನುಷ್ಯನಿಗೆ ದುಃಖಗಳು ಬರುವದರಿಂದ ದುಃಖಗಳಿಗಾಗಿ ದೇವರನ್ನು ದೂಷಿಸಬಾರದು. ದೇವರು ಎಲ್ಲರಿಗೂ ತಾಯಿತಂದೆಯಾಗಿದ್ದಾನೆ. ಯಾರಿಗೂ ತೊಂದರೆಯನ್ನು ಮಾಡುವದಿಲ್ಲ. ನಮಗೆ ಆಗಿಂದಾಗ್ಗೆ ಬರುವ ಸಂಕಟಗಳನ್ನು ಔಷಧಗಳೆಂದು ತಿಳಿಯಬೇಕು. * * *

ಪ್ರಪಂಚದಲ್ಲಿ ಈಶ್ವರೇಚ್ಛೆ ಹೊರತು ಯಾವದೂ ನಡೆಯುವದಿಲ್ಲವಾದ್ದರಿಂದ ನಮಗೆ ಯಾರಿಂದಾದರೂ ತೊಂದರೆಯಾದರೆ ಅವರನ್ನು ನಾವು ದೂಷಿಸಬಾರದು. ವಿಪತ್ತಿನಲ್ಲಿ ಚಿತ್ತವು ಸ್ವಸ್ಥವಾಗಿರುವದಿಲ್ಲ. ಹಾಗೆಯೇ ಇದ್ದುಕೊಂಡು ಸಂಕಟವನ್ನೇ ನೆನಸಿಕೊಳ್ಳುತ್ತಾ ಕಾಲವನ್ನು ಕಳೆದರೆ ಕೆಲವು ಕಾಲದಲ್ಲಿ ಬುದ್ಧಿಯು ಕೆಟ್ಟು ಹೋಗಿ ಹುಚ್ಚು ಹಿಡಿಯುತ್ತೆ. ಆಗುವದು ತಪ್ಪುವದಿಲ್ಲ, ಅದಕ್ಕಾಗಿ ದುಃಖಪಟ್ಟು ಉಪಯೋಗವಿಲ್ಲ. ಆದಾಗ್ಯೂ ಮನುಷ್ಯನ ಮನಸ್ಸು ದುರ್ಬಲವಾದ್ದರಿಂದ ವ್ಯಸನದಲ್ಲಿ ತಪ್ತವಾಗುತ್ತಾ ಇರುತ್ತೆ. ಇಂಥಾ ಕಾಲದಲ್ಲಿ ಮನಸ್ಸನ್ನು ಬೇರೇಕಡೆಗೆ ತಿರುಗಿಸಬೇಕು. ದಾರಿದ್ರ್ಯ, ರೋಗ ಮುಂತಾದ್ದನ್ನು ನಿವಾರಿಸಲಿಕ್ಕೆ ಅಸಾಧ್ಯವಾದ

ದುಃಖಗಳು ಬಂದಲ್ಲಿ ದೇವರಮೇಲೆ ಭಾರವನ್ನು ಹಾಕಿ ಅವುಗಳನ್ನು ವಿಚಾರ ಮಾಡುವದಕ್ಕೆ ಯತ್ನಮಾಡಬೇಕು, ಪಾಲುಮಾರಬಾರದು. ಯಾವಾಗಲೂ ಯಾವದಾದರೂ ಒಂದು ಕೆಲಸವನ್ನು ಮಾಡುತ್ತಿರಬೇಕು. ಮನಸ್ಸನ್ನು ಸಮಾಧಾನಸ್ಥಿತಿಯಲ್ಲಿ ಇಡುವದಕ್ಕೆ ಉದ್ಯೋಗಕ್ಕೆ ಸರಿಯಾದ ಉಪಾಯವಿಲ್ಲ. ಉದ್ಯೋಗವೆಂದರೆ ಯಾವದಾದರೂ ಲಾಭಕರವಾದ ಕೆಲಸವನ್ನು ಮಾಡಬೇಕು. ಕೆಲಸವಿಲ್ಲದೆ ಇದ್ದರೆ ಯಾವಾಗಲೂ ತಮ್ಮ ದುಃಖವನ್ನೇ ನೆನಸಿಕೊಂಡು ವ್ಯಾಕುಲಪಡಬೇಕಾಗುತ್ತೆ. ಉದ್ಯೋಗದ ರುಚಿಯನ್ನು ಒಂದುಸಲ ಕಂಡವರು ಅದನ್ನು ಎಂದಿಗೂ ಬಿಡುವದಿಲ್ಲ. ಇಂಥವರು ಪ್ರಾಯೇಣ ಯಾವ ಅಕೃತ್ಯವನ್ನೂ ಮಾಡುವದಿಲ್ಲ. ಇವರ ಮನಸ್ಸಿನಲ್ಲಿ ಇತರ ವಿಷಯಕ್ಕೆ ಅವಕಾಶವಿರುವದಿಲ್ಲ. ಉದ್ಯೋಗ, ಧೈರ್ಯ, ಸತ್ಯ ಮುಂತಾದವು ಮನುಷ್ಯನ ಉನ್ನತಿಗೆ ಮುಖ್ಯ ಕಾರಣಗಳಾಗಿರುತ್ತವೆ. ಸತ್ಸಹವಾಸವಿಲ್ಲದೆ ಇವು ಸಾಧ್ಯವಾಗುವದಿಲ್ಲ; ಆದ್ದರಿಂದ ಯಾವಾಗಲೂ ಒಳ್ಳೆಯವರ ಸಂಗಡ ಬಳಿಕೆಯನ್ನು ಮಾಡಬೇಕು. ಯಾರ ಸಂಗಡಲೇ ಆಗಲಿ ಅತಿ ಸ್ನೇಹವನ್ನು ಮಾಡಬಾರದು. ಒಬ್ಬರಲ್ಲಿಯೂ ಸೇರದೆ ಏಕಾಂಗಿಯಾಗಿಯೂ ಇರಬಾರದು. ಅತಿಸ್ನೇಹಮಾಡುವದ್ದರಿಂದ ತಮ್ಮ ಹೊತ್ತು ಅವರ ಹೊತ್ತು ಸಹ ಅನ್ಯಾಯವಾಗಿ ಹೋಗುತ್ತೆ. ಒಂದುವೇಳೆ ಕೆಟ್ಟವರಲ್ಲಿ ಅತಿಸ್ನೇಹ ಉಂಟಾದರೆ ಅವರ ದುರ್ಗುಣಗಳು ಬರುತ್ತವೆ. ಯಾರಸಂಗಡಲೂ ಸ್ನೇಹವನ್ನೇ ಮಾಡದಿದ್ದರೆ ಒಳ್ಳೆಯವರ ಸಹವಾಸದಿಂದ ನಮ್ಮ ನಡತೆಯನ್ನು ತಿದ್ದಿಕೊಳ್ಳುವದಕ್ಕೆ ಅವಕಾಶವಾಗುವದಿಲ್ಲ. ಮತ್ತು ಯಾರಸಂಗಡಲೂ ನಡತೆಯನ್ನು ಬಳಸದೆ ಇದ್ದರೆ ಇವರು ಒಳ್ಳೆಯವರು, ಇವರು ಕೆಟ್ಟವರು ಎಂಬ ತಾರತಮ್ಯ ತಿಳಿಯದೆ ಕೆಟ್ಟವರ ಮೋಸಕ್ಕೆ ಒಳಗಾಗಬೇಕಾಗುತ್ತೆ.

ಮನುಷ್ಯನಿಗೆ ಬಡತನವು ದೊಡ್ಡ ವಿಪತ್ತೆಂದು ತಿಳಿಯಬೇಕು. ಬಡವರನ್ನು ಯಾರೂ ಹತ್ತಿರಕ್ಕೆ ಕರೆಯುವದಿಲ್ಲ. ಅವರು ಯಾರಿಗೂ ಬೇಕಾಗಿರುವದಿಲ್ಲ. ದರಿದ್ರನಾಗಿ ನಿರುದ್ಯೋಗನಾಗಿ ಎಲ್ಲಕ್ಕೂ ಅನ್ಯರನ್ನೇ ಆಶ್ರಯಿಸಿಕೊಂಡು ಇರುವವನ ಸಂಕಟವು ಅಷ್ಟಿಷ್ಟೆಂದು ಹೇಳುವದಕ್ಕೆ

ಆಗುವದಿಲ್ಲ. ಬಡತನವಿದ್ದಾಗ್ಯೂ ದೇವರಲ್ಲಿ ನಂಬಿಕೆಯನ್ನಿಟ್ಟು ಕೆಲಸವನ್ನು ಮಾಡುತ್ತಾ ಯಾರಲ್ಲಿಯೂ ದೈನ್ಯವನ್ನು ಮಾಡದೆ ಇರುವವರನ್ನು ಎಲ್ಲರೂ ಪುರಸ್ಕರಿಸುತ್ತಾರೆ. ಆದಕಾರಣ ಸಂಕಟ ಕಾಲದಲ್ಲಿ ಆತ್ಮಾವಲಂಬಿಗಳಾಗಿಯೂ ಉದ್ಯೋಗಿಗಳಾಗಿಯೂ ಇರುವವರೇ ಧನ್ಯರು.

ಯಾರಿಗಾದರೂ ಬಡತನ ಬಂದದ್ದೇ ಆದರೆ ಅನೇಕರು ಅವರಿಗೆ ದುಡ್ಡಿನ ಆಸೆಯನ್ನು ತೋರಿಸಿ ದುರ್ಮಾರ್ಗಕ್ಕೆ ಎಳೆಯುವದಕ್ಕೆ ಯತ್ನ ಮಾಡುತ್ತಾರೆ. ಇದಕ್ಕೆ ಬುದ್ಧಿವಂತರಾದವರು ಒಳಪಡಬಾರದು. ಲೋಭದಿಂದ ಬುದ್ಧಿಯು ಭ್ರಷ್ಟವಾಗದೆ ಇರುವ ವರಿಗೂ ಮನುಷ್ಯರಿಗೆ ಗೌರವವಿರುತ್ತೆ. ಲೋಭವಿಲ್ಲದೆ ತಮ್ಮ ಕಷ್ಟಾರ್ಜಿತ ದ್ರವ್ಯದಲ್ಲಿ ಕಾಲಕ್ಷೇಪ ಮಾಡಿ ಧರ್ಮದಿಂದ ನಡೆಯುವವರಿಗೆ ಇರುವ ಗೌರವವೂ ಸುಖವೂ ಶಾಂತಿಯೂ ಕೀರ್ತಿಯೂ ಇನ್ಯಾರಿಗೂ ಇರುವದಿಲ್ಲ. ಇವರ ಸುಖವೂ ಧನವೂ ರಾಜರಿಗಿಂತಲೂ ಹೆಚ್ಚಾದದ್ದು. ನಮ್ಮ ಕ್ಷುದ್ರವಾದ ಹೊಟ್ಟೆಗೋಸ್ಕರ ಇತರರ ಉಪಸರ್ಜಣೆಯನ್ನು ಮಾಡುವದಾಗಲಿ ಅಥವಾ ಅಧರ್ಮಾಚರಣೆಯನ್ನು ಮಾಡುವದಾಗಲಿ ಕೇವಲ ಅಶ್ಲಾಘ್ಯವಾದ ಕೆಲಸವು. ಕೆಲಸ ಮಾಡುವದಕ್ಕೆ ತನಗೆ ಶಕ್ತಿ ಇರುವ ಪರ್ಯಂತರಕ್ಕೂ ಎಂಥಾ ಸಂಕಟ ಬಂದಾಗ್ಯೂ ಭಿಕ್ಷಾವೃತ್ತಿಯನ್ನು ಮಾಡಬಾರದು. ನೆಂಟರಿಷ್ಟರಲ್ಲಿಯೂ ಸೇರಬಾರದು, ದೇವರು ಮನುಷ್ಯರಿಗೆ ಮಣ್ಣಿನ ಮುದ್ದೆಯಂತೆ ಒಂದು ಕಡೆ ಕೂತುಕೊಳ್ಳುವದಕ್ಕೆ, ಕಣ್ಣು ಕೈಕಾಲು ಮುಂತಾದ ಸಾಧನಗಳನ್ನು ಕೊಟ್ಟಿಲ್ಲ, ಉದ್ಯೋಗವನ್ನು ಮಾಡಿ ತಮ್ಮ ಕಾಲಕ್ಷೇಪವನ್ನು ಮಾಡಿಕೊಂಡು ಸಾಧ್ಯವಾದಮಟ್ಟಿಗೂ ದುರ್ಬಲರಾದವರಿಗೆ ಸಹಾಯ ಮಾಡಬೇಕೆಂದು ಕೊಟ್ಟಿದ್ದಾನೆ. ಭಿಕ್ಷಾಟನದಂಥಾ ನೀಚವೃತ್ತಿಯು ಒಂದೂ ಇಲ್ಲ. ಶಾಸ್ತ್ರಜ್ಞರು ಇದಕ್ಕೆ ಮೃತವೃತ್ತಿಯೆಂದು ಹೆಸರನ್ನು ಇಟ್ಟಿದ್ದಾರೆ. ಆದ್ದರಿಂದ ಎಳ್ಳಷ್ಟಾದರೂ ಆತ್ಮಾಭಿಮಾನ ಉಳ್ಳವರು ಇದರಲ್ಲಿ ಪ್ರವೇಶ ಮಾಡಬಾರದು. ಉದ್ಯೋಗವನ್ನು ಮಾಡುತ್ತಾ ಇರುವವನು ಈಗ ನೀಚವೃತ್ತಿಯಲ್ಲಿ ಇದ್ದಾಗ್ಯೂ ಬೇಗನೆ ಪುನಃ ಉನ್ನತವಾದ ಪದವಿಗೆ ಬರುತ್ತಾನೆ. ಜಾತಿಯಿಂದಲಾಗಲಿ ಕುಲದಿಂದಲಾಗಲಿ ಇನ್ಯಾವ ಕಾರಣದಿಂದಲಾಗಲಿ

ಮನುಷ್ಯನಿಗೆ ದೊಡ್ಡತನ ಬರುವದಿಲ್ಲ. ತಮ್ಮ ಕಷ್ಟದಿಂದ ಯಾರು ಉತ್ತಮ ಸ್ಥಿತಿಗೆ ಬರುತ್ತಾರೊ ಅವರೇ ದೊಡ್ಡವರು. ಪರಾವಲಂಬನದಿಂದ ಕಾಲಕ್ಷೇಪವನ್ನು ಮಾಡುವವರು ಸೀಮೆಯನ್ನು ಆಳುವ. ರಾಜರಾದಾಗ್ಯೂ ಭಿಕ್ಷುಕರಿಗೆ ಸರಿಯೆಂದು ತಿಳಿಯಬೇಕು. ಆದ್ದರಿಂದ ಅನ್ಯರಿಗೆ ಭಾರವಾಗದಂತೆ ತಮ್ಮ ಉದ್ಯೋಗದಿಂದ ತಮ್ಮ ನಿರ್ವಾಹವನ್ನು ತಾವು ಮಾಡಿಕೊಳ್ಳಬೇಕು. ಸಂಕಟ ಬಂದ ಕಾಲದಲ್ಲಿ ಅನ್ಯರ ಆಶ್ರಯವನ್ನು ಮಾಡುವದಕ್ಕಿಂತಲೂ ಸ್ವತಂತ್ರದಿಂದ ಕೂಲಿಯನ್ನು ಮಾಡುವದಾದರೂ ಉತ್ತಮವು. ಅಜ್ಞರಾದವರು ವಿಪತ್ಕಾಲದಲ್ಲಿ ತಮ್ಮ ಬಂಧು ಜನರನ್ನು ಆಶ್ರಯಿಸುತ್ತಾರೆ, ಆ ಬಂಧುಜನರು ಇವರನ್ನು ಆದರಿಸುವದಿಲ್ಲ, ಆದ್ದರಿಂದ ತಾವೇ ಶ್ರಮಪಟ್ಟು ಸ್ವತಂತ್ರವಾಗಿ ಜೀವಿಸುವದಕ್ಕೆ ಯತ್ನವನ್ನು ಮಾಡಬೇಕು. ವಿಪತ್ತು ಬಂದ ಕಾಲದಲ್ಲಿ ಮನೆಮನೆಗೆ ಅಲೆಯುತ್ತಾ ಹೋದರೆ ಪ್ರಾಯೇಣ ಎಲ್ಲರೂ ಇವನಲ್ಲಿ ಉದಾಸೀನರಾಗುತ್ತಾರೆ. ಯಾರನ್ನಾದರೂ ಒಂದು ಪದಾರ್ಥವನ್ನು ಕೇಳಿ ಅದನ್ನು ಅವರು ಕೊಡದೆ ಇದ್ದರೆ ಬಹು ದುಃಖ ಉಂಟಾಗುತ್ತೆ. ಆದ್ದರಿಂದ ದೇವರ ಮೇಲೆ ಭಾರ ಹಾಕಿ ನಮ್ಮ ಇಷ್ಟಸಿದ್ಧಿಗಾಗಿ ನಾವೇ ಪ್ರಯತ್ನ ಮಾಡಬೇಕು. ಸಣ್ಣ ಹುಳಗಳು ಮೊದಲುಗೊಂಡು ಸರ್ವ ಪ್ರಾಣಿಗಳನ್ನು ಸಮಾನ ದೃಷ್ಟಿಯಿಂದ ಕಾಪಾಡುವ ದೇವರು ನಮ್ಮನ್ನು ಮರೆಯುವದಿಲ್ಲ. ನಮ್ಮ ವಿಷಯದ ಯೋಚನೆ ನಮಗಿಂತಲೂ ದೇವರಿಗೆ ಹೆಚ್ಚಾಗಿರುತ್ತೆ. ನಮ್ಮ ಇಷ್ಟಾರ್ಥಗಳನ್ನು ನಾವು ಪಡೆದುಕೊಳ್ಳುವದಕ್ಕೋಸ್ಕರ ದೇವರು ನಮಗೆ ಕೈಕಾಲು ಮುಂತಾದ ಅವಯವಗಳನ್ನು ಕೊಟ್ಟು ಇತರ ಸಾಧನಗಳನ್ನೂ ಅನುಕೂಲಪಡಿಸಿ ಇದ್ದಾನೆ. ನಮಗೆ ಇದಕ್ಕಿಂತ ಹೆಚ್ಚಾಗಿ ಏನು ಬೇಕಾಗಿದೆ. ದೇವರು ನಮಗೆ ಸಕಲವಿಷಯದಲ್ಲಿಯೂ ಅನುಕೂಲ ಪಡಿಸಿಕೊಟ್ಟು ಇರುವದಕ್ಕೋಸ್ಕರ ನಾವು ಬಹಳ ಕೃತಜ್ಞರಾಗಿರಬೇಕು. ನಮ್ಮ ಸಂಪತ್ತು ಹೋಗಿ ನಮಗೆ ಸಂಕಟ ಉಂಟಾದರೆ ತಿರುಗಿ ನಾವು ಉದ್ಯೋಗ ಮಾಡಿ ಆ ಸಂಕಟವನ್ನು ನಿವಾರಣೆ ಮಾಡಿಕೊಳ್ಳಬಹುದು. ಈ ಸಂಸಾರ ಚಕ್ರದಲ್ಲಿ ಕಳೆದುಕೊಂಡದ್ದು ತಿರುಗಿ ಸಿಕ್ಕುವದುಂಟು. ಆದ್ದರಿಂದ ಇದಕ್ಕಾಗಿ ವೃಥಾ ಸಂಕಟ ಪಡಬಾರದು.

ಅನೇಕರು ತಮಗೆ ಪ್ರಿಯರಾದವರು ಯಾರಾದರೂ ಸತ್ತುಹೋದರೆ ಅವರ ಸಂಗತಿಯು ತಿರುಗಿಸಿಕ್ಕುವದಿಲ್ಲವೆಂದು ಬಹು ಶೋಕಪಟ್ಟು ತಮ್ಮ ಕರ್ತವ್ಯವನ್ನು ಮರೆತುಬಿಟ್ಟು ದುರ್ಲಭವಾಗಿರುವ ಮನುಷ್ಯ ದೇಹವನ್ನು ಬಿಟ್ಟುಬಿಡುತ್ತಾರೆ. ಇದು ಮೂರ್ಖತನವು. ಈ ಸಂಸಾರವು ಒಂದು ದೊಡ್ಡ ಮಾರ್ಗವೆಂತಲೂ, ಇದರಲ್ಲಿರುವವರು ದಾರಿ ನಡೆಯುವವರೆಂತಲೂ, ದಾರಿ ನಡಯುವ ಕಾಲದಲ್ಲಿ ಅರೆವಟ್ಟಿಗೆಯಲ್ಲಿ ಸೇರಿದ ಜನದಂತೆ ಇಷ್ಟಮಿತ್ರರು ಕೆಲವು ಕಾಲ ಮಾತ್ರ ಕೂಡಿದ್ದು ಮುಂದೆ ತಮ್ಮತಮ್ಮ ದಾರಿಯನ್ನು ಹಿಡಿದು ಹೋಗುವರೆಂತಲೂ ಜ್ಞಾನಿಗಳು ಹೇಳಿದ್ದಾರೆ. ಆದ್ದರಿಂದ ಯಾರಾದರೂ ಮೃತಪಟ್ಟ ವಿಷಯದಲ್ಲಿ ವೃಥಾ ಶೋಕಪಡಬಾರದು. ಶೋಕ ಮಾಡುವದ್ದರಿಂದ ಸತ್ತವರು ತಿರುಗಿ ಬರುವದಿಲ್ಲ. ಆದ್ದರಿಂದ ಇದಕ್ಕಾಗಿ ಜ್ಞಾನಿಗಳು ಬಹಳ ಶೋಕವನ್ನು ಮಾಡುವದಿಲ್ಲ. ಜನರು ಒಬ್ಬರಲ್ಲೊಬ್ಬರು ಪ್ರೇಮ ಮಾಡತಕ್ಕದ್ದು ಸಹಜವಾದ್ದರಿಂದ ಇಂಥಾ ಪ್ರೇಮಪಾತ್ರರು ಸತ್ತು ಹೋದರೆ ಶೋಕ ಉಂಟಾಗುವದೂ ಸಹಜವು. ಆದಾಗ್ಯೂ ಈರೀತಿ ಶೋಕಿಸುವದ್ದರಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿಯಬೇಕು. * *

ಎಲ್ಲರಲ್ಲಿಯೂ ತಾರತಮ್ಯವಿಲ್ಲದೆ ಪ್ರೇಮವನ್ನು ಮಾಡುತ್ತಾ ಬರಬೇಕು. ಇದರಿಂದ ಅತ್ಯಂತ ಶಾಂತಿಯೂ ಆನಂದವೂ ಉಂಟಾಗುತ್ತೆ. ಎಲ್ಲರಲ್ಲಿಯೂ ನಿರ್ಮಲವಾದ ಅಂತಃಕರಣದಿಂದ ಪ್ರೇಮವನ್ನೂ ಅಸ್ವಾರ್ಥವಾಗಿ ಉಪಕಾರವನ್ನೂ ಮಾಡುವದ್ದರಿಂದ ಉಂಟಾಗುವ ಆನಂದಕ್ಕೆ ಉಪಮಾನ ಕೊಡಲಿಕ್ಕಾಗುವದಿಲ್ಲ. ಆದ್ದರಿಂದಲೇ ಸಾಧುಗಳು ಸಂಸಾರದಲ್ಲಿ ಇರತಕ್ಕ ಪ್ರೇಮವನ್ನು ತುಚ್ಛೀಕರಿಸಿ ಸರ್ವಸ್ವವನ್ನೂ ತ್ಯಾಗಮಾಡಿ ಸರ್ವರಲ್ಲಿಯೂ ಸಮವಾದ ಪ್ರೇಮವನ್ನು ಇಟ್ಟು ಪರೋಪಕಾರವನ್ನು ಮಾಡಿದರು. ಇವರು ಈ ಕೆಲಸದಲ್ಲಿ ಅನೇಕ ವಿಘ್ನಗಳು ಬಂದಾಗ್ಯೂ ಹಾಕಿದ ಅಡ್ಡಕಟ್ಟನ್ನು ದಾಟಿಬರುವ ನದಿಗೆ ವೇಗವು ಹೆಚ್ಚುವಂತೆ ಅವರ ವೈರಾಗ್ಯವೂ ಹೆಚ್ಚಾಯಿತು. ಇಂಥಾವರ ಆಚರಣೆಯನ್ನು ಮುಂದಿಟ್ಟುಕೊಂಡು ಅದರಂತೆ ನಡೆದು ನಮ್ಮ ಜನ್ಮವನ್ನು ಸಾರ್ಥಕವಾಗಿ ಮಾಡಬೇಕು. ದೇವರಲ್ಲಿ ಪೂರ್ಣಭಕ್ತಿಯಿಟ್ಟು ನಮ್ಮ ಸರ್ವ ದುಃಖಗಳನ್ನು ಮರೆಯ

ಬೇಕು. ದುಃಖದಲ್ಲಿರುವವರಿಗೆ ದೇವರು ಹೊರತು ಇನ್ಯಾವ ಆಧಾರವೂ ಯಿಲ್ಲ. ಆತನು ಸರ್ವಾಧಾರನಾಗಿಯೂ ಪರಮ ಕರುಣಾಶಾಲಿಯಾಗಿಯೂ ಇದ್ದಾನೆ. ಆತನಲ್ಲಿ ಅಚಲವಾದ ಭಕ್ತಿಯನ್ನು ಇಟ್ಟು ಇತರ ವಿಷಯದಲ್ಲಿ ಮನಸ್ಸನ್ನು ಇಡದೆ ಪ್ರಾಣಿಮಾತ್ರರಿಗೂ ಹಿತವನ್ನು ಮಾಡುತ್ತಿರುವವರೇ ಧನ್ಯರೆಂದು ತಿಳಿಯಬೇಕು.

ಸಂಪೂರ್ಣವು.